ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶಾಮನೂರು ಶಿವಶಂಕರಪ್ಪ ಆರೋಗ್ಯದಲ್ಲಿ ಏರುಪೇರು

ವಿವರಪುಟ → 5

ವೈದ್ಯಕೀಯ ಪರೀಕ್ಷೆಯ ಬಳಿಕ ಎಸ್‌ಐಟಿ ವಶಕ್ಕೆ ನೀಡಿದ ನ್ಯಾಯಾಲಯ | ಇಂದಿನಿಂದ ನಿರಂತರ ಡ್ರಿಲ್ ನಡೆಯುವ ಸಾಧ್ಯತೆ | ಭವಾನಿ ರೇವಣ್ಣಗೆ ನಿರೀಕ್ಷಣಾ ಜಾಮೀನು ವಜಾ, ಬಂಧನದ ಭೀತಿ

ಪ್ರಜ್ವಲ್ 6 ದಿನ ಪೊಲೀಸ್ ಕಸ್ಟಡಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ 35 ದಿನಗಳಿಂದ ತಲೆಮರೆಸಿಕೊಂಡಿದ್ದ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಗುರುವಾರ ತಡರಾತ್ರಿ ವಶಕ್ಕೆ ಪಡೆದ ಎಸ್‌ಐಟಿ ಶುಕ್ರವಾರ ಸಂಜೆ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಆರು ದಿನಗಳ ಕಾಲ ವಶಕ್ಕೆ ಪಡೆದಿದೆ.

ಇಡೀ ದೇಶಾದ್ಯಂತ ಸುದ್ದಿ ಮಾಡಿದ್ದ ಪೆನ್‌ಡ್ರೈವ್ ಪ್ರಕರಣದ ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ತಲೆಮರೆಸಿಕೊಂಡಿದ್ದರಿಂದ ಈವರೆಗೆ ಯಾವುದೇ ಮಹತ್ವದ ತಿರುವು ಪಡೆದಿರಲಿಲ್ಲ. ಬೆಂಗಳೂರಿಗೆ ವಾಪಸಾಗಿ ಶರಣಾಗುತ್ತಿದ್ದಂತೆ ಚುರುಕಾಗಿರುವ ಎಸ್‌ಐಟಿ, ಶುಕ್ರವಾರ ಆರಂಭಿಕ ಹಂತದ ವಿಚಾರಣೆ ನಡೆಸಿದೆ. ಶುಕ್ರವಾರ ಸಂಜೆ ಕಸ್ಟಡಿಗೆ ನೀಡಿರುವುದರಿಂದ ಶನಿವಾರದಿಂದ ನಿರಂತರ ಡ್ರಿಲ್ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.

ಶುಕ್ರವಾರ ಬೆಳಗ್ಗೆ ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ ಪ್ರಜ್ವಲ್ ರೇವಣ್ಣ ಅವರನ್ನು 42ನೇ ಎಸಿಎಂಎಂ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ಈ ವೇಳೆ 42ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಧೀಶರು ಎರಡೂ ಕಡೆಯ ವಾದ ಆಲಿಸಿದರು. ಆರೋಪಿಯನ್ನು ತಮ್ಮ ವಶಕ್ಕೆ ನೀಡುವಂತೆ ಎಸ್‌ಐಟಿ ಕೋರ್ಟ್‌ಗೆ ಮನವಿ ಮಾಡಿತ್ತು. ಇದಕ್ಕೆ ಪ್ರಜ್ವಲ್ ರೇವಣ್ಣ ಪರ ವಕೀಲರಾದ ಅರುಣ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದು, ಜಾಮೀನು ನೀಡುವಂತೆ ವಾದ ಮಂಡಿಸಿದ್ದಾರೆ.

ಪ್ರಜ್ವಲ್‌ಗೆ ಮಹಿಳಾ ಅಧಿಕಾರಿಗಳಿಂದ ಭದ್ರತೆ: ಪ್ರಜ್ವಲ್ ರೇವಣ್ಣ ಪ್ರಕರಣದ ತನಿಖೆಯಲ್ಲಿ ಮಹಿಳಾ ಅಧಿಕಾರಿಗಳೇ ಹೈಲೆಟ್ ಆಗಿದ್ದಾರೆ. ಗುರುವಾರ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಪ್ರಜ್ವಲ್ ಅವರನ್ನು ಮಹಿಳಾ ಅಧಿಕಾರಿಗಳೇ ಬಂಧಿಸಿದ್ದರು. ತನಿಖೆ ವೇಳೆಯೂ ಮಹಿಳಾ ಅಧಿಕಾರಿಗಳೇ ಪ್ರಜ್ವಲ್ ರೇವಣ್ಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ. ಪ್ರಜ್ವಲ್ ಸುತ್ತಮುತ್ತ ನಾಲ್ವರು ಮಹಿಳಾ ಅಧಿಕಾರಿಗಳ ಭದ್ರತೆ ನೀಡಲಾಗಿತ್ತು. ಆಸ್ಪತ್ರೆಗೆ ಪ್ರಜ್ವಲ್ ರೇವಣ್ಣ ಅವರ ಕೈ ಹಿಡಿದು ಮಹಿಳಾ ಅಧಿಕಾರಿಗಳ ತಂಡ ಎಳೆದುತಂದಿದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಹೆಣ್ಣನ್ನು ಕೇವಲವಾಗಿ ನೋಡಿದ ಪ್ರಜ್ವಲ್‌ಗೆ ಮುಜುಗರ, ಅವಮಾನಿಸಲು, ನಾಚಿಕೆಪಡು ವಂತಾಗಲಿ ಎಂದು ಮಹಿಳಾ ಅಧಿಕಾರಿಗಳಿಂದಲೇ ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದಾರೆ.

ಟೈಮ್‌ಲೈನ್

12.56	ಗುರುವಾರ ರಾತ್ರಿ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಪ್ರಜ್ವಲ್ ಬಂಧನ
1.25	ವಿಮಾನ ನಿಲ್ದಾಣದ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ
1.06	ಪ್ರಜ್ವಲ್ ರೇವಣ್ಣ ವಿಚಾರಣೆ
3.13	ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ
4.17	ಕೋರ್ಟ್‌ಗೆ ಪ್ರಜ್ವಲ್ ಕರೆತಂದ ಎಸ್‌ಐಟಿ
5.15	ಆರು ದಿನ ಪ್ರಜ್ವಲ್ ಕಸ್ಟಡಿಗೆ ನೀಡಿ ನ್ಯಾಯಾಲಯ ಆದೇಶ
5.45	ಎಸ್‌ಐಟಿ ಸೆಲ್‌ಗೆ ಪ್ರಜ್ವಲ್ ರೇವಣ್ಣ

ಪ್ರಜ್ವಲ್ ಬಗ್ಗೆ ಅಪಪ್ರಚಾರ ಬೇಡ: ಮನವಿ

ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ಎಸ್‌ಐಟಿಯಿಂದ ಬಂಧಿಸಲ್ಪಟ್ಟಿರುವ ಪ್ರಜ್ವಲ್ ರೇವಣ್ಣ ವಿರುದ್ಧ ಮೀಡಿಯಾ ಟ್ರಯಲ್ ಹಾಗೂ ತಮ್ಮ ವಿರುದ್ಧ ಅಪಪ್ರಚಾರ ನಡೆಸದಂತೆ ಪ್ರಜ್ವಲ್ ಪರ ವಕೀಲ ಅರುಣ್.ಜಿ ಮನವಿ ಮಾಡಿದ್ದಾರೆ. ನಾನೊಬ್ಬ ವಕೀಲನಾಗಿ ನನ್ನ ಕೆಲಸವನ್ನು ನ್ಯಾಯಾಲಯದಲ್ಲಿ ಮಾಡುತ್ತಿದ್ದೇನೆ. ಮಾಧ್ಯಮದವರೂ ತಮ್ಮ ಕೆಲಸ ಮಾಡಲಿ. ಆದರೆ ಪ್ರಜ್ವಲ್ ಬಗ್ಗೆ ನೆಗೆಟಿವ್ ವಿಚಾರಗಳನ್ನು ವರದಿ ಮಾಡುವುದು ಬೇಡ. ಎಸ್‌ಐಟಿ ಮುಂದೆ ಶರಣಾಗಿರುವ ಪ್ರಜ್ವಲ್ ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದ್ದಾರೆ. ಹೊಳೆನರಸೀಪುರದಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಪ್ರಜ್ವಲ್ ಅವರನ್ನು ಬಂಧಿಸಲಾಗಿದೆ. ನ್ಯಾಯಾಲಯದ ಪ್ರಕ್ರಿಯೆಗಳನ್ನು ತಿಳಿಸಿದ್ದೇನೆ. ಜಾಮೀನು ಅರ್ಜಿಯ ವಿಚಾರಣೆ ಇಷ್ಟರಲ್ಲೇ ಶುರುವಾಗಲಿದೆ ಎಂದು ತಿಳಿಸಿದರು.

ಭವಾನಿ ರೇವಣ್ಣಗೆ ಬಂಧನದ ಭೀತಿ

ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಕೆ.ಆರ್.ನಗರ ಸಂತ್ರಸ್ತ ಮಹಿಳೆಯನ್ನು ಅಪಹರಣ ಮಾಡಿದ ಆರೋಪದಲ್ಲಿ ನಿರೀಕ್ಷಣಾ ಜಾಮೀನು ನೀಡುವಂತೆ ಭವಾನಿ ರೇವಣ್ಣ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯ ವಜಾ ಮಾಡಿದ್ದು, ಈ ಮೂಲಕ ಭವಾನಿ ರೇವಣ್ಣ ಅವರಿಗೆ ಬಂಧನದ ಭೀತಿ ಶುರುವಾಗಿದೆ. ಶುಕ್ರವಾರ ಬೆಳಗ್ಗೆ ಎಸ್‌ಐಟಿ ಅಧಿಕಾರಿಗಳೂ ಭವಾನಿ ಅವರಿಗೆ ಎರಡನೇ ನೋಟಿಸ್ ನೀಡಿದ್ದರು. ಅವರು ಮನೆಯಲ್ಲಿ ಇಲ್ಲದ ಕಾರಣ ನೋಟಿಸ್ ಅಂಟಿಸಿ ಬಂದಿದ್ದರು. ಕೋರ್ಟ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ. ಈ ಬೆನ್ನಲ್ಲೇ, ಭವಾನಿ ರೇವಣ್ಣ ಅಜ್ಞಾತ ಸ್ಥಳಕ್ಕೆ ತೆರಳಿದ್ದು, ಯಾವುದೇ ಕ್ಷಣದಲ್ಲಿ ಬಂಧನಕ್ಕೆ ಒಳಗಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ರೇವಣ್ಣ ಅರ್ಜಿ ವಿಚಾರಣೆ ಮುಂದಕ್ಕೆ



ಇನ್ನೊಂದೆಡೆ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದು ಕೋರಿ ಮಾಜಿ ಸಚಿವ ಎಚ್.ಡಿ.ರೇವಣ್ಣ ಸಲ್ಲಿಸಿರುವ ಅರ್ಜಿಯ ಸಂಬಂಧ ಸರಕಾರಕ್ಕೆ ನೋಟಿಸ್ ಜಾರಿ ಮಾಡಿರುವ ಹೈಕೋರ್ಟ್, ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿದೆ. ರೇವಣ್ಣ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಸೋಮವಾರ ಅರ್ಜಿ ವಿಚಾರಣೆಗೆ ನಿಗದಿ ಪಡಿಸಲಾಗುವುದು ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ರಾಜೀನಾಮೆ ಪಡೆಯುವ ಬಗ್ಗೆ ಗಂಭೀರ ಚಿಂತನೆ
ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಪ್ರತಿಪಕ್ಷದ ಒತ್ತಡ

ಚಂದ್ರಶೇಖರನ್ ಆತ್ಮಹತ್ಯೆ ಪ್ರಕರಣ ಸಿಬಿಐಗೆ?

ಬಿ. ನಾಗೇಂದ್ರ ತಲೆದಂಡ?

- ಬ್ಯಾಂಕ್ ಮೇಲೆ ಅಪವಾದ ಹೊರಿಸಿದ್ದರಿಂದ ಸಿಬಿಐಗೆ ದೂರು ನೀಡಿದ ಯೂನಿಯನ್ ಬ್ಯಾಂಕ್
- ಬಹುದೊಡ್ಡ ಪ್ರಮಾಣದಲ್ಲಿ ಅಕ್ರಮದ ವಾಸನೆಯಿರುವುದರಿಂದ ಪ್ರಕರಣ ಹಸ್ತಾಂತರ ಸಾಧ್ಯತೆ
- ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತಂಡ ರಚಿಸಿದ ರಾಜ್ಯ ಸರಕಾರ
- ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಹೋರಾಟ ಮುಂದುವರಿಸಲು ಬಿಜೆಪಿ ತೀರ್ಮಾನ
- ಮುಜುಗರದಿಂದ ತಪ್ಪಿಸಿಕೊಳ್ಳಲು ನಾಗೇಂದ್ರ ರಾಜೀನಾಮೆ ಪಡೆಯುವ ಬಗ್ಗೆ ಗಂಭೀರ ಚಿಂತನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾಲ್ಮೀಕಿ ಅಭಿವೃದ್ಧಿ ನಿಗಮ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಸಚಿವ ಬಿ.ನಾಗೇಂದ್ರ ಅವರ ತಲೆದಂಡಕ್ಕೆ ದಿನ ದಿಂದ ದಿನಕ್ಕೆ ಒತ್ತಡ ಹೆಚ್ಚುತ್ತಿದ್ದು, ರಾಜೀನಾಮೆ ಪಡೆಯುವ ಬಗ್ಗೆಯೂ ಗಂಭೀರ ಚರ್ಚೆಗಳು ಆರಂಭವಾಗಿದೆ ಎನ್ನಲಾಗಿದೆ. ಈ ಪ್ರಕರಣದಲ್ಲಿ ಯೂನಿಯನ್ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ, ಬ್ಯಾಂಕಿನ ಮೇಲೆ ಇಡೀ ಪ್ರಕರಣವನ್ನು ತಿರುಗಿಸುವ ಲೆಕ್ಕಾಚಾರಗಳು ನಡೆಯುತ್ತಿರುವ ಗುಮಾನಿಯ ಬೆನ್ನಲ್ಲೇ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಿಬಿಐಗೆ ಈ ಪ್ರಕರಣದ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ದೂರು ಸಲ್ಲಿಸಿದೆ. ನೂರು ಕೋಟಿ ಮಿಗಿಯಾದ ಅಕ್ರಮ ಆಸ್ತಿಗಳನ್ನು ಸಿಬಿಐಗೆ ವರ್ಗಾಯಿಸಲು ಆರ್‌ಬಿಐ ಮಾರ್ಗ ಸೂಚಿಯಲ್ಲಿ ಅವಕಾಶ ವಿದೆ. ಆದರೆ ಈ ಪ್ರಕರಣದಲ್ಲಿ 87 ಕೋಟಿ ರು. ಎಂದು ಹೇಳಲಾಗುತ್ತಿದ್ದು, ಪ್ರಕರಣ ಸಿಬಿಐಗೆ ವರ್ಗಾವಣೆಯಾಗುವುದೋ ಇಲ್ಲವೋ ಎನ್ನುವ ಕುತೂಹಲ ಮೂಡಿದೆ. ಈಗಾಗಲೇ ಪ್ರಕರಣವನ್ನು ಸಿಬಿಐಗೆ ವಹಿಸುವುದಿಲ್ಲವೆಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿ, ವಿಶೇಷ ತನಿಖಾ ತಂಡ ರಚಿಸಿದ್ದಾರೆ. ಆದರೆ ಒಂದು ವೇಳೆ ಬ್ಯಾಂಕಿನ ದೂರಿನ ಆಧಾರದಲ್ಲಿ ಸಿಬಿಐ ಪ್ರಕರಣವನ್ನು ತನಿಖೆ ನಡೆಸಲು ಮುಂದಾದರೆ, ಮತ್ತೊಮ್ಮೆ ಕೇಂದ್ರ ಹಾಗೂ ರಾಜ್ಯ ಸರಕಾರದ ನಡುವೆ ತಿಕ್ಕಾಟ ನಡೆಯುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ. ಈ ಎಲ್ಲದರ ನಡುವೆ ದಿನದಿಂದ ದಿನಕ್ಕೆ ಸಚಿವ ನಾಗೇಂದ್ರ ಅವರ ಸುತ್ತ ಈ ಪ್ರಕರಣ ಸುತ್ತಿಕೊಳ್ಳುತ್ತಿದೆ. ಈಗಾಗಲೇ ತಮ್ಮದೇನು ತಪ್ಪಿಲ್ಲವೆಂದು ಸ್ಪಷ್ಟನೆ ನೀಡಿದ್ದರೂ ರಾಜೀನಾಮೆಗೆ ಒತ್ತಡ ಹೆಚ್ಚಾಗುತ್ತಿದೆ.

→ 4

ಇಂದಿನಿಂದ ರಸ್ತೆತಡೆ

ಪ್ರಕರಣ ಹೊರಬಂದಾಗಿನಿಂದ ಸಾಮಾಜಿಕ ಜಾಲತಾಣದಲ್ಲಿಯೇ ಹೋರಾಟ ನಡೆಸಿದ್ದ ಬಿಜೆಪಿ, ಕೊನೆಗೂ ಪ್ರತಿಭಟನೆಗೆ ಮುಂದಾಗಿದ್ದು, ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಯುವ ಮೋರ್ಚಾ ವತಿಯಿಂದ ಶನಿವಾರ ರಾಜ್ಯಾದ್ಯಂತ ರಸ್ತೆತಡೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಯುವ ಮೋರ್ಚಾ ರಾಜ್ಯಾಧ್ಯಕ್ಷ ಧೀರಜ್ ಮುನಿರಾಜು ತಿಳಿಸಿದರು.

ಸಿಎಂ ನಿವಾಸದಲ್ಲಿ ಸುದೀರ್ಘ ಚರ್ಚೆ

ಈ ನಡುವೆ ಶುಕ್ರವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಸಿಎಂ ಹಾಗೂ ಡಿಸಿಎಂ ಅವರೊಂದಿಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಬ್ರೇಕ್ ಫಾಸ್ಟ್ ಮೀಟಿಂಗ್ ನಡೆಸಿದ್ದು, ಇಡೀ ಪ್ರಕರಣದ ಮಾಹಿತಿ ನೀಡಿ ದ್ದಾರೆ. ಇದರೊಂದಿಗೆ ಬ್ಯಾಂಕ್ ಸಿಬಿಐಗೆ ದೂರು ಸಲ್ಲಿಸಿರುವ ಬಗ್ಗೆ ಚರ್ಚೆ ನಡೆಸಿರುವ ನಾಯಕರು, ಈ ರೀತಿಯಾದರೆ ಪಕ್ಷಕ್ಕೆ ಹಾಗೂ ಸರಕಾರ ಡ್ಯಾಮೇಜ್ ಆಗಲಿದೆ. ಒಂದು ವೇಳೆ ಸಿಐಡಿ ಪ್ರಾಥಮಿಕ ತನಿಖೆಯಲ್ಲಿ ನಾಗೇಂದ್ರ ವಿರುದ್ಧ ಸಾಕ್ಷ್ಯಾಧಾರಗಳಿದ್ದರೆ ಕೂಡಲೇ ರಾಜೀನಾಮೆ ಪಡೆಯುವುದು ಸೂಕ್ತ ಎನ್ನುವ ಚರ್ಚೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪುಟ ತೆರೆದಂತೆ...

ವಿರೋಧಿಗಳ ತಾಪ ಏರಿಸಿದ ಮೋದಿ ಜಪ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಮಳೆಗಾಲ ಬಂದಾಗ ನಮ್ಮ ದೇಹದಲ್ಲಿ ಏನೇನಾಗುತ್ತೆ ಗೊತ್ತ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ದಾರಿದೀಪೋಕ್ತಿ

ಜೀವನದ ಯಾವ ಸನ್ನಿವೇಶವೂ ಶಾಶ್ವತವಲ್ಲ. ಬದುಕು ಚೆನ್ನಾಗಿದ್ದಾಗ, ನೀವು ಸಂತೋಷಪಡುತ್ತೀರಿ. ಬದುಕು ಚೆನ್ನಾಗಿ ಇಲ್ಲದಾಗ ಒಂದು ಸಂಗತಿಯನ್ನು ಅರ್ಥ ಮಾಡಿಕೊಳ್ಳಿ. ಅದೇನೆಂದರೆ ಅದೂ ಸಹ ಶಾಶ್ವತವಲ್ಲ ಮತ್ತು ಒಳ್ಳೆಯ ದಿನಗಳು ಸನಿಹದಲ್ಲಿವೆ. ಹೀಗಾಗಿ ಚಿಂತೆ ಮಾಡುವ ಅಗತ್ಯವಿಲ್ಲ.

ವಕ್ರತುಂಡೋಕ್ತಿ

ಕುಡಿತ ಕೆಟ್ಟದ್ದು. ಅದಕ್ಕಾಗಿ ಆಲ್ಕೋಹಾಲ್ ಜಾಹೀರಾತಿನಲ್ಲಿ ಕುಡಿದವರನ್ನು ಎಂದೂ ತೋರಿಸುವುದಿಲ್ಲ.

ಕೊನೇ ಹಂತದ ಮತದಾನ ಇಂದು

ದೆಹಲಿ: ಲೋಕಸಭಾ ಚುನಾವಣೆಯ ಕೊನೆ ಹಂತದ ಮತದಾನ ಶನಿವಾರ ನಡೆಯಲಿದೆ. ಇದರಲ್ಲಿ ಏಳು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಚಂಡೀಗಢ ಸೇರಿದಂತೆ 57 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಪಂಜಾಬ್‌ನ 13 ಕ್ಷೇತ್ರ, ಹಿಮಾಚಲ ಪ್ರದೇಶದ 4, ಉತ್ತರ ಪ್ರದೇಶದ 13, ಪಶ್ಚಿಮ ಬಂಗಾಳದ 9, ಬಿಹಾರದ 8 ಹಾಗೂ ಒಡಿಶಾದ 6, ಜಾರ್ಖಂಡ್‌ನ 3 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಜೂನ್ 4 ರಂದು ಪ್ರತಿಪಕ್ಷಗಳು ಪಕ್ಕದಲ್ಲಿ ನೀರು ಇಟ್ಟುಕೊಳ್ಳಿ – ಪ್ರಶಾಂತ್ ಕಿಶೋರ್



ದೆಹಲಿ, ಪಂಜಾಬ್ ಮತ್ತು ಒಡಿಶಾದಲ್ಲಿ 45 ಡಿಗ್ರಿ ಸೆ.ಗಿಂತ ಹೆಚ್ಚು ತಾಪಮಾನ | ತುರ್ತು ಪರಿಸ್ಥಿತಿ ಘೋಷಿಸುವಂತೆ ರಾಜಸ್ಥಾನ ಹೈಕೋರ್ಟ್ ಸೂಚನೆ

ಬಿಸಿಲಿನ ತಾಪಕ್ಕೆ 54 ಮಂದಿ ಬಲಿ

ದೆಹಲಿ: ದಕ್ಷಿಣದ ಹಲವೆಡೆ ಭಾರೀ ಮಳೆಯಾಗುತ್ತಿದ್ದರೆ, ಉತ್ತರ ಭಾರತದಲ್ಲಿ ಬಿಸಿಲಿನ ಆಟಾಟೋಪ ಹೆಚ್ಚಾಗಿದೆ. ಬಿಸಿಲಾಘಾತದಿಂದಾಗಿ ಈ ವರೆಗೆ ಕನಿಷ್ಠ 54 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ದೆಹಲಿ, ಪಂಜಾಬ್ ಮತ್ತು ಒಡಿಶಾದಲ್ಲಿ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ತಾಪಮಾನ ದಾಖಲಾಗಿದೆ.

ಒಡಿಶಾದ ಸುಂದರ್‌ಗಢದಲ್ಲಿ ಕಳೆದ 24 ಗಂಟೆಗಳಲ್ಲಿ ಬಿಸಿಲಿನ ತಾಪಕ್ಕೆ 12 ಜನರು ಸಾವನ್ನಪ್ಪಿದ್ದಾರೆ. ಜಾರ್ಖಂಡ್‌ನ ಪಲಮು ಜಿಲ್ಲೆಯಲ್ಲಿ ಬಿಸಿಗಾಳಿ ಸಂಬಂಧಿತ ರೋಗಲಕ್ಷಣಗಳಿಂದಾಗಿ ಮಹಿಳೆ ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದಾರೆ. ಇಲ್ಲಿ ಗುರುವಾರ ರಾಜ್ಯದ ಗರಿಷ್ಠ ತಾಪಮಾನ 47.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಬಿಹಾರದಲ್ಲಿ ಕಳೆದ 24 ಗಂಟೆಗಳಲ್ಲಿ ಬಿಸಿಲಾಘಾತದಿಂದ 10 ಚುನಾವಣಾ ಸಿಬ್ಬಂದಿ ಸೇರಿ 14 ಮಂದಿ ಮೃತಪಟ್ಟಿದ್ದಾರೆ. ಭೋಜ್‌ಪುರದಲ್ಲಿ ಐವರು, ರೋಹ್ತಾಸ್‌ನಲ್ಲಿ ಮೂರು, ಕೈಮೂರ್ ಮತ್ತು ಔರಾಂಗಾಬಾದ್‌ನಲ್ಲಿ ತಲಾ ಒಬ್ಬ ಚುನಾವಣಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ.

ನೀರಿನ ಸಮಸ್ಯೆ, ವಿದ್ಯುತ್ ಕಡಿತ: ಏತನ್ಮಧ್ಯೆ, ರಾಷ್ಟ್ರ ರಾಜಧಾನಿಯಲ್ಲಿ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ದೆಹಲಿ ಸರಕಾರ ಸುಪ್ರೀಂ ಕೋರ್ಟ್ ಅನ್ನು ಸಂಪರ್ಕಿಸಿದೆ. ಬಿಸಿಲಿನಿಂದಾಗಿ ನಗರದಲ್ಲಿ ನೀರಿನ ಬೇಡಿಕೆ ಹೆಚ್ಚಾಗಿದೆ. ಬಿಕ್ಕಟ್ಟನ್ನು ಪರಿಹರಿಸಲು ಒಂದು ತಿಂಗಳವರೆಗೆ ಹೆಚ್ಚುವರಿ ನೀರನ್ನು ಬಿಡುಗಡೆ ಮಾಡುವಂತೆ ನೆರೆಯ ಹರಿಯಾಣಕ್ಕೆ ಸೂಚಿಸಿ ಎಂದು ಸರಕಾರ ಮನವಿ ಸಲ್ಲಿಸಿದೆ. ಬಿಸಿಲಿನ ತಾಪ ಉ.ಭಾರತದಲ್ಲಿ ವಿದ್ಯುತ್ ಕಡಿತಕ್ಕೆ ಕಾರಣವಾಗಿದ್ದು, ಜನರ ಸಂಕಷ್ಟ ಹೆಚ್ಚಿಸಿದೆ.

ರಾಷ್ಟ್ರೀಯ ತುರ್ತು ಪರಿಸ್ಥಿತಿ: ಈ ಮಧ್ಯೆ, ರಾಜಸ್ಥಾನ ಹೈಕೋರ್ಟ್ ಸಾವುಗಳ ವಿಚಾರವಾಗಿ ಸ್ವಯಂ ಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡಿದೆ. ಈ ಶಾಖದ ಅಲೆಯನ್ನು ರಾಷ್ಟ್ರೀಯ ತುರ್ತು ಪರಿಸ್ಥಿತಿ ಎಂದು ಘೋಷಿಸುವಂತೆ ಕೇಂದ್ರ ಸರಕಾರಕ್ಕೆ ಸೂಚಿಸಿದೆ.

→ 4

6 ಗೃಹರಕ್ಷಕರು ಸಾವು

ಉತ್ತರ ಭಾರತದಲ್ಲಿ ಚುನಾವಣಾ ಕಾರ್ಯಕ್ಕೆಂದು ನಿಯೋಜಿಸಲಾಗಿದ್ದ 6 ಮಂದಿ ಗೃಹ ರಕ್ಷಕರು ಬಿಸಿಲಿನಿಂದ ಮೃತಪಟ್ಟಿದ್ದಾರೆ. ಒಟ್ಟು 23 ಗೃಹ ರಕ್ಷಕರು ಬಿಸಿಲಾಘಾತದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಮಿರ್ಜಾಪುರದಲ್ಲಿ ಈ ಘಟನೆ ಸಂಭವಿಸಿದೆ. ಇನ್ನೂ ಇಬ್ಬರು ಯೋಧರ ಸ್ಥಿತಿ ಗಂಭೀರವಾಗಿದೆ.

ಲೋಕಸಭಾ ಚುನಾವಣೆ ಪ್ರಚಾರ ಮುಗಿಸಿ ವಿಶ್ರಾಂತಿಯಲ್ಲಿರುವ ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಬೆಳಗ್ಗೆ ತಮಿಳುನಾಡಿನ ಕನ್ಯಾಕುಮಾರಿಯಲ್ಲಿರುವ ವಿವೇಕಾನಂದ ರಾಕ್ ಮೆಮೊರಿಯಲ್‌ನ ಧ್ಯಾನ ಮಂಟಪದಲ್ಲಿ ಧ್ಯಾನಾಸಕ್ತರಾದರು. ಜೂನ್ ಒಂದರವರೆಗೆ (45 ಗಂಟೆ) ಅವರು ಇಲ್ಲಿ ಧ್ಯಾನ ಮಾಡಲಿದ್ದಾರೆ.

ಮಾರ್ಚ್ ತ್ರೈಮಾಸಿಕ ಶೇ.7.8ರಷ್ಟು ಏರಿಕೆ

ಜಿಡಿಪಿ 8.2%ಕ್ಕೆ ಏರಿಕೆ

ದೆಹಲಿ: 2023-24ರ ಆರ್ಥಿಕ ವರ್ಷದಲ್ಲಿ ದೇಶ ಶೇ.8.2ರಷ್ಟು ಪ್ರಗತಿ ಸಾಧಿಸಿದೆ ಎಂದು ಕೇಂದ್ರ ಸರಕಾರ ಬಿಡುಗಡೆ ಮಾಡಿದ ಅಂಶಗಳು ಹೇಳಿವೆ.

ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ದರ ಶೇ.7.8 ಆಗಿದೆ. ಈ ಮೂಲಕ ವಾರ್ಷಿಕ ಬೆಳವಣಿಗೆ ದರವನ್ನು ಶೇ.8.2ಕ್ಕೆ ಏರಿಸಿದೆ ಎಂದು ಕೇಂದ್ರ ಸಾಂಖ್ಯಿಕ ಇಲಾಖೆ ಹೇಳಿದೆ. ಆದರೆ, ಜನವರಿ-ಮಾರ್ಚ್ ಅವಧಿಯಲ್ಲಿನ ಬೆಳವಣಿಗೆಯು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ.8.6ಕ್ಕಿಂತ ಕಡಿಮೆಯಾಗಿದೆ, 2022-23ರ ಹಣಕಾಸು ವರ್ಷದ ಜನವರಿ-ಮಾರ್ಚ್ ಅವಧಿಯಲ್ಲಿ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಶೇ.6.2ರಷ್ಟು ಆಗಿತ್ತು ಎಂದು ರಾಷ್ಟ್ರೀಯ ಅಂಕಿಅಂಶ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿದ ಅಂಕಿ ಅಂಶಗಳು ತಿಳಿಸಿವೆ. ಅಂಕಿಅಂಶಗಳ ಪ್ರಕಾರ, ಆರ್ಥಿಕತೆಯು 2022-23ರಲ್ಲಿ ಶೇ.7ರಷ್ಟಿದ್ದರೆ 2023-24ರಲ್ಲಿ ಶೇ.8.2ರಷ್ಟು ಆಗಿದೆ. ಈ ಮಧ್ಯೆ 2024ರ ಮೊದಲ ಮೂರು ತಿಂಗಳಲ್ಲಿ ಚೀನಾ ಶೇ.5.3 ರಷ್ಟು ಆರ್ಥಿಕ ಬೆಳವಣಿಗೆಯನ್ನು ದಾಖಲಿಸಿದೆ.

ನೀಲಿಚಿತ್ರಗಳ ತಾರೆಗೆ ಹಣ ನೀಡಿದ್ದ ಪ್ರಕರಣ

ಟ್ರಂಪ್ ತಪ್ಪಿತಸ್ಥ

ನ್ಯೂಯಾರ್ಕ್: 2016ರ ಅಧ್ಯಕ್ಷೀಯ ಚುನಾವಣೆ ವೇಳೆ ತಮ್ಮ ವಿರುದ್ಧ ಹೇಳಿಕೆ ನೀಡದಂತೆ ನೀಲಿಚಿತ್ರಗಳ ತಾರೆಗೆ ಹಣ ನೀಡಿದ್ದ (ಹಷ್ ಮನಿ) ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಪ್ಪಿತಸ್ಥ ಎಂದು ನ್ಯೂಯಾರ್ಕ್‌ನ ಮ್ಯಾನಹಟನ್ ನ್ಯಾಯಾಲಯ ತೀರ್ಪು ನೀಡಿದೆ.



ನ್ಯಾಯಾಲಯ ಅವರಿಗೆ ನೀಡುವ ಶಿಕ್ಷೆ ಏನು ಎಂಬ ಆದೇಶ ಮುಂದಿನ ವಾರ ಹೊರಬೀಳಲಿದೆ ಎನ್ನಲಾಗಿದೆ. ಇದರೊಂದಿಗೆ ಡೊನಾಲ್ಡ್ ಟ್ರಂಪ್ ಅವರಿಗೆ ಜೈಲುಶಿಕ್ಷೆಗೆ ಗುರಿಯಾಗುವ ಆತಂಕ ಎದುರಾಗಿದೆ. ಆದರೆ, ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಈಗಾಗಲೇ ಟ್ರಂಪ್ ಎಲ್ಲ ಸಿದ್ಧತೆ ಮಾಡಿಕೊಂಡಿದ್ದಾರೆ. ಹಾಗಾಗಿ ಈ ತೀರ್ಪು ಟ್ರಂಪ್ 2024ರ ಅಧ್ಯಕ್ಷೀಯ ಚುನಾವಣೆಗೆ ನಿಲ್ಲುವುದನ್ನು ತಡೆಯಲಾಗುವುದಿಲ್ಲ ಎನ್ನಲಾಗಿದೆ. ನೀಲಿಚಿತ್ರಗಳ ತಾರೆ ಸ್ಟಾರ್ಮಿ ಡೇನಿಯಲ್ಸ್ ಅವರು 'ನಾನು ಟ್ರಂಪ್ ಜತೆ ಲೈಂಗಿಕ ಸಂಬಂಧ ಹೊಂದಿದ್ದೆ' ಎಂದು ಹೇಳಿದ್ದರು. 2016ರ ಚುನಾವಣೆ ವೇಳೆ ಈ ಬಗ್ಗೆ ಹೇಳಿಕೆ ನೀಡದೇ ಮೌನವಹಿಸಲು ನಟಿಗೆ ಹಣ ನೀಡಲಾಗಿತ್ತು ಎಂಬ ಕುರಿತು ಪ್ರಕರಣ ದಾಖಲಾಗಿತ್ತು.

ಗುತ್ತಿಗೆದಾರ ಗೌಡರ್ ಆತ್ಮಹತ್ಯೆ ಪ್ರಕರಣ

ತನಿಖೆಗೆ ಆದೇಶ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆ ಪ್ರಕರಣದ ಬೆನ್ನಲ್ಲೇ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಸಂತೆಬೆನ್ನೂರಿನ ಗುತ್ತಿಗೆದಾರ ಪಿ.ಎಸ್. ಗೌಡರ್ ಕಾಮಗಾರಿ ಬಿಲ್ ಪಾವತಿಸಿಲ್ಲ ಎಂದು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆಯ ಬೆನ್ನಲ್ಲೇ, ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಅವರು ಇಲಾಖಾ ತನಿಖೆಗೆ ಆದೇಶಿಸಿದ್ದು, ಹಿರಿಯ ಅಧಿಕಾರಿಗಳ ಸಮಿತಿ ರಚಿಸಿ ವರದಿ ನೀಡು ವಂತೆ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ. ಪಿ.ಎಸ್.ಗೌಡರ್ (50) ಮೇ 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದು, ಡೆತ್‌ನೋಟ್ ಬರೆದಿಟ್ಟಿದ್ದಾರೆ. ಅದರಲ್ಲಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತದಿಂದ 2023- 24ನೇ ಸಾಲಿನ ಬಾಕಿ ಬಿಲ್ ಪಾವತಿಯಾಗದ ಹಿನ್ನೆಲೆಯಲ್ಲಿ ಮನನೊಂದ ಹೀಗೆ ಮಾಡಿಕೊಳ್ಳುತ್ತಿರುವುದಾಗಿ ಬರೆದಿದ್ದಾರೆ. ಆದ್ದರಿಂದ ಇದೀಗ ಈ ಬಗ್ಗೆ ಇಲಾಖೆಯ ಆಂತರಿಕ ತನಿಖೆ ನಡೆಸಲು ಸೂಚನೆ ನೀಡಿ ಆದೇಶ ಹೊರಡಿಸಿದ್ದಾರೆ.

ವ್ಯವಸ್ಥಾಪನಾ ಕಾರಣಗಳಿಂದಾಗಿ ಆರ್‌ಬಿಐ ನಿರ್ಧಾರ

ಇಂಗ್ಲೆಂಡ್‌ನಿಂದ ಭಾರತಕ್ಕೆ 100 ಟನ್ ಚಿನ್ನ

ಮುಂಬೈ: ಇಂಗ್ಲೆಂಡ್‌ನಿಂದ 100 ಟನ್ ಚಿನ್ನ ಭಾರತಕ್ಕೆ ಬಂದಿದೆ!

ಹೌದು.. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇಂಗ್ಲೆಂಡ್‌ನಿಂದ ಚಿನ್ನ ತರಿಸಿ ತನ್ನ ದೇಶೀಯ ಸಂಗ್ರಹಾಗಾರಗಳಿಗೆ ಸಾಗಿಸಿದೆ. 1991ರ ಬಳಿಕ ಇದೇ ಮೊದಲ ಬಾರಿಗೆ ವಿದೇಶದಿಂದ ಭಾರತಕ್ಕೆ ಈ ಮಟ್ಟದ ಚಿನ್ನವನ್ನು ತರಲಾಗುತ್ತಿದೆ.

ಹಾಗೆಯೇ, ಭಾರತೀಯ ಕೇಂದ್ರ ಬ್ಯಾಂಕ್ ಮುಂಬರುವ ತಿಂಗಳುಗಳಲ್ಲಿ ಇದೇ ರೀತಿಯ ಹೆಚ್ಚಿನ ಪ್ರಮಾಣದ ಚಿನ್ನವನ್ನು ದೇಶೀಯವಾಗಿ ಸಂಗ್ರಹಿಸಲಿದೆ ಎಂದು ಟೈಮ್ಸ್ ಆಫ್ ಇಂಡಿಯಾ ವರದಿ ತಿಳಿಸಿದೆ. ಕೆಲವು ವ್ಯವಸ್ಥಾಪನಾ ಕಾರಣಗಳಿಂದಾಗಿ ಆರ್‌ಬಿಐ ಭಾರತಕ್ಕೆ ಚಿನ್ನ ಸಾಗಿಸಿದೆ ಎಂದು ಹೇಳಲಾಗುತ್ತಿದೆ. ಸದ್ಯ ಆರ್‌ಬಿಐ 822.10 ಟನ್ ಚಿನ್ನವನ್ನು ಹೊಂದಿದ್ದು, ಇದರಲ್ಲಿ 408.31 ಟನ್ ದೇಶೀಯವಾಗಿದೆ ಇದೆ. ಉಳಿದದ್ದು ವಿದೇಶಿ ಸಂಗ್ರಹಗಾರಗಳಲ್ಲಿ ಇರಿಸಲಾಗಿದೆ.

ಜಾಗತಿಕವಾಗಿ ಕೇಂದ್ರ ಬ್ಯಾಂಕುಗಳು ಚಿನ್ನದ ನಿಕ್ಷೇಪವನ್ನು ಹೆಚ್ಚಿಸುತ್ತಿವೆ. ಇದನ್ನು ಕರೆನ್ಸಿ ಚಂಚಲತೆ ಮತ್ತು ಭೌಗೋಳಿಕ ರಾಜಕೀಯ ಅಪಾಯಗಳ ವಿರುದ್ಧ ರಕ್ಷಣೆಯಾಗಿ ಈ ರೀತಿ ಇರಿಸಲಾಗುತ್ತದೆ. ವಿದೇಶಗಳಲ್ಲಿ ಹೆಚ್ಚು ಚಿನ್ನ ಸಂಗ್ರಹವಾಗುತ್ತಿರುವುದರಿಂದ ಆರ್‌ಬಿಐ ಭಾರತಕ್ಕೆ ಸಾಗಿಸಲು ನಿರ್ಧರಿಸಿದೆ ಎಂದು ಹೇಳಲಾಗುತ್ತಿದೆ.

→ 4

ಆರ್‌ಬಿಐ ಕಾರ್ಯತಂತ್ರ

ಭಾರತಕ್ಕೆ ಚಿನ್ನವನ್ನು ಮರಳಿ ತರುವುದು ತನ್ನ ವಿದೇಶಿ ವಿನಿಮಯ ಮೀಸಲುಗಳನ್ನು ನಿರ್ವಹಿಸುವಲ್ಲಿ ಆರ್‌ಬಿಐನ ಕಾರ್ಯತಂತ್ರದ ಭಾಗವಾಗಿದೆ. ಪ್ರಧಾನ ಮಂತ್ರಿಗಳ ಆರ್ಥಿಕ ಸಲಹೆಗಾರರೂ ಆಗಿರುವ ಖ್ಯಾತ ಅರ್ಥಶಾಸ್ತ್ರಜ್ಞ ಸಂಜೀವ್ ಸನ್ಯಾಲ್ ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಆರ್‌ಬಿಐ ತನ್ನ 100 ಟನ್ ಚಿನ್ನದ ನಿಕ್ಷೇಪವನ್ನು ಯುಕೆಯಿಂದ ಭಾರತಕ್ಕೆ ಸ್ಥಳಾಂತರಿಸಿದೆ ಎಂದಿದ್ದಾರೆ. ಹೆಚ್ಚಿನ ದೇಶಗಳು ತಮ್ಮ ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡ್ ಅಥವಾ ಅಂತಹ ಯಾವುದಾದರೂ ಸ್ಥಳದ ವಾಲ್ಟ್‌ಗಳಲ್ಲಿ ಇಡುತ್ತವೆ. ಇದಕ್ಕಾಗಿ ಶುಲ್ಕವನ್ನೂ ಪಾವತಿಸುತ್ತವೆ. ಈಗ ಭಾರತವು ತನ್ನ ಚಿನ್ನವನ್ನು, ತನ್ನದೇ ಆದ ಸುರಕ್ಷಿತ ಸಂಗ್ರಹಾಗಾರದಲ್ಲಿ ಇರಿಸಿಕೊಳ್ಳಲಿದೆ. 1991ರ ಬಿಕ್ಕಟ್ಟಿನ ಮಧ್ಯೆ ರಾತ್ರೋರಾತ್ರಿ ಚಿನ್ನವನ್ನು ಸಾಗಿಸಬೇಕಾಗಿ ಬಂದ ನಂತರ ನಾವು ಬಹಳ ದೂರ ಸಾಗಿದ್ದೇವೆ ಎಂದು ಹೇಳಿದ್ದಾರೆ. 1990-91ರಲ್ಲಿ ಚಿನ್ನವನ್ನು ಸಾಗಿಸುವುದು ವೈಫಲ್ಯದ ಕ್ಷಣವಾಗಿತ್ತು. ಅದನ್ನು ನಾವು ಎಂದಿಗೂ ಮರೆಯುವುದಿಲ್ಲ. ಅದಕ್ಕಾಗಿಯೇ ಚಿನ್ನದ ಈ ಸಾಗಣೆಗೆ ವಿಶೇಷ ಅರ್ಥವಿದೆ ಎಂದು ಅವರು ಹೇಳಿದ್ದಾರೆ.

7ನೇ ಹಂತದ ಮತದಾನ ಬಳಿಕ ಎಕ್ಸಿಟ್ ಪೋಲ್ | ಮತಗಟ್ಟೆ ಸಮೀಕ್ಷೆ ಮೇಲೆ ಎಲ್ಲರ ಕಣ್ಣು

ಮತಗಟ್ಟೆ ಭವಿಷ್ಯ: ನಿಜವಾಗುವುದು ಎಷ್ಟು?

ದೆಹಲಿ: ಲೋಕಸಭೆ ಚುನಾವಣೆಯು ಕೊನೆಯ ಚರಣಕ್ಕೆ ಬಂದಿದ್ದು, ಶನಿವಾರ ಕಡೇ ಹಂತದ ಮತದಾನ ನಡೆದು, ಸಂಜೆಯೇ ಮತಗಟ್ಟೆ ಸಮೀಕ್ಷೆಗಳೂ ಹೊರಬೀಳಲಿವೆ.

ಜೂ.4ರ ಫಲಿತಾಂಶಕ್ಕೂ ಮುನ್ನ ಒಂದು ರೀತಿ ಇದು ಮಿನಿ ಫಲಿತಾಂಶ. ಕೆಲವೊಮ್ಮೆ ಈ ಮತಗಟ್ಟೆ ಸಮೀಕ್ಷೆಗಳು ನಿಜವಾದರೆ, ಕೆಲವೊಮ್ಮೆ ಪೂರ್ಣವಾಗಿ ಉಲ್ಟಾ ಆಗಿರುತ್ತವೆ. ಆದರೂ, ಎಲ್ಲರೂ ಮತಗಟ್ಟೆ ಫಲಿತಾಂಶ ಏನಿರಬಹುದು ಎಂಬ ಲೆಕ್ಕಾಚಾರದಲ್ಲಿಯೇ ಇರುತ್ತಾರೆ.

2009, 2014 ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಬಹಿರಂಗವಾದ ಮತಗಟ್ಟೆ ಸಮೀಕ್ಷೆಗಳು ಎಷ್ಟು ನಿಜವಾಗಿವೆ? ಯಾರ ಸಮೀಕ್ಷೆ ಫಲಿತಾಂಶದ ಹತ್ತಿರಕ್ಕೆ ಬಂದಿತ್ತು ಎಂಬುದನ್ನು ವಿಶ್ಲೇಷಿಸಬಹುದು.

ವಿಶೇಷವೆಂದರೆ, ಕಳೆದ ಎರಡೂ ಬಾರಿಯೂ ಎನ್‌ಡಿಎ ಗೆಲ್ಲಲಿದೆ ಎಂದು ಎಲ್ಲ ಸಮೀಕ್ಷೆಗಳು ಹೇಳಿದ್ದು, ಇದು ನಿಜವಾಗಿತ್ತು. 2009ರಲ್ಲಿ ಯುಪಿಎ ಗೆಲ್ಲಲಿದೆ ಎಂದು ಹೇಳಿದ್ದರೂ, ಪಡೆದುಕೊಳ್ಳುವ ಸ್ಥಾನಗಳು ಹೆಚ್ಚುಕಡಿಮೆಯಾಗಿದ್ದವು.

→ 4

2014ರಲ್ಲಿ ಸರಾಸರಿ ಎಂಟು ಚುನಾವಣೋತ್ತರ ಸಮೀಕ್ಷೆಗಳು ಬಿಜೆಪಿ ನೇತೃತ್ವದ ಎನ್‌ಡಿಎ 283 ಸ್ಥಾನಗಳನ್ನು ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ 105 ಸ್ಥಾನಗಳನ್ನು ಗೆಲ್ಲಲಿದೆ ಎಂದು ಅಂದಾಜಿಸಿದ್ದವು. ಈ ಪೈಕಿ ಬಿಜೆಪಿ 282 ಮತ್ತು ಕಾಂಗ್ರೆಸ್ 44 ಸ್ಥಾನಗಳನ್ನು ಗೆದ್ದಿತ್ತು.

ಸಮೀಕ್ಷೆ	ಎನ್‌ಡಿಎ	ಯುಪಿಎ
ನ್ಯೂಸ್24-ಚಾಣಕ್ಯ	340	70
ಇಂಡಿಯ ಟೀವಿ-ಸಿವೋಟರ್	289	101
ಸಿಎನ್‌ಎನ್‌ಐಬಿಎನ್-ಸಿಎಸ್‌ಡಿಎಸ್	280	97
ಇಂಡಿಯ ಟುಡೆ-ಸಿಸಿರೋ	272	115
ಎನ್‌ಡಿಟಿವಿ-ಹನ್ಸ ರಿಸರ್ಚ್	279	103
ಎಬಿಪಿ-ನೀಲ್ಸನ್	274	97
ಟೈಮ್ಸ್ ನೌ-ಒಆರ್‌ಜಿ	249	148
ಫಲಿತಾಂಶ	336	60

ಮೊಬೈಲ್ ಸುಲಿಗೆ ಮಾಡುತ್ತಿದ್ದ ಇಬ್ಬರ ಬಂಧನ

ಬೆಂಗಳೂರು: ಸ್ಕೂಟರ್‌ನಲ್ಲಿ ಸುತ್ತಾಡುತ್ತಾ ಮೊಬೈಲ್ ಎಗರಿಸುತ್ತಿದ್ದ ಇಬ್ಬರು ಸುಲಿಗೆಕೋರರನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿ ಒಂದು ಲಕ್ಷ ಮೌಲ್ಯದ ಮೊಬೈಲ್ ಹಾಗೂ ಸ್ಕೂಟರನ್ನು ವಶಪಡಿಸಿಕೊಂಡಿದ್ದಾರೆ.ರಾಮಮೂರ್ತಿ ನಗರದ ವಿವೇಕಾನಂದ ರಸ್ತೆ ನಿವಾಸಿ ಮೌಲಾಲಿ ಅಲಿಯಾಸ್ ಮೊಹಮದ್ ಅಲಿ(19) ಮತ್ತು ಮುತ್ತಮ ಲೇಔಟ್‌ನ 1ನೇ ಕ್ರಾಸ್ ನಿವಾಸಿ ಮೊಹಮದ್ ಜುನ್ಯೆದ(19) ಬಂಧಿತ ಆರೋಪಿಗಳು. ಮೊಹಮದ್ ಅಲಿ ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರೆ, ಮೊಹಮದ್ ಜುನ್ಯೆದ ರಾಯಲ್ ಎನ್‌ಫೀಲ್ಡ್ ಷೋ ರೂಂನಲ್ಲಿ ಕೆಲಸ ಮಾಡುತ್ತಿದ್ದನು. ಬಾಣಸವಾಡಿಯ 100 ಅಡಿ ರಸ್ತೆ, ಕಾಫಿ ಬ್ರೆವರಿ ಹತ್ತಿರ ವ್ಯಕ್ತಿಯೊಬ್ಬರು ಹೋಗುತ್ತಿದ್ದಾಗ ಇಬ್ಬರು ಸುಲಿಗೆಕೋರರು ಕಪ್ಪು ಬಣ್ಣದ ಸ್ಕೂಟರ್‌ನಲ್ಲಿ ಸುತ್ತಾಡುತ್ತಾ ಅವರ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಕೈಗೊಂಡು ಇಬ್ಬರನ್ನು ಬಂಧಿಸಿ ಮೊಬೈಲ್ ಫೋನ್ ಹಾಗೂ ಕೃತ್ಯಕ್ಕೆ ಬಳಸಿದ್ದ ಸ್ಕೂಟರ್ ಅನ್ನು ವಶಪಡಿಸಿಕೊಳ್ಳಲಾಗಿದೆ.

KMF Builders & Developers Ltd.
Regd. Office: - Flat No. 508, Golf Manor, NAL Wind Tunnel Road, Murgeshpalya, Bangalore-560017, Ph:-25238007, 41486142-43
CIN: L45203KA1995PLC017422 www.kmfbuilders.com kmfbuilders95@gmail.com

Extract of Statement of Standalone Unaudited financial Results for the Qtr ended 31.03.2024 (Fig in Rs.)

Sl No	Particulars	QTRLY			YEARLY	
		Quarter Ended (31/03/2024) Unaudited	Quarter Ended (31/12/2023) Unaudited	Quarter Ended (31/03/2023) Unaudited	Year Ended (31/03/2024) Unaudited	Year Ended (31/03/2023) Unaudited
1	Total Income from operations	4351105.00	85588100.00	8362500.00	205547808.00	25639600.00
2	Net Profit/ (Loss) for the period (before Tax, Exceptional and/or Extraordinary items	1897560.00	84054600.00	2251000.00	6538674.00	4709600.00
3	Net Profit/ (Loss) for the period (before Tax, after Exceptional and /or Extraordinary items	1897560.00	84054600.00	2251000.00	6538674.00	4709600.00
4	Net Profit/ (Loss) for the period (after Tax, after Exceptional and /or Extraordinary items	1209309.00	82891600.00	1940000.00	4791832.00	3104400.00
5	Total Comprehensive income for the period (after tax) (attributable to owners of the company)	1209309.00	82891600.00	1940000.00	4791832.00	3104400.00
6	Paid up Equity Share Capital (Face Value of Rs. 5/-	60910000.00	60910000.00	60910000.00	60910000.00	60910000.00
7	Reserves (excl. Revaluation Reserve) as per audited balance sheet of previous year	0.00	0.00	0.00	0.00	0.00
8	Earnings Per Share (of Rs.5 each) (for continuing and operations)	0.10	6.80	0.15	0.39	0.25
	Basic & Diluted					

Note: -The above is an extract of the detailed format of unaudited financial results filed with the stock exchanges under regulation 33 of the SEBI (listing Obligations and Disclosure Requirements) Regulations, 2015.
The above unaudited financial results for the qtr ended 31.03.2024 were reviewed by the audit committee at the meeting held on 30.05.2024 and approved by the Board of Directors and taken on record at the meeting held on 30.05.2024
The full format of the unaudited financial results is available on the stock exchanges website **www.bseindia.com** & on the company website **www.kmfbuilders.com**

Place: Delhi
Date: 31.05.2024

By order of the Board
KMF Builders & Developers ltd
sd/-
Gorve Chadha
Managing Director

THE SOUTH INDIA PAPER MILLS LIMITED
CIN : L85110KA1959PLC001352
Regd. Office: Chikkayana Chatra, Nanjangud - 571 302 Karnataka State
₹. In Lakhs except per share data

STATEMENT OF AUDITED FINANCIAL RESULTS FOR THE QUARTER / YEAR ENDED 31st MARCH 2024

Sl No	Particulars	Quarter Ended 31/03/2024	Quarter Ended 31/03/2023	Year ended 31/03/2024	Year ended 31/03/2023
1	Total income from operations	9,065.88	6,906.17	31,230.62	28,785.11
2	Net profit for the the period (before Tax, Exceptional and / or Extraordinary Items)	(340.86)	(1,567.68)	(1,757.15)	(3,730.12)
3	Net profit for the the period before Tax, (after Exceptional and / or Extraordinary Items)	(357.34)	(1,567.68)	(1,787.16)	(2,402.62)
4	Net Profit for the period after tax,(after exceptional and/ or extraordinary items)	(272.80)	(1,030.25)	(1,342.77)	(1,667.19)
5	Total comprehensive Income for the period [comprising profit for the period (after tax) and other comprehensive income (after tax)]	(214.75)	(1,036.20)	(1,284.72)	(1,673.14)
6	Equity Share Capital	1,875.00	1,875.00	1,875.00	1,875.00
7	Reserves (excluding Revaluation Reserve as shown in the Balance Sheet of previous year) i.e., Other Equity	20,067.42 (as on 31-3-2024)	21,410.19 (as on 31-3-2023)	20.067.42 (as on 31-3-2024)	21,410.19 (as on 31-3-2023)
8	Earnings Per Share (of Rs. 10/- each) in Rs.				
	Basic :	(1.45)	(6.83)	(7.16)	(11.08)
	Diluted :	(1.45)	(6.83)	(7.16)	(11.08)

1. The above is an extract of the detailed format of Quarterly / Annual Financial Results filed with the Stock Exchange under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly / Annual Financial Results are available on the website of BSE Limited at www.bseindia.com & Company's website www.sipaper.com

Place : Nanjangud
Date : 30-05-2024

By Order of the Board
Sd/-
MANISH M PATEL
MANAGING DIRECTOR
DIN: 00128179

ಸೆಕ್ಯುರಿಟಿ ಗಾರ್ಡ್ ಸೆರೆ: 18 ಮೊಬೈಲ್ ಫೋನ್‌ಗಳು ವಶ

ಬೈಯ್ಯಪ್ಪನಹಳ್ಳಿ ಪೊಲೀಸರಿಂದ ಆರೋಪಿ ಬಂಧನ

ಬೆಂಗಳೂರು: ನೇಪಾಳ ಮೂಲದ ಸೆಕ್ಯುರಿಟಿ ಗಾರ್ಡ್‌ನನ್ನು ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು, ಎರಡು ಲಕ್ಷ ಮೌಲ್ಯದ 18 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕಗ್ಗದಾಸಪುರದ ಬಾಲಾಜಿ ಲೇಔಟ್‌ನಲ್ಲಿ ನಿರ್ಮಾಣವಾಗುತ್ತಿದ್ದ ಕಟ್ಟಡವೊಂದರ ಲೇಬರ್ ಶೆಡ್‌ನಲ್ಲಿ ರಾತ್ರಿ ಮಲಗಿದ್ದ ಕಾರ್ಮಿಕನ ಮೊಬೈಲ್ ಫೋನ್ ಕಳವಾಗಿರುವ ಬಗ್ಗೆ ದೂರು ದಾಖಲಾಗಿತ್ತು. ಆರೋಪಿಯು ಕದ್ದ ಮೊಬೈಲ್‌ಗಳನ್ನು ಮಾರುವ ಸಲುವಾಗಿ ಬೆನ್ನಿಗಾನಹಳ್ಳಿಗೆ ಬಂದು ಗ್ರಾಹಕರನ್ನು ಹುಡುಕುತ್ತಿದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ಲಭಿಸಿದೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸರು ಒಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಮೊಬೈಲ್ ಕಳವು ಮಾಡಿರುವುದಾಗಿ ತಿಳಿಸಿದ್ದಾನೆ. ಆರೋಪಿಯು ಮೂಲತಃ ನೇಪಾಳದ ವನಾಗಿದ್ದು, ಉದ್ಯೋಗ ಅರಸಿ ತನ್ನ ತಂದೆ ಯೊಂದಿಗೆ ನಗರಕ್ಕೆ ಬಂದು ಮಹದೇವಪು ರದಲ್ಲಿನ ಅಪಾರ್ಟ್‌ಮೆಂಟ್‌ವೊಂದರಲ್ಲಿ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದು, ಮನೆಯ ಕಿಟಕಿ ಬಳಿಯಿಟ್ಟಿದ್ದ ಹಾಗೂ ಜನ ಜಂಗುಳಿ ಹೆಚ್ಚಿರುವ ಪ್ರದೇಶಗಳಲ್ಲಿ ಸಾರ್ವಜನಿಕರ ಜೇಬುಗಳಿಂದ ಮೊಬೈಲ್ ಫೋನ್ ಕದ್ದು ಬೇರೆಯವರಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದು ತನಿಖೆಯಿಂದ ತಿಳಿದು ಬಂದಿರುತ್ತದೆ. ಆರೋಪಿಯ ಬಂಧನದಿಂದ ಎಚ್.ಎ.ಎಲ್ ಪೊಲೀಸ್ ಠಾಣೆಯ ಮೊಬೈಲ್ ಕಳವು ಪ್ರಕರಣವೊಂದು ಪತ್ತೆಯಾಗಿದೆ.

ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದವರ ಬಂಧನ

ಬೆಂಗಳೂರು: ಕೊಲೆ ಯತ್ನ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ 19 ವರ್ಷದಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಹನುಮಂತನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಬೇಕರಿ ಮಾಲಿಕನ ಜತೆ ಜಗಳವಾಡಿ ಅವರ ಮನೆಗೆ ನುಗ್ಗಿ ಅವರ ಪತ್ನಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ ಪ್ರಕರಣದಲ್ಲಿ ಹಾಸನ ಜಿಲ್ಲೆಯ ಆಲೂರು ತಾಲೂಕಿನ ನಿವಾಸಿ, ಆಟೋ ಚಾಲಕನನ್ನು ಬಂಧಿಸಲಾಗಿದೆ. ಪೋಕ್ಸೊ ಪ್ರಕರಣ ದಲ್ಲಿ ಭಾಗಿಯಾಗಿ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ 2016ರಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ತಮಿಳುನಾಡಿನ ತಿರುನಲ್ಲೂರಿನ ಹೇಮಾಪುರ ಗ್ರಾಮದಲ್ಲಿ ಗಿರಿನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿಗಳು

ಕೆಂಪೇಗೌಡ ನಗರ: ಡಕಾಯಿತಿ ಪ್ರಕರಣದಲ್ಲಿ ಭಾಗಿಯಾಗಿ ಜಾಮೀನು ಪಡೆದು ಬಿಡುಗಡೆಯಾದ ನಂತರ ನ್ಯಾಯಾಲಯಕ್ಕೆ ಹಾಜರಾಗದೇ ಒಂದು ವರ್ಷದಿಂದ ತಲೆಮರೆಸಿಕೊಂ ಡಿದ್ದ ರೌಡಿಯನ್ನು ಕೆಂಪಾಂಬುದಿಕೆರೆಯ ಬಳಿ ಕೆಂಪೇಗೌಡ ನಗರ ಠಾಣಾ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹನುಮಂತನಗರ: ಹಲ್ಲೆ ಪ್ರಕರಣದಲ್ಲಿ ಭಾಗಿಯಾಗಿ ಜಾಮೀನು ಪಡೆದು ಬಿಡುಗಡೆಯಾದ ನಂತರ 2014ರಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಸಿಕೆ ಅಚ್ಚುಕಟ್ಟು, ಗೌಡರಪಾಳ್ಯದ ದುರ್ಗಾಂಭ ದೇವಾಲಯದ ಬಳಿ ಹನುಮಂತನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಾಲ್ವರ ಬಂಧನ: 31 ದ್ವಿಚಕ್ರ ವಾಹನಗಳು ಜಪ್ತಿ

ಬೆಂಗಳೂರು: ಈ ಹಿಂದೆ ದರೋಡೆ, ಪೋಕ್ಸೊ ಪ್ರಕರಣಗಳಲ್ಲಿ ಭಾಗಿಯಾಗಿ ಜಾಮೀನಿನ ಮೇಲೆ ಹೊರ ಬಂದ ನಂತರವೂ ದುಶ್ಚಟಗಳಿಗೆ ದಾಸರಾಗಿ ದ್ವಿಚಕ್ರ ವಾಹನ ಕಳ್ಳತನ ಹಾಗೂ ಸುಲಿಗೆ ಮಾಡುತ್ತಿದ್ದ ತಮಿಳುನಾಡಿನ ನಾಲ್ವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ 45 ಲಕ್ಷ ಬೆಲೆಬಾಳುವ 31 ದ್ವಿಚಕ್ರ ವಾಹನಗಳು, 10 ಗ್ರಾಂ ಚಿನ್ನದ ಸರ ಹಾಗೂ ಕೃತ್ಯಕ್ಕೆ ಬಳಸಿದ್ದ ತವೇರಾ ಕಾರನ್ನು ವಶಪಡಿಸಿಕೊಂಡಿದ್ದಾರೆ. ದ್ವಿಚಕ್ರ ವಾಹನ ಕಳ್ಳತನವಾಗಿದ್ದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಮೊದಲು ಇಬ್ಬರನ್ನು ಬಂಧಿಸಿ ವಿಚಾರಣೆಗೊಳಪಡಿಸಿ ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿ ಏಳು ದಿನಗಳ ಕಾಲ ತಮ ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ಇನ್ನಿಬ್ಬರ ಬಗ್ಗೆ ಮಾಹಿತಿ ಪಡೆದು ಆ ಇಬ್ಬರನ್ನು ಎಲೆಕ್ಟ್ರಾನಿಕ್ ಸಿಟಿ 2ನೇ ಹಂತದ ಜೈನ್ ಕಾಲೇಜ್ ಹತ್ತಿರ, ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ. ಈ ಆರೋಪಿಗಳು ತಮಿಳುನಾಡಿನ ವೇಲೂರು ಜಿಲ್ಲೆಯವ ರಾಗಿದ್ದು, ಈ ಹಿಂದೆ ರಾಬರಿ, ಪೋಕ್ಸೊ ಪ್ರಕರಣಗಳಲ್ಲಿ ಭಾಗಿಯಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಬಿಡುಗಡೆಯಾದ ನಂತರ ತಮ್ಮ ದುಶ್ಚಟಗಳಿಗೆ ಹಣ ಸಾಕಾಗದ ಕಾರಣ ಕಳ್ಳತನ ಮಾಡುವುದನ್ನು ಮುಂದುವರಿಸಿದ್ದರು. ತಮಿಳುನಾಡಿನ ಲ್ಲಿಯೇ ಒಂದು ತವೇರಾ ಕಾರನ್ನು ಬಾಡಿಗೆ ಪಡೆದು, ಆ ಕಾರಿನಲ್ಲಿ ರಾತ್ರಿ ವೇಳೆಯಲ್ಲಿ ಬೆಂಗಳೂರಿಗೆ ಬಂದು ಒದೊಂದು ಏರಿಯಾದಲ್ಲಿ ಒಬ್ಬೊಬ್ಬರು ಇಳಿದುಕೊಂಡು, ನಗರದ ವಿವಿಧ ಏರಿಯಾಗಳಲ್ಲಿ ಮನೆಗಳ ಮುಂದೆ ಹಾಗೂ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದ ದುಬಾರಿ ಬೆಲೆ ಬಾಳುವಂತಹ ದ್ವಿಚಕ್ರ ವಾಹನಗಳ ಹ್ಯಾಂಡ್ ಲಾಕ್ ಮುರಿದು ಕಳ್ಳತನ ಮಾಡಿಕೊಂಡು ಹೋಗಿ ಕೆಲವು ದ್ವಿ-ಚಕ್ರ ವಾಹನಗಳನ್ನು ವೇಲೂರು ಜಿಲ್ಲೆಯ ಗುಡಿಯಾತ್ತಂ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅವರ ಪರಿಚಯದವರಿಗೆ ಮಾರಾಟ ಮಾಡಿರುವುದು ವಿಚಾರಣೆಯಿಂದ ತಿಳಿದುಬಂದಿದೆ.

ಹೆಬ್ಬಗೋಡಿ ಠಾಣಾ ಸರಹದ್ದಿನಲ್ಲಿ ವ್ಯಕ್ತಿಯ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಸುಲಿಗೆ ಮಾಡಿಕೊಂಡು ಹೋಗಿರುವುದು ತನಿಖೆಯಿಂದ ಗೊತ್ತಾಗಿದೆ.ಆರೋಪಿಗಳು ಕಳ್ಳತನ ಮಾಡಿದ್ದ ದ್ವಿ-ಚಕ್ರ ವಾಹನಗಳನ್ನು ತಮಿಳುನಾಡಿನ ಗುಡಿಯತ್ತಂ, ಮಾದನೂರು, ವಡ್ಡರೆಡ್ಡಿಪಾಳ್ಯಂ, ಸೇಂಗೊಂಡ್ರಂ ಗ್ರಾಮಗಳಲ್ಲಿ ಮಾರಾಟ ಮಾಡಿದ್ದವರ ಕಡೆಯಿಂದ ವಾಹನಗಳನ್ನು ಸ್ಥಳೀಯ ಪೊಲೀಸರ ಸಹಕಾರದಿಂದ ವಶಪಡಿಸಿಕೊಂಡಿದ್ದಾರೆ.

ಮಾಲ್ ಮೇಲಿಂದ ಬಿದ್ದು ಯುವಕ ಆತ್ಮಹತ್ಯೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯಲ್ಲಿರುವ ವೇಗಾ ಸಿಟಿ ಮಾಲ್‌ನಿಂದ ಮೇಲಿಂದ ಬಿದ್ದು ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಶುಕ್ರವಾರ ಮಧ್ಯಾಹ್ನ ಮೂರು ಗಂಟೆ ಸುಮಾರಿಗೆ ಘಟನೆ ನಡೆದಿದೆ. ಸುಹಾಸ್ ಅಡಿಗ ಎಂಬಾತ ಮಾಲ್‌ನ 4ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೂಡಲೇ ಅಲ್ಲಿದ್ದ ಸ್ಥಳೀಯರು ಹಾಗೂ ಮಾಲ್ ಸಿಬ್ಬಂದಿ ಆತನನ್ನು ಆಸ್ಪತ್ರೆಗೆ ಸೇರಿಸಲು ಮುಂದಾಗಿದ್ದಾರೆ. ಆದರೆ ನಾಲ್ಕನೇ ಮಹಡಿಯಿಂದ ಬಿದ್ದ ರಭಸಕ್ಕೆ ತಲೆಗೆ ಗಂಭೀರ ಪೆಟ್ಟಾಗಿತ್ತು. ತೀವ್ರ ರಕ್ತಸ್ರಾವವಾಗಿ ಮೃತಪಟ್ಟಿದ್ದಾನೆ. ಘಟನಾ ಸ್ಥಳಕ್ಕೆ ಮೈಕೋ ಲೇಔಟ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಸಂಬಂಧ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆಯನ್ನು ಕೈಗೊಂಡಿದ್ದಾರೆ. ಮಾಲ್‌ಗೆ ಇವನೊಬ್ಬನೇ ಬಂದಿದ್ದನ್ನಾ ಅಥವಾ ಈತನೊಟ್ಟಿಗೆ ಬೇರೆಯಾರಾದರೂ ಇದ್ದರಾ ಎಂಬುದರ ಕುರಿತು ಸಿಸಿ ಟಿವಿ ಪರಿಶೀಲನೆ ಮಾಡಲಾಗುತ್ತಿದೆ.

ತಂಬಾಕು ದುಷ್ಪರಿಣಾಮದ ಅರಿವು ಅಗತ್ಯ

ಬೆಂಗಳೂರು: ವಿದ್ಯಾರ್ಥಿಗಳು ತಂಬಾಕು ಉತ್ಪನ್ನಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರಲ್ಲಿ ಅರಿವು ಮೂಡಿಸಬೇಕು ಎಂದು ಪಾಲಿಕೆ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಬಿಬಿಎಂಪಿ ಹಾಗೂ ಇತರೆ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಚಾಲನೆ ನೀಡಿ ಮಾತನಾಡಿ, ತಂಬಾಕು ಉದ್ಯಮದ ಪ್ರಭಾವದಿಂದ ಮಕ್ಕಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು. ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಎಲ್ಲಾ ನಾಗರೀಕರು ಒಳ್ಳೆಯ ಆರೋಗ್ಯಕ್ಕಾಗಿ ಮುಂದಿನ ಆರೋಗ್ಯಕರ ಸಮಾಜಕ್ಕಾಗಿ ತಂಬಾಕು ರಹಿತ ಜೀವನವನ್ನು ಆರಂಭಿಸಬೇಕು ಎಂದು ಹೇಳಿದರು.

ಬಿಬಿಎಂಪಿ ಹಾಗೂ ಇತರೆ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಚಾಲನೆ ನೀಡಿ

ಸ್ವಾತಂತ್ರ್ಯ ಉದ್ಯಾನವನದಿಂದ ಪ್ರಾರಂಭವಾದ ವಾಕಥಾನ್ ಕೆ.ಆರ್ ವೃತ್ತದ ಮೂಲಕ ಕಬ್ಬನ್ ಪಾರ್ಕ್ ಒಳಗಿನಿಂದ, ಕಸ್ತೂರ ಬಾ ರಸ್ತೆ, ಹಡ್ಸನ್ ವೃತ್ತದಿಂದ ಟೌನ್ ಹಾಲ್ ಬಳಿ ಮುಕ್ತಾಯಗೊಂಡಿತು. ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಾಕಥಾನ್ ನಲ್ಲಿ ಸೇರಿದಂತೆ ವಿವಿಧ ಕಾಲೇಜುಗಳಿಂದು 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ. ಮದನಿ, ಎಲ್ಲಾ ವಲಯ ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಇದ್ದರು.

ವಿದ್ಯಾರ್ಥಿಗಳಿಗೆ ಬಹುಮಾನ

ಪಾಲಿಕೆ ಮತ್ತು ಇತರೆ ಸಂಸ್ಥೆಗಳ ಸಹಭಾಗಿತ್ವದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಪ್ರಯುಕ್ತ ವಿದ್ಯಾರ್ಥಿಗಳಿಗೆ ವಿಶೇಷವಾಗಿ ನಿಧಿ ಬೇಟೆ, ರೀಲ್ ಸ್ಪರ್ಧೆ, ಕಿರು ಚಿತ್ರ ಸ್ಪರ್ಧೆ ಹಾಗೂ ಪೋಸ್ಟರ್ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಂತೆ ನಿಧಿ ಬೇಟೆಯಲ್ಲಿ ಮಂಗಳೂರು ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ವಿದ್ಯಾರ್ಥಿಗಳಾದ ನಯನ ಹಾಗೂ ಕೀರ್ತನಾ ಮೊದಲ ಬಹುಮಾನ ಪಡೆದು 25,000 ರುಪಾಯಿ ತಮ್ಮದಾಗಿಸಿಕೊಂಡರು. ಏಐಟಿ ಎಂಜಿನಿಯರಿಂಗ್ ಕಾಲೇಜಿನ ಕೀರ್ತನಾ ರನ್ನರ್ ಅಪ್ ಆಗಿ 5,000 ರುಪಾಯಿ ನಗದು ಬಹುಮಾನ ಪಡೆದರು. ರೀಲ್ಸ್ ಮತ್ತು ಶಾರ್ಟ್ ವಿಡಿಯೊಗಳಲ್ಲಿ ಹೆಚ್ಚು ವೀಕ್ಷಣೆ ಪಡೆದವರು ವಿಜೇತರಾಗಿದ್ದು, ಮೊದಲನೇ ಬಹುಮಾನ ಸಂಗೀತಾ, ಎರಡನೇ ಬಹುಮಾನ ನಾಗೇಶ್ವರಿ ಹಾಗೂ ಮೂರನೇ ಬಹುಮಾನ ಅಮಲ್ ಕೈರ್ಝ್‌ರಿಗೆ ನೀಡಲಾಯಿತು.

izmo ltd.
Driving **Growth**

EPS Up **₹19.30*** | Net Profit Up **30%****

Audited Financial Results for the Quarter & Financial Year ended 31-03-2024

Statement of Consolidated Audited Financial Results for the Quarter & FY ended 31-03-2024
(Rs. in Lakhs)

Sl. No.	Particulars	Quarter Ended			Year Ended	
		Audited 31.03.2024	Un-Audited 31.12.2023	Audited 31.03.2023	Audited 31.03.2024	Audited 31.03.2023
1	Revenue from Operation	5,028.84	5,021.31	4,366.08	18,674.83	15,382.69
2	Other Income	85.63	72.28	35.23	334.27	353.18
3	**Total Income**	**5,114.47**	**5,093.59**	**4,401.31**	**19,009.10**	**15,735.87**
4	**Profit/(Loss) for the period**	**903.74**	**688.29**	**829.28**	**2,605.06**	**2,001.64**
5	Total other Comprehensive Income	10.18	-	4.25	10.18	4.25
6	**Total other Comprehensive Income**	**913.92**	**688.29**	**833.53**	**2,615.24**	**2,005.90**
7	Paid-up Equity Share Captial (Face value Rs.10/- per share)	1,411.36	1,344.41	1,339.16	1,411.36	1,339.16
8	Reserves	29,233.89	27,758.58	25,951.88	29,233.89	25,951.88
9	Earnings Per Share (Face value of share at Rs.10/-each)(not Annualised)					
	(a) Basic	6.40	5.12	6.19	19.30	14.96
	(b) Diluted	6.40	5.12	6.19	19.30	14.96
	See accompanying notes to the Financial Results.					

Statement of Stand alone Audited Financial Results for the Quarter & FY ended 31-03-2024
(Rs. in Lakhs)

Sl. No.	Particulars	Quarter Ended			Year Ended	
		Audited 31.03.2024	Un-Audited 31.12.2023	Audited 31.03.2023	Audited 31.03.2024	Audited 31.03.2023
1	Revenue from Operation	1,147.03	1,124.27	916.87	4,261.94	3,458.42
2	Other Income	31.99	27.06	26.02	113.50	92.09
3	**Total Income**	**1,179.02**	**1,151.33**	**942.89**	**4,375.44**	**3,550.51**
4	**Profit/(Loss) for the period**	**1.60**	**8.59**	**1.02**	**19.07**	**17.20**
5	Total other Comprehensive Income	10.18	-	4.25	10.18	4.25
6	**Total Comprehensive Income for the Period**	**11.78**	**8.59**	**5.27**	**29.25**	**21.45**
7	Paid-up Equity Share Captial (Face value Rs.10/- per share)	1,411.36	1,344.41	1,339.16	1,411.36	1,339.16
8	Reserves	16,495.75	15,922.59	15,799.73	16,495.75	15,799.73
9	Earnings Per Share (Face value of share at Rs.10/-each)(not Annualised)					
	(a) Basic	0.01	0.06	0.01	0.14	0.13
	(b) Diluted	0.01	0.06	0.01	0.14	0.13
	See accompanying notes to the Financial Results.					

The above is an extract of the detailed format of Financial Results for the Q4 and FY Ended 31.03.2024 filed with Stock Exchanges under Regulation 33 of the SEBI (Listing Obligations and Disclosures Requirements) Regulation, 2015. The complete format of Financial Results is available on the Stock Exchange websites at www.bseindia.com, www.nseindia.com and also on Company's website at www.izmoltd.com.

Notes to Financial Results:

1. The above audited Q4 and Annual financial results for the financial year ended 31st March, 2024 have been reviewed by the Audit Committee and approved by the Board of Directors at its meeting held on 30th May, 2024.
2. Statutory Audit of financial results for the Q4 and financial year ended 31st March, 2024 has been carried out by the Auditors.
3. Investors Grievances during the quarter: Received - Nil, Attended - Nil, Pending - Nil.
4. The company added 137 clients in the US including Elite Auto SAS and Fareportal Inc.
5. 30 Clients were added in Europe including Citroen DS Avicars.
6. The Company operates in one reportable segment only.
7. **Employee benefit expenses for the FY ended 31st March, 2024 includes Rs.144.50 lakhs (PY Rs. 50.81 lakhs) expenses recognised on account of Stock option offered to employees under ESOP Schemes, recognised over the vesting period.**
8. **The Company has collected US$ 180K (Rs.149.16 lakhs) from 13 companies towards image copyright infringement charges during FY. This is part of the other income. This is a result of legal action taken by the company against several large international media companies using Izmo's automotive images illegally.**
9. **Other expenses for Q4 & FY ended 31.03.2024 includes Rs.14.22 lakhs (PY Rs. 8.05 lakhs) pertains to old balance write off charged to P&L, on consolidated basis and hence to that extent net profit is reduced for the said period.**
10. Outstanding Qualified Borrowings at the start of the financial year - Rs.193.19 lakhs
11. Outstanding Qualified Borrowings at the end of the financial year -Rs.151.65 lakhs
12. Highest credit rating of the company relating to the unsupported bank borrowings or plain vanilla bonds, which have no structuring/support built in. - Not Applicable.
13. Incremental borrowing done during the year (qualified borrowing) - Rs.37.68 lakhs
14. Borrowings by way of issuance of debt securities during the year - Rs.NIL
15. Ind AS 116- Leases -The Company has different lease rental contracts which comes under the purview of IND AS 116- Leases. However the management is of the opinion that impact on the Company's financial statements is not material.
16. The figures for the quarter ended 31st March, 2024 and 31st March, 2023 are the balancing figures between audited figures in respect of the full financial year and published year-to-date figures upto the third quarter of the respective financial year.

*As compared to ₹14.96 in FY 22-23.
**For FY 23-24, as compared to last FY, at consolidated level.

Bengaluru
30th May, 2024

For and on behalf of the Board
sd/-
Sanjay Soni
Managing Director
DIN : 00609097
Flat No. 9, Prestige Casablanca Apt. Airport Road, Bengaluru - 560017

#177/2C, Bilekahalli Industrial Area,Off Bannerghatta Road, Bengaluru-560 076
Ph: +91 80 67125400, Fax: +91 80 67125408
www.izmoltd.com CIN : L72200KA1995PLC018734

ನ.30ರವರೆಗೆ ಬೆಂ-ಮೈಸೂರು ರೈಲು ಸಮಯ ಬದಲಾವಣೆ

ಬೆಂಗಳೂರು: ನೈರುತ್ಯ ರೈಲ್ವೆ ವ್ಯಾಪ್ತಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬೆಂಗಳೂರು-ಜೋಲಾರ್‌ಪೇಟ್ಟೆ ನಿಲ್ದಾಣಗಳ ನಡುವೆ ಸಂಚರಿಸುವ (16519 / 16520) ಮೆಮು ರೈಲುಗಳಿಗೆ ಹೂಡಿ ಹಾಲ್ಟ್ ನಿಲ್ದಾಣದಲ್ಲಿದ್ದ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು 6 ತಿಂಗಳವರೆಗೆ ಮೇ 31 ರಿಂದ ನವೆಂಬರ್ 30, 2024 ರವರೆಗೆ ಮುಂದುವರಿಸಲಾಗುತ್ತದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ತಡೆಯಲು ಮೈಸೂರು- ಮುಜಾಫರ್‌ಪುರ ನಿಲ್ದಾಣಗಳ ನಡುವೆ ಚಲಿಸುವ ಬೇಸಿಗೆ ವಿಶೇಷ ಎಕ್ಸ್ ಪ್ರೆಸ್ ರೈಲುಗಳ ಸೇವೆಯನ್ನು ಅಸ್ತಿತ್ವದಲ್ಲಿರುವ ಸಂಯೋಜನೆ, ನಿಲುಗಡೆ ಮತ್ತು ಸಮಯದೊಂದಿಗೆ ಹೆಚ್ಚುವರಿ ಎರಡು ಟ್ರಿಪ್ ಮುಂದುವರಿಸಲು ತೀರ್ಮಾನಿಸಲಾಗಿದೆ. ರೈಲು ಸಂಖ್ಯೆ 06221 ಮೈಸೂರು - ಮುಜಾಫರ್‌ಪುರ ಸಾಪ್ತಾಹಿಕ ಬೇಸಿಗೆ ವಿಶೇಷ ಎಕ್ಸ್ ಪ್ರೆಸ್ ರೈಲು ಜೂನ್ 17 ಮತ್ತು 24, 2024 ರಂದು ಚಲಿಸಲಿದೆ. ಈ ಮೊದಲು ಜೂನ್ 10, 2024 ರವರೆಗೆ ಚಲಿಸುತ್ತದೆ ಎಂದು ಸೂಚಿಸಲಾಗಿತ್ತು. ರೈಲು ಸಂಖ್ಯೆ 06222 ಮುಜಾಫರ್‌ಪುರ-ಮೈಸೂರು ಸಾಪ್ತಾಹಿಕ ಬೇಸಿಗೆ ವಿಶೇಷ ಎಕ್ಸ್ ಪ್ರೆಸ್ ರೈಲು ಜೂನ್ 20 ಮತ್ತು 27, 2024 ರಂದು ಚಲಿಸಲಿದೆ. ಈ ಮೊದಲು ಜೂನ್ 13, 2024 ರವರೆಗೆ ಚಲಿಸುತ್ತದೆ ಎಂದು ಸೂಚಿಸಲಾಗಿತ್ತು.

ಬೇಸಿಗೆ ವಿಶೇಷ ರೈಲು 2 ಟ್ರಿಪ್ ಸಂಚಾರ ರದ್ದು

ತಿರುನೆಲ್‌ವೇಲಿ ಮತ್ತು ಯಲಹಂಕ ನಿಲ್ದಾಣಗಳ ನಡುವೆ ಚಲಿಸುತ್ತಿದ್ದ ಸಾಪ್ತಾಹಿಕ ಬೇಸಿಗೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ 2 ಟ್ರಿಪ್ ಸೇವೆಯನ್ನು ಪ್ರಯಾಣಿಕರ ಕೊರತೆಯಿಂದ ರದ್ದುಪಡಿಸಲಾಗುತ್ತಿವೆ ಎಂದು ದಕ್ಷಿಣ ರೈಲ್ವೆ ವಲಯವು ಸೂಚಿಸಿದೆ. ರೈಲು ಸಂಖ್ಯೆ 06045 ತಿರುನಲ್‌ವೇಲಿ - ಯಲಹಂಕ ಸಾಪ್ತಾಹಿಕ ವಿಶೇಷ ಎಕ್ಸ್ ಪ್ರೆಸ್ ರೈಲನ್ನು ಜೂನ್ 5 ಮತ್ತು 12, 2024 ರಂದು ರದ್ದುಪಡಿಸಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣ ಸಿಬಿಐಗೆ ವಹಿಸಲ್ಲ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪ ಪ್ರಕರಣವನ್ನು ನಾವಾಗಿಯೇ ಸಿಬಿಐಗೆ ವಹಿಸುವುದಿಲ್ಲ ಎಂದು ಗೃಹ ಸಚಿವ ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ಯಾಂಕ್‌ನವರು ಸಿಬಿಐಗೆ ದೂರು ನೀಡಿರುವ ಕುರಿತು ಪ್ರತಿಕ್ರಿಯಿಸಿ, ನೂರು ಕೋಟಿ ಮೇಲು ಹಗರಣಗಳಾದಾಗ ಪ್ರಕರಣ ಸಿಬಿಐಗೆ ವರ್ಗಾವಣೆಯಾಗುತ್ತದೆ. ಈಗ ಸಿಐಡಿಯವರು ತನಿಖೆ ಆರಂಭಿಸಿದ್ದಾರೆ. ನೂರು ಕೋಟಿ ರು. ಅಧಿಕ ಅಕ್ರಮ ನಡೆದಿದೆಯೋ, ಏನಾಗಿದೆ ಎಂಬುದು ಸಿಐಡಿ ತನಿಖೆಯಿಂದ ಗೊತ್ತಾಗಲಿದೆ. ನೂರು ಕೋಟಿಗಿಂತ ಹೆಚ್ಚಾಗಿ ಅಕ್ರಮವಾಗಿದ್ದರೆ ಮುಂದೆ ಏನು ಆಗುತ್ತದೆ ಎಂಬುದನ್ನು ನೋಡೋಣ. ನಾವಾಗಿಯೇ ಸಿಬಿಐಗೆ ವರ್ಗಾವಣೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ನಾವು ಸಿಬಿಐಗೆ ವರ್ಗಾವಣೆ ಮಾಡುವುದಿಲ್ಲ. ಅಂತಹ ಸಂದರ್ಭ ಬಂದಾಗ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆ ಮಾಡಲೇಬೇಕಾಗುತ್ತದೆ. ಪ್ರತಿಭಟನೆ ಮಾಡುವುದು ಗಡುವು ನೀಡುವುದು ಪ್ರತಿಪಕ್ಷದವರ ಹಕ್ಕು, ಮಾಡಲಿ. ಸರಕಾ ರದಲ್ಲಿ ನಮಗೆ ಆದಂತಹ ಜವಾಬ್ದಾರಿಗಳಿವೆ. ಆ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ ಎಂದರು.

ವಿದ್ಯಾರ್ಥಿ ಬಸ್‌ಪಾಸ್‌ಗೆ ಸಾರಿಗೆ ಸಂಸ್ಥೆ ಆಹ್ವಾನ

ಬೆಂಗಳೂರು: ಶಾಲಾ-ಕಾಲೇಜುಗಳು ಅಧಿಕೃತವಾಗಿ ಆರಂಭಗೊಂಡಿದ್ದು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ಬಸ್ ಪಾಸ್ ಒದಗಿಸಲು ಕೆಎಸ್‌ಆರ್‌ಟಿಸಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಕುರಿತಂತೆ ಕೆಎಸ್‌ಆರ್‌ಟಿಸಿ ಪ್ರಕಟಣೆ ಹೊರಡಿಸಿದ್ದು, 2024-25ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳು ಪ್ರಾರಂಭವಾ ಗಿರುತ್ತವೆ. ಪ್ರಸಕ್ತ ಸಾಲಿನಲ್ಲಿ ಕರಾರಸಾ ನಿಗಮದ ವಿದ್ಯಾರ್ಥಿ ಬಸ್ ಪಾಸ್ ಪಡೆಯಲು ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕಿರು ತ್ತದೆ. ಪ್ರಸಕ್ತ ವರ್ಷದಲ್ಲಿ ಸರಕಾರದ ಆದೇಶದಂತೆ ಸಂಪೂರ್ಣ ಗಣಕೀಕೃತವಾಗಿ ವಿದ್ಯಾರ್ಥಿ ಬಸ್ ಪಾಸ್‌ಗಳನ್ನು ವಿತರಿಸಲಾಗುವುದು ಎಂದು ಹೇಳಿದೆ. ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖೇನ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ. ಸೇವಾಸಿಂಧು ಪೋರ್ಟಲ್ Iw URL&https://sevasindhuservices.karnataka.gov.in/buspassservices/ ವಿದ್ಯಾರ್ಥಿಗಳು ದಿನಾಂಕ:31.05.2024 ರಿಂದ ಸೇವಾಸಿಂಧು ಪೋರ್ಟಲ್‌ನಲ್ಲಿ ಬಸ್ ಪಾಸ್‌ಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆನ್ ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಇರುವುದಿಲ್ಲ. ಇದಲ್ಲದೆ, ವಿದ್ಯಾರ್ಥಿಗಳು, ಕರ್ನಾಟಕ-ಒನ್, ಗ್ರಾಮ-ಒನ್ ಮತ್ತು ಬೆಂಗಳೂರು-ಒನ್ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿ ಮೂಲಕವು ಅರ್ಜಿ ಸಲ್ಲಿಸಬಹುದಾಗಿದೆ.

ರಾಮೋಜಿಗೌಡರ ಗೆಲುವು ನಿಶ್ಚಿತ: ಡಿ.ಕೆ. ಶಿವಕುಮಾರ್

ಕನಕಪುರ: ಸರಳ, ಸಜ್ಜನಿಕೆಯ ಹಾಗೂ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಗುಣ ಹೊಂದಿರುವ ಬೆಂಗಳೂರು ಪದವೀಧರ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ಅವರ ಗೆಲುವಿಗೆ ಕಾರ್ಯ ಕರ್ತರು ಕಂಕಣಬದ್ಧರಾಗಿ ಕಾರ್ಯನಿರ್ವಹಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕನಕಪುರದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕರ್ತರು ಕಾಂಗ್ರೆಸ್ ಸರಕಾರದ ಗ್ಯಾರಂಟಿಯ ಅನುಷ್ಠಾನದ ಜತೆಗೆ ರಾಮೋಜಿಗೌಡರು ಇಲ್ಲಿಯವರೆಗೆ ಕೈಗೊಂಡ ಕಾರ್ಯಗಳ ಕುರಿತು ಹಾಗೂ ಅವರು ಮುಂದೆ ಕೈಗೊಳ್ಳುವ ಉದ್ಯೋಗ ಮೇಳದಂತಹ ಜನೋಪ ಯೋಗಿ ಕಾರ್ಯಗಳ ಕುರಿತು ಪದವೀಧರ ಮತದಾರರಿಗೆ ಮನವರಿಕೆ ಮಾಡಿಸಬೇಕು ಎಂದರು.

ನನ್ನ ಹಾಗೂ ನನ್ನ ಸಹೋದರ ಡಿ.ಕೆ. ಸುರೇಶ ಅವರ ಚುನಾವಣೆಯಲ್ಲಿ ದುಡಿದಂತೆ ಕಾರ್ಯಕರ್ತರು ರಾಮೋಜಿಗೌಡರ ಚುನಾವಣೆಯನ್ನು ನಿರ್ವಹಿಸ ಬೇಕು. ಪ್ರತಿ ಮತದಾರರನ್ನು ಗುರುತಿಸಿ ಅವರನ್ನು ಮತದಾನ ಕೇಂದ್ರಕ್ಕೆ ಕರೆದುಕೊಂಡು ಬಂದು ಮತದಾನ ಮಾಡಿಸಬೇಕು ಎಂದರು.

ಕಾಂಗ್ರೆಸ್ ಕಾರ್ಯ ಕರ್ತರು ಹಾಗೂ ಸರಕಾರದ ಮಧ್ಯೆ ಸಮನ್ವಯ ಸಾಧಿಸಲು ಕಾರ್ಯಕರ್ತರ ಕೆಲಸ ಆಗುವ ದೃಷ್ಟಿಯಿಂದ ಪ್ರತಿ ತಿಂಗಳು ಕಾಂಗ್ರೆಸ್ ಕುಟುಂಬ ಕಾರ್ಯಕ್ರಮ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲಾಗುವುದು. ಕನಕಪುರ ಮತಕ್ಷೇತ್ರದಲ್ಲಿಯೇ ನನ್ನ ಕುಟುಂಬದ ಪದವೀಧರರೆಲ್ಲ ಮತಚಲಾಯಿಸಲಿದ್ದೇವೆ ಎಂದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವುದರಿಂದ ಅಲ್ಲಿಯೂ ಕಾಂಗ್ರೆಸ್ ಸದಸ್ಯರ ಸಂಖ್ಯೆ ಹೆಚ್ಚಳವಾಗಲಿದೆ. ಇದರಿಂದ ರಾಜ್ಯ ಸರಕಾರ ಇನ್ನಷ್ಟು ಸೂಸುತ್ರವಾಗಿ ನಡೆಯಲು ಸಾಧ್ಯವಾಗಲಿದೆ. ವಿಧಾನಪರಿಷತ್‌ನಲ್ಲಿ ಸರಕಾರ ಜನೋಪಯೋಗಿ ವಿಧೇಯಕಗಳನ್ನು ಮಂಜೂರಿ ಪಡೆಯಲು ಅನುಕೂಲವಾಗಲಿದೆ ಎಂದರು.

ಸಂಸದ ಡಿ.ಕೆ. ಸುರೇಶ್ ಮಾತನಾಡಿ, ಮತ ಕ್ಷೇತ್ರದಾದ್ಯಂತ ಹೆಚ್ಚಿನ ಬೆಂಬಲದಿಂದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡರನ್ನು ಆಯ್ಕೆ ಮಾಡುವ ಹೊಣೆ ಕಾರ್ಯಕರ್ತರ ಮೇಲಿದೆ ಎಂದರು.

ಬೆಂಗಳೂರು ಪದವೀಧರ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ಮಾತನಾಡಿ ಪಕ್ಷ ಹಾಗೂ ಸರಕಾರದ ಎಲ್ಲರೂ ನನ್ನ ಪರವಾಗಿ ಬೆಂಬಲಕ್ಕೆ ನಿಂತಿದ್ದು, ಡಿ.ಕೆ. ಶಿವಕುಮಾರ್ ಅವರು ತಮ್ಮ ಬಿಡುವಿಲ್ಲದ ಕಾರ್ಯಕ್ರಮ ಮಧ್ಯೆಯೂ ಮುತುವರ್ಜಿವಹಿಸಿ ಚುನಾವಣೆ ಬಗ್ಗೆ ವಿಶೇಷ ಗಮನಹರಿಸಿದ್ದು ನನಗೆ ಆನೆ ಬಲ ಬಂದಿದೆ. ನಿತ್ಯ ಮುಖ್ಯಮಂತ್ರಿಗಳಾದಿಯಾಗಿ ಹಲ ಸಚಿವರು ವಿಚಾರಿಸಿ ಹಲ ಸಲಹೆ ಸೂಚನೆ ನೀಡುತ್ತಿದ್ದಾರೆ. ಆಯಾ ಕ್ಷೇತ್ರದ ಶಾಸಕರು ತಮ್ಮ ಮತಕ್ಷೇತ್ರದಲ್ಲಿ ತಮ್ಮದೇ ಚುನಾವಣೆ ಎನ್ನುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ನನ್ನ ಗೆಲುವಿಗೆ ಶ್ರೀರಕ್ಷೆಯಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಸ್ಥಳೀಯ ನಾನಾ ಸಂಘಟನೆಯ ಮುಖಂಡರು ಸಾವಿರಾರು ಸಂಖ್ಯೆಯಲ್ಲಿ ಭಾಗಿಯಾಗಿದ್ದರು.

ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ

ಬೆಂಗಳೂರು : ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತಾವು ಆಕಾಂಕ್ಷಿಯಲ್ಲ, ಕೆಲವರು ನನ್ನನ್ನು ನಾಯಕನನ್ನಾಗಿ ಮಾಡಲು ಹೆಸರು ಪ್ರಸ್ತಾಪಿಸುತ್ತಿದ್ದಾರೆ, ಅದಕ್ಕೆ ಬೇಡ ಎಂದು ಹೇಳಲಾಗುವುದಿಲ್ಲ, ಈಗಾಗಲೇ ಕೆಪಿಸಿಸಿ ಅಧ್ಯಕ್ಷರು ಇದ್ದಾರೆ. ಹೀಗಾಗಿ ಹೊಸ ಅಧ್ಯಕ್ಷರ ಚರ್ಚೆ ಅಪ್ರಸ್ತುತ ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನೊಬ್ಬ ಪ್ರಾಮಾಣಿಕ ಕಾರ್ಯಕರ್ತ. ಕೆಲವರು ತಮ್ಮ ಬಾಯಿ ಚಪಲ ತೀರಿಸಿಕೊಳ್ಳಲು ಹೇಳುತ್ತಾರೆ. ಆದರೆ ಸದ್ಯಕ್ಕೆ ನನಗೆ ಅಧ್ಯಕ್ಷನಾಗಬೇಕು ಎನ್ನುವ ಆಸೆಯಿಲ್ಲ ಎಂದು ಸ್ಪಷ್ಟಪಡಿಸಿದರು. ಆರೋಪಿ ಪ್ರಜ್ವಲ್ ರೇವಣ್ಣನನ್ನು ಪೊಲೀಸರು ಬಂಧಿಸಿದ್ದು, ತನಿಖೆ ನಡೆಯುತ್ತಿದೆ. ನಾನು ವಿಮಾನನಿಲ್ದಾಣದಲ್ಲಿ ಬರುತ್ತಿದ್ದ ವೇಳೆಯಲ್ಲೆ ಪ್ರಜ್ವಲ್ ಕೂಡ ಬಂದಿದ್ದಾರೆ. ಹಾಗೆಂದು ನಾನು ಅವರನ್ನು ನೋಡಲು ವಿದೇಶಕ್ಕೆ ಹೋಗಿದ್ದೆ ಎಂಬ ವ್ಯಾಖ್ಯಾನ ಹಾಸ್ಯಾಸ್ಪದ ಎಂದರು.

ಸಮಾಚಾರ ಸಣ್ಣದಲ್ಲ

ಸಂಗೀತ ರಸಗ್ರಹಣ ಸಪ್ತಾಹ ಕಾರ್ಯಕ್ರಮ

ಬೆಂಗಳೂರು: ಉದಯಭಾನು ಕಲಾಸಂಘದ ವತಿಯಿಂದ ಮುಂಗಾರು ಸಂಗೀತ ರಸ ಗ್ರಹಣ ಸಪ್ತಾಹ ಕಾರ್ಯಕ್ರಮವನ್ನು ಜೂ.1ರಂದು ಸಂಜೆ 6.00 ಗಂಟೆಗೆ ಉದಯಭಾನು ಅಂಗಳದಲ್ಲಿ ಆಯೋಜಿಸಲಾಗಿದೆ. ಖ್ಯಾತ ಜನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಶಿಬಿರಕ್ಕೆ ಚಾಲನೆ ನೀಡಲಿದ್ದು, ಸಂಘದ ಅಧ್ಯಕ್ಷ ರಾಮೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಂಸ್ಥಾಪಕ ಎಲ್ ವೆಂಕಟಪ್ಪ ಮತ್ತು ಸುಗಮ ಸಂಗೀತ ಕಲಾವಿದ ಹರೀಶ್ ನರಸಿಂಹ ಉಪಸ್ಥಿರಿರಲಿದ್ದಾರೆ. ಉಚಿತ ರಸಗ್ರಹಣ ಸಪ್ತಾಹ ಶಿಬಿರದಲ್ಲಿ ನೋಂದಾಯಿಸಿರುವ ಶಿಬಿರಾರ್ಥಿಗಳಿಗೆ ಏಳು ದಿನಗಳ ಕಾಲ ಸ್ವರ-ಲಯ-ಧ್ವನಿ ಸಂಸ್ಕಾರ ಶಿಬಿರ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9844192952 ಸಂಪರ್ಕಿಸಿ.

ವಿಚಾರ ಸಂಕಿರಣ ಜೂನ್ 2ರಂದು

ಬೆಂಗಳೂರು: ಮಾನಸ ಮಂಥನ ಸಂಭ್ರಮದ ಅಂಗವಾಗಿ ಕಲಾವಿದ ರಮೇಶ್ ಭಟ್ ಅವರು ಜೂನ್.2 ರಂದು ವಿಚಾರ ಸಂಕಿರಣ ನಡೆಸಿಕೊಡಲಿದ್ದಾರೆ. ದೊಡ್ಡಕನ್ನೆಲ್ಲಿಯ ಸಾನಿಧ್ಯದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಕಲಾವಿದ ರಮೇಶ್ ಭಟ್ ಅವರಿಂದ 'ನೋಡಿ ಸ್ವಾಮಿ ನಾವಿರೋದು ಹೀಗೆ' ಎಂಬ ವಿಷಯದ ವಿಚಾರ ಸಂಕಿರಣ ಹಾಗೂ ಸಂವಾದ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಮಾನಸ ಮಂಥನ 63ನೇ ಸಂಭ್ರಮದ ಅಂಗವಾಗಿ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡಿಗರ ನೇಮಕಕ್ಕೆ ಆಗ್ರಹ

ಬೆಂಗಳೂರು: ಬಿಎಂಟಿಸಿಯು ಖಾಸಗಿ ಎಲೆಕ್ಟ್ರಿಕ್ ಬಸ್‌ಗಳಿಗೆ ಕನ್ನಡಬಾರದ ಚಾಲಕರನ್ನು ನೇಮಕ ಮಾಡಲಾಗುತ್ತಿದ್ದು, ಇದರಿಂದ ರಾಜ್ಯದಲ್ಲಿ ಕನ್ನಡದವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ ಎಂದು ಕನ್ನಡ ಕ್ರಿಯಾ ಸಮಿತಿ ರಾಜ್ಯಾಧ್ಯಕ್ಷ ನಾಡೋಜ ಡಾ. ಮನು ಬಳಿಗಾರ್ ಮನವಿ ಮಾಡಿದರು. ಇದರಿಂದಾಗಿ ಕನ್ನಡ ಬಾರದ ಚಾಲಕರ ಜತೆಗೆ ಕರ್ತವ್ಯ ನಿರ್ವಹಿಸಲು ಕನ್ನಡಿಗ ನಿರ್ವಾಹಕರಿಗೂ ಸಮಸ್ಯೆಯಾಗುತ್ತಿದೆ. ಹೀಗಾಗಿ ಸಾರಿಗೆ ಸಚಿವರು ಬಿಎಂಟಿಸಿಯಲ್ಲಿ ಕಾರ್ಯಾಚರಣೆಯಲ್ಲಿರುವ ಎಲ್ಲಾ ಖಾಸಗಿ ಎಲೆಕ್ಟ್ರಿಕ್ ವಾಹನಗಳಿಗೆ ಬಿಎಂಟಿಸಿ ವತಿಯಿಂದ ಕನ್ನಡಿಗ ಚಾಲಕರನ್ನು ನೇಮಕ ಮಾಡಿ ಕನ್ನಡಿಗರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಹಾಗೂ ಕನ್ನಡದ ವಾತಾವರಣ ಹೆಚ್ಚುವಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನೈತಿಕ ಹೊಣೆ ಹೊತ್ತು ಸಿಎಂ ರಾಜೀನಾಮೆ ನೀಡಲಿ: ಅಶ್ವತ್ಥನಾರಾಯಣ

ನಾಗೇಂದ್ರ ಬಂಧನಕ್ಕೆ ಬಿಜೆಪಿ ಆಗ್ರಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಅವ್ಯವಹಾರ ಹಗರಣಕ್ಕೆ ಸಂಬಂಧಿಸಿ ಸಚಿವರ ರಾಜೀನಾಮೆ ಪಡೆದು ಅವರನ್ನು ಬಂಧಿಸಬೇಕು. ಇದರ ಹೊಣೆ ಹೊತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ರಾಜೀನಾಮೆ ಕೊಡಬೇಕು ಎಂದು ಮಾಜಿ ಡಿಸಿಎಂ ಡಾ.ಸಿ.ಎನ್. ಅಶ್ವತ್ಥನಾರಾಯಣ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬೆಂಗಳೂರಿನ ಸಿಬಿಐ ಕಚೇರಿಗೆ ದೂರು ಕೊಟ್ಟಿದೆ. ಅದರನ್ವಯ ಸಿಬಿಐ ತನಿಖೆ ನಡೆಯಲಿ ಎಂದು ಒತ್ತಾಯಿಸಿದೆ. ನಿಗಮದ ಅವ್ಯವಹಾರ ಹಗರಣಕ್ಕೆ ರಾಜ್ಯ ಸರಕಾರವೇ ನೇರ ಹೊಣೆ. ನಕಲಿ ಖಾತೆ ತೆರೆದು, ಕ್ರಿಯಾ ಯೋಜನೆ ಇಲ್ಲದೇ ಹಣ ವರ್ಗಾವಣೆ ಮಾಡಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಸರಕಾರ ಸಂಪೂರ್ಣ ನಿಷ್ಕ್ರಿಯವಾಗಿದೆ. ನಿಗಮದ ಈ ಅವ್ಯವಹಾರವು ಪರಿಶಿಷ್ಟ ಪಂಗಡಕ್ಕೆ ಆಗಿರುವ ಅನ್ಯಾಯ ಎಂದು ತಿಳಿಸಿದರು. ನೇರ ಹೊಣೆಯಾಗಿರುವ ಮುಖ್ಯಮಂತ್ರಿಗಳಿಗೆ ಇನ್ನೂ ಧ್ವನಿಯೇ ಬಂದಿಲ್ಲ. ಎಲ್ಲಿ ಧ್ವನಿ ಅಡಗಿ ಹೋಗಿದೆಯೋ ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು. ಹಣ ತೆಲಂಗಾಣದ ಯಾರ ಖಾತೆಗೆ ಹೋಗಿದೆ? ಯಾರು ಆ ವ್ಯಕ್ತಿಗಳು? ಎಂದ ಅವರು, ಸಚಿವರು ಹಣವನ್ನು ನೇರವಾಗಿ ದರೋಡೆ ಮಾಡಿದ್ದಾಗಿ ಆಪಾದಿಸಿದರು.

ಯೂನಿಯನ್ ಬ್ಯಾಂಕಿನ ಅಧಿಕಾರಿಗಳು ಈಗಾಗಲೇ ಸಿಬಿಐ ತನಿಖೆ ನಡೆಸಲು ಪತ್ರ ಬರೆದಿದ್ದಾರೆ. ನಾವು ಕೂಡ ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲು ಆಗ್ರಹಿಸುತ್ತೇವೆ. ಮುಖ್ಯಮಂತ್ರಿಯವರು ತಕ್ಷಣ ಸಚಿವ ನಾಗೇಂದ್ರರ ರಾಜೀನಾಮೆ ಪಡೆಯಬೇಕು.

-ಸಿ.ಟಿ. ರವಿ, ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ



ಅಧಿಕಾರಿ ಮೇಲೆ ದೂರಿಲ್ಲ. ಕೇವಲ ಬ್ಯಾಂಕ್ ಅಧಿಕಾರಿ ಮೇಲೆ ಪ್ರಕರಣ ದಾಖಲಾಗಿದೆ. ಇದು ಭಂಡತನದಿಂದ ಕೂಡಿದೆ. ಕಳೆದ ಒಂದು ವರ್ಷದಿಂದ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಪ್ರತಿಕ್ಷಣ ಅಧಿಕಾರ ದುರ್ಬಳಕೆ ಮಾಡಿಕೊಂಡು ಹಣ ಲೂಟಿ ಮಾಡುತ್ತಿದೆ.

-ಅಶ್ವತ್ಥನಾರಾಯಣ, ಮಾಜಿ ಡಿಸಿಎಂ

ಪ್ರಕರಣವನ್ನು ಸಿಬಿಐಗೆ ವಹಿಸಿ : ಸಿ.ಟಿ. ರವಿ ಒತ್ತಾಯ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣಕಾಸು ಅವ್ಯವಹಾರದ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಮತ್ತು ಸಚಿವ ನಾಗೇಂದ್ರ ಅವರ ರಾಜೀನಾಮೆ ಪಡೆಯಬೇಕು ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 10 ಕೋಟಿಗಿಂತ ಹೆಚ್ಚು ಮೊತ್ತದ ಹಗರಣ ನಡೆದರೆ ಸ್ವಯಂಪ್ರೇರಿತವಾಗಿ ಸಿಬಿಐ ತನಿಖೆ ಕೈಗೆತ್ತಿಕೊಳ್ಳಲು ಅವಕಾಶವಿದೆ.

ಇದು 10 ಲಕ್ಷ ಹಗರಣವಲ್ಲ; 187 ಕೋಟಿ ರೂಪಾಯಿಯ ಹಗರಣ. ನಿಮಗೆ ಸಿಐಡಿ ಮೇಲೆ ನಂಬಿಕೆ ಇರಬಹುದು. ಬೇರೆ ರಾಜ್ಯಗಳಿಗೂ ಹಣದ ವರ್ಗಾವಣೆ, ಕಂಪನಿಗಳ ಖಾತೆಗೆ ವರ್ಗಾವಣೆ ಆಗಿದೆ ಎಂಬ ಪ್ರಾಥಮಿಕ ಮಾಹಿತಿ ಇದೆ. ಈ ಹಿನ್ನೆಲೆಯಲ್ಲಿ ಸಿಬಿಐ ತನಿಖೆಗೆ ಕೊಡುವುದು ಸೂಕ್ತ ಎಂದು ಆಗ್ರಹಿಸಿದರು. ಸಾಕ್ಷ್ಯಾಧಾರ ನಾಶಪಡಿಸಲು ಸರಕಾರ ಪ್ರಯತ್ನಿಸುತ್ತಿದೆಯೇ ಎಂಬ ಅನುಮಾನ ಮೂಡಿದೆ. ಇನ್ನೂ ನೀವು ಸಚಿವರ ರಾಜೀನಾಮೆ ಪಡೆಯದಿದ್ದರೆ, ಡೆತ್ ನೋಟಿನಲ್ಲಿ ಸಚಿವರ ಮೌಖಿಕ ಸೂಚನೆ ಎಂಬುದನ್ನು ಗಮನಿಸಿಯೂ ನೀವು ರಾಜೀನಾಮೆ ಪಡೆಯದೆ ಇರುವುದನ್ನು ನೋಡಿದಾಗ ಬಹಳ ದೊಡ್ಡ ವ್ಯಕ್ತಿಗಳು ಇದರ ಹಿಂದೆ ಇರಬಹುದು ಎಂಬ ಅನುಮಾನ ನಮಗೆ ಮೂಡಲು ಕಾರಣವಾಗಿದೆ ಎಂದರು.

ನಮ್ಮ ಮೆಟ್ರೋದಿಂದ 32 ಲಕ್ಷಕ್ಕೂ ಅಧಿಕ ದಂಡ ಸಂಗ್ರಹ

ಬೆಂಗಳೂರು: ನಮ್ಮ ಮೆಟ್ರೊ ನಿಲ್ದಾಣದಲ್ಲಿ ನಿಯಮಗಳನ್ನು ಮೀರಿದ ಪ್ರಯಾಣಿಕರಿಂದ ದಂಡ ವಿಧಿಸಿದ್ದು, ಕಳೆದ ಆರು ತಿಂಗಳಿನಲ್ಲಿ 10 ಲಕ್ಷಕ್ಕೂ ಅಧಿಕ ದಂಡ ಸ್ವೀಕರಿಸಲಾಗಿದೆ.

ನಮ್ಮ ಮೆಟ್ರೋದಲ್ಲಿ ಪ್ರಯಾಣಿಕರ ದುರ್ವರ್ತನೆ, ಅವಧಿ ಮೀರಿ ಪ್ರಯಾಣ ಸೇರಿದಂತೆ ಕಳೆದ ಹತ್ತು ತಿಂಗಳಿನಲ್ಲಿ ದಂಡದ ರೂಪದಲ್ಲಿ ಲಕ್ಷ ರು. ಹಣ ವಸೂಲಿ ಮಾಡಲಾಗುತ್ತಿದೆ. ಪ್ರತಿ ದಿನ 66 ನಿಲ್ದಾಣಗಳಿಂದ ದಂಡದ ರೂಪದಲ್ಲಿ ಪ್ರತಿ ತಿಂಗಳು 5 ಲಕ್ಷ ರು. ಹಣ ಜಮೆ ಆಗುತ್ತಿದೆ. ಕಳೆದ ಆರು ತಿಂಗಳಿನಲ್ಲಿ 10 ಲಕ್ಷ ಪ್ರಯಾಣಿಕರಿಂದ 32 ಲಕ್ಷಕ್ಕೂ ಅಧಿಕ ದಂಡ ಸ್ವೀಕರಿಸಲಾಗಿದೆ. ಸರಾಸರಿ 7 ಲಕ್ಷ ರು. ಪ್ರಯಾಣಿಕರು ಪ್ರಯಾಣಿಸುತ್ತಿದ್ದು, ಇದರಲ್ಲಿ ಸರಾಸರಿ 1.50 ಲಕ್ಷ ಪ್ರಯಾಣಿಕರು ನಿಲ್ದಾಣದ ಒಳಗಡೆ ಹೆಚ್ಚು ಹೊತ್ತು ಕಾಲಹರಣ ಮಾಡಿದ್ದು, ಇತರ ಕಾರಣಗಳಿಗೆ ನಮ್ಮ ಮೆಟ್ರೋ ದಂಡ ವಿಧಿಸಲಾಗಿದೆ. ಪ್ರಯಾಣದ ಬಳಿಕ ನಿಲ್ದಾಣದಲ್ಲಿ 20 ನಿಮಿಷದ ಬಳಿಕ ಇರುವಂತಿಲ್ಲ. ಅದಕ್ಕಿಂತ ಹೆಚ್ಚು ಅವಧಿ ಉಳಿದರೆ ನಮ್ಮ ಮೆಟ್ರೋ 50-100 ದಂಡ ವಿಧಿಸುತ್ತಿದೆ. ಯಾವುದೇ ನಿಲ್ದಾಣದಲ್ಲಿ ಪ್ರಯಾಣಿಕರ ನೂಕು ನುಗ್ಗಲು ಆಗದಂತೆ, ಸಹ ಪ್ರಯಾಣಿಕರಿಗೆ ತೊಂದರೆ, ಕಿರಿಕಿರಿ ಆಗಬಾರದು ಎಂಬ ಕಾರಣಕ್ಕೆ ಕ್ರಮಕೈಗೊಳ್ಳಾಗಿದ್ದು, 50- 100 ರು ದಂಡ ವಿಧಿಸಲಾಗುತ್ತಿದೆ ಎಂದು ಅಧಿಕಾರಿಗಳಿಂದ ಮಾಹಿತಿ ನೀಡಲಾಗಿದೆ.

ಸ್ಮಾರ್ಟ್ ಕಾರ್ಡ್ ದಿನದ ಪಾಸ್ ಇದ್ದರೆ ನಿಲ್ದಾಣದಿಂದ ಹೊರಬರುತ್ತಿದ್ದಂತೆ ವೇಳೆ ಸ್ವಯಂ ಚಾಲಿತವಾಗಿ ಈ ಮೊತ್ತ ಕಡಿತವಾಗುತ್ತದೆ. ಟೋಕನ್ ಪಡೆದು ಪ್ರಯಾಣ ಮಾಡಿದ್ದಲ್ಲಿ ಕೌಂಟರ್‌ಗೆ ದಂಡ ಕಟ್ಟಬೇಕು. ಇಲ್ಲದಿದ್ದರೆ ನಿಲ್ದಾಣದಿಂದ ಹೊರ ಹೋಗಲು ಸಾಧ್ಯವಾಗುವುದಿಲ್ಲ.

ಯಾವ ತಿಂಗಳಲ್ಲಿ ಎಷ್ಟು ದಂಡ?

ತಿಂಗಳು	ಪ್ರಯಾಣಿಕರು	ದಂಡಸಂಗ್ರಹ
ನವೆಂಬರ್	1,72,173	5,55,674
ಡಿಸೆಂಬರ್	1,99,688	5,90,318
ಜನವರಿ	1,84,089	5,45,791
ಫೆಬ್ರವರಿ	1,73,979	5,25,717
ಮಾರ್ಚ್	1,69,434	5,01,398
ಏಪ್ರಿಲ್	1,77,207	5,29,610
ಒಟ್ಟು	10,76,570	32,48,508

ಐವರು ವೈದ್ಯರ ವಿರುದ್ಧ ದೂರು ದಾಖಲಾಗಿದ್ದರೂ ಬಡ್ತಿ ನೀಡುವ ಪ್ರಕ್ರಿಯೆ

ನೆಫ್ರೋ ಯುರಾಲಜಿಯಲ್ಲಿ ಜೇಷ್ಠತಾ ಪಟ್ಟಿ ರಚನೆ

ಬೆಂಗಳೂರು: ನೆಫ್ರೊ ಯುರಾಲಜಿ ಸಂಸ್ಥೆಯಲ್ಲಿ ಹಲವು ಅಕ್ರಮಗಳ ತನಿಖೆ ನಡೆಯುತ್ತಿರುವ ಬೆನ್ನಲ್ಲೆ ಹಲವು ಆರೋಪ ಹೊತ್ತ ವೈದ್ಯರಿಗೆ ಬಡ್ತಿ ನೀಡಲು ಜೇಷ್ಠತಾ ಪಟ್ಟಿ ಸಿದ್ಧಪಡಿಸುವ ಮೂಲಕ ಬಡ್ತಿ ನೀಡಲು ಮುಂದಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಸಂಸ್ಥೆಯಲ್ಲಿ ಬಡ್ತಿ ಸಂಬಂಧ ಈಗಾಗಲೇ ಪ್ರಭಾರ ನಿರ್ದೇಶಕ ಡಾ.ಕೇಶವಮೂರ್ತಿ ಅವರು ಜೇಷ್ಠತಾಪಟ್ಟಿ ಹೊರಡಿಸಿದ್ದಾರೆ. ಆದರೆ ಈಗಾಗಲೇ ಲೋಕಾಯುಕ್ತದಲ್ಲಿ ಐವರು ವೈದ್ಯರ ವಿರುದ್ಧ ದೂರು ದಾಖಲಾಗಿದ್ದರೂ ಬಡ್ತಿ ನೀಡುವ ಪ್ರಕ್ರಿಯೆ ಮುಂದುವರಿದಿದೆ. ಜೇಷ್ಠತಾ ಪಟ್ಟಿ ಹೊರಡಿಸಿರುವ ಕುರಿತು ಪ್ರಶ್ನಿಸಿ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ವೈದ್ಯಕೀಯ ಶಿಕ್ಷಣ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಲೋಕಾಯುಕ್ತದಲ್ಲಿ ಈಗಾಗಲೇ ನಿರ್ದೇಶಕರನ್ನೊಳಗೊಂಡಂತೆ ಆರು ವೈದ್ಯರ ವಿರುದ್ಧ ತನಿಖೆ ನಡೆಯುತ್ತಿದ್ದು, ಅಂತಿಮ ವರದಿಯಲ್ಲಿ ಆರೋಪ ಸಾಬೀತಾಗಿದೆ. ಆದರೂ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಸಹಿ ಇಲ್ಲದೆ ಜೇಷ್ಠತಾ ಪಟ್ಟಿ ತಯಾರಿಸಲಾಗಿದೆ. ಅಲ್ಲದೆ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ವೈದ್ಯರ ವಿರುದ್ಧ ಕೇಳಿ ಬಂದಿರುವ ಆರೋಪಗಳು ತಿಳಿದಿದ್ದರೂ ಜಾಣ ಕುರುಡುತನ ತೋರುತ್ತಿರುವುದು ತಿಳಿದುಬಂದಿದೆ. ಕೋರ್ಟಿನಲ್ಲಿ ವೈದ್ಯರ ನಡುವೆ ಪ್ರಕರಣಗಳು ದಾಖಲಾಗಿದ್ದರೂ ಜೇಷ್ಠತಾಪಟ್ಟಿ ಬಿಡುಗಡೆ ಮಾಡಿ ಬಡ್ತಿ ನೀಡಲು ಮುಂದಾಗಿದ್ದಾರೆ.

ಹಲವು ಆರೋಪಗಳನ್ನು ಹೊತ್ತ ಐವರು ವೈದ್ಯರ ವಿರುದ್ಧ ಲೋಕಾಯುಕ್ತ ತನಿಖೆಯಲ್ಲಿ ಆರೋಪ ಸಾಬೀತಾಗಿದ್ದಾರೂ ಹಾಗೂ ಹಲವು ದೂರುಗಳನ್ನು ನೀಡಿದ್ದರೂ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ನೆಪಕ್ಕೆ ಇತ್ತೀಚಿಗೆ ಸಭೆ ಕರೆದು ಯಾವುದೇ ಅಂತಿಮ ತೀರ್ಮಾನ ಅಥವಾ ವೈದ್ಯರ ವಿರುದ್ಧ ಕ್ರಮ ಕೈಗೊಂಡಿಲ್ಲ. ಈಗಾಗಲೇ ನೆಫ್ರೋ ಯುರಾಲಜಿಯಲ್ಲಿ ನಡೆಯುತ್ತಿರುವ ಅವ್ಯವಹಾರ ಅಕ್ರಮ ಬಡ್ತಿ ಸಂಬಂಧ ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ಅವರು ರಾಜ್ಯ ಸರಕಾರಕ್ಕೆ ಪತ್ರ ಬರೆದಿದ್ದು, ತನಿಖೆಗೆ ಒಳಪಡಿಸಲಾಗಿದೆ. ಐಎಎಸ್ ಅಧಿಕಾರಿ ತ್ರಿಲೋಕಚಂದ್ರ ನೇತೃತ್ವದಲ್ಲಿ ತನಿಖೆ ನಡೆದಿದ್ದರೂ, ವರದಿ ಮೂಲೆಗುಂಪು ಸೇರಿದೆ.



ವೈದ್ಯಕೀಯ ಶಿಕ್ಷಣ ಇಲಾಖೆ ಪತ್ರದಲ್ಲಿ ಏನಿದೆ?

ಡಾ.ಕೇಶವಮೂರ್ತಿ, ಡಾ.ಶ್ರೀನಿವಾಸ್, ಡಾ.ಪ್ರದೀಪ್, ಡಾ.ಶ್ರೀಧರ್, ಡಾ.ಕಿಶನ್, ಡಾ.ಶಿವಕುಮಾರ್ ಅವರ ವಿರುದ್ಧ ಲೋಕಾಯುಕ್ತದಲ್ಲಿ ಪ್ರಾಥಮಿಕ ಹಂತದ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವುದು ಕಂಡು ಬಂದಿರುತ್ತದೆ. ಪ್ರಭಾರ ನಿರ್ದೇಶಕರು ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಪ್ರಚುರಪಡಿಸಿರುತ್ತಾರೆ. ಲಭ್ಯವಿರುವ ದಾಖಲಗಳಂತೆ ಡಾ.ಕೇಶವಮೂರ್ತಿ ವಿರುದ್ಧ ನ್ಯಾಯಾಲಯಗಳಲ್ಲಿ ಇತರೆ ವೈದ್ಯರು ಜೇಷ್ಠತೆಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಪರಿಶೀಲಿಸಲಾಗಿ ಈ ಸಂದರ್ಭದಲ್ಲಿ ತಮ್ಮ ಅನುಕೂಲಕ್ಕೆ 3 ವರ್ಷಗಳ ಜೇಷ್ಠತಾಪಟ್ಟಿಯನ್ನು ಪ್ರಚುರಪಡಿಸಿರುವುದಿಲ್ಲ. ಈಗಾಗಲೇ ಪ್ರಚುರಪಡಿಸಿರುವ ತಾತ್ಕಾಲಿಕ ಜೇಷ್ಠತಾಪಟ್ಟಿಗೆ ಅನುಗುಣವಾಗಿ ತರಾತುರಿಯಲ್ಲಿ ಅಂತಿಮ ಜೇಷ್ಠತಾ ಪಟ್ಟಿ ಸಿದ್ಧಪಡಿಸಲಾಗಿದೆ.

ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆ

ಬೆಂಗಳೂರು: ಮೇ.31ಕ್ಕೆ ರಾಜ್ಯದ ಹಲವು ಹಿರಿಯ ಐಎಎಸ್ ಅಧಿಕಾರಿಗಳು ನಿವೃತ್ತರಾಗುತ್ತಿರುವ ಬೆನ್ನಲ್ಲೇ, ರಾಜ್ಯ ಸರಕಾರ ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆಗಾರಿಕೆ ವಹಿಸಿ ಆದೇಶ ಹೊರಡಿಸಿದೆ.

ನಗರಾಭಿವೃದ್ಧಿ, ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ರಾಜ್ಯ ಮೇಲ್ಮನವಿ ನ್ಯಾಯಾಧೀಕರಣದ ಮುಖ್ಯಸ್ಥರಾಗಿದ್ದ ಮಂಜುಳಾ ವಿ. ಅವರ ನಿವೃತ್ತಿಯ ಹಿನ್ನೆಲೆಯಲ್ಲಿ ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆಗಾರಿಕೆ ವಹಿಸಿ ಸರಕಾರ ಆದೇಶ ಹೊರಡಿಸಿದೆ.

ಮಂಜುಳಾ ವಿ. ನಿವೃತ್ತಿಯ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್ ಅವರನ್ನು ಮೈಸೂರಿನಲ್ಲಿರುವ ಆಡಳಿತ ತರಬೇತಿ ಸಂಸ್ಥೆಯ ಮಹಾ ಪ್ರಧಾನ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ. ನಗರಾಭಿವೃದ್ಧಿ, ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯಾಗಿದ್ದ ರಾಕೇಶ್ ಸಿಂಗ್ ನಿವೃತ್ತಿಯ ಹಿನ್ನೆಲೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಡಾ.ಶಾಲಿನಿ ರಜನೀಶ್ ಅವರನ್ನು ಅಪರ ಮುಖ್ಯ ಕಾರ್ಯದರ್ಶಿಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ.

ಅಧಿಕಾರಿಗಳ ಪಟ್ಟಿ: ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಎಸ್.ಆರ್. ಅವರನ್ನು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ. ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ. ಮಂಜುಳಾ ವಿ. ಅವರ ನಿವೃತ್ತಿಯ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿ ಶ್ರೀಕರ್ ಎಂ.ಎಸ್. ಅವರನ್ನು ರಾಜ್ಯ ಮೇಲ್ಮನವಿ ನ್ಯಾಯಾಧೀಕರಣದ ಮುಖ್ಯಸ್ಥರ ಹುದ್ದೆಯಲ್ಲಿ ಪ್ರಭಾರದಲ್ಲಿ ಇರಿಸಿ ಆದೇಶ ಹೊರಡಿಸಲಾಗಿದೆ.



ವಕೀಲೆ ಚೈತ್ರಾವತಿ ಸಾವಿನಲ್ಲಿ ಅನುಮಾನ

ಬೆಂಗಳೂರು: ಕೆಎಎಸ್ ಅಧಿಕಾರಿ ಶಿವಕುಮಾರ್ ಅವರ ಪತ್ನಿಯೂ ಆಗಿರುವ ಹೈಕೋರ್ಟ್ ವಕೀಲೆ ಚೈತ್ರಾವತಿ ಗೌಡ (34) ಅನುಮಾನಾಸ್ಪದ ಸಾವು ಪ್ರಕರಣದ ತನಿಖೆ ಸಿಸಿಬಿಗೆ ವಹಿಸಲಾಗಿದೆ. ಸಂಜಯ ನಗರ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯ ವೊಂದರ ಫ್ಲ್ಯಾಟ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಚೈತ್ರಾವತಿ ಅವರ ಮೃತ ದೇಹ ಪತ್ತೆಯಾಗಿತ್ತು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಡಿಬಿ) ಸಹಾಯಕ ಆಯುಕ್ತ ಶಿವಕುಮಾರ್ ಪತ್ನಿಯಾಗಿದ್ದ ಚೈತ್ರಾವತಿ ಸಾವಿನಲ್ಲಿ ಹಲವು ಸಂಶಯಗಳಿದ್ದವು. ಹೀಗಾಗಿ ಪೊಲೀಸರು ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದರು.

ಸತ್ಯಮೇವ ಜಯತೆ- ಸತ್ಯವೇ ಗೆಲ್ಲುವುದು. ಸತ್ಯ ಆರೋಗ್ಯ, ಶಿಕ್ಷಣ, ಉದ್ಯೋಗ ಭದ್ರತೆ, ಸರ್ಕಾರಿ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ, ಗುತ್ತಿಗೆ ನೇಮಕಾತಿಗಳನ್ನು ಕ್ರಮಬದ್ಧಗೊಳಿಸುವುದು, ಸಮಾನ ಉದ್ಯೋಗ/ಕೇಡರ್ಗೆ ಸಮಾನ ವೇತನ, ನಿವೃತ್ತಿ ಹಳೆ ಓಪಿಎಸ್ OPS ಪಿಂಚಣಿ, ಎಲ್ಲಾ ಒಕ್ಕೂಟ/ರಾಜ್ಯ ಸರ್ಕಾರದ ಆದೇಶಗಳ ಕನ್ನಡ ಅನುವಾದ, ಸತ್ಯ-ಕಾಗದ ಮತ ಚುನಾವಣೆ + ಪ್ರಜಾಪ್ರಭುತ್ವ + ಸ್ವಾತಂತ್ರ್ಯ+ ಮೂಲನಿವಾಸಿ ಅಧಿಕಾರ (ಕಪ್ಪು ಐರಿಸ್ ಇಗಿಗಿ ನಾಗಾ ಆಫ್ರಿಕನ್ ಜೆನೆಟಿಕ್) + ಸಮಾಜ +ಯುಗ, ಭೂಮಿ ಸ್ವರ್ಗ ಸರ್ವೋಚ್ಚತೆ ಮನೋವಿಕಾರ ನೀಲಿ ಕಣ್ಣಿನ ಐರಿಸ್ ಇನುನಕಿ ಏವಿಯನ್ ಎನ್ಲಿನ್ ಹೈಬ್ರಿಡ್ ಬೆಂಬಲಿಗರ, ಎಲ್ಲಾ ಮಾನಸಿಕ ಗುಲಾಮಗಿರಿ ಅಮೇರಿಕಾ ಸಿಐಎ CIA ಕೇಂದ್ರ, ಗುಪ್ತಚರ ಸಂಸ್ಥೆ (ಸೆಂಟ್ರಲ್ ಇಂಟೆಲಿಜೆನ್ಸ್ ಏಜೆನ್ಸಿ ಮಾನಸಿಕ ಕಾರ್ಯಾಚರಣೆಗಳು ಸೈ-ಆಪ್ಸ್, ಪಕ್ಷಪ್ರಭುತ್ವ, ಬುದ್ಧಿ ಮಾಂದ್ಯತೆ + ಸಾಮೂಹಿಕ ಹತ್ಯೆಯ ಜನಾಂಗೀಯ ನರಮೇಧ + ಹವಾಮಾನ + ಗುರಿಯಿಟ್ಟ ಶಕ್ತಿ ಶಸ್ತ್ರಾಸ್ತ್ರ + 5ಜಿ + ಏರ್ ಬೋರ್ನ್ ಲೇಸರ್, ಲೋ ಎನರ್ಜಿ ಮೈಕ್ರೋವೇವ್ (ಎಲ್‌ಇಎಮ್)+ ಕೋವಿಡ್/ ವಿಷಹಾಕಿದ ಹೆಚ್‌ಪಿವಿ HPV, ಡಿಫ್ತೀರಿಯಾ ನಾಯಿಕೆಮ್ಮು ಡಿಪಿಟಿ DPT, ದಡಾರ ಎಂಎಂಆರ್ MMR ಚುಚ್ಚುಮದ್ದಿನ ಇತರ ಇಂಜೆಕ್ಷನ್ ಕ್ಷಿಪಣಿ- 3ನೇ ಮಹಾಯುದ್ಧ ರಾಸಾಯನಿಕ/ ಜೈವಿಕ ಜಾಡು(ಟ್ರೈಲ್), ಪ್ರವಾಹ ಬರಗಾಲ ಹವಾಮಾನ, ಭೂಕಂಪ, 5ಎ ಡೈರೆಕ್ಟೆಡ್ ಎನರ್ಜಿ ವೆಪನ್ ಕ್ಯಾನ್ಸರ್/ಸ್ಟ್ರೋಕ್/ಆತ್ಮಹತ್ಯೆ/ಕೊಲೆ ಕರ್ಮವನ್ನು ತಡೆಯಲು ಅಂತ್ಯ+ ಸುಧಾರಣೆ + ತಪ್ಪೊಪ್ಪಿಗೆ + ದಾನ/ಜಪ್ತಿ ಮಾಡಿ (ಕೆನಡಾ 17.2 ಮಿಲಿಯನ್ ಡಾಲರ್, ಜಪಾನ್, ಸಿಂಗಾಪುರ್‌ನಂತೆ) ಮೋಟಾರು ವಾಹನ ಅಪಘಾತ ಪ್ರಕರಣಗಳಂತೆ ಕೋವಿಡ್ ಇಂಜಕ್ಷನ್ ಪರಿಹಾರ ಮರು ಅರಣ್ಯೀಕರಣ, ಬದುಕಿ ಬದುಕಲು ಬಿಡಿ, ಎಲ್ಲರಿಗೂ ಪ್ರೀತಿ ನಮ್ಮದಿ ಆರೋಗ್ಯ ಅನಂದಕ್ಕಾಗಿ 1 ಎಂದು ಬರೆದು ಮೊದಲ ಆದ್ಯತೆ ಮತದೊಂದಿಗೆ ಆಶೀರ್ವದಿಸಿ.

ವಿಧಾನ ಪರಿಷತ್ ಸದಸ್ಯ ಚುನಾವಣೆ 03-06-2024 ಸೋಮವಾರ

12

ಡಾ|| ಬಾನು ಪ್ರಕಾಶ್ ಎ. ಎಸ್.
ಸ್ವತಂತ್ರ (ಪಕ್ಷೇತರ)
Dr. Banu Prakash A. S.
Independent

1

ಎಂ ಎಲ್ ಸಿ ಬೆಂಗಳೂರು ಪದವೀಧರ ಕ್ಷೇತ್ರ (ನಗರ, ಗ್ರಾಮಾಂತರ, ರಾಮನಗರ) ಅಭ್ಯರ್ಥಿ

ಸ್ಪರ್ಧೆ- 2021 ರಾಜ್ಯ ಒಕ್ಕಲಿಗರ ಸಂಘ, 2020 ಭಾರತ್ ಸಹಕಾರಿ ಬ್ಯಾಂಕ್ ಲಿಮಿಟೆಡ್, 2020 ಕರ್ನಾಟಕ ವೈದ್ಯಕೀಯ ಮಂಡಳಿ,2019 ಬೆಂಗಳೂರು ದಕ್ಷಿಣ ಸಂಸದ - ಪಿಪಿಒಐ, 2018 ಬಸವನಗುಡಿ ಶಾಸಕ-ಪಿಪಿಒಐ, 2016 ರಾಜೀವಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್ ಸೆನೆಟ್, 2015 ಕುಮಾರಸ್ವಾಮಿ ಬಡಾವಣೆ ಬಿಬಿಎಂಪಿ - ಲೋಕಸತ್ತಾ. ನಿಮಗೆ + ಕುಟುಂಬ + ಸ್ನೇಹಿತರಿಗೆ ಅನೇಕ ಸಂತೋಷದ ಸತ್ಯವಂತ ನಿಸ್ವಾರ್ಥ ಶಾಂತಿಯುತ (ಹೌದು)+ ಸಂತೃಪ್ತ(ಧನ್ಯ) ಇಂದು-ಪ್ರತಿದಿನ-ಎಂದೆಂದಿಗೂ, ಸತ್ಯಯುಗ ಶುಭಾಶಯಗಳು. ಕೊವಿಡ್ ನರಮೇಧ ಪರಿಹಾರಕ್ಕಾಗಿ ನನಗೆ ಮತ ನೀಡಿ.

ಭ್ರೂಣಹತ್ಯೆ ಪ್ರಕರಣ: 3ನೇ ಸಲ ಸಿಕ್ಕಿಬಿದ್ದ ಆರೋಪಿ

ಬಾಗಲಕೋಟೆ: ಜಿಲ್ಲೆಯ ಮಹಾಲಿಂಗಪುರದಲ್ಲಿ ಭ್ರೂಣಹತ್ಯೆ ಆರೋಪದ ಮೇಲೆ ಬಂಧಿತೆಯಾದ ಕವಿತಾ ಬಾಡನವರ ಓದಿದ್ದು ಪಿಯುಸಿ. ತಜ್ಞೆ' ಎಂದೇ ಬಿಂಬಿಸಿಕೊಂಡು ಭ್ರೂಣಹತ್ಯೆ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದು ಮೂರನೇ ಸಲ.

ಮನೆಯಲ್ಲೇ ಸುಸಜ್ಜಿತ ವೈದ್ಯಕೀಯ ಕೊಠಡಿ ಹಾಗೂ ಔಷಧಗಳನ್ನು ಹೊಂದಿರುವ ಕವಿತಾ ಭ್ರೂಣಹತ್ಯೆಯಂಥ ಕೃತ್ಯದಲ್ಲಿ ತೊಡಗಿರುವುದು ಪ್ರಾಥಮಿಕ ಹಂತದ ತನಿಖೆಯಿಂದ ಗೊತ್ತಾಗಿದೆ. ಕೆಲ ವರ್ಷಗಳ ಹಿಂದೆ ಖಾಸಗಿ ಆಸ್ಪತ್ರೆಯಲ್ಲಿ ಆಯಾ ಆಗಿ ಕೆಲಸ ಮಾಡಿದ್ದು, ಜತೆಗೆ ಹೊರ ಹಾಗೂ ರಾಜ್ಯದ ವೈದ್ಯರೊಂದಿಗೆ ನಂಟಿನಿಂದ ಇದೆಲ್ಲವೂ ಸಾಧ್ಯವಾಗಿದೆ' ಎಂದು ಪೊಲೀಸ್ ಇಲಾಖೆ ಮೂಲಗಳು ತಿಳಿಸಿವೆ. ಗರ್ಭಪಾತಕ್ಕೆ ಬೇಕಾದ ಕೃತಕ ಹೆರಿಗೆ ನೋವು ಬರಿಸುವ ಮಾತ್ರೆ, ಗರ್ಭಪಾತಕ್ಕೆ ನೀಡುವ ಇಂಜೆಕ್ಷನ್, ಆ್ಯಂಟಿ ಬಯೋಟಿಕ್ ಗುಳಿಗೆ, ನೋವು ನಿವಾರಕ ಸೇರಿದಂತೆ ಹಲವು ಬಗೆಯ ಔಷಧಗಳು ಪತ್ತೆಯಾಗಿವೆ.ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರದ ಕವಿತಾ ಅಲ್ಲಿಯೇ ಪಿಯುಸಿ ಓದಿ, ಮದುವೆ ಬಳಿಕ ಪತಿಯ ಊರು ಬಾಗಲಕೋಟೆಯ ಮಹಾಲಿಂಗಪುರಕ್ಕೆ ಬಂದು ನೆಲೆಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪಿಎಸ್ಐ ನೇಮಕ ಗೊಂದಲ ಪರಿಹರಿಸಲು ಖರ್ಗೆ ಪತ್ರ

ಕಲಬುರಗಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕ ಸಂದರ್ಭದಲ್ಲಿ ಅನುಸರಿಸುವ ವಿಧಾನದಲ್ಲಿರುವ ಗೊಂದಲ ಸರಿಪಡಿಸುವಂತೆ ನೇಮಕಾತಿ ವಿಭಾಗದ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರಿಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶದ 371(ಜೆ) ಮೀಸಲು ಅನುಷ್ಠಾನಕ್ಕಾಗಿ ರಾಜ್ಯ ಸರಕಾರ ಕಾಲಕಾಲಕ್ಕೆ ಸ್ಪಷ್ಟ ನಿರ್ದೇಶನ ನೀಡುತ್ತಿದೆ. ಪ್ರಸ್ತುತ ದಿನಾಂಕ : 01.02.2023 ರ ಸುತ್ತೋಲೆಯಲ್ಲಿರುವ ಮಾರ್ಗಸೂಚಿಗಳು ಚಾಲ್ತಿಯಲ್ಲಿರುತ್ತವೆ. ಅದರಂತೆ ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳ ಆಯ್ಕೆಪಟ್ಟಿ ತಯಾರಿಸುವಾಗ ಅನುಸರಿಸುವ ವಿಧಾನವನ್ನು ಸೂಚಿಸಿದ್ದು ತಮ್ಮ ಪ್ರಾಧಿಕಾರವು ಪಾಲನೆ ಮಾಡದಿರುವುದು ಕಂಡುಬರುತ್ತಿದೆ.

ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಸಿವಿಲ್–) 545 ಹುದ್ದೆಗಳ ನೇಮಕಕ್ಕೆ ಮರುಪರೀಕ್ಷೆ ನಡೆಸಲಾಗಿದ್ದು, ಸದರಿ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ತಯಾರಿಸುವ ಮುಂಚೆ 371 ಜೆ ಮೀಸಲು ಕೋರಿರುವ ಕ.ಕ ಪ್ರದೇಶದ ಅಭ್ಯರ್ಥಿಗಳನ್ನು ಸರಕಾರ ಪ್ರಸ್ತುತ ಜಾರಿಯಲ್ಲಿರುವ ದಿನಾಂಕ: 01.02.2023 ರ ಸುತ್ತೋಲೆಯನ್ನು ಕಡ್ಡಾಯವಾಗಿ ಅನುಸರಿಸಿ ಗೊಂದಲಕ್ಕೆ ಆಸ್ಪದ ನೀಡದಂತೆ ಗಮನಹರಿಸಬೇಕು ಎಂದು ಹೇಳಿದ್ದಾರೆ.

ರಾಜ್ಯ ಸರಕಾರದಿಂದ ಒಂದು ಸಮುದಾಯ ಮಾತ್ರ ಓಲೈಕೆ

ಬೆಂಗಳೂರು: ಒಂದು ಸಮುದಾಯದ ಓಲೈಕೆಗಾಗಿ ಇಡೀ ರಾಜ್ಯದ ಹಿತ ಕಡೆಗಣಿಸಲಾಗುತ್ತಿದೆ ಎಂದರೆ ಅದು ಜಿಹಾದಿ ಸರಕಾರದಿಂದ ಮಾತ್ರ ಸಾಧ್ಯ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಈಗ ನಡೆಸುತ್ತಿರುವುದು ಸರಕಾರವಲ್ಲ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ. ಸುನೀಲ್ ಕುಮಾರ್ ಆರೋಪಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಅಪರಾಧ ಕೃತ್ಯ ಅಥವಾ ಕಾನೂನು ಬಾಹಿರ ವರ್ತನೆ ನಡೆಸುವುದು ತಪ್ಪಲ್ಲ. ಆದರೆ ಕಾನೂನು ಉಲ್ಲಂಘನೆಯಾಗಿದೆ ಎಂದು ಹೇಳುವುದು ತಪ್ಪು ಎಂದು ವ್ಯಂಗ್ಯವಾಡಿದ್ದಾರೆ. ಚನ್ನಗಿರಿಯಲ್ಲಿ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದವರಿಗೆ ಕ್ಲೀನ್‌ಚಿಟ್ ಕೊಟ್ಟ ಬೆನ್ನಲ್ಲೇ ಮಂಗಳೂರಿನ ಪಂಪ್‌ವೆಲ್ ವೃತ್ತದ ಬಳಿ ರಸ್ತೆಯಲ್ಲಿ ನಮಾಜ್ ನಡೆಸಿದ ಪ್ರಕರಣಕ್ಕೆ ರಾಜ್ಯ ಸರಕಾರ ಒತ್ತಾಯಪೂರ್ವಕವಾಗಿ ಬಿ ರಿಪೋರ್ಟ್ ಸಲ್ಲಿಸಿದೆ. ಪಂಪ್‌ವೆಲ್ ರಸ್ತೆಯಲ್ಲಿ ನಮಾಜ್ ಮಾಡಿ ಸಮಾಜದ ಸ್ವಾಸ್ಥ್ಯ ಹಾಗೂ ಸಾರ್ವಜನಿಕ ಅನಾನುಕೂಲತೆ ಸೃಷ್ಟಿಸಿದವರನ್ನು ಬಂಧಿಸುವುದು ಬಿಟ್ಟು, ಶರಣ್ ಪಂಪ್‌ವೆಲ್ ವಿರುದ್ಧ ಕ್ರಮ ತೆಗೆದುಕೊಳ್ಳಲು ಸರಕಾರ ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ 40ಕ್ಕೂ ಅಧಿಕ ಹಸುಗಳ ರಕ್ಷಣೆ



ಹುಣಸೂರು: ಕಸಾಯಿಖಾನೆಗೆ ಸಾಗಿಸಲು ಜಾನುವಾರುಗಳನ್ನು ಕೂಡಿ ಹಾಕಿದ್ದ ಗೋಡೌನ್ ಮೇಲೆ ಮಧ್ಯರಾತ್ರಿಯಲ್ಲಿ ಸಿನಿಮೀಯ ಮಾದರಿ ದಾಳಿ ನಡೆಸಿರುವ ಹುಣಸೂರು ಪೊಲೀಸರು ಒಂದು ಹಾಲಿನ ವ್ಯಾನ್ ಸೇರಿದಂತೆ ಮೂರು ಗೂಡ್ಸ್ ವಾಹನಗಳಲ್ಲಿ ತುಂಬಿದ್ದ 40 ಜಾನುವಾರುಗಳನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹುಣಸೂರು ತಾಲೂಕಿನ ರತ್ನಪುರಿಯ ಅಲ್ತಾಫ್, ಶಾಬುದ್ದೀನ್ ಎಂಬವರಿಗೆ ಸೇರಿದ ಮನೆ ಪಕ್ಕದ ಗೋಡೌನ್‌ನಲ್ಲಿ ಜಾನುವಾರುಗಳು ಪತ್ತೆಯಾಗಿದ್ದು, ಜಾನುವಾರುಗಳನ್ನು ತುಂಬಿದ್ದ ಮೂರು ಗೂಡ್ಸ್ ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ರತ್ನಪುರಿಯ ಅಲ್ತಾಫ್, ಶಾಬುದ್ದೀನ್ ಎಂಬವರ ಮನೆ ಬಳಿಯ ಗೋಡೌನ್‌ನಲ್ಲಿ ಜಾನುವಾರುಗಳನ್ನು ಕೂಡಿ ಹಾಕಿದ್ದು, ಇಲ್ಲಿಂದ ಕಸಾಯಿಖಾನೆಗೆ ಸಾಗಿಸುತ್ತಿದ್ದಾರೆಂಬ ಮಾಹಿತಿ ಮೇರೆಗೆ ಅಡಿಷನಲ್ ಎಸ್.ಪಿ. ಡಾ.ನಂದಿನಿ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಗೋಪಾಲಕೃಷ್ಣರ ಮಾರ್ಗದರ್ಶನದಲ್ಲಿ ಹುಣಸೂರು ನಗರ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಎಸ್.ಐ.ಗಳಾದ ರಾಮಚಂದ್ರ ನಾಯ್ಕ, ಅಚ್ಯುತ್ತನ್ ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದರು.

ಸಮಾಚಾರ ಸಣ್ಣದಲ್ಲ

ಚಾವಣಿ ಕುಸಿದು ಇಬ್ಬರು ಮಕ್ಕಳು ಸಾವು

ಬಾಗಲಕೋಟೆ: ಮನೆಯ ಚಾವಣಿ ಕುಸಿದು ಇಬ್ಬರು ಮಕ್ಕಳು ಮೃತಪಟ್ಟಿರುವ ಘಟನೆ ಜಿಲ್ಲೆಯ ಇಳಕಲ್ ತಾಲೂಕಿನ ಕಂದಗಲ್ಲ ಗ್ರಾಮದಲ್ಲಿ ನಡೆದಿದೆ. ಗೀತಾ ಈಶ್ವರಯ್ಯ ಆದಾಪೂರಮಠ (12), ರುದ್ರಯ್ಯ ಈಶ್ವರಯ್ಯ ಆದಾಪೂರಮಠ (10) ಮೃತ ದುರ್ದೈವಿಗಳು. ಇಬ್ಬರು ಮನೆಯಲ್ಲಿ ಆಟವಾಡುತ್ತ ಕುಳಿತಾಗ ಕುಸಿದ ಮೇಲ್ಛಾವಣಿ ಕುಸಿದು ದುರ್ಘಟನೆ ಸಂಭವಿಸಿದೆ. ಮಣ್ಣಿನಡಿಯಲ್ಲಿ ಸಿಲುಕಿದ್ದ ಮಕ್ಕಳ ಶವವನ್ನು ಗ್ರಾಮಸ್ಥರು ಹೊರ ತೆಗೆದರು. ಇಳಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಗಲಿದ ಜೀವ

ಎಚ್.ಎಸ್. ಗುರುದಾಸ್

ದಾವಣಗೆರೆ ಜಿಲ್ಲೆ ಜಗಳೂರು ತಾಲೂಕಿನ ಹೊಸಕೆರೆ ಮೂಲದ ಎಚ್.ಎಸ್. ಗುರುದಾಸ್ ಅವರು ಅಲ್ಪಕಾಲದ ಅನಾರೋಗ್ಯದಿಂದ ಗುರುವಾರ ತಡರಾತ್ರಿ ಕೊನೆಯುಸಿರು ಎಳೆದಿದ್ದಾರೆ. ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ್ದ 77 ವರ್ಷದ ಗುರುದಾಸ್ ಅವರು ಕಳೆದ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಗುರುವಾರ ಸಂಜೆ ಬಹು ಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾರೆ. ಮೃತರು ಓರ್ವ ಪುತ್ರನನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರವನ್ನು ಶುಕ್ರವಾರ ಮಧ್ಯಾಹ್ನ ಬನಶಂಕರಿ ಚಿತಾಗಾರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನ್ಯಾಯಾಧೀಶರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪ್ರಜ್ವಲ್ ರೇವಣ್ಣ | ಮನೆ ಊಟ ನೀಡಲು ಮನವಿ, ನ್ಯಾಯಾಧೀಶರಿಂದ ತಿರಸ್ಕಾರ

ಎಸ್‌ಐಟಿ ಕಚೇರಿಯ ಶೌಚಾಲಯ ಸರಿ ಇಲ್ಲ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಲೈಂಗಿಕ ಕಿರುಕುಳ ಆರೋಪ ಪ್ರಕರಣದಲ್ಲಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಆರು ದಿನ ಎಸ್‌ಐಟಿ ವಶಕ್ಕೆ ನೀಡಿ ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯ ಆದೇಶಿಸಿದೆ.

ಗುರುವಾರ ರಾತ್ರಿ ಜರ್ಮನಿಯಿಂದ ಬೆಂಗಳೂರಿಗೆ ಆಗಮಿಸಿದ ಹಾಸನದ ಅಶ್ಲೀಲ ವಿಡಿಯೊ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣರ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದರು. ಶುಕ್ರವಾರ ಬೆಳಗ್ಗೆ ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ ಪ್ರಜ್ವಲ್ ರೇವಣ್ಣರನ್ನು 42ನೇ ಎಸಿಎಂಎಂ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿತ್ತು. ಈ ವೇಳೆ ವಿಚಾರಣೆ 42ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಧೀಶರು ಎರಡು ಕಡೆಯ ವಾದಗಳನ್ನು ಆಲಿಸಿದರು. ಎಸ್‌ಐಟಿ ಆರೋಪಿಯನ್ನು ತಮ್ಮ ವಶಕ್ಕೆ ನೀಡುವಂತೆ ಕೋರ್ಟ್‌ಗೆ ಮನವಿ ಮಾಡಿತ್ತು. ಇದಕ್ಕೆ ಪ್ರಜ್ವಲ್ ರೇವಣ್ಣ ಪರ ವಕೀಲರಾದ ಅರುಣ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದು, ಜಾಮೀನು ನೀಡುವಂತೆ ವಾದ ಮಂಡಿಸಿದ್ದಾರೆ.

ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸುತ್ತಿದ್ದಂತೆ ಎಸ್‌ಐಟಿ ಪ್ರಕರಣದ ಕೇಸ್ ಡೈರಿ (ಸಿಡಿ) ಕೋರ್ಟ್‌ಗೆ ಸಲ್ಲಿಸಿತು. ಆಗ ನ್ಯಾಯಾಧೀಶರಾದ ಕೆ.ಎನ್ ಶಿವಕುಮಾರ್ ಅವರು ಆರೋಪಿಯನ್ನು ಹಾಜರು ಪಡಿಸಲು ಸೂಚಿಸಿದ್ದರು. ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಪ್ರಜ್ವಲ್ ರೇವಣ್ಣ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಂತೆ



ನ್ಯಾಯಾಲಯ ಸೂಚಿಸಿತ್ತು. ಲೈಂಗಿಕ ದೌರ್ಜನ್ಯ ಅತ್ಯಾಚಾರ ಪ್ರಕರಣಗಳಲ್ಲಿ ಬಂಧಿಸಿರುವ ಎಸ್‌ಐಟಿ ಅಧಿಕಾರಿಗಳು ಪ್ರಜ್ವಲ್ ರೇವಣ್ಣ ಅವರನ್ನು ಕೋರ್ಟ್‌ಗೆ ಹಾಜರು ಮಾಡಿದ್ದರು.

ಎಸ್‌ಐಟಿ ಕಚೇರಿಯ ಶೌಚಾಲಯ ಸರಿಯಿಲ್ಲ!

ಕೋರ್ಟ್‌ನಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ಜಡ್ಜ್ ಮೊದಲಿಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ನಿಮ್ಮ ಹೆಸರೇನು? ಅಂತ ಕೇಳಿದ ಪ್ರಶ್ನೆಗೆ ಪ್ರಜ್ವಲ್ ರೇವಣ್ಣ ಅವರು ಉತ್ತರ ನೀಡಿದ್ದಾರೆ. ಇದೇ ವೇಳೆ ನಿಮಗೇನಾದರೂ ತೊಂದರೆ ಆಯಿತಾ? ನಿಮ್ಮನ್ನು ಬಂಧಿಸಿರುವ ವಿಷಯವನ್ನು ನಿಮ್ಮ ತಂದೆ–ತಾಯಿಗೆ ತಿಳಿಸಿದ್ದೀರಾ ಎಂದು ನ್ಯಾಯಾಧೀಶರು ಪ್ರಶ್ನಿಸಿದ್ದಾರೆ. ಪ್ರಶ್ನೆಗೆ ಉತ್ತರಿಸಿದ ಪ್ರಜ್ವಲ್ ರೇವಣ್ಣ ಅವರು ಇಲ್ಲ ಕಿರುಕುಳ ಏನು ಆಗಿಲ್ಲ. ಆದರೆ ಎಸ್‌ಐಟಿ ಕಚೇರಿಯ ಶೌಚಾಲಯದ ಬಗ್ಗೆ ಪ್ರಜ್ವಲ್ ರೇವಣ್ಣ ದೂರು ನೀಡಿದ್ದಾರೆ. ಎಸ್‌ಐಟಿಯಲ್ಲಿರುವ ಶೌಚಾಲಯದಲ್ಲಿ ತುಂಬಾ ವಾಸನೆ ಇದೆ ಎಂದು ಹೇಳಿದ್ದಾರೆ. ಪ್ರಜ್ವಲ್ ರೇವಣ್ಣ ಅವರ ಈ ಮಾತು ಕೇಳಿ ಕೋರ್ಟ್ ಹಾಲ್‌ನಲ್ಲಿದ್ದ ಕೆಲವರು ನಕ್ಕಿದ್ದಾರೆ. ಆಗ ಜಡ್ಜ್ ಎಲ್ಲರೂ ಸುಮ್ಮನಿರಲು ಸೂಚನೆ ನೀಡಿದ್ದಾರೆ.

ಇದೇ ವೇಳೆ ಎಸ್‌ಐಟಿ ಕಸ್ಟಡಿಯಲ್ಲಿರುವಾಗ ಮನೆಯೂಟ ನೀಡಲು ಪ್ರಜ್ವಲ್ ರೇವಣ್ಣ ಪರ ವಕೀಲರು ಮನವಿ ಮಾಡಿದ್ದಾರೆ. ಇದಕ್ಕೆ ಎಸ್‌ಐಟಿ ಅಧಿಕಾರಿಗಳು ಮನೆಯೂಟ ಬೇಡ. ಅದಕ್ಕೆ ನಾವೇ ಊಟ ಕೊಡುತ್ತೇವೆ ಎಂದು ಹೇಳಿದ್ದಾರೆ.

ಪ್ರಜ್ವಲ್‌ಗೆ ಮಹಿಳಾ ಅಧಿಕಾರಿಗಳಿಂದ ಭದ್ರತೆ

ಪ್ರಜ್ವಲ್ ರೇವಣ್ಣ ಪ್ರಕರಣದ ತನಿಖೆಯಲ್ಲಿ ಮಹಿಳಾ ಅಧಿಕಾರಿಗಳೇ ಹೈಲೆಟ್ ಆಗಿದ್ದಾರೆ. ಗುರುವಾರ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಪ್ರಜ್ವಲ್ ಅವರನ್ನು ಮಹಿಳಾ ಅಧಿಕಾರಿಗಳೆ ಬಂಧಿಸಿದ್ದರು. ತನಿಖೆ ವೇಳೆಯೂ ಮಹಿಳಾ ಅಧಿಕಾರಿಗಳೇ ಪ್ರಜ್ವಲ್ ರೇವಣ್ಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ. ಪ್ರಜ್ವಲ್ ಸುತ್ತಾ ಮುತ್ತ ನಾಲ್ವರು ಮಹಿಳಾ ಅಧಿಕಾರಿಗಳ ಭದ್ರತೆ ನೀಡಲಾಗಿದೆ. ಆಸ್ಪತ್ರೆಗೆ ಪ್ರಜ್ವಲ್ ರೇವಣ್ಣ ಅವರ ಕೈ ಹಿಡಿದು ಮಹಿಳಾ ಅಧಿಕಾರಿಗಳ ತಂಡ ಎಳೆದು ತಂದಿದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಹೆಣ್ಣನ್ನು ಕೇವಲವಾಗಿ ನೋಡಿದ ಪ್ರಜ್ವಲ್‌ಗೆ ಮುಜುಗರ, ಅವಮಾನಿಸಲು, ನಾಚಿಕೆಪಡು ವಂತಾಗಲಿ ಎಂದು ಮಹಿಳಾ ಅಧಿಕಾರಿಗಳಿಂದಲೇ ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದಾರೆ.

ಪ್ರಜ್ವಲ್ ಪರ ವಾದ

- ಸಂತ್ರಸ್ತೆ ಅತ್ಯಾಚಾರ ಮಾಡಿದ್ದಾರೆಂದು ಮೊದಲು ದೂರು ನೀಡಿಲ್ಲ. ಪ್ರಕರಣದ ಸಂತ್ರಸ್ತೆಯ ಯಾವುದೇ ದೃಶ್ಯ ರೆಕಾರ್ಡ್ ಆಗಿಲ್ಲ. ನಾಲ್ಕು ವರ್ಷದ ಹಳೆಯ ಪ್ರಕರಣವೆಂದು ದೂರಿನಲ್ಲಿದೆ.
- ಏ.28ರಿಂದ ಮೇ 2ರವರೆಗೆ ಯಾವುದೇ ಅತ್ಯಾಚಾರದ ಉಲ್ಲೇಖವಿಲ್ಲ. ಸಿಆರ್‌ಪಿಸಿ 161 ಹೇಳಿಕೆ ನಂತರ ಅತ್ಯಾಚಾರ ಆರೋಪ ದಾಖಲು.
- ಲೈಂಗಿಕ ದೌರ್ಜನ್ಯ ಪ್ರಕರಣ ಅತ್ಯಾಚಾರದ ಪ್ರಕರಣವಾಗಿ ಪರಿವರ್ತಿಸಲಾಗಿದೆ. ಮಹಿಳಾ ತನಿಖಾಧಿಕಾರಿ ಹೇಳಿಕೆ ದಾಖಲಿಸಬೇಕು. ವಿಡಿಯೋ ರೆಕಾರ್ಡ್ ಮಾಡಬೇಕೆಂಬ ನಿಯಮವಿದೆ. ದೂರುದಾರಳ ಹೇಳಿಕೆಯ ಯಾವುದೇ ವಿಡಿಯೋ ಮಾಡಿಲ್ಲ.
- ವಿಡಿಯೊದಲ್ಲಿರುವವರ ಮುಖ ಆಧರಿಸಿ ತನಿಖೆ ಮಾಡುತ್ತಿದ್ದಾರೆ. ಅದಕ್ಕೆ ಇಷ್ಟು ದಿನ ಕಸ್ಟಡಿ ಅವಶ್ಯಕತೆ ಇಲ್ಲ. ಬೇರೆ ಪ್ರಕರಣಗಳನ್ನು ಉಲ್ಲೇಖಿಸಿ ಈ ಪ್ರಕರಣದಲ್ಲಿ ಕಸ್ಟಡಿ ಪಡೆಯುವಂತಿಲ್ಲ.

ಎಸ್‌ಐಟಿ ಪರ ವಾದ

- ಈತ (ಪ್ರಜ್ವಲ್) ವಿಕೃತಕಾಮಿ, ತನ್ನದೇ ಅಶ್ಲೀಲ ದೃಶ್ಯವನ್ನು ವಿಡಿಯೊ ಮಾಡಿದ್ದಾನೆ. ವಿಡಿಯೋ ವೈರಲ್ ಆದ ಮೇಲೆ ದೇಶ ಬಿಟ್ಟು ಹೋಗಿದ್ದ. ಈತನನ್ನು ಬಂಧಿಸಿ ತನಿಖೆಗೊಳಪಡಿಸಿದರೆ ಸತ್ಯ ತಿಳಿಯಲಿದೆ.
- ಹೊರ ದೇಶಕ್ಕೆ ಹೋಗಲು ಹಲವರ ಪಾತ್ರ ಇದೆ. ಅವರ ಬಗ್ಗೆಯೂ ತನಿಖೆ ಮಾಡಲು ಈತನ ಬಂಧನ ಅಗತ್ಯವಾಗಿದೆ. ವಿದೇಶದಲ್ಲೇ ಬಂಧನ ತಪ್ಪಿಸಲು ಈಗ ದೇಶಕ್ಕೆ ಮರಳಿದ್ದಾನೆ.
- ಈತ ತನ್ನದೇ ಲೈಂಗಿಕ ದೃಶ್ಯವನ್ನು ಚಿತ್ರೀಕರಿಸಿದ್ದಾನೆ. ಹೀಗಾಗಿ ಈತನ ತನಿಖೆ ಮಾಡಬೇಕಿದೆ. ಈತನ ಮೊಬೈಲ್ ವಶಕ್ಕೆ ಪಡೆದು ಅದರಲ್ಲಿನ ವಿಡಿಯೋ ಪಡೆಯಬೇಕಿದೆ.
- ಇವನ ಮೊಬೈಲ್ ಲಾಕ್ ಸಿಸ್ಟಮ್ ಇದೆ. ಇವನು ಮತ್ತೊಬ್ಬನ ಫೇಸ್ ಲಾಕ್ ಇದೆ. ಇವೆಲ್ಲವನ್ನೂ ತನಿಖೆ ನಡೆಸಬೇಕದೆ. ವಿಡಿಯೊ ಮಾಡದ ದೌರ್ಜನ್ಯ ಪ್ರಕರಣಗಳೂ ಇವೆ.

ಪ್ರಜ್ವಲ್‌ಗೆ ಸಾಲು ಸಾಲು ಪ್ರಶ್ನೆ

ಲೈಂಗಿಕ ದೌರ್ಜನ್ಯದ ಪ್ರಮುಖ ಆರೋಪಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಿರುವ ಎಸ್‌ಐಟಿ ತೀವ್ರ ವಿಚಾರಣೆಗೊಳಪಡಿಸಿದೆ. ಕಳೆದ 34 ದಿನಗಳಿಂದ ವಿದೇಶದಲ್ಲಿ ತಲೆಮರೆಸಿಕೊಂಡಿದ್ದ ಸಂಸದ ಪ್ರಜ್ವಲ್ ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರಿಯ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿದ್ದಂತೆ ಎಸ್‌ಐಟಿ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡರು. ಶುಕ್ರವಾರ ಬೆಳಗ್ಗೆ ಕೆಲಕಾಲ ವಿಚಾರಣೆ ನಡೆಸಿದ ಎಸ್‌ಐಟಿ ಅಧಿಕಾರಿಗಳು ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ ಬಹುತೇಕ ಪ್ರಶ್ನೆಗಳಿಗೆ ಪ್ರಜ್ವಲ್ ಅವರದ್ದು 'ಮೌನವೇ' ಉತ್ತರವಾಗಿತ್ತು ಎನ್ನಲಾಗುತ್ತಿದೆ.

ಅಧಿಕಾರಿಗಳು ಕೇಳಿರುವ ಪ್ರಮುಖ ಪ್ರಶ್ನೆ

- ಪೆನ್‌ಡ್ರೈವ್‌ನಲ್ಲಿರುವ ಫೋಟೊ, ವಿಡಿಯೊ ನಿಮದೆಯಾ?
- ಮೊಬೈಲ್‌ನಲ್ಲಿದ್ದ ವಿಡಿಯೊಗಳು ಹೇಗೆ ಲೀಕ್ ಆಗಿವೆ?
- ಎಷ್ಟು ಮಹಿಳೆಯರ ವಿಡಿಯೊಗಳಿವೆ? ಅವರೆಲ್ಲಾ ನಿಮಗೆ ಹೇಗೆ ಗೊತ್ತು?
- ನಿಮ್ಮ ಮಾಜಿ ಕಾರು ಚಾಲಕ ಕಾರ್ತಿಕ್‌ಗೆ ನೀವೇನಾದರೂ ಅವುಗಳನ್ನು ಕೊಟ್ಟಿದ್ದೀರ?
- ಪೆನ್‌ಡ್ರೈವ್‌ಗಳು ಹೊರಗೆ ಬಂತು ಎಂದು ನಿಮಗೆ ಗೊತ್ತಾಗಿದ್ದು ಯಾವಾಗ?
- ವಿದೇಶಕ್ಕೆ ಹೋಗಿದ್ದು ಏಕೆ?
- ನಾವು ನೋಟಿಸ್ ಕೊಟ್ಟರೂ ವಿಚಾರಣೆಗೆ ಹಾಜರಾಗಲಿಲ್ಲ ಏಕೆ?
- ಜರ್ಮನಿಯಿಂದ ಟಿಕೆಟ್ ಬುಕ್ ಮಾಡಿ ಪದೇಪದೇ ಕ್ಯಾನ್ಸಲ್ ಮಾಡಿದ್ದು ಏಕೆ?
- ವಿದೇಶಕ್ಕೆ ಯಾರೊಂದಿಗೆ ಹೋಗಿದ್ದಿರಿ?
- ನಿಮೊಂದಿಗೆ ಯಾರ‍್ಯಾರಿದ್ದರು?

ನಿರೀಕ್ಷಣಾ ಜಾಮೀನು ವಜಾ: ಭವಾನಿಗೆ ಬಂಧನದ ಭೀತಿ

ಬೆಂಗಳೂರು : ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಕೆ.ಆರ್.ನಗರ ಸಂತ್ರಸ್ತ ಮಹಿಳೆಯನ್ನು ಅಪಹರಣ ಮಾಡಿದ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ನೀಡುವಂತೆ ಭವಾನಿ ರೇವಣ್ಣ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯ ವಜಾ ಮಾಡಿದೆ. ಭವಾನಿ ರೇವಣ್ಣ ಅವರಿಗೆ ಬಂಧನದ ಭೀತಿ ಶುರುವಾಗಿದೆ.

ಪ್ರಜ್ವಲ್ ರೇವಣ್ಣ ಅವರಿಗೆ ಜಾಮೀನು ನಿರಾಕರಿಸಿ ಆರು ದಿನ ಎಸ್‌ಐಟಿ ವಶಕ್ಕೆ ನೀಡಿದ ಬೆನ್ನಲ್ಲೇ ಅವರ ತಾಯಿ ಭವಾನಿ ಅವರಿಗೆ ಆಘಾತ ಎದುರಾಗಿದೆ. ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ವಜಾಗೊಂಡಿರುವ ಕಾರಣ ಎಸ್‌ಐಟಿ ಅಧಿಕಾರಿಗಳು ಅವರನ್ನು ಬಂಧಿಸುವ ಸಾಧ್ಯತೆಗಳಿವೆ. ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಪೊಲೀಸರು ಭವಾನಿ ಅವರಿಗೆ ತನಿಖೆಗೆ ಹಾಜರಾಗುವಂತೆ 15 ದಿನಗಳ ಹಿಂದೆ ನೋಟಿಸ್ ನೀಡಿದ್ದರು. ಅದಕ್ಕೆ ಪ್ರತಿಕ್ರಿಯಿಸದ ಅವರು ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ಏತನ್ಮಧ್ಯೆ ಶುಕ್ರವಾರ ಬೆಳಗ್ಗೆ ಎಸ್‌ಐಟಿ ಅಧಿಕಾರಿಗಳೂ ಭವಾನಿ ಅವರಿಗೆ 2ನೇ ನೋಟಿಸ್ ನೀಡಿದ್ದರು. ಅವರು ಮನೆ ಯಲ್ಲಿ ಇಲ್ಲದ ಕಾರಣ ನೋಟಿಸ್ ಅಂಟಿಸಿ ಬಂದಿದ್ದರು. ಕೋರ್ಟ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

ಅಜ್ಞಾತ ಸ್ಥಳಕ್ಕೆ ತೆರಳಿರುವ ಭವಾನಿ ರೇವಣ್ಣ

ಸಂತ್ರಸ್ತ ಮಹಿಳೆಯ ಅಪಹರಣ ಪ್ರಕರಣದಲ್ಲಿ ತನಿಖೆಯ ಅಗತ್ಯವಿರುವುದರಿಂದ ವಿಚಾರಣೆಗೆ ಹಾಜರಾಗುವಂತೆ ಭವಾನಿ ರೇವಣ್ಣ ಅವರಿಗೆ ಎಸ್‌ಐಟಿ ನೋಟಿಸ್ ನೀಡಿದೆ. ಮೇ 2ರಂದು ಕೆ. ಆರ್.ನಗರ ಠಾಣೆಯಲ್ಲಿ ದಾಖಲಾದ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಮೇ 15ರಂದು ಎಸ್‌ಐಟಿ ಮೊದಲ ನೋಟಿಸ್ ನೀಡಿತ್ತು. ಈ ನೋಟಿಸ್‌ಗೆ ಪ್ರತಿಯಾಗಿ ಪ್ರಕರಣದಲ್ಲಿ ತನಿಖೆಗೆ ಅಗತ್ಯವಿದ್ದರೆ ಹೊಳೆನರಸೀಪುರದ ಚೆನ್ನಾಂಬಿಕಾ ನಿವಾಸದಲ್ಲಿ ತಾವು ಇರುವುದಾಗಿ ಪತ್ರದ ಮುಖೇನ ತಿಳಿಸಿದ್ದೀರಿ. ಪ್ರಕರಣದಲ್ಲಿ ನಿಮ್ಮ ವಿಚಾರಣೆ ಅಗತ್ಯವಿದ್ದು ಜೂನ್ 1ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5ರವರೆಗಿನ ಅವಧಿಯಲ್ಲಿ ನೀವು ತಿಳಿಸಿರುವ ವಿಳಾಸಕ್ಕೆ ತನಿಖಾಧಿಕಾರಿಗಳು ಬರುತ್ತಿದ್ದು, ಆ ಸಂದರ್ಭದಲ್ಲಿ ತಾವು ಹಾಜರಿರಬೇಕು ಎಂದು ತಿಳಿಸಲಾಗಿದೆ. ಆದರೆ ಭವಾನಿ ರೇವಣ್ಣ ಅವರು ಅಜ್ಞಾನ ಸ್ಥಳಕ್ಕೆ ತೆರಳಿರುವುದು ತಿಳಿದುಬಂದಿದೆ. ಪ್ರಜ್ವಲ್ ಪ್ರಕರಣ ಬೆಳಕಿಗೆ ಬಂದಾಗ ಹೊಳೆನರಸೀಪುರದಲ್ಲಿ ವಾಸ್ತವ್ಯ ಹೂಡಿದ್ದರು. ಅಪಹರಣ ಪ್ರಕರಣ ಬೆಳಕಿಗೆ ಬಂದ ಬಳಿಕ ಎಲ್ಲಿದ್ದಾರೆಂಬ ಯಾವುದೇ ಸುಳಿವು ಇಲ್ಲ. ಸಾಲಿಗ್ರಾಮದ ತವರು ಮನೆ ಕೂಡ ಖಾಲಿ, ಖಾಲಿಯಾಗಿದೆ. ಬಂಧನದ ಭೀತಿಯಲ್ಲಿರುವ ಭವಾನಿ ತವರು ಮನೆಯಿಂದಲೂ ಪರಾರಿಯಾಗಿರುವುದು ತಿಳಿದುಬಂದಿದೆ.

ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂ.ಸಂ.080– 22866302/22867172,
ಇ–ಮೇಲ್: dmablr@gmail.com ವೆಬ್‌ಸೈಟ್: www.municipaladmn.gov.in

ಸಂಖ್ಯೆ: 1418173/DMA/SWM/FSM/11/2024 ದಿನಾಂಕ: 30.05.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು(ಘವನಿ)ರವರು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಪರವಾಗಿ, ಸಕ್ಷಮ ಪ್ರಾಧಿಕಾರದಲ್ಲಿ ನೊಂದಾಯಿತ 1ನೇ ದರ್ಜೆಯ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000ರ ಪ್ರಕಾರ, ಕೆ.ಡಬ್ಲೂ–4 ದಸ್ತಾವೇಜಿನಲ್ಲಿ Lumpsum(Turnkey Basis) ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ
1	DMA/2024-25/WT/WORK_INDENT18121 (ಪ್ಯಾಕೇಜ್ ಸಂಖ್ಯೆ.08)	793.48	11.91	09 ತಿಂಗಳು (ಮಳೆಗಾಲ ಸೇರಿ)
2	DMA/2024-25/WT/WORK_INDENT18127 (ಪ್ಯಾಕೇಜ್ ಸಂಖ್ಯೆ.10)	738.88	11.05	
3	DMA/2024-25/WT/WORK_INDENT18197 (ಪ್ಯಾಕೇಜ್ ಸಂಖ್ಯೆ.14)	685.00	10.28	
4	DMA/2024-25/WT/WORK_INDENT18199 (ಪ್ಯಾಕೇಜ್ ಸಂಖ್ಯೆ.15)	538.32	8.10	
5	DMA/2024-25/WT/WORK_INDENT18201 (ಪ್ಯಾಕೇಜ್ ಸಂಖ್ಯೆ.16)	558.31	8.38	
6	DMA/2024-25/WT/WORK_INDENT18211 (ಪ್ಯಾಕೇಜ್ ಸಂಖ್ಯೆ.17)	469.72	7.05	

ಆಸಕ್ತ ಗುತ್ತಿಗೆದಾರರು ಟೆಂಡರನ್ನು ಎಲೆಕ್ಟ್ರಾನಿಕ್ ಇ–ಪ್ರೊಕ್ಯೂರ್‌ಮೆಂಟ್ ಮೂಲಕವೇ ಸಲ್ಲಿಸಬೇಕಾಗಿದ್ದು, ಮುಂಗಡ ಠೇವಣಿ ಮತ್ತು ಪ್ರೊಸೆಸ್ಸಿಂಗ್ ಫೀನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಸಲ್ಲಿಸಬೇಕಿರುತ್ತದೆ ಹಾಗೂ ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ **ದಿನಾಂಕ: 30.05.2024 ರಿಂದ 15.06.2024ರ** ವರೆಗೆ ಪಡೆಯಬಹುದು (Available for download), ಪ್ರೀ ಬಿಡ್ ಮೀಟಿಂಗ್ ನಡೆಯುವ **ದಿನಾಂಕ: 07.06.2024, ಬೆಳಿಗ್ಗೆ 11.00 ಗಂಟೆಗೆ ಸ್ಥಳ: 9ನೇ ಮಹಡಿ ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು,** ಟೆಂಡರ್ ಸಲ್ಲಿಸುವ ಅಂತಿಮ **ದಿನಾಂಕ: 15.06.2024 ಸಂಜೆ 05.00 ಗಂಟೆಯ ವರೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 17.06.2024, ಬೆಳಿಗ್ಗೆ 11.00 ಗಂಟೆಯ** ನಂತರ, ತಾಂತ್ರಿಕ ಬಿಡ್ ಅನುಮೋದನೆಗೊಂಡ ತದನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು, ಮೇಲಿನ ಟೆಂಡರ್ ನಿಯಮ ಮತ್ತು ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ತಿಳಿಸಲಾಗುವುದು ಮತ್ತು ಯಾವುದೇ ವಾರ್ತಾ/ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು,

ವಾಸಾಸಂಇ/ವಾ.ಪ್ರ/168/ಶಿರಡಿ ಸಾಯಿ/2024–25

...ಭಾರತಕ್ಕೆ 100 ಟನ್ ಚಿನ್ನ

← ಮೊದಲಪುಟದಿಂದ

ವರ್ಲ್ಡ್ ಗೋಲ್ಡ್ ಕೌನ್ಸಿಲ್ (ಡಬ್ಲ್ಯುಜಿಸಿ) ಇತ್ತೀಚಿನ ವರದಿ ಪ್ರಕಾರ, ಆರ್‌ಬಿಐ 2024ರ ಕ್ಯಾಲೆಂಡರ್ ವರ್ಷದ ಮೊದಲ ತ್ರೈಮಾಸಿಕದಲ್ಲಿ 19 ಟನ್ ಚಿನ್ನವನ್ನು ಖರೀದಿಸಿದೆ. ಇದು ಇಡೀ 2023ರಲ್ಲಿ ಖರೀದಿಸಿದ 16 ಟನ್ ಚಿನ್ನಕ್ಕಿಂತ ಹೆಚ್ಚಾಗಿದೆ.

ಆರ್‌ಬಿಐ 2018ರ ಕ್ಯಾಲೆಂಡರ್ ವರ್ಷದಿಂದ ಚಿನ್ನವನ್ನು ಖರೀದಿಸಲು ಪ್ರಾರಂಭಿಸಿತು. ಇದಕ್ಕೂ ಮೊದಲು, 2009ರಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಅದು 200 ಟನ್ ಖರೀದಿಸಿತ್ತು.

ಹೀಗೆಂದರೇನು? ವೆಚ್ಚ ಉಳಿತಾಯ: ಚಿನ್ನವನ್ನು ದೇಶೀಯವಾಗಿ ಸಂಗ್ರಹಿಸುವುದರಿಂದ ಬ್ಯಾಂಕ್ ಆಫ್ ಇಂಗ್ಲೆಂಡ್‌ನಂತಹ ವಿದೇಶಿ ಕಸ್ಟೋಡಿಯನ್‌ಗಳಿಗೆ ಪಾವತಿಸುವ ಸಂಗ್ರಹಣಾ ಶುಲ್ಕದ ಹಣವನ್ನು ಆರ್‌ಬಿಐ ಉಳಿಸಬಹುದು.

ವಿಶ್ವಾಸದ ಸಂಕೇತ: ಚಿನ್ನವನ್ನು ಸುರಕ್ಷಿತ ಆಸ್ತಿಯಾಗಿ ನೋಡಲಾಗುತ್ತದೆ. ಅದನ್ನು ದೇಶೀಯವಾಗಿ ಇಟ್ಟುಕೊಳ್ಳುವುದು ಭಾರತೀಯ ಆರ್ಥಿಕತೆಯ ಸ್ಥಿರತೆಯಲ್ಲಿ ಆರ್‌ಬಿಐನ ವಿಶ್ವಾಸವನ್ನು ಹೆಚ್ಚಿಸುತ್ತದೆ.

ಬಿಸಿಲಿನ ತಾಪಕ್ಕೆ 54 ಮಂದಿ ಬಲಿ

← ಮೊದಲಪುಟದಿಂದ

ಬಿಸಿಗಾಳಿ ಕಡಿಮೆ?: ಶನಿವಾರದಿಂದ ಬಿಸಿಗಾಳಿ ಪರಿಸ್ಥಿತಿಗಳು ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಭಾರತ ಹವಾಮಾನ ಇಲಾಖೆ ತಿಳಿಸಿದೆ. ಐಎಂಡಿ ವಿಜ್ಞಾನಿ ಸೋಮಾ ಸೇನ್ ಮಾತನಾಡಿ, ಕಳೆದ 24 ಗಂಟೆಗಳಲ್ಲಿ ಬಿಹಾರ, ಜಾರ್ಖಂಡ್, ಒಡಿಶಾದಲ್ಲಿ ಸಾಕಷ್ಟು ಸಾವುನೋವುಗಳು ಸಂಭವಿಸಿವೆ. ಶನಿವಾರದಿಂದ ಈ ಪ್ರದೇಶಗಳಲ್ಲಿ ಬಿಸಿಲು ಕಡಿಮೆಯಾಗಲಿದೆ ಎಂದು ಹೇಳಿದ್ದಾರೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಕೋಲಾರ

ಸಂಖ್ಯೆ: ಸ.ಅ.ಸ/ಸಾ.ಅ.ಉ/ಸಿಆರ್–02/2024–25 ದಿನಾಂಕ:29.05.2024

(ಅಲ್ಪಾವಧಿ "ಇ" ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ)
(http://kppp.karnataka.gov.in)

ಈ ಮೂಲಕ ಈ ವಿಭಾಗದ ನೊಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2024–25ನೇ ಸಾಲಿನಲ್ಲಿ ಕೋಲಾರ ಸಾಮಾಜಿಕ ಅರಣ್ಯ ವಿಭಾಗಕ್ಕೆ ಒಳಪಡುವ ವಲಯಗಳಲ್ಲಿ ರಸ್ತೆಬದಿ ನೆಡುತೋಪು ಯೋಜನೆಯಡಿ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಈ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ **ದಿನಾಂಕ: 01.06.2024ರಂದು** ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ದಿನದಂದು ಟೆಂಡರ್ ಬರದಿದ್ದಲ್ಲಿ ಅದೇ ಷರತ್ತಿಗೊಳಪಟ್ಟು ಎರಡನೇ ಬಾರಿಗೆ ಪುನಃ ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:09/ಕೆಎಸ್‌ಎಂಸಿಎ/2024–25

ಎಫ್‌ಐಆರ್ ರದ್ದು ಕೋರಿ ರೇವಣ್ಣ ಅರ್ಜಿ: ಸೋಮವಾರ ಪ್ರಕರಣದ ವಿಚಾರಣೆ

ಬೆಂಗಳೂರು: ಅಶ್ಲೀಲ ವಿಡಿಯೊ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ತಮ್ಮ ವಿರುದ್ಧದ ದಾಖಲಾಗಿದ್ದ ಎಫ್‌ಐಆರ್ ರದ್ದು ಕೋರಿ ಮಾಜಿ ಸಚಿವ ಎಚ್.ಡಿ.ರೇವಣ್ಣ ಸಲ್ಲಿಸಿರುವ ಅರ್ಜಿಯ ಸಂಬಂಧ ಸರಕಾರಕ್ಕೆ ನೋಟಿಸ್ ಜಾರಿ ಮಾಡಿರುವ ಹೈಕೋರ್ಟ್, ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿದೆ.

ರೇವಣ್ಣ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಸೋಮವಾರ ಅರ್ಜಿ ವಿಚಾರಣೆಗೆ ನಿಗದಿ ಪಡಿಸಲಾಗುವುದು ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್, ಪ್ರಕರಣದಲ್ಲಿ ಅರ್ಜಿದಾರ ರೇವಣ್ಣ ಅವರ ಪಾತ್ರ ಇಲ್ಲ. ಅಪಹರಣ ಮಾಡಬೇಕಾದಲ್ಲಿ ಬೆದರಿಕೆ ಹಾಕಬೇಕಾಗುತ್ತದೆ. ಈ ಪ್ರಕರಣದಲ್ಲಿ ಆ ರೀತಿಯ ಪ್ರಕ್ರಿಯೆ ನಡೆದಿಲ್ಲ. ಹೀಗಾಗಿ, ಎಫ್‌ಐಆರ್ ದಾಖಲಿಸಿರುವುದೇ ಕಾನೂನುಬಾಹಿರ. ಆದ್ದರಿಂದ ಎಫ್‌ಐಆರ್ ರದ್ದುಪಡಿಸಬೇಕು. ಅಲ್ಲದೆ, ಸತೀಶ್ ಬಾಬಣ್ಣ ಎಂಬುವರು ಹತ್ತಾರು ವರ್ಷಗಳಿಂದ ರೇವಣ್ಣ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದವರು, ಅವರಿಗೆ ರೇವಣ್ಣ ಯಾವುದೇ ಸೂಚನೆ ನೀಡಿಲ್ಲ. ಜತೆಗೆ, ಸಂತ್ರಸ್ತೆಯನ್ನು ಅರ್ಜಿದಾರರ ವಶದಲ್ಲಿಯೂ ಇಟ್ಟುಕೊಂಡಿಲ್ಲ. ಎಲ್ಲವೂ ಸುಳ್ಳು ಆರೋಪವಾಗಿದೆ. ಹೀಗಾಗಿ ಪ್ರಕರಣ ರದ್ದುಗೊಳಿಸಬೇಕು'' ಎಂದು ಮನವಿ ಮಾಡಿಕೊಂಡರು.

ಬಿ. ನಾಗೇಂದ್ರ ತಲೆದಂಡ?

← ಮೊದಲಪುಟದಿಂದ

ಈ ಹಿಂದೆ ಈ ರೀತಿ ಆರೋಪ ಕೇಳಿಬಂದಾಗ, ಬಹುತೇಕ ಸಚಿವರು 'ನೈತಿಕ ಹೊಣೆ ಹೊತ್ತು' ರಾಜೀನಾಮೆ ನೀಡಿದ್ದಾರೆ. ಆದ್ದರಿಂದ ಈಗಲೂ, ನಾಗೇಂದ್ರ ಅವರೂ ರಾಜೀನಾಮೆ ನೀಡಬೇಕು ಎನ್ನುವ ಒತ್ತಡ ಪ್ರತಿಪಕ್ಷಗಳೊಂದಿಗೆ ಪಕ್ಷದ ಕೆಲ ನಾಯಕರು ಹೇರುತ್ತಿದ್ದಾರೆ. ಈ ಹಂತದಲ್ಲಿ ರಾಜೀನಾಮೆ ನೀಡಿದರೆ, ಕೆಟ್ಟ ಸಂದೇಶ ರವಾನೆಯಾಗಲಿದೆ ಎನ್ನುವ ಮಾತುಗಳನ್ನು ಕೆಲ ನಾಯಕರು ಹೇಳಿದ್ದಾರೆ. ಆದರೆ ಪಕ್ಷದ ಹೈಕಮಾಂಡ್, ಆರೋಪ ಬಂದಿರುವ ಸಚಿವರನ್ನು ಮುಂದುವರಿಸಿದಷ್ಟು ದಿನ, ಪಕ್ಷಕ್ಕೆ ಡ್ಯಾಮೇಜ್ ಆಗಲಿದೆ. ಆದ್ದರಿಂದ ತನಿಖೆ ಪೂರ್ಣಗೊಳ್ಳುವ ತನಕ ನಾಗೇಂದ್ರ ಅವರನ್ನು ಸಂಪುಟದಿಂದ ಹೊರಗಿಡುವುದು ಸೂಕ್ತ ಎನ್ನುವತ್ತ ಆಲೋಚಿಸಿದ್ದಾರೆ.

ಎಸ್‌ಐಟಿ ರಚನೆ: ದಿನದಿಂದ ದಿನಕ್ಕೆ ಪ್ರಕರಣದ ಕಾವು ತೀವ್ರವಾಗುತ್ತಿದ್ದಂತೆ ಹಾಗೂ ಇಡೀ ಪ್ರಕರಣ ಸಿಬಿಐಗೆ ಹಸ್ತಾಂತರವಾಗುವ ಸಾಧ್ಯತೆಯಿರುವುದರಿಂದ ವಾಲ್ಮೀಕಿ ಅಭಿವೃದ್ಧಿ ಮಂಡಳಿಯ ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು, ಎಡಿಜಿಪಿ ಮನೀಷ್ ಖರ್ಬೀಕರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಾಜ್ಯ ಸರಕಾರ ರಚಿಸಿ ಆದೇಶ ಹೊರಡಿಸಿದೆ. ಸಮಿತಿಯಲ್ಲಿ ಖರ್ಬೀಕರ್ ಜತೆ ಐಪಿಎಸ್ ಅಧಿಕಾರಿಗಳಾದ ಶಿವಪ್ರಕಾಶ್ ದೇವರಾಜು, ಹರಿರಾಮ್ ಶಂಕರ್ ಹಾಗೂ ರಾಘವೇಂದ್ರ ಇವರಿದ್ದಾರೆ .

> ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪ ಪ್ರಕರಣವನ್ನು ನಾವಾಗಿಯೇ ಸಿಬಿಐಗೆ ವಹಿಸುವುದಿಲ್ಲ. ನೂರು ಕೋಟಿಗಿಂತ ಹೆಚ್ಚಿನ ಪ್ರಕರಣ ಸಿಬಿಐಗೆ ವರ್ಗಾವಣೆಯಾಗುತ್ತದೆ. ಈಗ ಸಿಐಡಿಯವರು ತನಿಖೆ ಆರಂಭಿಸಿದ್ದಾರೆ. ನೂರು ಕೋಟಿ ಅಧಿಕ ಅಕ್ರಮ ನಡೆದಿದೆಯೋ, ಏನಾಗಿದೆ ಎಂಬುದು ಸಿಐಡಿ ತನಿಖೆಯಿಂದ ಗೊತ್ತಾಗಲಿದೆ. ನೂರು ಕೋಟಿಗಿಂತ ಹೆಚ್ಚಾಗಿದ್ದರೆ, ಮುಂದೇನು ಮಾಡಬೇಕೆಂದು ಸಿಎಂ ಜತೆ ಚರ್ಚಿಸುತ್ತೇವೆ.
>
> –ಡಾ.ಜಿ.ಪರಮೇಶ್ವರ್ ಗೃಹ ಸಚಿವ

ಮತಗಟ್ಟೆ ಭವಿಷ್ಯ: ನಿಜವಾಗುವುದು ಎಷ್ಟು?

← ಮೊದಲಪುಟದಿಂದ

2019: ಕಳೆದ ಬಾರಿ ಸರಾಸರಿ 13 ಚುನಾವಣೋತ್ತರ ಸಮೀಕ್ಷೆಗಳು ಎನ್‌ಡಿಎ ಒಟ್ಟು ಸಂಖ್ಯೆಯನ್ನು 306 ಮತ್ತು ಯುಪಿಎ 120 ಎಂದು ಹೇಳಿವೆ. ಯುಪಿಎ 93 ಸ್ಥಾನಗಳನ್ನು ಗಳಿಸಿತು. ಈ ಪೈಕಿ ಬಿಜೆಪಿ 303 ಮತ್ತು ಕಾಂಗ್ರೆಸ್ 52 ಸ್ಥಾನಗಳನ್ನು ಗೆದ್ದಿದ್ದವು.

ಇಂಡಿಯ ಟುಡೆ–ಆ್ಯಕ್ಸಿಸ್
ಎನ್‌ಡಿಎ – 352
ಯುಪಿಎ – 93
ನ್ಯೂಸ್24–ಚಾಣಕ್ಯ
ಎನ್‌ಡಿಎ – 350
ಯುಪಿಎ – 95
ನ್ಯೂಸ್18–ಐಪಿಎಸ್‌ಒಎಸ್
ಎನ್‌ಡಿಎ – 336
ಯುಪಿಎ – 82
ಟೈಮ್ಸ್ ನೌ–ವಿಎಂಆರ್
ಎನ್‌ಡಿಎ – 306
ಯುಪಿಎ – 132
ಎಬಿಪಿ–ಸಿಎಸ್‌ಡಿಎಸ್
ಎನ್‌ಡಿಎ – 277
ಯುಪಿಎ – 130
ಫಲಿತಾಂಶ
ಎನ್‌ಡಿಎ – 306
ಯುಪಿಎ – 120

2009: ಆಗ ಯುಪಿಎ ಮತ್ತೆ ಅಧಿಕಾರಕ್ಕೆ ಬಂದಾಗ, ಸರಾಸರಿ ನಾಲ್ಕು ಚುನಾವಣೋತ್ತರ ಸಮೀಕ್ಷೆಗಳು ವಿಜೇತರ ಸಂಖ್ಯೆಯನ್ನು ಕಡಿಮೆ ಅಂದಾಜು ಮಾಡಿದ್ದವು. ಅವರು ಯುಪಿಎಗೆ 195 ಮತ್ತು ಎನ್‌ಡಿಎಗೆ 185 ಸ್ಥಾನಗಳನ್ನು ನೀಡಿದ್ದರು. ಎನ್‌ಡಿಎ 158 ಸ್ಥಾನಗಳಲ್ಲಿ ಯುಪಿಎ ಅಂತಿಮವಾಗಿ 262 ಸ್ಥಾನಗಳನ್ನು ಗೆದ್ದುಕೊಂಡಿತು. ಈ ಪೈಕಿ ಕಾಂಗ್ರೆಸ್ 206 ಸ್ಥಾನಗಳನ್ನು ಗೆದ್ದರೆ, ಬಿಜೆಪಿ 116 ಸ್ಥಾನಗಳನ್ನು ಗೆದ್ದಿತು.

ಸ್ಟಾರ್–ನೀಲ್ಸನ್
ಯುಪಿಎ – 199
ಎನ್‌ಡಿಎ – 196
ಸಿಎನ್‌ಎನ್–ಐಬಿಎನ್–ದೈನಿಕ್ ಭಾಸ್ಕರ್
ಯುಪಿಎ – 195
ಎನ್‌ಡಿಎ – 175
ಇಂಡಿಯ ಟಿವಿ–ಸಿವೋಟರ್
ಯುಪಿಎ – 195
ಎನ್‌ಡಿಎ – 189
ಹೆಡ್‌ಲೈನ್ಸ್ ಟುಡೆ
ಯುಪಿಎ – 191
ಎನ್‌ಡಿಎ – 180
ಫಲಿತಾಂಶ
ಯುಪಿಎ – 262
ಎನ್‌ಡಿಎ – 158

ರಸ್ತೆ ಮೇಲೆ ನಮಾಜ್ ಸುಮೊಟೊ ಅಗತ್ಯವಿಲ್ಲ

ಮಂಗಳೂರು: ಕಂಕನಾಡಿಯಲ್ಲಿ ಮಸೀದಿಯ ಹೊರಗೆ ಪ್ರಾರ್ಥನೆ ಮಾಡಿದ್ದಕ್ಕೆ ಸುಮೊಟೊ ಪ್ರಕರಣ ದಾಖಲಿಸುವ ಅಗತ್ಯ ಇರಲಿಲ್ಲ ಎಂದು ಕೆಪಿಸಿಸಿ ಉಪಾಧ್ಯಕ್ಷ ರಮಾನಾಥ ರೈ ಹೇಳಿದರು. ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಎಲ್ಲ

ಧರ್ಮಗಳ ಕಾರ್ಯಕ್ರಮಗಳು ಕೆಲವೊಮ್ಮೆ ರಸ್ತೆಯಲ್ಲಿ ನಡೆಯುತ್ತವೆ. ಮಸೀದಿಯಲ್ಲಿ ಸ್ಥಳಾವಕಾಶ ಇಲ್ಲದಾಗ ಹೊರಗೆ ನಮಾಜ್ ಮಾಡಿರಬಹುದು. ಅದನ್ನು ತಪ್ಪು ಎಂದು ಹೇಳಲು ಆಗದು. ಅಲ್ಲಿ ನಡೆದಿರುವುದು ಪ್ರಾರ್ಥನೆ, ದೇವರು ಎಲ್ಲರಿಗೂ ಒಬ್ಬನೇ. ಜಿಲ್ಲೆಯಲ್ಲಿ ಅನೇಕ ಬಾರಿ ಬೇರೆ ಬೇರೆಯವರಿಂದ ಪ್ರಚೋದನಕಾರಿ ಮಾತು ವ್ಯಕ್ತವಾದಾಗಲೂ ಈ ರೀತಿ ಸುಮೊಟೊ ಪ್ರಕರಣ ದಾಖಲಿಸಿರಲಿಲ್ಲ. ಈಗ ಇಂತಹ ಸಣ್ಣ ವಿಷಯವನ್ನು ರಂಪಾಟ ಮಾಡುವ ಅಗತ್ಯ ಇರಲಿಲ್ಲ. ಪ್ರಾರ್ಥನೆಯ ವಿಡಿಯೊ ಮಾಡಿ, ಅದನ್ನು ಪ್ರಚಾರ ಮಾಡುವ ಮೂಲಕ ಸೌಹಾರ್ದಕ್ಕೆ ಧಕ್ಕೆ ತರುವ ಕಾರ್ಯ ಮಾಡಿದವರ ಮೇಲೆ ಕ್ರಮ ಆಗಬೇಕು. ನೈರುತ್ಯ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿಗಳನ್ನು ಪಕ್ಷ ಕಣಕ್ಕಿಳಿಸಿದೆ. ಅವರಿಗೆ ಮತದಾರರು ಬೆಂಬಲ ನೀಡಬೇಕು ಎಂದು ವಿನಂತಿಸಿದರು.

ಇನ್ಸ್‌ಪೆಕ್ಟರ್ ಕಡ್ಡಾಯ ರಜೆ | ಶರಣ್ ಪಂಪ್‌ವೆಲ್ ವಿರುದ್ಧ ಪ್ರಕರಣ ದಾಖಲು

ನಮಾಜ್ ಪ್ರಕರಣ: ಬಿ ರಿಪೋರ್ಟ್ ಸಲ್ಲಿಕೆ

ಮಂಗಳೂರು: ನಗರದ ರಸ್ತೆಯಲ್ಲಿ ನಮಾಜ್ ಮಾಡಿದ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದರು. ಆದರೆ ಅಲ್ಲಿ ಸಂಚಾರಕ್ಕೆ ಅಡೆತಡೆ ಮಾಡುವ ಯಾವುದೇ ಉದ್ದೇಶ ಇರಲಿಲ್ಲ ಎಂಬ ಕಾರಣಕ್ಕೆ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಲಾಗಿದೆ.

ಇದೇ ವೇಳೆ ಹಿರಿಯ ಅಧಿಕಾರಿಗಳಿಗೆ ಯಾವು ದೇ ಮಾಹಿತಿಯನ್ನು ನೀಡದೆ ಸುಮೋಟೋ ಪ್ರಕರಣ ದಾಖಲಿಸಿದ ಕದ್ರಿ ಪೊಲೀಸ್ ಇನ್ಸ್ ಪೆಕ್ಟರ್ ಸೋಮಶೇಖರ್‌ರವರನ್ನು ಕಡ್ಡಾಯ ರಜೆ ಯಲ್ಲಿ ಕಳುಹಿಸಿ ಎಸಿಪಿ ದರ್ಜೆಯ ಅಧಿಕಾರಿ ಯನ್ನು ವಿಚಾರಣೆಗೆ ನೇಮಕ ಮಾಡಲಾಗಿದೆ.

ಶರಣ್ ಮೇಲೆ ಪ್ರಕರಣ: ನಮಾಜ್ ವಿಡಿಯೊ ವೈರಲ್ ಆದ ಮೇಲೆ ಹೇಳಿಕೆ ನೀಡಿದ್ದ ವಿಶ್ವ ಹಿಂದೂ ಪರಿಷತ್ ವಿಭಾಗ ಸಹ ಸಂಚಾಲಕ ಶರಣ್ ಪಂಪ್‌ವೆಲ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮತ್ತೆ ಅದೇ ಜಾಗದಲ್ಲಿ ನಮಾಜ್ ನಡೆದರೆ ನೇರವಾಗಿ ಬಜರಂಗದಳ ಇದರ ವಿರುದ್ಧ ನೇರ ಕಾರ್ಯಾಚರಣೆ ನಡೆಸಿ ನಿಲ್ಲಿಸಲಿದೆ ಎಂಬುದಾಗಿ ಈ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ ಎಂಬ ಬರವಣಿಗೆಯೊಂದಿಗೆ ಶರಣ್ ಪೋಸ್ಟ್ ಮಾಡಿದ್ದು ಈ ಮೂಲಕ ಜನರಲ್ಲಿ ದ್ವೇಷ ಭಾವನೆ ಉಂಟಾಗುವಂತೆ ಹಾಗೂ ಕಾನೂನನ್ನು ಕೈಗೆತ್ತಿಕೊಳ್ಳುವ ಬೆದರಿಕೆ ಹಾಕಿ ಸಮಾಜದಲ್ಲಿ ಭಯವನ್ನುಂಟು ಮಾಡುವ ರೀತಿಯಲ್ಲಿ ಪೋಸ್ಟನ್ನು ಮಾಡಿದ್ದಾರೆ. ಈ ಬಗ್ಗೆ ಮಂಗಳೂರು ನಗರದಲ್ಲಿ ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟಾಗುವ ಸಾಧ್ಯತೆ ಇರುವುದರಿಂದ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಅನುಪಮ್ ಅಗರ್‌ವಾಲ್ ತಿಳಿಸಿದ್ದಾರೆ. ಜತೆಗೆ ವಿಹಿಂಪ ಮುಖಂಡ ಪ್ರದೀಪ್ ಸರಿಪಲ್ಲ ಮತ್ತು ಎಸ್ ಡಿಪಿಐ ಮುಖಂಡ ರಿಯಾಜ್ ಕಡಂಬು ವಿರುದ್ಧ 107 ಶಾಂತಿಭಂಗ ಪ್ರಕರಣ ದಾಖಲಿಸಲಾಗಿದೆ.

ಮೊದಲು ತನಿಖೆ ನಡೆಸಿ

ಮಂಗಳೂರು: ಇಲ್ಲಿಯ ಕಂಕನಾಡಿಯ ಮಸೀದಿ ಬಳಿ ರಸ್ತೆಯಲ್ಲಿ ನಮಾಜ್ ಮಾಡಿದ ಪ್ರಕರಣದಲ್ಲಿ

ಪೊಲೀಸರು ತನಿಖೆ ನಡೆಸದೇ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದ್ದಾರೆ ಎಂದು ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಡಾ. ವೈ. ಭರತ್ ಶೆಟ್ಟಿ ಆರೋಪಿಸಿ ದರು.ಸುದ್ದಿಗಾರರೊಂದಿಗೆ ಮಾತನಾಡಿ, ಪೊಲೀ ಸರ ಈ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲಾ ಗುವುದು. ವಿಧಾನ ಸಭೆ ಅಧಿವೇಶನದಲ್ಲಿಯೂ ವಿಷಯ ಪ್ರಸ್ತಾಪಿಸುವುದಾಗಿ ತಿಳಿಸಿದರು.

ಗುತ್ತಿಗೆದಾರರಿಗೆ ಆತ್ಮಹತ್ಯೆ ಭಾಗ್ಯ: ವಿಜಯೇಂದ್ರ

ಬೆಂಗಳೂರು: ಅಸಹಾಯಕ ಅಧಿಕಾರಿ ಹಾಗೂ ಗುತ್ತಿಗೆದಾರರಿಗೆ ಆತ್ಮಹತ್ಯೆ ಭಾಗ್ಯ ಕರುಣಿಸಲಾಗುತ್ತಿದೆ. ಬರಿದಾಗಿರುವ ಸರಕಾರಿ ಖಜಾನೆ ಗುತ್ತಿಗೆದಾರರ ಪಾಲಿಗೆ ಆತ್ಮಹತ್ಯೆಯ ಬಾವಿಯಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ



ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಮಾಡಿರುವ ಅವರು, ಕಾಂಗ್ರೆಸ್ ಸರಕಾರದ ಭ್ರಷ್ಟವ್ಯೂಹಕ್ಕೆ ಸಿಲುಕಿದ ಅಧಿಕಾರಿಯೊಬ್ಬರ ಆತ್ಮಹತ್ಯೆಯ ಕರಿನೆರಳು ಅಚ್ಚೊತ್ತಿರುವ ಬೆನ್ನಲೇ. ಬಾಕಿ ಬಿಲ್ ಪಾವತಿಯಾಗದೇ ಚನ್ನಗಿರಿ ತಾಲೂಕಿನ ಸಂತೇಬೆನ್ನೂರಿನ ಗುತ್ತಿಗೆದಾರ ಪಿ.ಎಸ್.ಗೌಡರ್ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿದೆ. ಈ ಸರಕಾರದಲ್ಲಿ ಏನಾಗುತ್ತಿದೆ ಎಂಬ ಆತಂಕ ಜನರಲ್ಲಿ ಮೂಡುತ್ತಿದೆ ಎಂದು ಕಿಡಿಕಾರಿದ್ದಾರೆ. ಭಾಗ್ಯಗಳ ಸರಕಾರ ಎಂದು ಬೊಬ್ಬೆ ಹೊಡೆಯುವ ಕಾಂಗ್ರೆಸ್ ಸರಕಾರದಲ್ಲಿ ಆಡಳಿತದಲ್ಲಿ ಅಮಾಯಕ ಹೆಣ್ಣು ಮಕ್ಕಳಿಗೆ- ಕೊಲೆ ಭಾಗ್ಯ, ಪ್ರಮಾಣಿಕ ಅಧಿಕಾರಿಗಳಿಗೆ- ವರ್ಗಾವಣೆ ಭಾಗ್ಯ, ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಷ್ಟೂ ಕಾಲ ರಾಜ್ಯದ ಜನತೆ ನಿತ್ಯ ದುರಂತ ಸುದ್ದಿಯನ್ನು ಕೇಳಬೇಕಿದೆ. ಇದು ಕರ್ನಾಟಕದ ಪರಮ ದೌರ್ಭಾಗ್ಯ ಎಂದರು.

ಸಮಾಚಾರ ಸಣ್ಣದಲ್ಲ

ಪ್ರಜ್ವಲ್ ರೇವಣ್ಣ ತಪ್ಪು ಮಾಡಿದ್ದರೆ ಶಿಕ್ಷೆ ಕೊಡಿ

ಹಾಸನ: ಪ್ರಜ್ವಲ್ ರೇವಣ್ಣ ತಪ್ಪು ಮಾಡಿದ್ದರೆ ಶಿಕ್ಷೆ ಕೊಡಿ ಎಂದು ಹೇಳಿದ್ದೇವೆ. ತನಿಖೆಯಿಂದ ಸಂಪೂರ್ಣ ಉತ್ತರ ಹೊರ ಬರಲಿ. ನಮ್ಮ ಪಕ್ಷ ನೂರಕ್ಕೆ

ನೂರು ಸಂತ್ರಸ್ತೆಯರ ಪರವಾಗಿ ಇರಲಿದೆ. ಎಸ್‌ಐಟಿ ತನಿಖೆಯಿಂದ ಸತ್ಯ ಹೊರ ಬರುವವರೆಗೂ ನಾವೇನೂ ಹೇಳಲು ಆಗಲ್ಲ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು, ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು ಎಂದು ಎಚ್.ಡಿ. ಕುಮಾರಸ್ವಾಮಿ ಮೊದಲೇ ಹೇಳಿದ್ದರು. ಪ್ರಜ್ವಲ್ ರೇವಣ್ಣ ಜತೆಗೆ ಪೆನ್‌ಡ್ರೈವ್ ಹಂಚಿದವರ ಬಂಧನವೂ ಆಗಬೇಕು ಎಂದು ಒತ್ತಾಯಿಸಿದರು.

ದುಷ್ಕರ್ಮಿಗಳಿಂದ ಮೂರ್ತಿ ವಿರೂಪ

ವಿಜಯನಗರ: ಆಂಜನೇಯ ಮೂರ್ತಿಯನ್ನು ವಿರೂಪಗೊಳಿಸಿ ಕಿಡಿಗೇಡಿಗಳು ವಿಕೃತಿ ಮೆರೆದಿದ್ದಾರೆ. ದುಷ್ಕರ್ಮಿಗಳ ಕೃತ್ಯಕ್ಕೆ ಆಂಜನೇಯ ಪ್ರತಿಮೆ ತುಂಡಾಗಿದೆ. ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸ ಹಂಪಿ ಗ್ರಾಮದಲ್ಲಿ ಘಟನೆ ನಡೆದಿದೆ. ಗುರುವಾರ ತಡರಾತ್ರಿ ಕಾರ್ಯಸಿದ್ಧಿ ಶ್ರೀಆಂಜನೇಯ ಸ್ವಾಮಿ ದೇಗುಲದ ಬೀಗ ಮುರಿದು, ಒಳ ನುಗ್ಗಿರುವ ದುಷ್ಟರು ಮೂರ್ತಿಯನ್ನು ಒಡೆದು ಹಾಕಿದ್ದಾರೆ. ಮುಂಜಾನೆ ಅರ್ಚಕರು ದೇವಸ್ಥಾನಕ್ಕೆ ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ. ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಪೊಲೀಸರು ಹಾಗೂ ಬೆರಳಚ್ಚು ವಿಭಾಗ ತಜ್ಞರು, ಶ್ವಾನದಳದಿಂದ ಪರಿಶೀಲನೆ ನಡೆಸಲಾಗುತ್ತಿದೆ. ಹೊಸಪೇಟೆ ಡಿವೈಎಸ್ಪಿ ಶರಣಬಸವೇಶ್ವರ, ಹಂಪಿ ಪ್ರವಾಸಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಹಲವು ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ಪ್ರಕರಣ ಸಂಬಂಧ ಹಂಪಿ ಪ್ರವಾಸಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಚಿವ ಮಲ್ಲಿಕಾರ್ಜುನ್ ಆಸ್ಪತ್ರೆಗೆ ದಾಖಲಾಗಿಲ್ಲ

ದಾವಣಗೆರೆ: ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಸುದ್ದಿಯಾದ

ಬೆನ್ನಲ್ಲೇ ಅವರ ಪತ್ನಿ, ಎಸ್ ಎಸ್ ಕೇರ್‌ನ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮಾಧ್ಯಮ ಹೇಳಿಕೆ ನೀಡಿದ್ದು ಇದು ಸತ್ಯಕ್ಕೆ ದೂರವಾಗಿದೆ ಎಂದು ಹೇಳಿದ್ದಾರೆ. ಶುಕ್ರವಾರ ಮಧ್ಯಾಹ್ನ ಕೆಲವು ಮಾಧ್ಯಮಗಳಲ್ಲಿ ಮಲ್ಲಿಕಾರ್ಜುನ್ ರವರು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಸುದ್ದಿ ಪ್ರಸಾರವಾಗಿತ್ತು. ಸಚಿವರು ಆರೋಗ್ಯವಾಗಿದ್ದು ಆ ರೀತಿಯ ಯಾವುದೇ ಘಟನೆ ನಡೆದಿಲ್ಲ. ಪಕ್ಷದ ಮುಖಂಡರು, ಕಾರ್ಯಕರ್ತರು, ಎಸ್.ಎಸ್.ಎಂ ಅಭಿಮಾನಿಗಳು ಹಾಗೂ ಸಾರ್ವಜನಿಕರು ಯಾವುದೇ ರೀತಿಯಲ್ಲಿ ಆತಂಕಕ್ಕೆ ಒಳಗಾಗಬಾರದು ಎಂದು ಡಾ. ಪ್ರಭಾ ಮನವಿ ಮಾಡಿದ್ದಾರೆ.

ಕೆರೆಯಲ್ಲಿ ಮುಳುಗಿ 3 ಮಕ್ಕಳು ಸಾವು

ಹಾಸನ : ಕೆರೆಯಲ್ಲಿ ಮುಳುಗಿ ಮೂವರು ಮಕ್ಕಳು ಧಾರುಣ ರೀತಿಯಲ್ಲಿ ಸಾವಿಗೀಡಾದ ಘಟನೆ

ಬೇಲೂರು ತಾಲೂಕಿನ ನರಸೀಪುರ ಗ್ರಾಮದಲ್ಲಿ ನಡೆದಿದೆ. ದೀಕ್ಷಿತ್ (10), ನಿತ್ಯಶ್ರೀ (12) ಕುಸುಮ (6) ಮೃತ ದುರ್ದೈವಿಗಳು. ಜಾನುವಾರುಗಳನ್ನು ಕೆರೆಯ ಬಳಿ ಕಟ್ಟಿ ಆಟವಾಡುತ್ತಿದ್ದ ಮೂರು ಮಕ್ಕಳಲ್ಲಿ ಒಬ್ಬ ಬಾಲಕಿ ಆಕಸ್ಮಿಕವಾಗಿ ಮುಳುಗಿದ್ದು, ಆಕೆಯನ್ನು ರಕ್ಷಿಸುವ ಪ್ರಯತ್ನದಲ್ಲಿ ಮಿಕ್ಕಿಬ್ಬರೂ ಮುಳುಗಿದ್ದಾರೆ. ಸ್ಥಳೀಯರು ಶವಗಳನ್ನು ಹೊರಕ್ಕೆ ತೆಗೆದಿದ್ದಾರೆ. ಸ್ಥಳಕ್ಕೆ ಹಳೇಬೀಡು ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಸಿದ್ದರಾಮಯ್ಯ ನಿವಾಸದಲ್ಲಿ ನಡೆದ ಬ್ರೇಕ್‌ಫಾಸ್ಟ್ ಸಭೆ | ಮುಂದೇನು ಮಾಡಬೇಕು ಎನ್ನುವ ಬಗ್ಗೆ ಸಭೆ ನಡೆಸಿದ ನಾಯಕರು | ಸಿಎಂ, ಡಿಸಿಎಂಗೆ ಇಡೀ ಪ್ರಕರಣವನ್ನು ಬ್ರೀಫ್ ಮಾಡಿದ ಪರಮೇಶ್ವರ್

ಆತ್ಮಹತ್ಯೆ ಪ್ರಕರಣ; ಸಿಎಂ, ಡಿಸಿಎಂ ಸಭೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾಲ್ಮೀಕಿ ನಿಗಮ ಮಂಡಳಿ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣ ರಾಜ್ಯ ಸರಕಾರಕ್ಕೆ ನುಂಗಲಾರದ ತುತ್ತಾಗಿದ್ದು, ಮುಜುಗರದಿಂದ ತಪ್ಪಿಸಿಕೊಳ್ಳಲು ಮುಂದೇನು ಮಾಡಬೇಕು ಎನ್ನುವ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುದೀರ್ಘ ಚರ್ಚೆ ನಡೆಸಿದ್ದಾರೆ.

ಶುಕ್ರವಾರ ಬೆಳಗ್ಗೆ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ನಡೆದ ಬ್ರೇಕ್‌ಫಾಸ್ಟ್ ಸಭೆಯಲ್ಲಿ, ಸಿಎಂ, ಡಿಸಿಎಂ ಅವರೊಂದಿಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಭಾಗವಹಿಸಿದ್ದರು. ಆರಂಭಿಕ ಹಂತದ ತನಿಖೆಯನ್ನು ಸಿಐಡಿ ಮಾಡಿರುವುದರಿಂದ, ಪ್ರಕರಣದಲ್ಲಿ ಏನೆಲ್ಲ ನಡೆದಿದೆ ಎನ್ನುವ ಬಗ್ಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

ಅಧಿಕಾರಿಯ ಡೆತ್‌ನೋಟ್‌ನಲ್ಲಿ ಸಚಿವ ನಾಗೇಂದ್ರ ಅವರ ಹೆಸರನ್ನು ಬರೆದಿಟ್ಟಿರುವುದರಿಂದ ಪ್ರಕರಣ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಆದ್ದರಿಂದ ಈ ಪ್ರಕರಣದಲ್ಲಿ ಯಾವ ರೀತಿಯ ತೀರ್ಮಾನ ಕೈಗೊಳ್ಳಬೇಕು? ಪ್ರತಿಪಕ್ಷಗಳು ಆಗ್ರಹಿಸುತ್ತಿರುವ ಸಚಿವ ನಾಗೇಂದ್ರ ಅವರ ರಾಜೀನಾಮೆ ಪಡೆಯಬೇಕೇ ಎನ್ನುವ ಬಗ್ಗೆ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಇದರೊಂದಿಗೆ ರಾಜ್ಯದಲ್ಲಿ ಭಾರಿ ಸಂಚಲವನ್ನು ಮೂಡಿಸಿದ್ದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಯಾವ ರೀತಿಯಲ್ಲಿ ಮುನ್ನಡೆಯಬೇಕು ಎನ್ನುವ ಬಗ್ಗೆಯೂ ಇದೇ ವೇಳೆ ಚರ್ಚಿಸಿದ್ದಾರೆ ಎನ್ನಲಾಗಿದೆ. ಹಗರಣದ ಆರೋಪ ವಿಷಯಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಚಿವ ನಾಗೇಂದ್ರ, ಅವರು ಚರ್ಚೆ ನಡೆಸಿದ್ದು, ಈ ಪ್ರಕರಣದಲ್ಲಿ ತನ್ನ ಪಾತ್ರವಿಲ್ಲವೆನ್ನುವ ಸ್ಪಷ್ಟನೆ ನೀಡಲು ಪ್ರಯತ್ನಿಸಿದ್ದಾರೆ. ಆದರೆ ಪ್ರತಿಪಕ್ಷಗಳು ಇದನ್ನು ಮುಂದಿಟ್ಟುಕೊಂಡು ಜನರ ಮುಂದೆ ಹೋದರೆ, ಪಕ್ಷಕ್ಕೆ ಡ್ಯಾಮೇಜ್ ಆಗುವ ಸಾಧ್ಯತೆಯಿರುವುದರಿಂದ ರಾಜೀನಾಮೆ ನೀಡಬೇಕಾದ ಪರಿಸ್ಥಿತಿ ಬಂದರೆ ಅದಕ್ಕೂ ಸಜ್ಜಾಗಿರಿ ಎನ್ನುವ ಸಂದೇಶವನ್ನು ನಾಯಕರು ಸಚಿವರಿಗೆ ರವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



> ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ಆದರೆ, ಈ ಸಂದರ್ಭದಲ್ಲಿ ಸಚಿವರ ತಲೆದಂಡ ಮಾಡಬೇಕು ಎಂಬ ಆಗ್ರಹಕ್ಕೆ ಪುರಾವೆಗಳು ಬೇಕಲ್ಲವೇ? ಡೆತ್ ನೋಟ್‌ನಲ್ಲಿ ಸಚಿವರು ಮೌಖಿಕ ಆದೇಶ ಕೊಟ್ಟಿದ್ದಾರೆ ಎಂದು ಉಲ್ಲೇಖ ಮಾಡಲಾಗಿದೆ. ನಾನು ಡೆತ್ ನೋಟ್ ನೋಡಿಲ್ಲ, ಅದನ್ನು ಪೊಲೀಸರು ಪರಿಶೀಲನೆ ಮಾಡ್ತಾರೆ. ಡೆತ್ ನೋಟ್ ಸತ್ಯಾಸತ್ಯತೆ ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.
>
> **- ಡಾ.ಜಿ. ಪರಮೇಶ್ವರ್, ಗೃಹ ಸಚಿವ**

ನಾಗೇಂದ್ರ ರಾಜೀನಾಮೆ ಅನಿವಾರ್ಯ

ಹಗರಣದ ಆರೋಪ ಸಂಬಂಧ ಸಿಐಡಿ ವರದಿ ಬಗ್ಗೆ ಸಿದ್ದರಾಮಯ್ಯ ಅವರೊಂದಿಗೆ ಪರಮೇಶ್ವರ್ ಚರ್ಚಿಸಿದ್ದು, ಸಿಐಡಿ ಸಲ್ಲಿಸಲಿರುವ ವರದಿಯಲ್ಲಿ ನಾಗೇಂದ್ರ ಹೆಸರಿದ್ದರೆ, ರಾಜೀನಾಮೆ ನೀಡುವುದು ಅನಿವಾರ್ಯವಾಗುತ್ತದೆ. ವರದಿಯಲ್ಲಿ ಹೆಸರಿದ್ದರೂ, ರಾಜೀನಾಮೆ ಪಡೆಯದಿದ್ದರೆ, ರಾಜ್ಯದ ಜನರಿಗೆ ಕೆಟ್ಟ ಸಂದೇಶವನ್ನು ರವಾನೆ ಮಾಡಿದಂತೆ ಆಗುತ್ತದೆ. ಇದರೊಂದಿಗೆ ಪ್ರತಿಪಕ್ಷಗಳಿಗೆ ಅನವಶ್ಯಕವಾಗಿ ಆಹಾರವಾಗುತ್ತೇವೆ ಎನ್ನುವ ಮಾತುಗಳನ್ನು ನಾಯಕರಿದ್ದಾರೆ ಎನ್ನಲಾಗಿದೆ. ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಲ್ಮೀಕಿ ನಿಗಮದ ಎಂಡಿ ಜೆ.ಜೆ. ಪದ್ಮನಾಭ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಅವರನ್ನು ರಾಜ್ಯ ಸರಕಾರ ಅಮಾನತುಗೊಳಿಸಿದೆ. ಸರಕಾರದ ಪೂರ್ವ ಅನುಮತಿ ಪಡೆದು ಬ್ಯಾಂಕ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ಮಾಡಲಾಗಿದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬ್ಯಾಂಕ್ ಎಂಡಿ ಮತ್ತು ಸಿಇಒ ಹಾಗೂ ಎಲ್ಲಾ ನಿರ್ದೇಶಕರ ಮೇಲೆ ಎಫ್‌ಐಆರ್ ದಾಖಲಾಗಿದೆ. 6 ಜನ ಬ್ಯಾಂಕ್ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಾಗಿದ್ದು, ಇದೀಗ ಸಚಿವರ ತಲೆದಂಡದ ವಿಚಾರದ ಕುರಿತು ಚಿಂತನೆ ನಡೆಸಲಾಗಿದೆ.

ಶಾಮನೂರು ಶಿವಶಂಕರಪ್ಪ ಆರೋಗ್ಯದಲ್ಲಿ ಏರುಪೇರು

ದಾವಣಗೆರೆ : ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಹೃದಯ ಸಂಬಂಧಿ ಹಾಗೂ ಕಫದ ತೊಂದರೆ ಕಾಣಿಸಿಕೊಂಡ ಹಿನ್ನಲೆಯಲ್ಲಿ ಅವರನ್ನು ದಾವಣಗೆರೆ ಎಸ್.ಎಸ್.

ಹೈಟೆಕ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕೆಲ ಹೊತ್ತು ಶಾಮನೂರು ಶಿವ ಶಂಕರಪ್ಪ ಅವರಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡ ಲಾಗಿದೆ. ಎಸ್.ಎಸ್ ಹೈಟೆಕ್ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆದು ಕೊಂಡು ಕಾರಿನಲ್ಲೇ ದಾವಣಗೆರೆಯಿಂದ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದ್ದಾರೆ ಎಂದು ತಿಳಿದುಬಂದಿದೆ. ಉಸಿರಾಟದ ಸಮಸ್ಯೆ ಹಿನ್ನೆಲೆಯಲ್ಲಿ ವೈದ್ಯರು ಶಾಮನೂರು ಅವರಿಗೆ ಫೇಸ್ ಮೇಕರ್ ಅಳವಡಿಕೆ ಮಾಡಿದ್ದಾರೆ. ಹೃದಯ ಸಂಬಂಧಿ ಹಾಗೂ ಕಫದ ತೊಂದರೆ ಕಾಣಿಸಿಕೊಂಡ ಹಿನ್ನಲೆಯಲ್ಲಿ ಆಸ್ಪತ್ರೆಗೆ ಆರೋಗ್ಯದಲ್ಲಿ ದಿಢೀರ್ ಏರುಪೇರು ಕಾಣಿಸಿಕೊಂಡ ಹಿನ್ನಲೆಯಲ್ಲಿ ಅವರನ್ನು ದಾವಣಗೆರೆ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು, ಇದರಿಂದ ಗಾಬರಿಗೊಂಡ ಅಭಿಮಾನಿಗಳು ಆಸ್ಪತ್ರೆ ಮುಂದೆ ಜಮಾವಣೆಗೊಂಡಿದ್ದರು.

ಹಗರಣ: ಸಿಬಿಐ ತನಿಖೆಗೆ ಆಗ್ರಹ

ಚಾಮರಾಜನಗರ: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ರಕ್ಷಕರು, ಸಂವಿಧಾನ ರಕ್ಷಕರು ಎಂದು ಹೇಳಿಕೊಳ್ಳುತ್ತಾ ದಲಿತರ ಮತಗಳಿಂದ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ದಲಿತ ವಿರೋಧಿಯಾಗಿ ನಡೆದುಕೊಳ್ಳುತ್ತಾ ಬಂದಿದೆ ಎಂದು ಕಿಡಿಕಾರಿದರು.

ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಯಲಿ

ಹುಬ್ಬಳ್ಳಿ: ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಯಬೇಕು. ಈ ಮೂಲಕ ಸಂತ್ರಸ್ತರಿಗೆ ನ್ಯಾಯ ಸಿಗಬೇಕಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ತನ್ನದೇ ಆದ ಪ್ರಕ್ರಿಯೆ ನಡೆಸಲಿದೆ. ಕಾನೂನಾತ್ಮಕವಾಗಿ ಪ್ರಜ್ವಲ್ ರೇವಣ್ಣ ಶರಣಾಗಿದ್ದಾರೆ. ಎಸ್‌ಐಟಿಯವರು ಕಟಿಬದ್ಧವಾಗಿ ತನಿಖೆ ಮಾಡಬೇಕು. ಪ್ರಕರಣದಲ್ಲಿನ ಸಂತ್ರಸ್ತರಿಗೆ ನ್ಯಾಯ ಸಿಗಬೇಕು. ಈ ನಿಟ್ಟಿನಲ್ಲಿಯೇ ತನಿಖೆ ನಡೆಯಬೇಕೆಂಬುದು ರಾಜ್ಯದ ಜನರ ಇಚ್ಛೆ ಎಂದರು. ಪ್ರಜ್ವಲ್ ಪ್ರಕರಣ ರಾಜಕೀಯಪ್ರೇರಿತ ಎಂಬ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿ, ಪ್ರಕರಣ ಯಾವ ರೀತಿ ಬೆಳಕಿಗೆ ಬಂದಿತು. ಯಾರು ಪೆನ್‌ಡ್ರೈವ್ ಹಂಚಿಕೆ ಮಾಡಿದರು, ಯಾಕೆ ಮಾಡಿದರು, ಇವೆಲ್ಲವನ್ನೂ ನೋಡಿದಾಗ ಇದರಲ್ಲಿ ರಾಜಕಾರಣ ಬೆರೆತಿರುವುದು ಸ್ಪಷ್ಟ. ಪ್ರಕರಣದ ಸಂತ್ರಸ್ತರಿಗೆ ನ್ಯಾಯ ಕೊಡುವುದು ಒಂದು ಭಾಗ. ಇಂತಹ ವಿಚಾರಗಳನ್ನು ಪ್ರಚಾರ ಮಾಡುವುದು ಕೂಡ ಕಾನೂನಿಗೆ ವಿರುದ್ಧ. ಆ ಮಗ್ಗುಲಿನಲ್ಲಿಯೂ ಎಸ್‌ಐಟಿ ತನಿಖೆ ಮಾಡಬೇಕು ಎಂದು ಹೇಳಿದರು.

> ಅಧಿಕಾರಿ ಆತ್ಮಹತ್ಯೆ ಪ್ರಕರಣದಲ್ಲಿ ಸರಕಾರದ ನೈತಿಕತೆಯ ಪ್ರಶ್ನೆ ಇದೆ. ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ನೈತಿಕತೆ ಬಗ್ಗೆ ಮಾತನಾಡಿದ ನಾಯಕರೇ ಈಗ ಸಿಎಂ, ಡಿಸಿಎಂ ಆಗಿದ್ದಾರೆ. ಇವತ್ತು ಅವರ ನೈತಿಕತೆ ಮತ್ತು ಸರಕಾರದ ಪ್ರಾಮಾಣಿಕತೆಯ ಪ್ರಶ್ನೆ ಇದೆ. ಇವರು ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳುತ್ತಾರೋ ಅಥವಾ ಮಂತ್ರಿಯನ್ನು ಉಳಿಸಿಕೊಳ್ಳುತ್ತಾರೋ ಎನ್ನುವುದು ಸರಕಾರದ ನಿರ್ಣಯದ ಮೇಲೆ ನಿಂತಿದೆ.
>
> **-ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ**

ಡಿಕೆಶಿ ವಿರುದ್ಧ ಶಾಸಕ ಯತ್ನಾಳ್ ಆರೋಪ

ಒಕ್ಕಲಿಗರ ನಾಯಕನಾಗಲು ಎಚ್‌ಡಿ ಕುಟುಂಬ ಟಾರ್ಗೆಟ್

ಕಲಬುರಗಿ: ಡಿ.ಕೆ ಶಿವಕುಮಾರ್ ಒಕ್ಕಲಿಗ ನಾಯಕನಾಗಲು ದೇವೇಗೌಡರ ಕುಟುಂಬವನ್ನು ಟಾರ್ಗೆಟ್ ಮಾಡಿದ್ದಾರೆ. ಇದೊಂದು ಹಲ್ಕಾ ಕೆಲಸವಾಗಿದೆ ಎಂದು ಡಿಸಿಎಂ ಶಿವಕು

ಮಾರ್ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ದೇಶದ ಹಿರಿಯ ನಾಯಕರ ಕುಟುಂಬದ ವಿರುದ್ಧ ಸಂಚು ನಡೆಸಿರುವುದು ಹಲ್ಕಾ ಕೆಲಸವಾಗಿದೆ. ಇದು ಸರಿಯಲ್ಲ. ಇನ್ನೂ, ಪ್ರಜ್ವಲ್ ರೇವಣ್ಣ ಮಾಡಿರುವ ಕೆಲಸ ಅಕ್ಷಮ್ಯ ಅಪರಾಧವಾಗಿದೆ. ಪ್ರಜ್ಬಲ್ ಮಾಡಿದ್ದನ್ನ ಯಾರು ಒಪ್ಪೊದಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು. ಈ ಪ್ರಕರಣದಲ್ಲಿರೋ ಎಲ್ಲರನ್ನು ಬಂಧಿಸಬೇಕು. ಸಿಡಿ ಬಯಲಿಗೆ ತಂದವರು ಎಲ್ಲಿದ್ದಾರೆ.? ಅವರ ಡ್ರೈವರ್ ಎಲ್ಲಿದ್ದಾನೆ.? ಎಲ್ಲವೂ ತನಿಖೆಯಾಗಬೇಕು ಎಂದ ಶಾಸಕ ಯತ್ನಾಳ್ ತಾಕಿತ್ತು ಮಾಡಿದರು.

ಲೋಕಸಭೆ ಫಲಿತಾಂಶ ಬಳಿಕ ರಾಜ್ಯ ಸರಕಾರ ಪತನವಾಗುತ್ತೆ. ಕಾಂಗ್ರೆಸ್ ನವರು ಬಹಳ ಜನ ಸಂಪರ್ಕದಲ್ಲಿದ್ದಾರೆ. ಕರ್ನಾಟಕದಲ್ಲಿ ಏಕನಾಥ ಸಿಂಧೆ, ಅಜಿತ್ ಪವಾರ್ ಇಬ್ಬರು ಆಪರೇಷನ್ ಮಾಡಲು ರೆಡಿಯಾಗಿದ್ದಾರೆ ಎಂದು ಶಾಸಕ ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ. ಕಾಂಗ್ರೆಸ್ ನ ಇಬ್ಬರು ಶಾಸಕರು ಈಗಾಗಲೇ ಬಿಜೆಪಿ ಸೇರಲು ತಯಾರಿದ್ದಾರೆ ಎಂದು ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ.

ಕಾಂಗ್ರೆಸ್‌ಗೆ ಕರ್ನಾಟಕ ಎಟಿಎಂ ಕೇಂದ್ರವಾಗಿದೆ

ಕಾಂಗ್ರೆಸ್ ಹೈಕಮಾಂಡ್ ಗೆ ಕರ್ನಾಟಕ ಎಟಿಎಂ ಕೇಂದ್ರವಾಗಿದೆ. ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದ 187 ಕೋಟಿ ರು.ಗಳ ಹಗರಣದಲ್ಲಿ ದಿಲ್ಲಿಯಲ್ಲಿರುವ ಕಾಂಗ್ರೆಸ್ ನಾಯಕರ ಕೈವಾಡವಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಲೂಟಿ ಹೊಡೆಯುತ್ತಿದೆ. ವಾಲ್ಮೀಕಿ ನಿಗಮದ ಅಧಿಕಾರಿ ಆತ್ಮಹತ್ಯೆಯೇ ಇದಕ್ಕೆ ತಾಜಾ ಉದಾಹರಣೆಯಾಗಿದೆ. ಕೇವಲ ಒಬ್ಬ ಸಚಿವರಿಂದ ಇಷ್ಟು ದೊಡ್ಡ ಮೊತ್ತದ ಅವ್ಯವಹಾರ ಮಾಡಲು ಸಾಧ್ಯವಿಲ್ಲ. ಇದು ಕೇವಲ ಒರ್ವ ಮಂತ್ರಿಗೆ ಸೀಮಿತವಾಗಿಲ್ಲ. ಇದರ ವ್ಯಾಪ್ತಿ ಬಹಳ ದೊಡ್ಡದಿದೆ ಎಂದು ಯತ್ನಾಳ್ ಪಟ್ಟುಹಿಡಿದ್ದಾರೆ.

ಮೃತನ ಕುಟುಂಬಕ್ಕೆ3 ಲಕ್ಷ ರು. ಧನ ಸಹಾಯ

ಚಂದ್ರಶೇಖರನ್ ಕುಟುಂಬಕ್ಕೆ ಕೆ.ಎಸ್.ಈಶ್ವರಪ್ಪ ಸಾಂತ್ವನ

ಶಿವಮೊಗ್ಗ: ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾದ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಅವರ ನಿವಾಸಕ್ಕೆ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ

ಭೇಟಿ ನೀಡಿ, ಮೃತ ನೌಕರನ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, 3 ಲಕ್ಷ ರು. ವೈಯಕ್ತಿಕ ಧನ ಸಹಾಯ ಮಾಡಿದರು.

ಶಿವಮೊಗ್ಗದ ಕೆಂಚಪ್ಪ ಬಡಾವಣೆಯಲ್ಲಿರುವ ಚಂದ್ರಶೇಖರನ್ ಮನೆಗೆ ಶುಕ್ರವಾರ ಈಶ್ವರಪ್ಪ ಭೇಟಿ ನೀಡಿದರು. ಚಂದ್ರಶೇಖರನ್ ಪತ್ನಿ ಕವಿತಾ ಹಾಗೂ ಮಕ್ಕಳಿಗೆ ಸಾಂತ್ವನ ಹೇಳಿದರು. ನಿಮ್ಮೊಂದಿಗೆ ನಾವಿದ್ದೇವೆಂದು ಧೈರ್ಯ ತುಂಬಿದರು. ಬಳಿಕ ಮಾತನಾಡಿದ ಈಶ್ವರಪ್ಪ, ಪ್ರಾಮಾ ಣಿಕ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ನೋವು, ಮತ್ತೊಂದು ಸಂತೋಷ. ಪ್ರಾಮಾಣಿಕ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡನಲ್ಲ ಅನ್ನೋದು ನೋವು. ಸಂತೋಷ ಯಾಕೆ ಅಂದ್ರೆ, ದೊಡ್ಡ ಹುದ್ದೆ ಇದ್ದರೂ ಅವನ ಪತ್ನಿ ಒಡವೆ ಅಡವಿಟ್ಟು 20 ಲಕ್ಷ ಸಾಲ ತೆಗೆದುಕೊಂಡಿದ್ದಾರೆ. ಓದುತ್ತಿರುವ ಮಕ್ಕಳಿಗೆ ಓದಿಸಲು ನೆರವು ಕೊಡಬೇಕು. ಕುಟುಂಬದವರಿಗೆ ನೌಕರಿ ಕೊಡಬೇಕು. ಕುಟುಂಬಕ್ಕೆ 50 ಲಕ್ಷ ರು. ಪರಿಹಾರ ತಕ್ಷಣ ಕೊಡಬೇಕು. ಈ ಮನೆ ನಮಗೆ ಬಹಳ ಮೊದಲಿನಿಂದಲೂ ಹತ್ತಿರದ್ದು. ಇದಕ್ಕೆ ರಾಜಕಾರಣ ಬೆರೆಸಲು ಇಷ್ಟಪಡಲ್ಲ. ಚುನಾವಣಾ ನೀತಿ ಸಂಹಿತೆ ಮುಗಿದ ನಂತರ 50 ಲಕ್ಷ ರು. ಪರಿಹಾರ ಕೊಡಬೇಕು. ಸರಕಾರ ಪರಿಹಾರ ಕೊಡದಿದ್ದರೆ ಶಿವಮೊಗ್ಗ ನಗರದಲ್ಲಿ ಹಣ ಸಂಗ್ರಹ ಮಾಡಿ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

> ಪರಮೇಶ್ವರ್ ಅವರು ನನ್ನ ಕೇಸನ್ನು ಹೋಲಿಕೆ ಮಾಡಿದ್ದಾರೆ. ಈಶ್ವರಪ್ಪ ಕೇಸ್ ಬೇರೆ ಈ ಕೇಸ್ ಬೇರೆ ಅಂದಿದ್ದಾರೆ. ಅದು ಹೇಗೆ ಬೇರೆ ಬೇರೆ ಆಗುತ್ತದೆ? ಮಂತ್ರಿಗಳ ಮೌಖಿಕ ಸೂಚನೆ ಮೇರೆಗೆ ಹಣ ವರ್ಗಾವಣೆ ಅಂತಾ ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ. ಬಿಜೆಪಿ ಬಗ್ಗೆ ನಿಜಕ್ಕೂ ನನಗೆ ಹೆಮ್ಮೆ ಎನಿಸುತ್ತದೆ. ನನ್ನ ಹೆಸರು ಬರುತ್ತಿದ್ದ ಹಾಗೆ ರಾಜೀನಾಮೆ ಕೊಟ್ಟೆ. ಸಂಬಂಧಪಟ್ಟ ಸಚಿವ ರಾಜೀನಾಮೆ ಕೊಡುವ ವರೆಗೆ ಈ ರಾಜ್ಯದ ಜನ ಹೋರಾಟ ಮಾಡುತ್ತಾರೆ.
>
> **-ಕೆ.ಎಸ್.ಈಶ್ವರಪ್ಪ, ಮಾಜಿ ಸಚಿವ**

ಮೃತ ಅಧಿಕಾರಿಯ ಕುಟುಂಬಕ್ಕೆ ನ್ಯಾಯ ನೀಡಲು ಬಿಜೆಪಿ ಕ್ರಮ: ಅಶೋಕ್

ಸರಕಾರದ ಮೊದಲ ವಿಕೆಟ್ ಪತನ ನಿಶ್ಚಿತ

ಶಿವಮೊಗ್ಗ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ.ಚಂದ್ರಶೇಖರನ್ ಅವರ ಕುಟುಂಬಕ್ಕೆ ನ್ಯಾಯ ಕೊಡಿಸಲು ಬಿಜೆಪಿಯಿಂದ ಎಲ್ಲ ಪ್ರಯತ್ನ ಮಾಡಲಾಗುತ್ತಿದೆ.

ಸಚಿವರು ರಾಜೀನಾಮೆ ನೀಡಿ ನ್ಯಾಯ ಸಿಗುವವರೆಗೂ ಹೋರಾಟ ಮಾಡಲಾಗುವುದು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ತಿಳಿಸಿದರು.

ಮೃತ ಪಿ.ಚಂದ್ರಶೇಖರನ್ ಅವರ ಕುಟುಂಬದವರನ್ನು ಆರ್.ಅಶೋಕ ಭೇಟಿಯಾಗಿ ಸಾಂತ್ವನ ಹೇಳಿದ ಅವರು, ಸರಕಾರದ ಮೊದಲ ವಿಕೆಟ್ ಪತನ ಖಚಿತ ಎಂದು ಭವಿಷ್ಯ ನುಡಿದರು.

ಕಾಂಗ್ರೆಸ್ ಸರಕಾರದಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೆ ಉಳಿಗಾಲವಿಲ್ಲ, ಆತ್ಮಹತ್ಯೆ ಮಾಡಿಕೊಂಡ ಚಂದ್ರಶೇಖರನ್ ಅವರ ಕುಟುಂಬ ಬೀದಿಗೆ ಬಂದಿದೆ. ಇಲ್ಲಿಗೆ ಬಂದ ಸಚಿವರು ಯಾವುದೇ ವ್ಯವಸ್ಥೆ ಮಾಡಿಲ್ಲ. ಯಾವುದೇ ಹಿರಿಯ ಅಧಿಕಾರಿಗಳು, ಗೃಹ ಸಚಿವರು ನೆರವು ನೀಡಿಲ್ಲ. 1 ಕೋಟಿ ರು. ಗೂ ಅಧಿಕ ಅಕ್ರಮ ನಡೆದಾಗ ಅದು ಸಿಬಿಐ ತನಿಖೆಗೆ ಒಳಪಡುತ್ತದೆ. ಬ್ಯಾಂಕ್‌ನವರು ಸಿಬಿಐಗೆ ವಹಿಸಿ ಎಂದು ಮನವಿ ಮಾಡಿದ್ದಾರೆ. ಇದು ಸಿಬಿಐಗೆ ಹೋಗುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಯದಿಂದಾಗಿ ನಿರಂತರ ಸಭೆಗಳನ್ನು ನಡೆಸುತ್ತಿದ್ದಾರೆ. ಸಚಿವರು ಹಾಗೂ ಮುಖ್ಯಮಂತ್ರಿಯ ಬೆಂಬಲವಿಲ್ಲದೆ ಇಂತಹ ಅವ್ಯವಹಾರ ನಡೆಯಲು ಸಾಧ್ಯವಿಲ್ಲ ಎಂದರು.

ಸಿಐಡಿ ತನಿಖೆ ಎನ್ನುವುದು ಕಾಟಾಚಾರದ ತನಿಖೆ. ಇಂತಹ ತನಿಖೆ ಮಾಡಲು ಕುಟುಂಬದವರು ಅಥವಾ ವಿರೋಧ ಪಕ್ಷದವರು ಕೇಳಬೇಕು. ಆದರೆ ಯಾರೂ ಕೇಳದೆ ಸರಕಾರವೇ ಪ್ರಕರಣ ಮುಚ್ಚಿಹಾಕಲು ತನಿಖೆ ಮಾಡಿಸುತ್ತಿದೆ. ದಲಿತರ 187 ಕೋಟಿ ರು. ಹಣ ಗುಳುಂ ಆದರೂ ಒಬ್ಬರನ್ನೂ ಬಂಧಿಸಿಲ್ಲ. ಅದೇ ಸಣ್ಣ ವಿಚಾರಗಳಿಗೆ ಮನೆಗೆ ಹೋಗಿ ಬಂಧಿಸುತ್ತಾರೆ. ಆರೋಪಿಗಳನ್ನು ಬಂಧಿಸಿದರೆ ಮುಖ್ಯಮಂತ್ರಿ ಮೇಲೆಯೇ ಆರೋಪ ಬರುತ್ತದೆ ಎಂಬ ಭಯವಿದೆ. ಅದಕ್ಕಾಗಿ ಸರಿಯಾಗಿ ತನಿಖೆ ಮಾಡಿಸುತ್ತಿಲ್ಲ ಎಂದು ದೂರಿದರು.

ಗೃಹ ಸಚಿವರಿಗೆ ಹಿಡಿತವಿಲ್ಲ: ಡಾ.ಜಿ.ಪರಮೇಶ್ವರ್ ಅವರಿಗೆ ಇಲಾಖೆಯಲ್ಲಿ ಆಸಕ್ತಿಯೂ ಇಲ್ಲ, ಹಿಡಿತವೂ ಇಲ್ಲ. ಗೃಹ ಇಲಾಖೆಯನ್ನು ಸಿಎಂ, ಡಿಸಿಎಂ ಮತ್ತು ಆಯಾ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ನಿರ್ವಹಣೆ ಮಾಡುತ್ತಿದ್ದಾರೆ. ಸರಕಾರಕ್ಕೆ ಮಾನ ಮರ್ಯಾದೆ ಉಳಿಯಬೇಕೆಂದರೆ ಅವರಾಗಿಯೇ ಸಿಬಿಐ ತನಿಖೆಗೆ ವಹಿಸುವುದು ಉತ್ತಮ ಎಂದರು.

- ಮೃತ ಪಿ.ಚಂದ್ರಶೇಖರನ್ ಅವರ ಕುಟುಂಬದವರನ್ನು ಆರ್.ಅಶೋಕ ಭೇಟಿಯಾಗಿ ಸಾಂತ್ವನ
- ಸಚಿವರು ರಾಜೀನಾಮೆ ನೀಡಿ ನ್ಯಾಯ ಸಿಗುವವರೆಗೂ ಹೋರಾಟ
- ಕಾಂಗ್ರೆಸ್ ಸರಕಾರದಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೆ ಉಳಿಗಾಲವಿಲ್ಲ

ಪ್ರಿಯಾಂಕ್ ಖರ್ಗೆ ಸಂಪುಟದಿಂದ ಕೈ ಬಿಡಿ

ಕೆಆರ್‌ಐಡಿಎಲ್ ಗುತ್ತಿಗೆದಾರ ಪಿ.ಸಿ.ಗೌಡರ್ ಅವರ ಆತ್ಮಹತ್ಯೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸಚಿವ ಪ್ರಿಯಾಂಕ್ ಖರ್ಗೆ ಈಗ ಉತ್ತರ ಹೇಳಬೇಕು. ಕೂಡಲೇ ಖರ್ಗೆ ಅವರನ್ನು ಸಂಪುಟದಿಂದ ವಜಾಗೊಳಿಸಿ ತನಿಖೆಗೆ ಎಸ್‌ಐಟಿ ರಚಿಸಬೇಕು. ಗುತ್ತಿಗೆದಾರರ ಬಾಕಿ ಪಾವತಿಸಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಕೆ. ಎಸ್.ಈಶ್ವರಪ್ಪನವರ ಪ್ರಕರಣದಲ್ಲಿ ರಸ್ತೆ ರಸ್ತೆಯಲ್ಲಿ ಕಾಂಗ್ರೆಸ್ಸಿಗರು ಬಾಯಿ ಬಡಿದುಕೊಂಡಿದ್ದರು. ಈಗ ಕಮಿಶನ್ನಾಗಿ ಗುತ್ತಿಗೆದಾರರಿಗೆ ಕಿರುಕುಳ ನೀಡುತ್ತಿದ್ದಾರೆ. ಅಧಿಕಾರಿಗಳಿಗೆ ಕೆಲಸ ಮಾಡಲು ಬಿಡುತ್ತಿಲ್ಲ. ಸಚಿವರು ರಾಜೀನಾಮೆ ನೀಡುವವರೆಗೂ ಬಿಜೆಪಿ ಹೋರಾಟ ಬಿಡುವುದಿಲ್ಲ. ಕುಟುಂಬದವರಿಗೆ ನ್ಯಾಯ ಕೊಡಿಸಲು ಎಲ್ಲ ಬಗೆಯ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು.

ವಾಸ್ತವಾಂಶ ಹೊರಬಂದ ಬಳಿಕ ರಾಜೀನಾಮೆ ತೀರ್ಮಾನ

ವಾಲ್ಮೀಕಿ ನಿಗಮದ ಹಗರಣ ಯಾರನ್ನೂ ರಕ್ಷಿಸುವುದಿಲ್ಲ

ಕನಕಪುರ: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ವಾಸ್ತವಾಂಶ ಪರಿಶೀಲನೆ ಮಾಡುತ್ತಿದ್ದೇವೆ. ಈ ವಿಷಯದಲ್ಲಿ

ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಾಗ ನೈತಿಕ ಹೊಣೆ ಹೊತ್ತು ನಾನು ರಾಜೀನಾಮೆ ನೀಡಿದೆ. ಈಗ ಸಚಿವ ನಾಗೇಂದ್ರ ರಾಜೀನಾಮೆ ನೀಡಲಿ' ಎಂಬ ಬಿಜೆಪಿ ಮುಖಂಡ ಈಶ್ವರಪ್ಪ ಹೇಳಿಕೆ ಕುರಿತು ಪಟ್ಟಣ ದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ವಾಸ್ತವಾಂಶ ಹೊರ ಬಂದ ಬಳಿಕ ರಾಜೀ ನಾಮೆ ಕುರಿತು ತೀರ್ಮಾನ ಮಾಡುತ್ತೇವೆ ಎಂದರು.

ನಾಗೇಂದ್ರ ಅವರ ರಾಜೀನಾಮೆಗೆ ಬಿಜೆಪಿಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಜೂನ್ 6ರವರೆಗೆ ಯಾಕೆ ಕಾಯಬೇಕು. ಈಗಿನಿಂದಲೇ ಹೋರಾಟ ಮಾಡಲಿ. ಅವರಿಗೆ ಬೇಡ ಎಂದಿರುವವರು ಯಾರು. ಅವತ್ತೇನಾದರೂ ಒಳ್ಳೆಯ ಮುಹೂರ್ತ ಇದೆಯೇ? ಯಾವ ವಿಷಯಕ್ಕೆ ಬಾಯಿ ಬಿಡಬೇಕಿತ್ತೊ ಅದಕ್ಕೆ ಬಾಯಿ ಬಿಡದವರು ಈಗ ಮಾತನಾಡುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

ಠಾಣೆಗೆ ರಕ್ಷಣೆ ನೀಡುವ ಪರಿಸ್ಥಿತಿ ಬಂದಿದೆ' ಎಂಬ ಆರ್. ಅಶೋಕ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ಬಿಜೆಪಿ ಆಡಳಿತವಿ ದ್ದಾಗ ಹಬ್ಬಗಳ ಸಂದರ್ಭದಲ್ಲಿ ಠಾಣೆಯಲ್ಲೇ ಅಧಿಕಾರಿಗಳಿಗೆ ಸಮವಸ್ತ್ರದ ಬದಲು ಕೇಸರಿ ಬಟ್ಟೆ ಹಾಕಿಸಿದ್ದನ್ನು ಅಶೋಕ್ ಮರೆತಿದ್ದಾರಾ? ಎಂದು ತಿರುಗೇಟು ನೀಡಿದರು. ಪ್ರಜ್ವಲ್ ಬಂಧನ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, ಎಸ್‌ಐಟಿ ತನಿಖೆ ನಡೆಸುತ್ತಿದ್ದು, ಅವರು ವಿಚಾರಣೆ ಮಾಡುತ್ತಾರೆ. ಆ ಬಗ್ಗೆ ನಾನೇಕೆ ತಲೆಕೆಡಿಸಿಕೊಳ್ಳಲಿ ಎಂದರು.

ಹೈಕಮಾಂಡ್ ಕೈಗೆ ಪಟ್ಟಿ

ವಿಧಾನ ಪರಿಷತ್ ಸ್ಥಾನಗಳಿಗೆ ಆಯ್ಕೆ ಮಾಡಬೇಕಾದ ಅಭ್ಯರ್ಥಿಗಳ ಪಟ್ಟಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ಹೈಕಮಾಂಡ್ ಕೈಗೆ ಕೊಟ್ಟು ಬಂದಿದ್ದೇವೆ. ಅವರ ಹೆಸರುಗಳನ್ನು ಬಹಿ ರಂಗಪಡಿಸಲು ಸಾಧ್ಯವಿಲ್ಲ. ಹೈಕಮಾಂಡ್ ಅಂತಿಮ ತೀರ್ಮಾನ ಕೈಗೊಳ್ಳಲಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಂಪಾದಕೀಯ

ವಾಲ್ಮೀಕಿ ನಿಗಮ ವಿವಾದ ಸರಿಯಾಗಿ ತನಿಖೆಯಾಗಲಿ

ವಾಲ್ಮೀಕಿ ನಿಗಮದಲ್ಲಿನ ಹಣ ದುರ್ಬಳಕೆ ಮತ್ತು ಅಧಿಕಾರಿಯೊಬ್ಬರ ಆತ್ಮಹತ್ಯೆ ಬಳಿಕ ಸಾಕಷ್ಟು ಸುದ್ದಿಯಾಗಿದ್ದು ಸಚಿವ ನಾಗೇಂದ್ರ ಅವರ ರಾಜೀನಾಮೆಗೂ ಪ್ರತಿಪಕ್ಷ ಬಿಜೆಪಿ ಒತ್ತಾಯಿಸುತ್ತಿದೆ. ನಿಗಮದ ಸುಮಾರು 94 ಕೋಟಿ ರು. ಹಣವನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದ್ದು, ಈ ಸಂಬಂಧವೇ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜತೆಗೆ ಸಚಿವರ ಮೌಖಿಕ ಆದೇಶ ಮತ್ತು ಕೆಲವು ಅಧಿಕಾರಿಗಳ ಹೆಸರನ್ನೂ ಅವರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ವಿವಾದ ಉಲ್ಬಣವಾಗಿದೆ. ಈ ಬೆಳವಣಿಗೆಗಳ ನಡುವೆಯೇ ಪೊಲೀಸರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯದ ಆರು ಅಧಿಕಾರಿಗಳ ವಿರುದ್ಧ ದೂರು ದಾಖಲಿಸಿಕೊಂಡು ತನಿಖೆ ಕೈಗೆತ್ತಿಕೊಂಡಿದ್ದಾರೆ. ಈ ಬಗ್ಗೆ ಪೊಲೀಸರು ಕೂಲಂಕಶವಾಗಿ ತನಿಖೆ ನಡೆಸಿ ಸತ್ಯವನ್ನು ಹೊರಗೆ ತರಬೇಕಾಗಿದೆ. ಈ ವಿಚಾರದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಸಾಕಷ್ಟು ವಾಕ್ಸಮರವೂ ನಡೆಯುತ್ತಿದೆ. ಈ ಹಿಂದೆ ಕೆ.ಎಸ್.ಈಶ್ವರಪ್ಪ ಅವರು ಸಚಿವರಾಗಿದ್ದ ವೇಳೆ ಗುತ್ತಿಗೆದಾರರೊಬ್ಬರು ಹೆಸರಿಟ್ಟು ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಸಚಿವರ ರಾಜೀನಾಮೆ ಪಡೆಯಲಾಗಿತ್ತು. ಈಗ ಅದೇ ನಿಯಮ ಇಲ್ಲಿಯೂ ಅನ್ವಯವಾಗಬೇಕಾಗಿದೆ ಎಂಬುದು ಬಿಜೆಪಿ ಆಗ್ರಹ. ಹೀಗಾಗಿ ಯಾವುದೇ ಸಂಶಯಗಳಿಗೆ ದಾರಿಯಾಗದಂತೆ ತನಿಖೆ ನಡೆಸಿ ಸತ್ಯಾಂಶ ಕಂಡುಕೊಳ್ಳಬೇಕಾಗಿದೆ. ಯಾವುದೇ ಕಾರಣಕ್ಕೂ ಸರಕಾರದ ಹಣವನ್ನು ಈ ರೀತಿ ದುರ್ಬಳಕೆ ಮಾಡುವುದು ಸಲ್ಲದು. ಸರಕಾರದ ಹಣ ಜನರದ್ದಾಗಿದ್ದು ಇದು ಸದ್ಬಳಕೆಯಾಗಬೇಕೇ ವಿನಃ ಅಧಿಕಾರಿಗಳ ನಡುವಿನ ಓಡಾಟಕ್ಕೆ ಬಳಕೆಯಾಗಬಾರದು. ಇಡೀ ಪ್ರಕರಣದಲ್ಲಿ ಅಧಿಕಾರಿಗಳು ಕಾನೂನು ಮೀರಿರುವುದು ಚಂದ್ರಶೇಖರ್ ಆತ್ಮಹತ್ಯೆ ಪತ್ರದಿಂದ ಗೊತ್ತಾಗುತ್ತದೆ. ಇತ್ತ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ತನಿಖೆ ನಡೆಸುವವರ್ಯಾರು ಎಂಬ ಬಗ್ಗೆಯೂ ವಾಕ್ಸಮರ ನಡೆದಿದ್ದು ಬಿಜೆಪಿ ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸುತ್ತಿದೆ. ಅಲ್ಲದೆ, ಈ ಹಣವನ್ನು ತೆಲಂಗಾಣ ಚುನಾವಣೆಗೆ ಬಳಸಿಕೊಳ್ಳಲಾಗಿತ್ತು ಎಂಬ ಗಂಭೀರ ಆರೋಪವನ್ನೂ ಮಾಡಿದೆ. ಆದರೆ, ಕಾಂಗ್ರೆಸ್ ಸಿಬಿಐಗೆ ನೀಡಲು ಒಪ್ಪುತ್ತಿಲ್ಲ. ರಾಜ್ಯದ ತನಿಖಾ ತಂಡಗಳೇ ತನಿಖೆ ನಡೆಸಲಿವೆ ಎಂದಿದೆ. ಆದರೆ, ಈ ವಿಚಾರದಲ್ಲಿ ತನಿಖಾ ತಂಡಗಳ ಬಗ್ಗೆ ಜಗಳವಾಡುವುದನ್ನು ಬಿಟ್ಟು ತಪ್ಪಿಸತ್ಥರು ಯಾರು ಎಂಬುದನ್ನು ಕಂಡುಕೊಳ್ಳಬೇಕಾಗಿದೆ.

ಸೊಂಪಾದಕೀಯ

ವೃದ್ಧಾಶ್ರಮಗಳಿಗೆ ಬೀಗ?

ಬೆಂಗಳೂರಿನ ಪೊಲೀಸರು ಹಿರಿಯ ನಾಗರಿಕರ ವಿಷಯದಲ್ಲಿ ದಿಟ್ಟ ಹೆಜ್ಜೆಯನ್ನೇ ಇಟ್ಟಿದ್ದಾರೆ. ಇದು ಕಾನೂನುಬದ್ಧವಾಗಿ ಎಷ್ಟು ಸರಿಯೋ ತಪ್ಪೋ ಗೊತ್ತಿಲ್ಲ. ಆದರೆ ನಗರ ಪೊಲೀಸರು ತಮ್ಮ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ಸೇರಿಸುವ ಮಕ್ಕಳ ವಿರುದ್ಧ ತಿರುಗಿ ಬಿದ್ದಿದ್ದಾರೆ. ಕೇವಲ ತಿರುಗಿ ಬಿದ್ದಿರುವುದಷ್ಟೇ ಅಲ್ಲ, ಈಗಾಗಲೇ ಅಪ್ಪ ಅಮ್ಮಂದಿರನ್ನು ವೃದ್ಧಾಶ್ರಮಕ್ಕೆ ಸೇರಿಸಿರುವ ಮಕ್ಕಳು ತಮ್ಮ ಪೋಷಕರನ್ನು ತಿರುಗಿ ಮನೆಗೆ ಕರೆದುಕೊಂಡು ಹೋಗಬೇಕು ಅಂತ ಫರ್ಮಾನು ಹೊರಡಿಸಿದ್ದಾರೆ. ಇನ್ನು ಮುಂದೆ ಕೂಡಾ ಮಕ್ಕಳು ತಮ್ಮ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ಸೇರಿಸುವಂತಿಲ್ಲ ಅಂತ ತಾಕೀತು ಮಾಡಿದ್ದಾರೆ. ನಗರ ಪೊಲೀಸ್ ಆಯುಕ್ತ ದಯಾನಂದ್ ಅವರು ದಯೆ ಇಲ್ಲದೆ ಅಪ್ಪ ಅಮ್ಮಂದಿರನ್ನು ಸಾಕುವ ಜವಾಬ್ದಾರಿಯಿಂದ ದೂರ ಹೋಗುವ ಮಕ್ಕಳ ವಿರುದ್ಧ ಕಿಡಿ ಕಾರಿದ್ದಾರೆ. ಅಪ್ಪ ಅಮ್ಮಂದಿರನ್ನು ವೃದ್ಧಾಶ್ರಮಕ್ಕೆ ಸೇರಿಸಿದರೆ ನಿಮ್ಮ ಮೇಲೆ ಕ್ರಿಮಿನಲ್ ಕೇಸು ಬೀಳುತ್ತೆ ಅಂತ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ಆದರೆ ಇದು ಪೊಲೀಸರ ಅಧಿಕಾರ ವ್ಯಾಪ್ತಿಯ ಒಳಗೆ ಬರುತ್ತದೆಯೇ, ಅಪ್ಪ ಅಮ್ಮಂದಿರನ್ನು ಸಾಕೋ ಜವಾಬ್ದಾರಿ ಮಕ್ಕಳದ್ದು ಅನ್ನೋ ಕಾನೂನು ಇದೆಯೇ. ಹುಟ್ಟಿಸಿದ ಮಕ್ಕಳನ್ನು ಬೀದಿಗೆ ಬಿಟ್ಟು ಹೋಗುವ ಅಪ್ಪ ಅಮ್ಮಂದಿರ ಮೇಲೆ ಕೇಸು ಹಾಕುವಂತೆ ಮಕ್ಕಳ ಮೇಲೂ ಕೇಸು ಹಾಕಬಹುದೇ ಅನ್ನೋದು ಈಗ ಗೊಂದಲದ ವಿಷಯ ಆಗಿದೆ. ಇದಕ್ಕೆ ಕಾರಣವೂ ಇದೆ. ಗಂಡು ಮಕ್ಕಳಾದರೆ ಪೋಷಕರನ್ನು ಸಾಕೋದು ನಿಮ್ಮ ಜವಾಬ್ದಾರಿ ಅಂತ ಅವರ ವಿರುದ್ಧ ಜೋರು ಮಾಡಬಹುದು. ಆದರೆ ಬರೀ ಹೆಣ್ಣುಮಕ್ಕಳಿರೋ ಅಪ್ಪ ಅಮ್ಮಂದಿರನ್ನು ವಯಸ್ಸಾದ ಮೇಲೆ ಯಾರು ನೋಡಿಕೊಳ್ಳಬೇಕು?. ಆ ಹೆಣ್ಣುಮಕ್ಕಳನ್ನು ಮದುವೆ ಆದ ಹುಡುಗರು ಅಂದರೆ ಅಳಿಯಂದಿರು ಇನ್ನು ಮುಂದೆ ಅತ್ತೆ ಮಾವಂದಿರನ್ನೂ ಸಾಕುವ ಜವಾಬ್ದಾರಿ ವಹಿಸಿಕೊಳ್ಳಬೇಕೇ?, ಹಾಗಾದರೆ ಗಂಡು ಮಕ್ಕಳು ತಮ್ಮ ಅಪ್ಪ ಅಮ್ಮಂದಿರ ಜೊತೆಗೆ ಹೆಂಡತಿಯ ಅಪ್ಪ ಅಮ್ಮಂದಿರನ್ನೂ ಸೇರಿಸಿಕೊಂಡು ಒಟ್ಟು ನಾಲ್ಕು ಜನರನ್ನೂ ಸಾಕಬೇಕೇ? ಅನ್ನೋ ಪ್ರಶ್ನೆಗಳು ಮೂಡೋದು ಸಹಜ. ಪಾಪ, ಹಾಗೆ ನಾಲ್ಕು ಜನರನ್ನೂ ಅವನೇ ಸಾಕಬೇಕು ಅಂದ್ರೆ, ಅದೂ ಹೆಚ್ಚು ಕಡಿಮೆ ಒಂದು ವೃದ್ಧಾಶ್ರಮದ ಥರನೇ ಆಗುತ್ತೆ ಅಲ್ವಾ?. ಹಾಗಾಗಿ ವೃದ್ಧಾಶ್ರಮಗಳನ್ನು ಮುಚ್ಚಬೇಕು ಅನ್ನೋ ಪೊಲೀಸರ ಉದ್ದೇಶ ಈಡೇರುವುದಿಲ್ಲವಲ್ಲ ಅಂತ ಪ್ರಶ್ನೆಗಳು ಬಂದರೆ ಅಚ್ಚರಿ ಏನಿಲ್ಲ.

ಸಂಪಾದಕರ ಸದ್ಯಶೋಧನೆ

ವಾಟ್ಸಾಪ್ ಸಂದೇಶ ಮತ್ತು ಸತ್ಯಾಸತ್ಯತೆ

ವಾಟ್ಸಾಪ್‌ನಲ್ಲಿ ಹಲವು ವಿಷಯಗಳು ಕ್ಷಣಕ್ಷಣಕ್ಕೂ ಹರಿದು ಬರುತ್ತಲೇ ಇರುತ್ತವೆ. ಬಹುತೇಕ ಮಾಹಿತಿಯ ಮೂಲ ಯಾವುದು ಎಂದು ಗೊತ್ತಿರುವುದಿಲ್ಲ. ಆದರೆ ಅದು ಎಲ್ಲ ಗ್ರೂಪ್‌ಗಳಲ್ಲಿ ಶೇರ್ ಆಗುತ್ತಲೇ ಇರುತ್ತವೆ. ತಮಾಷೆ ಅಂದ್ರೆ, ಯಾರೂ ಸಹ ಅದರ ಸತ್ಯಾಸತ್ಯತೆಯನ್ನು ಪತ್ತೆ ಹಚ್ಚುವ ಗೋಜಿಗೆ ಹೋಗುವುದಿಲ್ಲ. ಆದರೆ ಅಷ್ಟರೊಳಗೆ ಆ ಒಂದು ಸಂದೇಶ ಇಡೀ ಜಗತ್ತನ್ನು ಸುತ್ತು ಹಾಕಿ, ನಿಮ್ಮ ಮೊಬೈಲಿಗೆ ಬಂದು ಬಿದ್ದಿರುತ್ತದೆ. ಕೆಲ ದಿನಗಳ ಹಿಂದೆ, ನನ್ನ ಮೊಬೈಲಿಗೆ ಒಂದು ಮೆಸೇಜ್ ಬಂದಿತು. ನಾನು ಗಮನವಿಟ್ಟು ಓದಿದೆ. ಆದರೆ ಆ ಮಾಹಿತಿಯ ಸತ್ಯಾಸತ್ಯತೆಯನ್ನು ಪತ್ತೆ ಮಾಡದೇ ಫಾರ್ವರ್ಡ್ ಮಾಡುವುದು ಸರಿ ಅಲ್ಲ ಎಂದು ಭಾವಿಸಿ, ಹಾಗೆ ಇಟ್ಟುಕೊಂಡೆ. ಆರ್‌ಟಿಐ ಅರ್ಜಿಯನ್ನೂ ಸಲ್ಲಿಸಿದೆ. ಆದರೆ ಇಲ್ಲಿ ತನಕ ನನಗೆ ಉತ್ತರ ಬಂದಿಲ್ಲ. ಅದೇನೇ ಇರಲಿ, ಆ ಮಾಹಿತಿಯಾದರೂ ಏನು ಎಂಬುದನ್ನು ನೋಡೋಣ. ಇತಿಹಾಸದ ಪುಸ್ತಕಗಳನ್ನು ಅಗೆದು ನೋಡಿದಾಗ, 'ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ' ದ (BHU) ಸಂಸ್ಥಾಪಕರಾದ ಪಂಡಿತ್ ಮದನ್ ಮೋಹನ್ ಮಾಳವೀಯ ಅವರು ಫೆಬ್ರವರಿ 14, 1931 ರಂದು ಭಗತ್ ಸಿಂಗ್ ಅವರನ್ನು ಗಲ್ಲಿಗೇರಿಸುವುದನ್ನು ತಡೆಯಲು ಲಾರ್ಡ್ ಇರ್ವಿನ್‌ಗೆ ಕ್ಷಮಾದಾನದ ಅರ್ಜಿಯನ್ನು ಸಲ್ಲಿಸಿದ್ದರು ಎಂದು ತಿಳಿದುಬರುತ್ತದೆ ಮತ್ತು ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವ್ ಅವರ ಶಿಕ್ಷೆಯನ್ನು ಕಡಿಮೆ ಮಾಡಬೇಕೆಂದು ಮನವಿ ಮಾಡಿದ್ದರಂತೆ. ಈ ಕ್ಷಮಾದಾನ ಪತ್ರಕ್ಕೆ ಉತ್ತರಿಸಿದ ಲಾರ್ಡ್ ಇರ್ವಿನ್, ಮಾಳವೀಯಾಜೀ, ನೀವು ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರು, ಆದ್ದರಿಂದ ನೀವು ಈ ಮನವಿಯೊಂದಿಗೆ ನೆಹರು ಮತ್ತು ಗಾಂಧಿ ಹಾಗೂ ಕನಿಷ್ಠ ಕಾಂಗ್ರೆಸ್‌ನ ಇಪ್ಪತ್ತು ಸದಸ್ಯರ ಸಹಿ ಹೊಂದಿದ ಪತ್ರಗಳನ್ನು ತರಬೇಕಾಗುತ್ತದೆ ಎಂದು ಹೇಳಿದರು. ಭಗತ್ ಸಿಂಗ್ ಗಲ್ಲು ಶಿಕ್ಷೆಯನ್ನು ನಿಲ್ಲಿಸುವ ಬಗ್ಗೆ ಮಾಳವೀಯಾ ಅವರು ನೆಹರು ಮತ್ತು ಗಾಂಧಿಯವರೊಂದಿಗೆ ಮಾತನಾಡಿದಾಗ ಅವರು ಮೌನವಾಗಿದ್ದರು ಮತ್ತು ಇದಕ್ಕೆ ಅವರು ಒಪ್ಪಿಗೆಯನ್ನು ನೀಡಲಿಲ್ಲ. ಇದಲ್ಲದೇ, ಗಾಂಧಿ ಮತ್ತು ನೆಹರು ಅವರ ಭಿನ್ನಾಭಿಪ್ರಾಯದಿಂದಾಗಿ ಇತರ ಕಾಂಗ್ರೆಸ್ ನಾಯಕರು ಸಹ ಒಪ್ಪಿಗೆ ನೀಡಲಿಲ್ಲ. ನಿವೃತ್ತಿಯ ನಂತರ, ಲಾರ್ಡ್ ಇರ್ವಿನ್ ಸ್ವತಃ ಲಂಡನ್ನಲ್ಲಿ ಹೇಳಿದರು – ನೆಹರು ಮತ್ತು ಗಾಂಧಿಯವರು ಒಮ್ಮೆಯಾದರೂ ಭಗತ್ ಸಿಂಗ್ ಅವರ ಮರಣದಂಡನೆಯನ್ನು ನಿಲ್ಲಿಸಲು ಮನವಿ ಮಾಡಿದ್ದರೆ, ನಾವು ಖಂಡಿತವಾಗಿಯೂ ಅವರ ಮರಣದಂಡನೆಯನ್ನು ರದ್ದುಗೊಳಿಸುತ್ತಿದ್ದೆವು, ಆದರೆ ಭಗತ್ ಸಿಂಗ್ ನನ್ನು ಗಲ್ಲಿಗೇರಿಸಲು ನಮಗಿಂತ ಹೆಚ್ಚು ಆತುರ ಗಾಂಧಿ ಮತ್ತು ನೆಹರುಗೇ ಯಾಕೆ ಇತ್ತು ಎಂದು ನನಗೆ ಅರ್ಥವಾಗಲೇ ಇಲ್ಲ ಕಪಿಲ್ ಕುಮಾರ್ ಅವರ ಪುಸ್ತಕದ ಪ್ರಕಾರ, ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಅವರಿಗೆ ಗಾಂಧಿಯಾಗಲಿ ಅಥವಾ ನೆಹರು ಆಗಲಿ ಕ್ಷಮೆಯನ್ನು ಕೋರದಿದ್ದಾಗ ಇರ್ವಿನ್ ತುಂಬಾ ಆಶ್ಚರ್ಯಪಟ್ಟರು. ಬ್ರಿಟಿಷರು ಕೂಡ ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರುಗಳನ್ನು ಗಲ್ಲಿಗೇರಿಸಲು ಆತುರಪಡಲಿಲ್ಲ, ಆದರೆ ಗಾಂಧಿ ಮತ್ತು ನೆಹರು ತುಂಬಾ ಆತುರ ಪಟ್ಟು ಗಲ್ಲಿಗೇರಿಸುವಂತೆ ಮಾಡಿದರು. ಏಕೆಂದರೆ ಭಗತ್ ಸಿಂಗ್ ಭಾರತೀಯರಲ್ಲಿ ವೇಗವಾಗಿ ಜನಪ್ರಿಯವಾಗುತ್ತಿದ್ದರು, ಅದು ಗಾಂಧಿ ಮತ್ತು ನೆಹರುಗೆ ಇಷ್ಟವಾಗಲಿಲ್ಲ. ಆದುದರಿಂದಲೇ ಅವರು ಭಗತ್ ಸಿಂಗ್ ನನ್ನು ಆದಷ್ಟು ಬೇಗ ಗಲ್ಲಿಗೇರಿಸಬೇಕೆಂದು ಬಯಸಿದ್ದರು. ಇದನ್ನು ಸ್ವತಃ ಇರ್ವಿನ್ ಹೇಳಿದ್ದಾರೆ. ಇದಲ್ಲದೇ ಸ್ವತಃ ಲಾಹೋರ್ ಜೈಲಿನ ಜೈಲರ್ ಗಾಂಧಿಗೆ ಪತ್ರ ಬರೆದು ಈ ಹುಡುಗರನ್ನು ಗಲ್ಲಿಗೇರಿಸುವುದರಿಂದ ದೇಶದ ವಾತಾವರಣ ಹಾಳಾಗುವುದಿಲ್ಲವೇ?' ಎಂದು ಕೇಳಿದ್ದರು. ಆಗ ಗಾಂಧಿಯವರು, 'ನೀವು ನಿಮ್ಮ ಕೆಲಸ ಮಾಡಿ, ಏನೂ ಆಗುವುದಿಲ್ಲ' ಎಂದು ವ್ಯಂಗ್ಯಭರಿತ ಲಿಖಿತ ಉತ್ತರ ಕಳುಹಿಸಿದ್ದರು. ಇದು ಸುಳ್ಳು ಎಂದು ವಾದ ಮಾಡುವವರು ದಯವಿಟ್ಟು ಆರ್‌ಟಿಐ ಮೂಲಕ ಲಾರ್ಡ್ ಇರ್ವಿನ್ ದಾಖಲೆಗಳ ಬಗ್ಗೆ ಮಾಹಿತಿಯನ್ನು ಹೊರತೆಗೆಯಬಹುದು. ಆಗ ಅನುಮಾನಗಳು ತಾನಾಗಿಯೇ ನಿವಾರಣೆಯಾಗುತ್ತವೆ. ಈ ವಾಟ್ಸಾಪ್ ಈಗಲೂ ನನ್ನ ಮೆಸೇಜ್ ಬಾಕ್ಸ್‌ನಲ್ಲಿ ಹಾಗೆ ಇದೆ. ಆರ್‌ಟಿಐ ಉತ್ತರ ಯಾವಾಗ ಬರುವುದೋ?!

ವಿರೋಧಿಗಳ ತಾಪ ಏರಿಸಿದ ಮೋದಿ ಜಪ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

2024ರ ಲೋಕಸಭಾ ಚುನಾವಣೆಯ ಕೊನೆಯ ಹಂತದ ಮತದಾನ ನಡೆಯುತ್ತಿದೆ, ಕಳೆದ ಎರಡುವರೆ ತಿಂಗಳಿಂದ ಹಗಲು ರಾತ್ರಿಯೆನ್ನದೆ ದೇಶದಾದ್ಯಂತ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡ ಮೋದಿಯವರು ಧ್ಯಾನಕ್ಕಾಗಿ ಕನ್ಯಾಕುಮಾರಿಯ ಸ್ವಾಮಿ ವಿವೇಕಾನಂದ ಬಂಡೆಗೆ ತೆರಳಿದ್ದಾರೆ. ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲೆಂಬಂತೆ ಮೋದಿ ವಿರೋಧಿಗಳು ಅವರ ಧ್ಯಾನವನ್ನೂ ವಿರೋಧಿಸುವಲ್ಲಿ ತೊಡಗಿದ್ದಾರೆ. ಮೋದಿಯವರು ಏನು ಮಾಡಿದರು ತಪ್ಪು ಎಂಬ ಹುಚ್ಚು ಆಲೋಚನೆ ವಿರೋಧಪಕ್ಷಗಳಲ್ಲಿದೆ, ಅವರು ಕೂತರು ತಪ್ಪು,ನಿಂತರೂ ತಪ್ಪು, ಮಾತನಾಡಿದರೂ ತಪ್ಪು, ಮೌನವಾಗಿದ್ದರೂ ತಪ್ಪು. ಸಂಘಟಿತವಾಗಿ ವಿರೋಧ ಪಕ್ಷದ ಕೆಲಸ ಮಾಡುವ ಬದಲು ಕೇವಲ ಮೋದಿಯವರನ್ನೇ ಗುರಿಯನ್ನಾಗಿಸಿಕೊಂಡು ಇಲ್ಲಸಲ್ಲದ ತಪ್ಪುಗಳನ್ನು ಹುಡುಕುತ್ತಿರುತ್ತಾರೆ. 1892 ರಲ್ಲಿ ಸ್ವಾಮಿ ವಿವೇಕಾನಂದರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ದೇಶವನ್ನು ಸುತ್ತಿ, ಕೊನೆಗೆ ಕನ್ಯಾಕುಮಾರಿಯಲ್ಲಿ ದೇಶದ ಮುಂದಿನ ಭವಿಷ್ಯದ ಬಗ್ಗೆ ಯೋಚಿಸುತ್ತಾ ಧ್ಯಾನದಲ್ಲಿ ತೊಡಗಿದ್ದರು.ನರೇಂದ್ರ ಮೋದಿಯವರು ಹೇಳಿದ ಹಾಗೆ 2024 ರ ಚುನಾವಣೆ ಭಾರತದ ಮುಂದಿನ 1000 ವರ್ಷಗಳ ದೃಷ್ಟಿಕೋನವನ್ನು ಬದಲಾಯಿಸಲಿದೆ. ಮೋದಿಯವರು ದೇವರ ಧ್ಯಾನಕ್ಕೆ ಕೂರುವುದನ್ನು ಕೋಮುವಾದಕ್ಕೆ ಹೋಲಿಸುವ ಹೊಲಸು ಮನಸ್ಥಿತಿಗೆ ಮೋದಿ ವಿರೋಧಿಗಳು ತಲುಪಿರುವುದು ವಿಪರ್ಯಾಸವೇ ಸರಿ. ರಸ್ತೆಯಲ್ಲಿ ನಮಾಜ್ ಮಾಡುವುದಕ್ಕೆ ತುಟಿ ಬಿಚ್ಚದವರು ಧ್ಯಾನದ ವಿಷಯ ಬಂದಾಗ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಪ್ರತೀ ಬಾರಿ ರಾಹುಲ್ ಗಾಂಧಿ ಚುನಾವಣೆ ಮುಗಿದ ನಂತರ ವಿದೇಶಕ್ಕೆ ಹೋಗಿ ಬರುವ ಸಂಸ್ಕೃತಿಯನ್ನು ಮೋದಿಯೂ ಪಾಲಿಸಬೇಕೆಂಬುದು ವಿರೋಧಿಗಳ ಆಶಯವಿರಬಹುದು. ಕಳೆದ ಎರಡೂವರೆ ತಿಂಗಳಿಂದ ಪ್ರತಿನಿತ್ಯ ದೇಶದ ಮೂಲೆ ಮೂಲೆಗಳಲ್ಲಿ ಸಾರ್ವಜನಿಕ ಸಭೆಗಳು, ಪಕ್ಷದ ಸಭೆಗಳು, ರೋಡ್ ಶೋಗಳು, ಮಾಧ್ಯಮಗಳಿಗೆ ಸಂದರ್ಶನ ನೀಡುವುದು ಕೇವಲ ಮೋದಿಯಂತಹ ಅಪರೂಪದ ವ್ಯಕ್ತಿಯಿಂದ ಮಾತ್ರ ಸಾಧ್ಯ.

ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮೋದಿಯವರು 75 ದಿನಗಳ ಕಾಲ ಬಿಡುವಿಲ್ಲದ ಪ್ರಚಾರದಲ್ಲಿ ಪಾಲ್ಗೊಂಡಿದ್ದರು, ದಿನವೊಂದಕ್ಕೆ ಸರಾಸರಿ 3 ರ್ಯಾಲಿಗಳಲ್ಲಿ ಪಾಲ್ಗೊಂಡಿದ್ದರು. ಮಾರ್ಚ್ 15 ರಂದು ತಮಿಳುನಾಡಿನ ಕನ್ಯಾಕುಮಾರಿಯಿಂದ ಆರಂಭವಾದ ಪ್ರಚಾರ ಸಭೆಗಳು ಮೇ 30 ರಂದು ಪಂಜಾಬಿನಲ್ಲಿ ಕೊನೆಗೊಂಡಿದೆ. ಸುದೀರ್ಘ ಪ್ರಚಾರದ ನಡುವೆ ದೇಶ, ವಿದೇಶಗಳ ಸುದ್ದಿ ಸಂಸ್ಥೆಗಳಿಗೆ 80 ಸಂದರ್ಶನ ನೀಡಿದ್ದಾರೆ. ಮೋದಿಯವರು ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲವೆಂದು ನಾಲಿಗೆ ಹರಿಬಿಡುತ್ತಿದ್ದ ಮಂದಿ, ಈಗ ತಮ್ಮ ಬಾಯಿಗೆ ಪ್ಲಾಸ್ಟರ್ ಹಾಕಿಕೊಂಡಿದ್ದಾರೆ. ಉತ್ತರಪ್ರದೇಶದಲ್ಲಿ 31, ಬಿಹಾರದಲ್ಲಿ 20, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ 18 ಪ್ರಚಾರ ಸಭೆಗಳಲ್ಲಿ ಮೋದಿ ಭಾಗಿಯಾಗಿದ್ದರು. ಒಡಿಶಾ, ಮಧ್ಯಪ್ರದೇಶದಲ್ಲಿ ತಲಾ 10, ಜಾರ್ಖಂಡ್‌ನಲ್ಲಿ ಏಳು, ರಾಜಸ್ಥಾನದಲ್ಲಿ ಐದು, ಛತ್ತೀಸ್ಗಢದಲ್ಲಿ 4 ಪ್ರಚಾರ ಸಭೆಗಳನ್ನು ನಡೆಸಿದ್ದಾರೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಮೋದಿಯವರು 35 ಪ್ರಚಾರ ಸಭೆಗಳನ್ನು ನಡೆಸಿದ್ದಾರೆ, ತಮ್ಮ ತವರು ರಾಜ್ಯ ಗುಜರಾತಿನಲ್ಲಿ ಮೋದಿಯವರು ಐದು ಪ್ರಚಾರ ಸಭೆಗಳನ್ನು ನಡೆಸಿದ್ದರು. ಈ ನಡುವೆ ಸುದ್ದಿಸಂಸ್ಥೆಗಳು ಕೇಳಿದ ಸುಮಾರು 1000 ಪ್ರಶ್ನೆಗಳಿಗೆ ಮೋದಿ ಉತ್ತರ ನೀಡುವ ಮೂಲಕ ವಿರೋಧ ಪಕ್ಷಗಳ ಬುಡಕ್ಕೆ ಬಿಸಿ ಮುಟ್ಟಿಸಿದ್ದಾರೆ. ಒಂದು ವಾರ ಕಚೇರಿಯಲ್ಲಿ ಎಂಟು ತಾಸಿಗಿಂತ ಹೆಚ್ಚಿನ ಸಮಯ ಕೆಲಸ ಮಾಡಿಬಿಟ್ಟರೆ, ಎರಡು ವಾರ ವಿದೇಶಕ್ಕೆ ತೆರಳಿ ಮೋಜು ಮಾಡುವವರಿರುವ ನಡುವೆ ನರೇಂದ್ರ ಮೋದಿ ಕಳೆದ 24 ವರ್ಷಗಳಿಂದ ಮುಖ್ಯಮಂತ್ರಿಯಾಗಿ ಮತ್ತು ಪ್ರಧಾನಮಂತ್ರಿಯಾಗಿ ಸತತವಾಗಿ ಕೆಲಸ ಮಾಡುತ್ತಿದ್ದಾರೆ, 2014 ರ ಚುನಾವಣಾ ಪ್ರಚಾರದ ನಂತರ ಪ್ರತಾಪಗಢಕ್ಕೆ ಮೋದಿ ತೆರಳಿದ್ದರು, 2019ರ ಪ್ರಚಾರದ ನಂತರ ಕೇದಾರನಾಥದ ಗುಹೆಯಲ್ಲಿ ಧ್ಯಾನದಲ್ಲಿ ತೊಡಗಿದ್ದರು, ಈಗ ಸ್ವಾಮಿ ವಿವೇಕಾನಂದರು ಧ್ಯಾನ ಮಾಡಿದ ಸ್ಥಳಕ್ಕೆ ತೆರಳಿದ್ದಾರೆ.

ಮೋದಿಯವರನ್ನು ವಿರೋಧಿಸುವ ಭರದಲ್ಲಿ ವಿರೋಧಿಗಳು ಹೊಲಸು ರಾಜಕೀಯಕ್ಕಿಳಿದು, ಇಡೀ ಸನಾತನ ಧರ್ಮವನ್ನೇ ವಿರೋಧಿಸುತ್ತಿದ್ದಾರೆ. ಕೇಸರಿ ಬಣ್ಣ ಕಂಡರೆ ಸಾಕು ಪ್ಯಾಂಟಿನೊಳಗೆ ಜಿರಳೆ ಬಿಟ್ಟುಕೊಂಡವರಂತಾಡುತ್ತಾರೆ, 19 ನೇ ಶತಮಾನದ ಬಿರುಗಾಳಿಯ ಸಂತ ಸ್ವಾಮಿ ವಿವೇಕಾನಂದ ಸನಾತನ ಧರ್ಮದ ಪ್ರಾಮುಖ್ಯತೆಯ ಬಗ್ಗೆ ಚಿಕಾಗೊ ನಗರದಲ್ಲಿ ಇಡೀ ಜಗತ್ತು ಬೆರಗಾಗುವಂತೆ ಭಾಷಣ ಮಾಡಿದ್ದರು. ಅಂದು ಸ್ವಾಮೀಜಿಗಳ ಮಾತನ್ನು ಕೇಳಲು ಪಶ್ಚಿಮದ ಕ್ರಿಶ್ಚಿಯನ್ ಧರ್ಮ ಪ್ರಚಾರಕರು ಸೇರಿದ್ದರು, ಸ್ವಾಮೀಜಿ ಯಾರ ಮುಲಾಜಿಗೂ ಅಂಜದೆ ಪಾಶ್ಚಿಮಾತ್ಯರ ಮುಂದೆ ಸನಾತನ ಧರ್ಮದ ಮಹತ್ವದ ಬಗ್ಗೆ ಮಾತನಾಡಿದ್ದರು. ಪಾಶ್ಚಿಮಾತ್ಯ ಧರ್ಮದ ಹೇರಿಕೆಯಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಸ್ಪಷ್ಟವಾಗಿ ನೆರೆದಿದ್ದವರ ಮುಂದೆ ಹೇಳಿದ್ದರು, ಸ್ವಾಮಿ ವಿವೇಕಾನಂದರ ತವರು ರಾಜ್ಯ ಪಶ್ಚಿಮ ಬಂಗಾಳದಲ್ಲಿ ಇಂದು ಸನಾತನ ಧರ್ಮ ವಿರೋಧಿಗಳ ದರ್ಬಾರ್ ನಡೆಯುತ್ತಿದೆ.ಮೂರು ದಶಕಗಳ ಕಾಲ ಸನಾತನ ಧರ್ಮ ವಿರೋಧಿ ಕಮ್ಯುನಿಸ್ಟ್ ಸರಕಾರ ಪಶ್ಚಿಮ ಬಂಗಾಳದಲ್ಲಿತ್ತು, ಅವರ ಚಾಳಿಯನ್ನೇ ಮಮತಾ ಬ್ಯಾನರ್ಜಿ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಸ್ವಾಮಿ ವಿವೇಕಾನಂದರು ಧ್ಯಾನ ಮಾಡಿದ ಸ್ಥಳಕ್ಕೆ ಮೋದಿ ಹೋದರೆ, ಅದರಲ್ಲಿಯೂ ಜಾತ್ಯಾತೀತ ವಿರೋಧಿ ಭಾವನೆಯನ್ನು ಹುಡುಕುವ ಹೊಸಲು ಮನಸ್ಥಿತಿ ಅವರ ವಿರೋಧಿಗಳದ್ದು. ಸನಾತನ ಸಿಂಹ ಸ್ವಾಮಿ ವಿವೇಕಾನಂದರು ಕನ್ಯಾಕುಮಾರಿಗೆ ಬಂದು ಧ್ಯಾನ ಮಾಡಿದ್ದ ರಾಜ್ಯದಲ್ಲಿ, ಸನಾತನ ಧರ್ಮವನ್ನು ಮಾರಣಾಂತಿಕ ಕಾಯಿಲೆಗೆ ಹೋಲಿಸುವ ನಾಯಕರು ಇಂದು ಆಡಳಿತ ನಡೆಸುತ್ತಿದ್ದಾರೆ. ರಾಹುಲ್ ಗಾಂಧಿ ಮಸೀದಿಗೆ ತೆರಳಿ ನಮಾಜ್ ಮಾಡುವುದನ್ನು ಹೊಗಳುವವರು, ಮೋದಿಯವರ ಕಾಶಿ ವಿಶ್ವನಾಥನ ಸನ್ನಿಧಿಯ ಭೇಟಿಯನ್ನು ವಿರೋಧಿಸುತ್ತಾರೆ, ಅಯೋಧ್ಯ ರಾಮಮಂದಿರ ಭೇಟಿಯನ್ನು ವಿರೋಧಿಸುತ್ತಾರೆ, ಮಥುರಾ ಶ್ರೀಕೃಷ್ಣನ ದೇಗುಲ ಭೇಟಿಯನ್ನು ವಿರೋಧಿಸುತ್ತಾರೆ, ಈಗ ಅವುಗಳ ಸಾಲಿಗೆ ನೂತನ ಸೇರ್ಪಡೆ ಮೋದಿಯವರ ಸ್ವಾಮಿ ವಿವೇಕಾನಂದರ ಕನ್ಯಾಕುಮಾರಿಯ ಧ್ಯಾನ ಸ್ಥಳದ ಭೇಟಿ.

ಮೋದಿಯವರು ವಿವೇಕಾನಂದರ ಬಂಡೆಗೆ ಭೇಟಿ ನೀಡುವುದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾಗಲಿದೆ ಎಂದು ವಿರೋಧ ಪಕ್ಷಗಳು ಈಗಾಗಲೇ ಚುನಾವಣಾ ಆಯೋಗಕ್ಕೆ ದೂರು ನೀಡಿವೆ, ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪಕ್ಷದಲ್ಲಿ ತನ್ನ ಇರುವಿಕೆಯನ್ನು ತೋರಿಸಿಕೊಳ್ಳಲು ಆಗಾಗ ಈ ರೀತಿಯ ಹೇಳಿಕೆಗಳನ್ನು ನೀಡುತ್ತಿರುತ್ತಾರೆ. ಬಿಹಾರದ ಲಾಲು ಪ್ರಸಾದ್ ಯಾದವ್ ಪುತ್ರ ತೇಜಸ್ವಿ ಯಾದವ್ ಮೋದಿಯವರ ಕನ್ಯಾಕುಮಾರಿ ಭೇಟಿಯನ್ನು ಮಾರ್ಕೆಟಿಂಗ್ ಎಂದು ಹೇಳುತ್ತಾರೆ, ಮಾಧ್ಯಮವನ್ನು ಅಲ್ಲಿಗೆ ಬಿಡಬಾರದಂತೆ, ಫೋಟೋ ತೆಗೆಯಲು ಬಿಡಬಾರದಂತೆ, ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಬಾರದಂತೆ, ಮೋದಿಯವರು ಮಾಧ್ಯಮದವರಿಗೆ ಆಹ್ವಾನ ನೀಡಿ ಕನ್ಯಾಕುಮಾರಿಗೆ ಹೋಗಿಲ್ಲ ಮಾಧ್ಯಮದ ಕ್ಯಾಮರಾಗಳು ಅವರು ಹೋದಲ್ಲೆಲ್ಲಾ ಹಿಂಬಾಲಿಸುತ್ತವೆ. ಮೋದಿಯವರಲ್ಲಿರುವ ನಿಸ್ವಾರ್ಥ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡವರಿಗೆ ಅವರನ್ನು ಟೀಕಿಸಬೇಕೆಂದು ಅನಿಸುವುದಿಲ್ಲ, ವಿರೋಧ ಪಕ್ಷಗಳು ಪರಿವಾರವಾದಕ್ಕೆ ಗಂಟುಬಿದ್ದು ತಮ್ಮ ಪರಿವಾರದ ಪಕ್ಷವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಹೊರತು ದೇಶದ ಒಳಿತಿಗಾಗಿ ಅಲ್ಲ,ತನ್ನ ಕುಟುಂಬದವರನ್ನು ಒಂದೇ ಒಂದು ದಿವಸ ಆಡಳಿತ ಯಂತ್ರದೊಳಗೆ ಸೇರಿಸಿಕೊಳ್ಳದ ಮೋದಿಯ ಗುಣಗಳನ್ನು ಅಳವಡಿಸಿಕೊಂಡಿರುವ ಒಂದೇ ಒಂದು ವಿರೋಧ ಪಕ್ಷದ ಉದಾಹರಣೆಯಿಲ್ಲ, ರಾಜೀವ್ ಗಾಂಧಿ ಸೋನಿಯಾ ಗಾಂಧಿಯ ಜೊತೆಗೆ ನಿಂತು ಐಸ್ ಕ್ರೀಮ್ ತಿನ್ನುವ ಫೋಟೋ ತೆಗೆದು ಮಾರ್ಕೆಟಿಂಗ್ ಮಾಡಬಹುದು, ಇಂದಿರಾ ಗಾಂಧಿ ರಾಯ್ ಬರೇಲಿಯ ಹಳ್ಳಿಗಳಿಗೆ ಭೇಟಿ ನೀಡುವ ಫೋಟೋಗಳನ್ನು ತೆಗೆದು ಮಾರ್ಕೆಟಿಂಗ್ ಮಾಡಬಹುದು, ಆದರೆ ಮೋದಿಯ ಹಿಂದೆ ಮಾಧ್ಯಮದವರು ಹೋದರೆ ತಪ್ಪೆನ್ನುವುದು ವಿರೋಧ ಪಕ್ಷಗಳ ದ್ವಂದ್ವ ನೀತಿ.

ಪಾಶ್ಚಿಮಾತ್ಯರ ಆಕರ್ಷಣೆಗೆ ಮರುಳಾಗಿ ಭಾರತದ ಅನೇಕ ಸಂಸ್ಕೃತಿಗಳು ಮರೆಯಾಗಿದ್ದವು, ಶಾಲೆಗಳಲ್ಲಿ ಮಕ್ಕಳಿಗೆ ಯೋಗ ಹೇಳಿಕೊಡುವ ಪದ್ಧತಿ ಹಲವು ಕಡೆಗಳಲ್ಲಿ ಇರಲಿಲ್ಲ, ಮೋದಿಯವರು ಪ್ರಧಾನಮಂತ್ರಿಯಾದ ನಂತರ ಯೋಗದಿನದ ಆಚರಣೆಯನ್ನು ಜಾರಿಗೆ ತಂದರು. ದೇಶದ ಪ್ರಧಾನಮಂತ್ರಿಗಳು, ಯೋಗ ಮಾಡುವ ಮೂಲಕ ದೇಶದಲ್ಲಿ ಮಾತ್ರವಲ್ಲದೆ ಜಗತ್ತಿನಲ್ಲಿ ಯೋಗದ ಮಹತ್ವದ ಜೊತೆಗೆ ಭಾರತದ ಮಹತ್ವವನ್ನು ತಿಳಿಸಿದ್ದರು.ಜಗತ್ತಿನ ಅನೇಕ ದೇಶಗಳಲ್ಲಿ ಯೋಗವನ್ನು ತಮ್ಮ ದಿನನಿತ್ಯದ ಚಟುವಟಿಕೆಯನ್ನಾಗಿ ಅನೇಕ ಮಂದಿ ಪಾಶ್ಚಿಮಾತ್ಯರು ಅಳವಡಿಸಿಕೊಂಡಿದ್ದಾರೆ. ಪ್ರಧಾನಿಗಳ ಯೋಗವನ್ನೂ ವಿರೋಧ ಪಕ್ಷಗಳು ಟೀಕೆ ಮಾಡಿದ್ದವು,ಯೋಗದಲ್ಲಿಯೂ ಕೋಮುವಾದವನ್ನು ಕಂಡಂತಹ ಮಹಾನುಭಾವರು ಭಾರತದಲ್ಲಿದ್ದಾರೆ. ಪ್ರಧಾನ ಮಂತ್ರಿಗಳ ಅಧಿಕೃತ ನಿವಾಸದಲ್ಲಿ ನವಿಲು ಆಗಮಿಸಿದ್ದನ್ನೂ ಸಹ ವಿರೋಧ ಪಕ್ಷಗಳು ಟೀಕಿಸಿದ್ದವು, ಷಣ್ಮುಖನ ವಾಹನವೆಂದು ಸನಾತನ ಧರ್ಮದಲ್ಲಿ ನವಿಲನ್ನು ಕಾಣಲಾಗುತ್ತದೆ. ಮೋದಿಯವರ ರಾಜಕೀಯ ನಿಲುವುಗಳಲ್ಲಿ ಅಧ್ಯಾತ್ಮವನ್ನು ಸ್ಪಷ್ಟವಾಗಿ ಕಾಣಬಹುದು. ಅಧ್ಯಾತ್ಮವೆಂಬುದು ಇಂದು ನೆನ್ನೆಯದಲ್ಲ, ಪ್ರಕೃತಿಯಲ್ಲಿರುವ ಸಕಲ ಜೀವಿಗಳಲ್ಲೂ ದೇವರನ್ನು ಕಾಣುವ ಸಂಸ್ಕೃತಿ ಸನಾತನ ಧರ್ಮದಲ್ಲಿ ಮಾತ್ರ ಕಾಣಬಹುದು. ಸಾವಿರಾರು ವರ್ಷಗಳಿಂದ ಅನೇಕ ಋಷಿ ಮುನಿಗಳು, ಸನ್ಯಾಸಿಗಳು, ಸ್ವಾಮೀಜಿಗಳು ಆಧ್ಯಾತ್ಮಕ್ಕೆ ಮೊರೆ ಹೋಗಿದ್ದಾರೆ. ದೈನಂದಿನ ಬದುಕಿನ ಒತ್ತಡಗಳನ್ನು ನಿವಾರಿಸಿಕೊಳ್ಳಲು ಇಂಗ್ಲಿಷರ ಮಾತ್ರೆಗಳು ತಾತ್ಕಾಲಿಕವಾಗಿ ಮಾತ್ರ ಉಪಯೋಗಕ್ಕೆ ಬರುತ್ತವೆ, ಆದರೆ ಧ್ಯಾನವೆಂಬುದು ದೀರ್ಘಾವಧಿಯ ಔಷಧಿ. ಸ್ವಾಮಿ ವಿವೇಕಾನಂದರು ಕನ್ಯಾಕುಮಾರಿಯ ಬಂಡೆಯ ಮೇಲೆ ಕುಳಿತು ಧ್ಯಾನ ಮಾಡುವಾಗ ಅವರಿಗೆ ಭವ್ಯ ಭಾರತದ ಭವಿಷ್ಯ ಕಂಡಿತ್ತು, ತರುಣ ಪಡೆಯನ್ನು ಕಟ್ಟಿಕೊಂಡು ಸದೃಢ ಭಾರತವನ್ನು ಕಟ್ಟುವ ಭವಿಷ್ಯ ಅವರ ಮುಂದಿತ್ತು. ಮೋದಿಯವರು ಈಗಾಗಲೇ ತಮ್ಮ ಮೂರನೇ ಅವಧಿಯಲ್ಲಿನ ಮೊದಲ 125 ದಿನಗಳ ಯೋಜನೆಗಳ ನೀಲನಕ್ಷೆಯನ್ನು ತಯಾರಿಸಿದ್ದಾರೆ, ಅದರಲ್ಲಿ 25 ದಿನಗಳು ಯುವಕರ ಯೋಜನೆಗಳಿಗೆ ಮೀಸಲಿಟ್ಟಿದ್ದೇನೆಂದು ಹೇಳಿದ್ದಾರೆ. ಸ್ವಾಮಿ ವಿವೇಕಾನಂದರ ಚಿಂತನೆಯಂತೆ ಯುವಕರನ್ನು ಬಳಸಿಕೊಂಡು ಸದೃಢ ದೇಶ ಕಟ್ಟುವ ಯೋಚನೆಯಲ್ಲಿ ಮೋದಿಯವರು ಕನ್ಯಾಕುಮಾರಿಯಲ್ಲಿ ಧ್ಯಾನದಲ್ಲಿ ತೊಡಗಿದ್ದಾರೆ. ಮೋದಿಯವರ ಧ್ಯಾನದಲ್ಲಿ ಹಲವು ವಿಷಯಗಳ ಚಿಂತನೆಗಳಿವೆ, ತಮ್ಮ ಆಡಳಿತದ ಮೊದಲ ಐದು ವರ್ಷಗಳಲ್ಲಿ ಹಿಂದಿನ ಸರಕಾರ ಮಾಡಿದ ಕೊಳೆಯನ್ನು ತೊಳೆದದ್ದು,ನೋಟು ಅಮಾನೀಕರಣ, ಜಿಎಸ್‌ಟಿ ಯಂತಹ ಪ್ರಮುಖ ನಿರ್ಧಾರಗಳು, ಎರಡನೇ ಅವಧಿಯಲ್ಲಿ ತೆಗೆದುಕೊಂಡಂತಹ ಐತಿಹಾಸಿಕ ನಿರ್ಧಾರವಾದ ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದತಿ, ಕರೋನ ಮಹಾಮಾರಿಯನ್ನು ನಿಯಂತ್ರಿಸಿದ ಪರಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆದಂತಹ ಹಲವು ಬೆಳವಣಿಗೆಗಳು, ಮಹಿಳೆಯರ ಮೀಸಲಾತಿ, ವಿಶ್ವದ ಆರ್ಥಿಕತೆಯಲ್ಲಿ ಭಾರತ ಐದನೇ ಸ್ಥಾನದಲ್ಲಿ ನಿಂತಿರುವುದು. ಮೂರನೇ ಅವಧಿಯಲ್ಲಿ ಭಾರತದವನ್ನು ಜಗತ್ತಿನ ಮೂರನೇ ಆರ್ಥಿಕತೆಗೆ ತೆಗೆದುಕೊಂಡು ಹೋಗುವುದು, ಒಂದು ದೇಶ ಒಂದು ಚುನಾವಣೆ, ಏಕರೂಪ ನಾಗರೀಕ ಸಂಹಿತೆ ಹೀಗೆ ಹತ್ತು ಹಲವು ವಿಷಯಗಳ ಪರಾಮರ್ಶೆ ಮತ್ತು ನೂತನ ಯೋಜನೆಗಳಿವೆ. ವಿವೇಕಾನಂದರು ಸದೃಢ ದೇಶ ಕಟ್ಟುವ ನಿಟ್ಟಿನಲ್ಲಿ ಧ್ಯಾನ ಮಾಡಿದ ಜಾಗದಲ್ಲಿ ಮೋದಿಯವರು ಧ್ಯಾನ ಮಾಡುವುದನ್ನೂ ರಾಜಕೀಯ ಮಾಡುವ ವಿರೋಧ ಪಕ್ಷಗಳಿಗೆ, ಕಾಮಾಲೆ ಕಣ್ಣಿಗೆ ಕಂಡಿದ್ದೆಲ್ಲಾ ಹಳದಿಯಂತಾಗಿದೆ. ಒಟ್ಟಿನಲ್ಲಿ ಮೋದಿಯವರ ಕನ್ಯಾಕುಮಾರಿಯ ಬಂಡೆಯ ಮೇಲಿನ 'ಜಪ' ವಿರೋಧಿಗಳ ಬುಡದ 'ತಾಪ'ವನ್ನು ಹೆಚ್ಚಿಸಿರುವುದಂತೂ ನಿಜ.

ಉದ್ಯೋಗ ಸೃಷ್ಟಿ: ಬಿಳಿ ಕಾಲರ್ ಮಾತ್ರಾನಾ?

ಅಭಿಮತ

ಮೋಹನದಾಸ ಕಿಣಿ
vveditoped@gmail.com

ಪ್ರಧಾನಿ ಮೋದಿಯವರು ದುಡಿದು ಸಂಪಾದಿಸುವ ಮನಸ್ಸಿದ್ದರೆ ಪಕೋಡಾ ಮಾರಾಟದಿಂದಲೂ ಲಕ್ಷಾಂತರ ರುಪಾಯಿ ಸಂಪಾದಿಸಬಹುದು ಎಂದು ಮಾತಿನ ಓಘದಲ್ಲಿ ಹೇಳಿದ್ದರು. ಅಷ್ಟಕ್ಕೇ ವಿಪಕ್ಷದ ನಾಯಕರೆಲ್ಲರೂ ಇನ್ನಿಲ್ಲದ ಗದ್ದಲವೆಬ್ಬಿಸಿದ್ದು ಹಳೆಯ ಕತೆ. ಆದರೆ, ಹೀಗೆ ಹೇಳುವ ಮೂಲಕ ಪದವಿ, ತಾಂತ್ರಿಕ ಪದವಿ ಪಡೆದವರು ಬೀದಿ ಬದಿಯಲ್ಲಿ ಪಕೋಡ ಮಾರಬೇಕೇ ಎಂಬ ವಾದವನ್ನು ಮುಂದಿಟ್ಟು ಬೀದಿ ಬದಿಯ ವ್ಯಾಪಾರಿಗಳನ್ನು ಪರೋಕ್ಷವಾಗಿ ಅವಮಾನಿಸಿದರೆಂದರೆ ತಪ್ಪಾಗಲಾರದು. ಒಂದು ಚಿಕ್ಕ ಉದಾಹರಣೆ ನೋಡಿ: ಓರ್ವ ವರದಿಗಾರನ ಎದುರು ಎಂಬಿಎ ಪದವೀಧರ(?)ನೊಬ್ಬನು ಧ್ವನಿಯೇರಿಸಿ ಮಾತನಾಡುತ್ತಾ, ನನಗೆ ನನ್ನ ಹೆತ್ತವರು ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಎಂಬಿಎ ಕಲಿಸಿದ್ದಾರೆ, ಆದರೆ ನನಗೆ ಸಿಕ್ಕಿದ ಉದ್ಯೋಗ ಕೇವಲ 20,000/– ವೇತನ ತರುವಂತಹದ್ದು. ಇದು ದೇಶದ ಪರಿಸ್ಥಿತಿ ಎನ್ನುತ್ತಾನೆ. ಆದರೆ ಆತನಿಗೆ ಎಂಬಿಎ ಪದವಿಯೆಂದರೇನೆಂದೇ ಗೊತ್ತಿಲ್ಲ. ಒಂದನೇಯದಾಗಿ, ಆತ ಎಂಬಿಎ ಮಾಡಿದ್ದೇನೆಂದು ಹೇಳಿದ್ದೇ ಸುಳ್ಳು. ಏಕೆಂದರೆ ಆತನಿಗೆ ಎಂಬಿಎ ಪದವಿಯ ವಿಸ್ತೃತ ರೂಪವೇ ಗೊತ್ತಿಲ್ಲ. ಎರಡನೆಯದಾಗಿ ಕಲಿತ ಕೂಡಲೇ ಸರಕಾರ ಆತನಿಗೆ ಲಕ್ಷಗಟ್ಟಲೆ ವೇತನದ ಉದ್ಯೋಗ ನೀಡಬೇಕಿತ್ತು ಎಂದು ನಿರೀಕ್ಷಿಸುವುದು ಕೂಡಾ ತಪ್ಪು. ವರದಿಗಾರ ಮುಂದುವರಿದು, ನೀವು ಎಂಬಿಎ ಕಲಿತದ್ದು ನಿಜವೇ ಆಗಿದ್ದರೆ, ಸರಕಾರ ಒದಗಿಸುವ ಕಡಿಮೆ ಬಡ್ಡಿ ಸಾಲ ಮತ್ತಿತರ ಸೌಲಭ್ಯಗಳನ್ನು ಪಡೆದುಕೊಂಡು ಸ್ವಂತ ಉದ್ಯಮ ಸ್ಥಾಪಿಸಿ, ಇನ್ನೂ ಕೆಲವರಿಗೆ ಉದ್ಯೋಗ ಕೊಡಬಹುದಿತ್ತು ಎನ್ನುತ್ತಾರೆ. ಅದಕ್ಕೆ ಪ್ರತಿಕ್ರಿಯಿಸಿದ ಪದವೀಧರ (?) ನಾನು ಎಂಬಿಎ ಮಾಡಿದ್ದು ಪಕೋಡ ಮಾಡುವ ಬೀದಿ ಬದಿ ಅಂಗಡಿ ಮಾಡುವುದಕ್ಕಾ? ಎನ್ನುತ್ತಾನೆ! ಸಾಲದ್ದಕ್ಕೆ ಓರ್ವ ಸಚಿವರು; ಪ್ರಧಾನಿಯವರು ವರ್ಷಕ್ಕೆ ಕೋಟಿ ಉದ್ಯೋಗ ಸೃಷ್ಟಿಸುವ ಆಶ್ವಾಸನೆ ಕೊಟ್ಟಿರುವುದನ್ನು ಈಡೇರಿಸಿಲ್ಲ. ಆದ್ದರಿಂದ ಮೋದಿಯವರ ಹೆಸರು ಯಾರೇ ಹೇಳಿದರೂ ಅವರ ಕೆನ್ನೆಗೆ ಬಾರಿಸಿ! ಇವೆಲ್ಲದರ ಒಟ್ಟು ಅರ್ಥ, ಕಲಿಯುವುದಕ್ಕೆ ಸಾಲ ಕೊಡುವುದು ಮಾತ್ರವಲ್ಲ, ಕಲಿತಾದ ನಂತರ ದೊಡ್ಡ ಮೊತ್ತದ ವೇತನದೊಂದಿಗೆ ಬಿಳಿ ಕಾಲರ್ ಉದ್ಯೋಗ ನೀಡುವುದೂ ಸರಕಾರದ ಜವಾಬ್ದಾರಿಯೇ? ಪ್ರತಿಯೊಬ್ಬರೂ ಬಿಳಿ ಕಾಲರ್ ಉದ್ಯೋಗವನ್ನೇ ನಿರೀಕ್ಷಿಸಿದರೆ ಅದನ್ನು ಪೂರೈಸುವುದು ಸರಕಾರದ ಜವಾಬ್ದಾರಿ ಎನ್ನುವುದು ಕಾರ್ಯಸಾಧ್ಯವೇ? ಹಾಗೆ ವಾದಿಸುವವರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಉದ್ಯೋಗ ಮಾಡುತ್ತಿರುವವರ ಬಗ್ಗೆ ಒಂದಿಷ್ಟು ದೃಷ್ಟಿ ಹರಿಸಬೇಕು. ಉನ್ನತ ತಾಂತ್ರಿಕ ಪದವಿ ಪಡೆದು, ವಿದೇಶದಲ್ಲಿ ಭಾರೀ ಮೊತ್ತದ ವೇತನ ಬರುತ್ತಿದ್ದರೂ ಅದನ್ನು ತ್ಯಜಿಸಿ ಸ್ವದೇಶಕ್ಕೆ ಬಂದು ಕೃಷಿ, ಸಣ್ಣ ಉದ್ದಿಮೆ ಅಥವಾ ಕೆಲವೊಂದು ಪ್ರಕರಣಗಳಲ್ಲಿ ಹತ್ತಾರು ಮಂದಿ ಒಟ್ಟು ಸೇರಿ, ಸಾಕಷ್ಟು ದೊಡ್ಡದೇ ಎನ್ನಬಹುದಾದ ಉದ್ಯಮವನ್ನು ಸ್ಥಾಪಿಸಿ, ಸ್ವೋದ್ಯೋಗದ ಜತೆಗೆ ಇನ್ನೂ ಒಂದಷ್ಟು ಜನರಿಗೆ ಉದ್ಯೋಗ ನೀಡಿದ ಪ್ರಕರಣಗಳು ಸಾಕಷ್ಟಿವೆ.

ಇನ್ನೂ ಕೆಲವು ಉದಾಹರಣೆ ನೋಡೋಣ: ಜಾತ್ರೆ, ಉತ್ಸವಾದಿಗಳ ಕಾಲದಲ್ಲಿ ಮಾತ್ರವಲ್ಲ ಅದು ಆರಂಭವಾಗುವ ಬಹಳಷ್ಟು ಮುಂಚಿತವಾಗಿಯೇ ಜಾತ್ರೆಯಲ್ಲಿ ಮಾರಾಟ ಮಾಡುವ ಆಟಿಕೆಗಳು, ತಿಂಡಿ ತಿನಿಸುಗಳನ್ನು ಹತ್ತಾರು ಜನರು ಸೇರಿ ತಯಾರಿಸುತ್ತಾರೆ. ಬೇರೆ ಬೇರೆ ಜಾತ್ರೆಗಳಲ್ಲಿ ಕೆಲವರು ಸೇರಿ ಅವುಗಳನ್ನು ಚಿಕ್ಕ-ಚಿಕ್ಕ ಮಳಿಗೆಗಳನ್ನು ತೆರೆದು ವ್ಯಾಪಾರ ಮಾಡುತ್ತಾರೆ. ಮೇಲ್ನೋಟಕ್ಕೆ ಇದು ಸಣ್ಣದಾಗಿ ಕಾಣಿಸಿದರೂ ಒಟ್ಟಾರೆ ನೂರಾರು ಜನರಿಗೆ

ಉದ್ಯೋಗ ಒದಗಿಸುತ್ತದೆ. ರಮ್ಜಾನ್ ಮಾಸದಲ್ಲಿ ಸಮೋಸ ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುವ ತಿನಿಸುಗಳಲ್ಲಿ ಒಂದು. ಅದನ್ನು ತಯಾರಿಸುವ ಹಂತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಅಲ್ಲಲ್ಲಿ ಮಾರಾಟ ಮಾಡುವ ಜನರಿಗೆ ಸಣ್ಣ ಪ್ರಮಾಣದ ಉದ್ಯೋಗವೇ ಆದರೂ ಒಟ್ಟು ಸೇರುವಾಗ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸಿದಂತೆ ತಾನೇ? ಇದೆಲ್ಲಾ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉದ್ಯೋಗಗಳೇ ಅಲ್ಲವೇ? ಓರ್ವ ಪವರ್ ಎಲೆಕ್ಟ್ರಾನಿಕ್ಸ್ ಸ್ನಾತಕೋತ್ತರ ಪದವೀಧರ ಸಿಸಿ ಕ್ಯಾಮೆರಾ ಅಳವಡಿಸುವ ಉದ್ಯಮವನ್ನು ಸ್ಥಾಪಿಸಿ, ತನ್ನ ಸಂಸ್ಥೆಯಲ್ಲಿ ಇಪ್ಪತ್ತೈದು ಸಿಬಂದಿ ನೇಮಿಸಿಕೊಂಡಿದ್ದಾರೆ. ಅದಕ್ಕೂ ಮೊದಲು ಅವರು ಬಹುರಾಷ್ಟ್ರೀಯ ಸಂಸ್ಥೆಯಲ್ಲಿ ತಿಂಗಳಿಗೆ ಲಕ್ಷ ರುಪಾಯಿಯಷ್ಟು ವೇತನದ ಉದ್ಯೋಗದಲ್ಲಿದ್ದವರು. ಸರಕಾರದ ಬಹಳಷ್ಟು ಯೋಜನೆಗಳು ಜನರಿಗೆ ಉಪಯೋಗವಾಗುವ ರೀತಿಯಲ್ಲಿ ಇರುವುದರ ಜತೆಗೆ ಇಂತಹ ಅದೆಷ್ಟೋ ಜನರು ಉದ್ಯೋಗ ಬಿಟ್ಟು ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು, ಬೇರೆ ಸಂಸ್ಥೆಗಳ ಉದ್ಯೋಗಿಗಳಿಗೆ ಕಾರ್ಮಿಕ ಭವಿಷ್ಯ ನಿಧಿ, ಉದ್ಯೋಗಿಗಳ ವೈದ್ಯಕೀಯ ಸೌಲಭ್ಯ(ಉಖಐ) ಹೀಗೆ ಬಹಳಷ್ಟು ರೀತಿಯಲ್ಲಿ ಸ್ವ ಉದ್ಯೋಗ ಮಾಡುವ ಜೊತೆಗೆ ಇನ್ನಷ್ಟು ಜನರಿಗೆ ಉದ್ಯೋಗವನ್ನು ಕೂಡಾ ಕೊಟ್ಟಿದ್ದಾರೆ. ಇದೆಲ್ಲವೂ ಒಂದು ರೀತಿಯಲ್ಲಿ ಬಿಳಿ ಕಾಲರ್ ಉದ್ಯೋಗಗಳೇ ತಾನೇ? ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಜನೌಷಧಿ ಘಟಕಗಳನ್ನು ಸ್ಥಾಪಿಸುವ ಮೂಲಕ, ಒಂದೆಡೆ ಜನರಿಗೆ ಕಡಿಮೆ ದರದಲ್ಲಿ ಔಷಧಿ ಸಿಕ್ಕರೆ, ಇನ್ನೊಂದೆಡೆ ಅಂತಹ ಘಟಕಗಳ ಸ್ಥಾಪನೆಗೆ ಕಡಿಮೆ ಬಡ್ಡಿಯ ಸಾಲ, ಸಬ್ಸಿಡಿ ಇನ್ನೂ ಹಲವು ಸೌಲಭ್ಯಗಳನ್ನು ನೀಡುತ್ತದೆ, ಕೇಂದ್ರ ಸರಕಾರ. ಹಿಂದಿನಿಂದಲೂ ಹಳ್ಳಿ ಪ್ರದೇಶ ಬಿಟ್ಟು ಮುಂಬೈ ಸೇರಿದ ಅದೆಷ್ಟೋ ಮಂದಿ, ರೈಲ್ವೇ ನಿಲ್ದಾಣದಲ್ಲಿ ಟೀ-ಕಾಫಿ ಮಾರಾಟದಿಂದ, ನಿಲ್ದಾಣದ ಹೊರಗೆ ಕರವಸ್ತ್ರ ಮಾರಾಟ ಮಾಡಿ ಮನೆ ಖರೀದಿ ಮಾಡಲು ಸಾಧ್ಯವಾಗುವಷ್ಟು ಆದಾಯ ಗಳಿಸಿದ ಉದಾಹರಣೆಗಳಿವೆ. ಓರ್ವ ಸೆಲೂನ್ ಮಾಲೀಕ ಅನಿರೀಕ್ಷಿತವಾಗಿ ನಿಧನ ಹೊಂದುತ್ತಾನೆ. ಆಗ ಆತನ ಮಗಳು ಒಂದಿಷ್ಟು ದಿನ ದಿಕ್ಕು ತೋಚದೇ ಕುಳಿತುಕೊಳ್ಳುತ್ತಾಳೆ. ಆದರೆ ತಂದೆ ಜೀವಂತವಿದ್ದಾಗ ಮಗಳು ಪ್ರತೀದಿನ ತಂದೆಯೊಂದಿಗೆ ಬಂದು ಅವರು ಮಾಡುತ್ತಿದ್ದ ಕೆಲಸವನ್ನು ಗಮನಿಸುತ್ತಿದ್ದಳು. ಆದ್ದರಿಂದ ಆಕೆ ಗಟ್ಟಿ ಮನಸ್ಸು ಮಾಡಿ ಸೆಲೂನ್ ಬಾಗಿಲು ತೆರೆದು ಕುಳಿತೇ ಬಿಟ್ಟಳು. ಕ್ರಮೇಣ ಗ್ರಾಹಕರು ಬಂದರು. ವ್ಯಾಪಾರ ವೃದ್ಧಿಸಿತು. ಮನಸ್ಸಿದ್ದರೆ ಮಾರ್ಗವಿದೆ ಎಂಬುದನ್ನು ಇದು ತೋರಿಸುತ್ತದೆ. ಪ್ರವಾಸಿ ತಾಣಗಳಲ್ಲಿ ಚಿಕ್ಕ ಪುಟ್ಟ ಅಂಗಡಿಗಳು, ದೇವಸ್ಥಾನಗಳ ಹತ್ತಿರ ಹಣ್ಣು, ಬತ್ತಿ, ಇನ್ನೂ ಹಲವಾರು ರೀತಿಯ ವ್ಯಾಪಾರ ಮೇಲ್ನೋಟಕ್ಕೆ ಚಿಕ್ಕದೆಂದು ಕಂಡರೂ ಒಂದೆಡೆ ಪ್ರತ್ಯಕ್ಷವಾಗಿ, ಅಲ್ಲಿ ಮಾರಾಟಕ್ಕೆ ಇಡುವ ವಸ್ತುಗಳನ್ನು ಸ್ಥಳೀಯವಾಗಿ ತಯಾರಿಸುವ ಹಲವರಿಗೆ ಉದ್ಯೋಗ ಒದಗಿಸುತ್ತದೆ. ಇಡ್ಲಿ, ಶ್ಯಾವಿಗೆ ಮುಂತಾದ ಹಲವಾರು ಬಗೆಯ ತಿಂಡಿಗಳನ್ನು ಮನೆಯಲ್ಲಿ ತಯಾರಿಸಿ ಒದಗಿಸುವ ಗೃಹೋದ್ಯಮವೂ ಸಾಕಷ್ಟು ಜನರಿಗೆ ಉದ್ಯೋಗ ಒದಗಿಸುತ್ತದೆ. ಕರಾವಳಿ ಜಿಲ್ಲೆಗಳಲ್ಲಿ ಮನೆಗಳಲ್ಲಿ ಬೀಡಿ ಸುತ್ತಿ ಕೊಡುವ ಉದ್ಯೋಗ ಬಹಳ ಹಿಂದಿನಿಂದಲೂ ಹಲವಾರು ಮನೆಗಳಲ್ಲಿ ಸಂಪಾದನೆಯ ಏಕೈಕ ಮಾರ್ಗವಾಗಿದೆ.

ಒಟ್ಟಿನಲ್ಲಿ ಮನಸ್ಸಿದ್ದರೆ ಮಾರ್ಗ ಎಂಬ ತತ್ವವನ್ನು ಪಾಲಿಸಿಕೊಂಡು ಬಂದು ಪ್ರಾಮಾಣಿಕವಾಗಿ ದುಡಿದು ತಿನ್ನುವ ಮನಸ್ಸಿದ್ದರೆ ಯಾವುದೂ ಕೀಳಲ್ಲ. ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿರುವುದು ಸಾರ್ವಕಾಲಿಕ ಸತ್ಯ. ನಾವದನ್ನು ಅರ್ಥ ಮಾಡಿಕೊಂಡು ಪಾಲಿಸಬೇಕು, ಅಷ್ಟೇ, ಆಗ ಎಲ್ಲವೂ ಸಲೀಸು.

(ಲೇಖಕರು: ನಿವೃತ್ತ ಕಚೇರಿ ಅಧೀಕ್ಷಕ, ಆರೋಗ್ಯ ಇಲಾಖೆ ಮತ್ತು ಹವ್ಯಾಸಿ ಬರಹಗಾರ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

4ರವರೆಗೂ ಕಾಯೋಣ!

ಸಾಮಾನ್ಯವಾಗಿ, ಎಡೆಬಿಡದ ಕೆಲಸದಿಂದ ದಣಿದವರು ವಿಶ್ರಾಂತಿಗೆಂದು ಯಾವುದೇ ರೆಸಾರ್ಟ್, ಪ್ರತಿಷ್ಠಿತ ಸ್ಥಳ, ಅದರಲ್ಲೂ ವಿಶೇಷವಾಗಿ ವಿದೇಶಕ್ಕೆ ತೆರಳುವುದನ್ನು ಕಂಡಿದ್ದೇವೆ. ಆದರೆ ಈ ಬಾರಿ ಲೋಕಸಭಾ ಚುನಾವಣೆ ಸಮಯ 206 ರ್ಯಾಲಿ, 82 ದಿನಗಳ ಪ್ರಚಾರ, ಅದೂ ದೇಶದ ಉದ್ದಗಲ, ಒಂದೇ ಸಮನೆ ತನ್ನನ್ನು ತಾನು ತೊಡಗಿಸಿಕೊಂಡ ಮೋದಿ, ಹೋಗಿದ್ದು ಕನ್ಯಾಕುಮಾರಿಯ, ಸ್ವಾಮಿ ವಿವೇಕಾನಂದ ಅವರು ಧ್ಯಾನ ಮಾಡಿದ್ದ ಜಾಗ. ಅಲ್ಲೇ ಎರಡು ದಿನಗಳ ಧ್ಯಾನದಲ್ಲಿ ತೊಡಗಿಕೊಳ್ಳಲಿದ್ದಾರೆ. ಇಷ್ಟೇ ಅಲ್ಲ ಆ ಎರಡು ದಿನಗಳ ಕಾಲ ಉಪವಾಸವನ್ನೂ ಆಚರಿಸಲಿದ್ದಾರೆ. ಈ ಸಮಯ ಕೇವಲ ಹಣ್ಣಿನ ರಸ ಮತ್ತು ನೀರು ಅಷ್ಟೇ. ಮೋದುಯವರಿಗೆ ಈ ಉಪವಾಸ ವ್ರತ ಹೊಸದೇನಲ್ಲ, ಪ್ರತಿ ವರ್ಷ ನವರಾತ್ರಿಯ ಒಂಬತ್ತು ದಿನ ಉಪವಾಸ. ಅಷ್ಟೇ ಏಕೆ, ರಾಮಲಲ್ಲಾ ಪ್ರತಿಷ್ಠಾಪನೆಯ ವೇಳೆ ಹನ್ನೊಂದು ದಿನದ ಉಪವಾಸ ಮಾಡಿದ್ದಾರೆ.

ಅಷ್ಟಕ್ಕೂ ಮೋದಿಯವರಿಗೆ ಉಪವಾಸ-ವನವಾಸದಿಂದ ಯಾವುದೇ ಶಾರೀರಿಕ ಅಥವಾ ಮಾನಸಿಕ ಅಸ್ಥಿರತೆ ಕಂಡುಬರುವುದಿಲ್ಲ ಬದಲಿಗೆ, ಮೊದಲಿಗಿಂತ ಹೆಚ್ಚು ಉತ್ಸುಕರಾಗಿ, ಚೈತನ್ಯಹೊಂದಿ ತಮ್ಮ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ. ಅಂತಹ ಸಮಯದಲ್ಲೂ ದಣಿವಾದವರಂತೆಯೂ ಕಾಣುವುದಿಲ್ಲ.

ಇದೆಲ್ಲ ಹೇಗೆ ಸಾಧ್ಯವಾದೀತು ಅಂತ ಅನಿಸುವುದೂ ಸಹಜವೆ. ಆದರೆ ಮೋದಿ ವ್ಯಕ್ತಿತ್ವವೇ ಹಾಗೆ. ಚಿಕ್ಕಂದಿನಿಂದಲೂ ಶಿಸ್ತು ಪಾಲಿಸಿಕೊಂಡು ಬರುತ್ತಿದ್ದವರಿಗೆ ಇವೆಲ್ಲ ತೀರಾ ಸಾಮಾನ್ಯ ಅಂದುಕೊಳ್ಳೋಣವೆ? ಶಾರೀರಿಕ ದಣಿವು ಎಂಬುದೂ ಮಾನಸಿಕ ಸಸ್ಥಿತಿಯನ್ನು ಆಧಾರಿಸಿ ಇದ್ದೂತೆ ? ಧ್ಯಾನ, ಏಕಾಗ್ರತೆ, ತನ್ನನ್ನು ತಾನು ಒಳಗಿನಿಂದ ನೋಡಿಕೊಳ್ಳುವುದು, ಮನುಷ್ಯನಲ್ಲಿ ಹೆಚ್ಚಿನ ಶಕ್ತಿಯನ್ನು ತರುತ್ತಿರಬಹುದೆ ? ಅದಲ್ಲ ಅಂದರೆ, ಚುನಾವಣೆ ಘೋಷಣೆ ಆದಾಗಿನಿಂದ, ಬಹಿರಂಗ ಪ್ರಚಾರ ಅಂತ್ಯಗೊಳ್ಳುವ ತನಕ ಎಡೆಬಿಡದೇ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶ ಸುತ್ತಾಡುತ್ತ, ಈ ಮಧ್ಯೆ ಹಲವರ 'ಆಶೀರ್ವಾದ' ಪಡೆಯುತ್ತ, ಸ್ವಲ್ಪವೂ ಧೃತಿಗೆಡದೆ, ಏಕಚಿತ್ತನಾಗಿ, ತನ್ನ ಕೆಲಸ ಕಾರ್ಯಗಳಲ್ಲಿ ಮಗ್ನನಾಗಿ, ಪ್ರಚಾರ ಕಾರ್ಯ ಮುಗಿದ ಮೇಲೂ ಮತ್ತೂ ತನ್ನ ಶರೀರವನ್ನು ದಂಡಿಸಿಕೊಳ್ಳುವುದು ಬೇಕಿತ್ತೇ ಅಂತ ನಮ್ಮಂತ ಹಲವರಿಗೆ ಅನಿಸಿದರೂ ತಪ್ಪಲ್ಲ, ಇಂದಿನ ಮೋದಿ ನಡೆಸಾಮಾನ್ಯದದ್ದಾಗಿ ಕಾಣುತ್ತಲೇ ಇಲ್ಲ, ಇಷ್ಟೆಲ್ಲ ಬೇಕಿತ್ತೇ ಅಂತಲೂ ಅನಿಸುತ್ತಿದೆ. ಆದರೆ ಅವರ ಲೆಕ್ಕಾಚಾರವೇ ಬೇರೆ ಎಂಬುದನ್ನು ವಿವರಿಸಬೇಕಾಗಿಲ್ಲ, ಮನಸ್ಸು ಶಾಂತವಾಗಿದ್ದರೆ, ಎಷ್ಟೇ ತೊಂದರೆ, ತಾಪತ್ರಯಗಳು ಬಂದರೂ ಅವುಗಳನ್ನು ಸಲೀಸಾಗಿ ನಿಭಾಯಿಸಬಹುದು ಎಂಬುದನ್ನು ಮೋದಿ ಕಂಡುಕೊಂಡಿರಲೇ ಬೇಕು. ಇಲ್ಲಾ ಅಂದರೆ ಯಾರು ತಾನೆ ಈ ಉಪದ್ವ್ಯಾಪಕ್ಕೆ ಮುಂದಾಗುತ್ತಿದ್ದರು.

ಒಂದಂತೂ ನಿಜ. ಈ ಎರಡು ದಿನಗಳ ಧ್ಯಾನದ ಬಳಿಕ ಮತ್ತೆ ರೀ-ಚಾರ್ಜ್ ಆಗಿ, ಮುಂದಿನ ಇನ್ನಿಂಗ್ಸ್ ಆಡಲು ಸಜ್ಜಾಗುತ್ತಾರೆ! ಇನ್ನೇನು. ಜೂನ್ 4 , ಹತ್ತಿರವೇ ಇದೆ. ಅಂದೇ ಎಲ್ಲವೂ ಸ್ಪಷ್ಟವಾಗಿ ಬಿಡುತ್ತದೆ. ಅಲ್ಲಿಯ ತನಕ ಕಾಯೋಣವೆ?

–ಶಂಕರನಾರಾಯಣ ಭಟ್ ಮಾಡಗೇರಿ, ಹೊನ್ನಾವರ

ಗ್ರಾಮೀಣ ಸೇವೆ: ಸ್ವಾಗತಾರ್ಹ

'ವೈದ್ಯೋ ನಾರಾಯಣೋ ಹರಿಃ' ಎಂಬ ಉಕ್ತಿಯಂತೆ ವೈದ್ಯನಾದವನು ದೇವರಿಗೆ ಸಮಾನವಾದವರು ಎಂದೂ ಕರೆಯಲಾಗುತ್ತದೆ. ಪ್ರಸ್ತುತ ಸರಕಾರಿ ಕೋಟಾದಲ್ಲಿ ಸರ್ಕಾರಿ ಕಾಲೇಜು ಮತ್ತು ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪ್ರವೇಶ ಪಡೆದ ವಿದ್ಯಾರ್ಥಿಗಳು ಕೋರ್ಸ್ ಮುಗಿಸಿದ ನಂತರ ಗ್ರಾಮೀಣ ಭಾಗದಲ್ಲಿ ನಿರ್ದಿಷ್ಟ ಅವಧಿಗೆ ಸೇವೆ ಸಲ್ಲಿಸಬೇಕೆಂದು ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪು ಸುಸ್ವಾರ್ಹ.

ಗ್ರಾಮೀಣ ಸೇವೆಯನ್ನು ಪ್ರಶ್ನಿಸಿ 447 ವೈದ್ಯರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು ಒಟ್ಟಿಗೆ ವಿಚಾರಣೆ ಮಾಡಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿ ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯಗೊಳಿಸಿರುವ ತೀರ್ಪು ಸ್ವಾಗತಾರ್ಹವಾಗಿದೆ.

ಇದರಿಂದಾಗಿ ಗ್ರಾಮೀಣ ಭಾಗದಲ್ಲಿ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯುತ್ತದೆ. ಹಳ್ಳಿಗಳಲ್ಲಿ , ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುವ ಜನಗಳಿಗೆ ಉತ್ತಮ ಗುಣಮಟ್ಟದ ವೈದ್ಯಕೀಯ ಸೌಲಭ್ಯ ದೊರೆಯುತ್ತದೆ.

ಜೊತೆಗೆ ರಾಜ್ಯದಲ್ಲಿ 723 ಎಂಬಿಬಿಎಸ್ ವೈದ್ಯರು ,7492 ನರ್ಸ್‌ಗಳ, 1517 ಲ್ಯಾಬ್ ತಂತ್ರಜ್ಞರ, 1512 ಫಾರ್ಮಸಿಸ್ಟಗಳ, 1752 ಸಹಾಯಕರುಗಳ ಮತ್ತು 3253 ಗ್ರೂಪ್ ಡಿ ನೌಕರರುಗಳ ಕೊರತೆಯಿದ್ದು ಈ ತೀರ್ಪುನಿಂದಾಗಿ ಮೇಲಿನ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನೀಗಿಸಬಹುದಾಗಿದೆ.

ಕರ್ನಾಟಕ ರಾಜ್ಯದ ಹೈಕೋರ್ಟ್ ನ ತೀರ್ಪು ಹಳ್ಳಿಗಾಡಿನ ಹೆಂಗಸರು, ಮಕ್ಕಳು, ಹಿರಿಯ ನಾಗರಿಕರಿಗೆ ಅನುಕೂಲವಾಗಲಿದೆ ಮತ್ತು ರಾಜ್ಯದ ಎಲ್ಲಾ ಜನತೆಯ ಪರವಾಗಿ ಹೈಕೋರ್ಟ್‌ಗೆ ಧನ್ಯವಾದಗಳನ್ನು ಸಲ್ಲಿಸೋಣ.

–ರಾಸುಮ ಭಟ್ ಚಿಕ್ಕಮಗಳೂರು

ಭ್ರೂಣ ಹತ್ಯೆ: ತಡೆಯಿಲ್ಲವೇ?

ಬಾಗಲಕೋಟ ಜಿಲ್ಲೆ ಮಹಾಲಿಂಗಾಪುರದಲ್ಲಿ ಮತ್ತೊಂದು ಹೆಣ್ಣುಭ್ರೂಣ ಹತ್ಯೆ ಪ್ರಕರಣ ಬೆಳಕಿಗೆ ಬಂದಿದ್ದು. ಆ ಹೆಣ್ಣು ಮಗಳು ಅಸುನಿಗಿರುವುದು ದುರಾದೃಷ್ಟಕರ ಸಂಗತಿ. ಹೆಣ್ಣು ತಾಯಿಯಾಗಿ ಬೇಕು. ಮಡದಿಯಾಗಿ ಬೇಕು. ಆದರೆ, ಮಗಳಾಗಿ ಮಾತ್ರ ಏಕೆ ಬೇಡ? ಇದು ಸಮಾಜದಲ್ಲಿ ಎಲ್ಲರನ್ನು ಕಾಡುತ್ತಿರುವ ಪ್ರಶ್ನೆ.. ಹೆಣ್ಣನ್ನು ಹುಟ್ಟುವ ಮೊದಲೇ ಹತ್ಯೆ ಮಾಡುವ ಕೆಲಸ ಅವ್ಯಾಹತವಾಗಿ ನಡೆಯುತ್ತಿದೆ. ಇದು ನಿಜಕ್ಕೂ ಆತಂಕಕಾರಿ ಬೆಳವಣಿಗೆ ಕೆಲಸವಾಗಬೇಕು. ಆಗ ಮಾತ್ರ ಹೆಣ್ಣುಭ್ರೂಣ ಹತ್ಯೆ ತಡೆಯಲು ಸಾಧ್ಯ. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು, ಎನ್‌ಜಿಒಗಳು ಸಾಮಾಜಿಕ ಶಕ್ತಿ ಉಪಯೋಗಿಸಬೇಕು. ಇಂತಹ ಕೃತ್ಯಕ್ಕೆ ಮುಂದಾಗುವವರ ಮನೆ ಎದುರು ಪ್ರತಿಭಟನೆ ಅಥವಾ ದೂರು ನೀಡುವ ಎಚ್ಚರಿಕೆ ನೀಡಬೇಕು. ಇದು ಇಂತಹ ಕೃತ್ಯ ಎಸಗುವವರಿಗೆ ಎಚ್ಚರಿಕೆ ಗಂಟೆಯಾಗಬೇಕು.

–ರಂಜಿತ ಎಚ್. ಕೆ. ಹಾಸನ

ಸರಕಾರ ರೈತರ ಪರವಾಗಿರಲಿ

ಮುಂಗಾರು ಮಳೆ ಉತ್ತಮವಾಗಿ ಸುರಿಯುತ್ತಿರುವುದರಿಂದ. ಕೃಷಿ ಚಟುವಟಿಕೆಗಲು ವೇಗ ಪಡೆದು ಕೊಂಡಿವೆ. ಇತ್ತ ಕಳೆದ ವರ್ಷ ಮಳೆ ಇಲ್ಲದೆ ಬರಗಾಲದ ಛಾಯೆ ಆವರಿಸಿ ಕಂಗಾಲಾಗಿದ್ದ ರೈತರಿಗೆ ಭರವಸೆ ಮೂಡಿಸಿದೆ. ಬಿತ್ತನೆ ಬೀಜಗಳ ವಿತರಣೆಯು ಭರದಿಂದ ಸಾಗಿದೆ. ಆದರೆ ಬೀಜಗಳು ಹಿಂದಿನ ವರ್ಷಕ್ಕಿಂತ ಹೆಚ್ಚು ದರ ನಿಗದಿಯಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಬೆಂಬಲ ಬೆಲೆ ಇಲ್ಲದೆ ಪರದಾಡುವುದು ಹೊಸದಲ್ಲ, ಪ್ರತಿಯೊಂದರ ಬೆಲೆ ಗಗನಕ್ಕೇರಿದೆ. ಆದಾಯಕ್ಕಿಂತ ಬದುಕು ಹೆಚ್ಚು ದುಬಾರಿಯಾಗಿರುವದರಿಂದ ರಸಗೊಬ್ಬರ, ಬಿತ್ತನೆ ಬೀಜಗಳು ರೈತರಿಗೆ ಕೈಗೆಟುಕದ ದರದಲ್ಲಿ ಸಿಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಬೆಳೆದ ಬೆಳೆಗಳಿಗೆ ನೀರು ಇಲ್ಲದ ನಷ್ಟ ಅನುಭವಿಸಿದ ಕೃಷಿಕರಿಗೆ ನೆರವಾಗಿ. ರೈತರ ಮೇಲಿನ ಹೊರೆಯನ್ನು ಕಡಿಮೆ ಮಾಡಬೇಕು.

–ಗಾಯತ್ರಿ ಮಾಲಿ ಪಾಟೀಲ್ ಸಿಂಧನೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

• ರಾಘಣ್ಣ, ಮೈಸೂರು
ಭಟ್ರೇ, ಕ್ರಿಕೆಟ್‌ನಲ್ಲಿ ಮೀಸಲಾತಿ ಪ್ರತಿಪಾದಕ ಚೇತನ್ ಕೆಕೆಆರ್ ತಂಡ ಐಪಿಎಲ್ ಗೆದ್ದಾಗ ಏನಂದ್ರಂತೆ?
- ಅಯ್ಯೋ ಬಿಡ್ರಿ, ಗೆದ್ದಿದ್ದು ಅಯ್ಯರ್ ಇಲೆವನ್ ತಾನೇ!?

• ಅಮಾಸೆ ಸುಬ್ಬ, ಮೈಸೂರು
ಸಾರ್, ರಾಜ್ಯವನ್ನೇ ಪೆನ್ ಡ್ರೈವ್ ಪ್ರಕರಣ ಆವರಿಸಿಕೊಂಡಿರುವಾಗ ಮಳೆಯ ಕೇಳಿ ಬರುತ್ತಿರುವ ಆ ಹಾಡು ಯಾವುದು?
- 'ಯಾವ್ಯಾವ ಹೊಳೆಯಲ್ಲಿ ಈಜಾಟ ಆಡಿದರೆ ಓ.....'

• ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)
ಭಟ್ರೇ, ದೇವೇಗೌಡ್ರು, 'ಮಣ್ಣಿನ ಮಗ', ಮೋದಿ 'ದೇವರ ಮಗ', ಹಾಗಾದ್ರೆ ರಾಹುಲ್ ಗಾಂಧಿ ಯಾರು?
- ಸೋನಿಯಾ ಮಗ!

• ಸಂಧ್ಯಾ ಪಿ.ಕೆ., (ಇಮೇಲ್ ಮೂಲಕ)
ಭಟ್ರೇ, ಪೆನ್‌ಡ್ರೈವ್ ಪ್ರಕರಣದಲ್ಲಿ ಗಮನ ಸೆಳೆದವರು ಯಾರು?
- ಕನ್ನಡದ ನ್ಯೂಸ್ ಚಾನೆಲ್ಲುಗಳು!

• ರವಿ ದೇವರಾಯನದುರ್ಗ, (ಇಮೇಲ್ ಮೂಲಕ)
ಭಟ್ರೇ, ಪ್ರಜ್ವಲ್ ಲ್ಯಾಂಡ್ ಆದದ್ದು ಅಷ್ಟು ಪ್ರಮುಖ ಸುದ್ದಿಯಾ?
- ಹೂಂ.. ಚಂದ್ರಯಾನ-ಮೂರು ಚಂದ್ರನ ಮೇಲೆ ಲ್ಯಾಂಡ್ ಆದಾಗ ಇಷ್ಟು ಸುದ್ದಿಯಾಗಿರಲಿಲ್ಲ ಬಿಡು!

• ಪದ್ಮಾ ರಮೇಶ, ಗಿರಿನಗರ
ಭಟ್ರೇ, ಕರ್ನಾಟಕ ಪೊಲೀಸರು ಪ್ರಜ್ವಲ್ ಘಟನೆಯನ್ನು ಲಘುವಾಗಿ ಪರಿಗಣಿಸಿದ್ದಾರಾ?
- ಪ್ರಜ್ವಲ್ ಜತೆಗೆ ಮಹಿಳಾ ಪೊಲೀಸರನ್ನು ನಿಯೋಜಿಸಿದ್ದನ್ನು ಕಂಡು ಈ ಅಭಿಪ್ರಾಯಕ್ಕೆ ಬರಬಾರದಿತ್ತು!

• ಹೆಬ್ಬಗೆ ಶಾಂತಾರಾಮ, ಅಂಕೋಲಾ
ಭಟ್ರೇ, ಪ್ರಜ್ವಲ್ ಮಾಡಿದ ತಪ್ಪೇನು ಅಂತ ನನ್ನ ಮಗ ಕೇಳ್ತಾ ಇದ್ದಾನಲ್ಲ.. ಏನು ಹೇಳಲಿ?
- ದೇವೇಗೌಡರು ಅದೇ ಪ್ರಶ್ನೆ ಕೇಳಿದರಂತೆ!

• ಲಕ್ಷ್ಮಣ ಸಾಗರ, ಅರಸೀಕೆರೆ
ಭಟ್ರೇ, ಶಾಸಕ ಶಿವಲಿಂಗೇಗೌಡರನ್ನು ರೂಪದರ್ಶಿಯನ್ನಾಗಿ ಮಾಡಿ ಯಾವ ಜಾಹೀರಾತನ್ನು ಮಾಡಬಹುದು?
- ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ ಅಕಾಡೆಮಿಗಳಿಗೆ ಅವರಿಂತ ಯಾರು ಸೂಕ್ತ ರೂಪದರ್ಶಿಯಾಗಬಲ್ಲರು?!

ಮಳೆಗಾಲ ಬಂದಾಗ ನಮ್ಮ ದೇಹದಲ್ಲಿ ಏನೇನಾಗುತ್ತೆ ಗೊತ್ತಾ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಇತ್ತೀಚಿನ ಸೈಂಟಿಫಿಕ್ ಪೇಪರ್ಸ್ ನೋಡ್ತಾ ಇದ್ದರೆ 'Epigenetic' ಅನ್ನೋದು ಜೀವಶಾಸ್ತ್ರದಲ್ಲಿ ಜೀವಕೋಶಗಳ ಗಾಢವಾದ ಅಧ್ಯಯನ. ಇನ್ನೂ ಸೂಕ್ಷ್ಮವಾಗಿ ಹೇಳಬೇಕೆಂದರೆ ಜೀನ್ಸ್/ವಂಶವಾಹಿಗಳಿಗೆ ಸಂಬಂಧಪಟ್ಟ ಅಧ್ಯಯನ. ಹಾಗಾದರೆ ಏನು ಹೇಳುತ್ತೆ ಇದು? Epige-netics ಪ್ರಕಾರ ಜೀನ್ಸ್‌ಗಳು ನಮ್ಮ ದೇಹದಲ್ಲಿ ನಡೆಯುವ ಎಲ್ಲಾ ಕ್ರಿಯೆಗಳ ಮೇಲೆ- ತನ್ಮೂಲಕ ನಮ್ಮ ಆರೋಗ್ಯದ ಮೇಲೆ ನೇರವಾದ ಪ್ರಭಾವ ಬೀರುತ್ತೆ. ಆದರೆ ಇದು ಬಹಳ ಹಿಂದಿನ ಮಾತು. Latest news-ಇದೀಗ ಬಂದ ಸುದ್ದಿ ಏನೆಂದರೆ- ಈ ವಂಶವಾಹಿಗಳು ನಮ್ಮ ದೇಹದಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೆ ಅನ್ನೋದು ಬಹಳಷ್ಟು ಅಂಶಗಳಿಂದ ನಿರ್ಧಾರವಾಗುತ್ತೆ. ಅವುಗಳು - ನಮ್ಮ ವಾತಾವರಣ, ಆಹಾರ ಹಾಗೂ ನಮ್ಮ ವಿಹಾರ. ಹೌದು! Genes is the ultimate ಅಂತ ಅಂದು ಕೊಂಡಿದ್ದ ವಿಜ್ಞಾನ, ಅದರ ಈಗ ಬೆಳಗೆ ಬಂದಿರುವ ಸತ್ಯ ಏನಪ್ಪಾ ಅಂದರೆ ನಮ್ಮ ಆಹಾರ-ವಿಹಾರ-ವಾತಾವರಣಕ್ಕೂ ನಮ್ಮ ವಂಶವಾಹಿಗಳ ಕಾರ್ಯಕ್ಷಮತೆಗೂ ನೇರವಾದ ಸಂಬಂಧವಿದೆ. Epigenetics ಪ್ರಕಾರ ನಮ್ಮ ಜೀನ್ಸ್‌ಗಳು ಸರಿಯಾಗಿ ಕೆಲಸ ಮಾಡಬೇಕು, ನಮ್ಮ ದೇಹದಲ್ಲಿ ಆಗಬೇಕಾದಂತಹ ಕಾರ್ಯಗಳನ್ನು ಸರಿಯಾಗಿ ನಿಭಾಯಿಸಬೇಕು ಅಂದರೆ ಅದಕ್ಕೆ ಪೂರಕವಾದಂತಹ ಆಹಾರ-ವಿಹಾರ- ವಾತಾವರಣ ಅವಶ್ಯಕ. ಇದರಲ್ಲಿ ಯಾವುದೇ ಒಂದು ಏರುಪೇರು ಆದರೂ ಅದರ ಪರಿಣಾಮ 'Genes'ಗಳ ಮೇಲೂ ಇದೆ ಅನ್ನೋದು ಖಚಿತ! ಇದನ್ನೇ ಆಯುರ್ವೇದ ವಿಜ್ಞಾನವು ಸಾವಿರಾರು ವರ್ಷಗಳ ಹಿಂದೆ ಬಿಡಿಬಿಡಿಯಾಗಿ ತಿಳಿಸಿ ಹೇಳಿರುವ ವಿಷಯವೇ ಋತುಚರ್ಯೆ.

ಸ್ನೇಹಿತರೆ, 'ಆಯುರ್ವೇದ' ಶಬ್ದವು ಎರಡು ಪದಗಳಿಂದ ಕೂಡಿದೆ- 'ಆಯು' ಮತ್ತು 'ವೇದ'. ವೇದ ಎಂದರೆ ಜ್ಞಾನ ಎಂದರ್ಥ. 'ಆಯು' ಎಂದರೆ ಸಾಮಾನ್ಯವಾಗಿ ನಾವು 'ಆಯಸ್ಸು/ lifespan'ಎಂತ ಅರ್ಥ ಮಾಡಿಕೊಳ್ಳುತ್ತೇವೆ. ಆಯು ಅಥವಾ ಆಯಸ್ಸಿನ ಸರಿಯಾದ ಅರ್ಥ ವೇನು? 'ಆಯು' ಅಂದರೆ ದೇಹ- ಇಂದ್ರಿಯ -ಮನಸ್ಸು- ಆತ್ಮ- ಈ ನಾಲ್ಕರ ಸಂಯೋಗ ಅಥವಾ ಒಂದು ಸ್ನೇಹಮಯ ಒಕ್ಕೂಟ. Ayu is a team of four players. ಈ ಒಕ್ಕೂಟದಲ್ಲಿ ಯಾವುದರಿಂದಲ್ಲಾದರೂ, ಯಾವಾಗಲಾದರೂ ಆಗಲಿ ಏರುಪೇರು ಉಂಟಾದರೆ ಅದೇ ರೋಗ. ಈ ಏರುಪೇರು ಬಹಳ ದೊಡ್ಡದಾಗಿ, ಒಕ್ಕೂಟ ನಾಶವಾದರೆ ಅದೇ ಮರಣ. ಹಾಗಾದರೆ ಆಯುರ್ವೇದ ಅಂದರೆ ಕೇವಲ ಒಂದು ವೈದ್ಯಕೀಯ ಪದ್ಧತಿ ಅಷ್ಟೇನಾ? ಖಂಡಿತ ಇಲ್ಲ. ಕೇವಲ ರೋಗ ಬಂದಾಗ ಮಾತ್ರ ನೆನಪಿಸಿಕೊಳ್ಳುವ ಜ್ಞಾನವಲ್ಲ ಆಯುರ್ವೇದ. 'ಆಯು' ಅಂದರೆ ಶರೀರ-ಇಂದ್ರಿಯ-ಮನಸ್ಸು-ಆತ್ಮ ಇವುಗಳ ಸಂಯೋಗವನ್ನು ನೂರು ವರುಷ ಗಟ್ಟಿಯಾಗಿ, ಭದ್ರವಾಗಿ, ಜೋಪಾನವಾಗಿ ಇಟ್ಟುಕೊಂಡು ರಕ್ಷಿಸಿಕೊಳ್ಳುವುದಕ್ಕೆ ಬೇಕಾದ ಜ್ಞಾನವನ್ನು ಯಾವ ಶಾಸ್ತ್ರ ಕೊಡುತ್ತೋ ಅದೇ ಆಯುರ್ವೇದ. ತನ್ಮೂಲಕ ನಾವು ಸದಾ ಸಮತೋಲನವನ್ನ ಸಾಧಿಸಿ ಸ್ವಸ್ಥ, ಸಂತೋಷಮಯ ಬದುಕನ್ನು ನಡೆಸುವ ಸಾಮರ್ಥ್ಯವನ್ನು ನೀಡುತ್ತದೆ ಆಯುರ್ವೇದ. ಇದುವೇ ನಿಜವಾದ ಆಯುರ್ವೇದ. ಇದುವೇ ಆಯುರ್ವೇದದ ಪೂರ್ಣ ಸ್ವರೂಪ. ಈ ಜೀವನ ಜ್ಞಾನವನ್ನು ಆಯುರ್ವೇದವು ಎರಡು ರೀತಿಯಲ್ಲಿ ನಮಗೆ ನೀಡುತ್ತದೆ. 1. ಸ್ವಾಸ್ಥ್ಯ ರಕ್ಷಣೆಗಾಗಿ ಹಾಗೂ 2.ವಿಕಾರ ಪ್ರಶಮನಕ್ಕಾಗಿ.

ಸ್ವಾಸ್ಥ್ಯ ರಕ್ಷಣೆಯಲ್ಲಿ, ಒಬ್ಬ ಆರೋಗ್ಯವಂತನ ಆರೋಗ್ಯ ರಕ್ಷಣೆ ಹೇಗೆ ಮಾಡಿಕೊಳ್ಳಬೇಕು? ರೋಗವೇ ಬಾರದ ಹಾಗೆ ಹೇಗೆ ನಮ್ಮ ಜೀವನವನ್ನು ಹೇಗೆ ನಡೆಸಬೇಕೆಂಬುದು- preventive care insights ಗಳನ್ನು ಕಾಣಬಹುದು.ನಂತರ 'ವಿಕಾರ ಪ್ರಶಮನ'ದಲ್ಲಿ- curative care ಅಂದರೆ, ರೋಗಗಳ ಸ್ವರೂಪ , ಉಪಶಮನ ಹಾಗೂ ಚಿಕಿತ್ಸೆಗಳನ್ನು ವಿವರಿಸಿದ್ದಾರೆ.

We are more interested in Preventive Care, ಅಲ್ವಾ? ಯಾಕೆಂದರೆ ಒಂದು ಸಲ ರೋಗ ಬಂದರೆ ಅದರಲ್ಲಿ ಎಷ್ಟೊಂದು ನೋವು, ದುಃಖ, ಖರ್ಚು ಮತ್ತು ಸಮಯವಿದೆ. ಹಾಗಾಗಿ ರೋಗವೇ ಬಾರದ ಹಾಗೆ ಜೀವನ ನಡೆಸುವುದೇ ಜಾಣತನ. ಸ್ವಾಸ್ಥ್ಯ ರಕ್ಷಣೆಯಲ್ಲಿ ನಮ್ಮ ಆಯುವಿನ ಸಂಯೋಗವನ್ನು ಹೇಗೆ ಗಟ್ಟಿಯಾಗಿ ಇಟ್ಟುಕೊಳ್ಳಬಹುದು ಅನ್ನುವ Health secretsಗಳನ್ನು ಋಷಿ ಎಲೆಯಾಗಿ ಬಿಚ್ಚಿಟ್ಟಿದ್ದಾರೆ. ಅದರಲ್ಲಿ ಮೊದಲನೆಯದು ದಿನಚರ್ಯೆ- ಪ್ರತಿ ದಿನವು ಬೆಳಗ್ಗೆ ಏಳುವುದರಿಂದ ಮತ್ತೆ ರಾತ್ರಿ ಮಲಗುವವರೆಗೆ ನಾವು ಮಾಡಬೇಕಾದ ಕ್ರಮಬದ್ಧವಾದ ಆರೋಗ್ಯಪೂರಕ ಕಾರ್ಯಗಳು. ಈ ದಿನಚರ್ಯೆಯು ಋತುಮಾನಕ್ಕೆ ಅನುಸಾರವಾಗಿ ಬದಲಾವಣೆಯಾಗಬೇಕಾಗುತ್ತದೆ. ಅದೇ ಋತುಚರ್ಯೆ. ಪ್ರತಿ ಋತುವಿನಲ್ಲಿಯೂ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಗಮನಿಸಿ, ಅದರಿಂದ ದೇಹದಲ್ಲಾಗುವ ಏರಿಳಿತಗಳನ್ನು ಕಂಡುಕೊಂಡು, ತ್ರಿದೋಷ ಅಗ್ನಿಗಳ ವ್ಯತ್ಯಾಸಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಆಹಾರ ವಿಹಾರ ವಿಚಾರಗಳನ್ನು ಸಂಯೋಜಿಸಿಕೊಳ್ಳುವುದೇ ಋತುಚರ್ಯೆ. It is a perfect science.

ಋತುಗಳು ಆರು. ಹೇಮಂತ ಋತು ಮತ್ತು ಶಿಶಿರ ಋತುಗಳು ಚಳಿಗಾಲವಾದರೆ, ನಂತರ ಬರುವ ವಸಂತ ಋತುವು ಪ್ರಕೃತಿಯಲ್ಲಿ ಚಿಗುರೊಡೆಯುವ ಕಾಲ. ಗ್ರೀಷ್ಮ ಋತು ಬೇಸಿಗೆಯಾದರೆ, ವರ್ಷಾ ಋತುವು ಮಳೆಗಾಲ. ಮುಂದಿನ ಶರತ್ ಋತುವು ಮಳೆಗಾಲದ ನಂತರ ಬರುವ ಬಿಸಿಲುಗಾಲ. ಇಡೀ ವರ್ಷದಲ್ಲಿ ನಾವು ಎರಡು ರೀತಿಯ ಕಾಲಗಳನ್ನು ಗಮನಿಸಬಹುದು. ಒಂದು ಆದಾನಕಾಲ ಮತ್ತೊಂದು ವಿಸರ್ಗಕಾಲ. ಆದಾನ ಕಾಲದಲ್ಲಿ ಶಿಶಿರ, ವಸಂತ, ಗ್ರೀಷ್ಮ ಋತುಗಳಿದ್ದು ಈ ಕಾಲದಲ್ಲಿ ನಮ್ಮ ಶರೀರದ ಬಲವು ದಿನ ಕಳೆದಂತೆ ಕಡಿಮೆಯಾಗುತ್ತಾ ಹೋಗುತ್ತದೆ. ಅಂದರೆ ಶಿಶಿರ ಋತುವಿನಲ್ಲಿ ಅಧಿಕವಾಗಿದ್ದ ದೇಹ ಬಲವು ಗ್ರೀಷ್ಮ ಋತು ಬರುವಷ್ಟರಲ್ಲಿ ಅತ್ಯಂತ ಕ್ಷಯವಾಗುತ್ತದೆ. ಇನ್ನು ವಿಸರ್ಗ ಕಾಲದಲ್ಲಿ ವರ್ಷಾ, ಶರತ್ ಮತ್ತು ಹೇಮಂತ ಋತುಗಳಿದ್ದು ಈ ಕಾಲದಲ್ಲಿ ದಿನದಿಂದ ದಿನಕ್ಕೆ ನಮ್ಮ ಬಲವು ಹೆಚ್ಚಾಗುತ್ತಾ ಹೋಗುತ್ತದೆ. ಅಂದರೆ ವರ್ಷ ಋತುವಿನಲ್ಲಿ ಅತ್ಯಂತ ಕಡಿಮೆಯಿದ್ದ ಬಲವು ಹೇಮಂತ ಋತುವಿನಲ್ಲಿ ಅತ್ಯಧಿಕವಾಗುತ್ತದೆ.

ಮನುಷ್ಯ ಪ್ರಕೃತಿಯ ಒಂದು ಪುಟ್ಟ ಭಾಗ. ಮನುಷ್ಯನ ಹಾಗೂ ಪ್ರಕೃತಿಯ ನಡುವೆ ಒಂದು ಅವಿನಾಭಾವ ಸಂಬಂಧವಿದೆ. ನಿರಂತರ ವ್ಯವಹಾರವಿದೆ. ಪ್ರತಿ ಋತುವಿನಲ್ಲಿಯೂ ಹೇಗೆ ಪ್ರಕೃತಿಯಲ್ಲಿ ಹಲವಾರು ಬದಲಾವಣೆಗಳನ್ನು ನಾವು ಕಾಣಬಹುದೋ, ಅದೇ ರೀತಿ ಹವಾಮಾನ ಬದಲಾವಣೆಯಿಂದ ಶರೀರದಲ್ಲಿ ಪ್ರಾಕೃತವಾದಂತಹ ಬದಲಾವಣೆಗಳನ್ನೂ ಕಾಣುತ್ತೇವೆ. ಇದರಲ್ಲಿ ಬಹಳ ಮುಖ್ಯವಾದದ್ದು ಶರೀರದ ಬಲ. ಚಳಿಗಾಲದಲ್ಲಿ ನಮ್ಮ ದೇಹದ ಬಲ, ವ್ಯಾಧಿಕ್ಷಮತೆ/ immunity ಅತ್ಯಂತ ಹೆಚ್ಚು. ಅದೇ ಬಿಸಿಲು ಮತ್ತು ಮಳೆಗಾಲದಲ್ಲಿ ಶಾರೀರಿಕ ಬಲ ಕಡಿಮೆ. ಹಾಗಾಗಿಯೇ ನಾವು ಬೇಸಿಗೆಯಲ್ಲಿ ಮತ್ತು ಮಳೆಗಾಲದಲ್ಲಿ ಹೆಚ್ಚು ಹುಷಾರು ತಪ್ಪುವುದು. ಇದನ್ನು ನಾವು, ವೈದ್ಯರು ನಮ್ಮ ಕ್ಲಿನಿಕ್‌ನಲ್ಲಿ ಗಮನಿಸಬಹುದು. ಚಳಿಗಾಲದಲ್ಲಿ ರೋಗಿಗಳು ತುಂಬಾ ಕಡಿಮೆ. ಅದೇ ಬೇಸಿಗೆ ಬಂದಂತೆ ಎಲ್ಲಾ ಆಸ್ಪತ್ರೆಗಳು ತುಂಬಿ ಹೋಗುತ್ತವೆ. ಹಾಗೆಯೇ ವರ್ಷಾ ಋತು ಅಂದರೆ ಮಳೆಗಾಲದಲ್ಲಿ ನಮ್ಮ ಶಾರೀರಿಕ ಬಲ ಇಮ್ಯೂನಿಟಿ/ immunity ಅತ್ಯಂತ ಕಡಿಮೆ. ಆರೋಗ್ಯವು ಬಹಳ ನಾಜೂಕಾಗಿರುತ್ತೆ. ಹಾಗಾಗಿಯೇ ಈ ಋತುವಿನಲ್ಲಿ ಆರೋಗ್ಯ ರಕ್ಷಣೆಗೆ ಪ್ರಾಮುಖ್ಯತೆಯನ್ನು ನೀಡಬೇಕಾಗುತ್ತದೆ ಎಂದು ಆಯುರ್ವೇದ ಎಚ್ಚರಿಸುತ್ತದೆ. ಆರೋಗ್ಯ ರಕ್ಷಣೆಯಲ್ಲಿ ಮೊದಲ ಹೆಜ್ಜೆ- ದೇಹದ ಅರಿವು ಬೆಳೆಸಿಕೊಳ್ಳುವುದು! ಮಳೆಗಾಲದಲ್ಲಿ ವಾತಾವರಣದ ಪ್ರಭಾವದಿಂದ ನಮ್ಮ ದೇಹದ ಒಳಗೆ ಏನೇನೆಲ್ಲಾ ವ್ಯತ್ಯಾಸಗಳಾಗುತ್ತವೆ ಅಂತ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

ಮೊದಲಿಗೆ ಮಳೆಗಾಲ ಅಂದರೆ ಕ್ಯಾಲೆಂಡರ್ ಪ್ರಕಾರ ಜೂನ್ 15ರಿಂದ ಆಗಸ್ಟ್ 15 ರ ತನಕ ಎಂದು ತಿಳಿಯಬಹುದು. ಆದರೆ ಈಗ ಕ್ಯಾಲೆಂಡರ್ ಪ್ರಕಾರ ಋತುಗಳು ಬದಲಾಗುತ್ತಾ ಇಲ್ಲ. ಋತುವೈಶಮ್ಯವನ್ನು ನಾವು ಕಾಣಬಹುದು. ಹಾಗಾಗಿ ಕ್ಯಾಲೆಂಡರ್ ಪ್ರಕಾರ ಪರಿಗಣಿಸುವ ಬದಲು ಋತುಲಕ್ಷಣಗಳನ್ನು ಗಮನಿಸಿ- ಅಂದರೆ ವಾತಾವರಣದಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಿ, ಓ! ಮಳೆಗಾಲ ಶುರುವಾಯಿತು ಅಂತ ತಿಳಿದುಕೊಳ್ಳುವುದು ಹೆಚ್ಚು ವೈಜ್ಞಾನಿಕ. ಮಳೆಗಾಲದಲ್ಲಿ ಮುಂಗಾರು ಶುರುವಾದ ತಕ್ಷಣ ತಂಪು ಗಾಳಿ ಬೀಸಿ ಮೋಡ ಕವಿಯುತ್ತದೆ. ಮಿಂಚು ಗುಡುಗುಗಳ ಆರ್ಭಟ. ಗಾಳಿಯ ಸಂಚಾರವು ಪಶ್ಚಿಮದಿಂದ. ಸಸ್ಯ ಸಂಕುಲವು ನಿಧಾನವಾಗಿ ಚಿಗುರೊಡೆದು ಹಸಿರಾಗಲು ಶುರುವಾಗುತ್ತದೆ. ಇದುವೇ ವರ್ಷಾಗಮನದ ಸೂಚನೆಗಳು.

ಪರಿಸರದಲ್ಲಿನ ಈ ಬದಲಾವಣೆಗಳು ನಮ್ಮಲ್ಲೂ ಆಂತರಿಕವಾಗಿ ಒಂದಿಷ್ಟು ಏರುಪೇರುಗಳನ್ನು ಉಂಟುಮಾಡುತ್ತದೆ. ಏಕೆಂದರೆ ನಮ್ಮ ಜೈವಿಕ ಕ್ರಿಯೆಗಳೆಲ್ಲಾ ವಾತಾವರಣದ ಪ್ರೇರಣೆಯಿಂದ ನಡೆಯುತ್ತದೆ. ಸೂರ್ಯ ಚಂದ್ರರ ಚಲನೆಯನ್ನು ಅನುಸರಿಸುತ್ತದೆ. ಹಾಗಾದರೆ ಮಳೆಗಾಲದಲ್ಲಿ ನಮ್ಮ ದೇಹದ ಸ್ಥಿತಿ ಏನಾಗಿರುತ್ತದೆ? ಮೊದಲೇ ದೇಹದ ಬಲ ಕ್ಷೀಣವಾಗಿರುತ್ತದೆ. ಜೀರ್ಣಶಕ್ತಿ ಬಹಳ ಕಡಿಮೆ ಇರುತ್ತದೆ. ಹಾಗಾಗಿ ಹಸಿವು ಕಡಿಮೆ. ಹಸಿವೆ ಕಡಿಮೆಯಾಗುವುದರಿಂದ ಸೇವಿಸಿದ ಆಹಾರವು ನಿಧಾನವಾಗಿ ಜೀರ್ಣಗೊಳ್ಳುವುದರಿಂದ ತಿಂದದ್ದು ಹುಳಿಯಾಗುವುದೇ ಹೆಚ್ಚು. ಅದ್ದರಿಂದ ಹುಳಿ ತೇಗು, ವಾಂತಿ, ಭೇದಿ, ತಲೆನೋವು, ಅಜೀರ್ಣದ ತೊಂದರೆಗಳಾಗಿ ಮೈ ಒಡ್ಡು ಕಟ್ಟಿದಂತೆ ಭಾರವೆನಿಸುತ್ತದೆ. ಇನ್ನು ತ್ರಿದೋಷಗಳನ್ನು ಗಮನಿಸುವುದಾದರೆ ಬೇಸಿಗೆಯಲ್ಲಿ ಹೆಚ್ಚಾಗಿ ಸಂಗ್ರಹವಾದ ವಾತ ದೋಷವು ಈ ಋತುವಿನಲ್ಲಿ ಮಳೆ-ಗಾಳಿ-ಚಳಿಗಳಿಂದ ಕೆರಳಿ ಮತ್ತಷ್ಟು ಜಾಸ್ತಿಯಾಗುತ್ತದೆ. ಜೊತೆ ಜೊತೆಗೆ ಭೂ ಬಾಷ್ಪದಿಂದ ವಾತಾವರಣದಲ್ಲಿ ಅಮ್ಲತ್ವ (ಹುಳಿರಸ) ಹೆಚ್ಚಾಗಿ ಪಿತ್ತವು ಸಂಗ್ರಹವಾಗುತ್ತದೆ. ತೇವಾಂಶದ ಹೆಚ್ಚಳದಿಂದ ಕಫವೂ ಹೆಚ್ಚಾಗುತ್ತದೆ. ಹೀಗೆ ಮೂರು ದೋಷಗಳ ವೈಷಮ್ಯದಿಂದ ಈ ಕಾಲದಲ್ಲಿ ರೋಗಗಳು ಹೆಚ್ಚಾಗಿಯೇ ಕಾಡುತ್ತದೆ. ಆದ್ದರಿಂದ ಸಾಮಾನ್ಯವಾಗಿ ಮಳೆ ಬೀಳಲು ಜ್ವರ, ಶೀತ, ಅಜೀರ್ಣ, ಭೇದಿಗಳನ್ನು ಕಾಣಬಹುದು. ಸಂಧಿ ನೋವು, ತಲೆ ಸುತ್ತು ಇತ್ಯಾದಿಗಳನ್ನು ಗಮನಿಸಬಹುದು. ಒಟ್ಟಾರೆ ಮಳೆಗಾಲದಲ್ಲಿ ಶರೀರದಲ್ಲಿ ಕ್ಲೇದ/ ದ್ರವಾಂಶ ಹೆಚ್ಚು. ಜೀರ್ಣಶಕ್ತಿ, ಹಸಿವೆ, ಬಾಯಾರಿಕೆ ಕಡಿಮೆ. ದೇಹದ ಬಲ ಕಡಿಮೆ. ಮೂರು ದೋಷಗಳ ವಿಕೃತಾವಸ್ಥೆ. ಹೀಗಿರುವಾಗ ಮಳೆಗಾಲದ ಋತುಚರ್ಯೆಯ ಗುರಿ ಏನಿರಬೇಕು?

ದೇಹದ ಬಲವನ್ನು ಹೆಚ್ಚು ಮಾಡುವ, ಜೀರ್ಣಾಶಕ್ತಿಯನ್ನು ಸರಿಮಾಡಿ ಆಹಾರವನ್ನು ಸರಿಯಾಗಿ ಜೀರ್ಣಿಸಿಕೊಳ್ಳುವ, ತ್ರಿದೋಷಗಳನ್ನು ಪ್ರಾಕೃತಾವಸ್ಥೆಗೆ ತರುವ ವಿವಿಧ ವ್ಯಾಧಿಗಳನ್ನು ಉಪಶಮನ ಮಾಡುವ ರೀತಿಯಲ್ಲಿರಬೇಕು ನಮ್ಮ ಆಹಾರ ಮತ್ತು ವಿಹಾರ. ಈ ವಿಷಯವನ್ನು ಗಮನದಲ್ಲಿಟ್ಟುಕೊಳ್ಳದೆ ಮನ ಬಂದಂತೆ ತಿಂದು, ಉಂಡು, ಕೆಲಸಗಳನ್ನು ಮಾಡಿದರೆ ರೋಗದ ತುತ್ತಾಗಿ ಹಾಸಿಗೆ ಹಿಡಿಯುವುದರಲ್ಲಿ ಯಾವ ಸಂಶಯವೂ ಇಲ್ಲ. ನಾವು ಪ್ರಕೃತಿಯ ಒಂದು ಭಾಗವೆಂದು ನೆನಪಿಸಿಕೊಂಡು, ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಗಮನಿಸಿ, ಅದರಿಂದ ದೇಹದ ಮೇಲಾಗುವ ಪ್ರಭಾವಗಳ ಅರಿವನ್ನು ಬೆಳೆಸಿಕೊಂಡು, ಅದಕ್ಕೆ ತಕ್ಕಂತೆ ಋತಿವಿಗನುಸಾರನಮ್ಮ ಆಹಾರ-ವಿಹಾರಗಳ ಸೂಕ್ತ ಬದಲಾವಣೆಗಳನ್ನು ನಿಷ್ಠೆಯಿಂದ ಮಾಡಿದ್ದೇ ಆದರೆ ಖಂಡಿತ ವರ್ಷಾ ಋತುವಿನಲ್ಲಿ ಅಷ್ಟೇ ಅಲ್ಲ, ಇಡೀ ವರ್ಷ ಆರೋಗ್ಯವಾಗಿರಬಹುದು ಅನ್ನುವುದು ಆಯುರ್ವೇದದ ಗ್ಯಾರಂಟಿ!

ಪ್ರಸ್ತುತ

ಶ್ರೀಲಕ್ಷ್ಮಿ

ಬೆಳ್ದು ಬೆಳ್ದು ಬಡವಾಯ್ತು ಬೆಂಗಳೂರು ?!

ನೋಡ್ತಾ ನೋಡ್ತಾ ಹೇಗ್ ಬೆಳ್ದ್ ಬಿಟ್ತು?! ಹೀಗೆ ಹೇಳೋ ಹಳೆ ಬೆಂಗಳೂರಿಗರು ಇನ್ನೊಂದ್ ಮಾತನ್ನು ಸಹ ಖಂಡಿತ ಹೇಳ್ತಾರೆ. 'ಮುಂಚೆ ಬೆಂಗ್ಳುರು ಹೀಗ್ ಇರ್ಲಿಲ್ಲ ಬಿಡಿ !' ಸುಮಾರು ಆರೇಳು ದಶಕಗಳಿಂದ ಈ ನಗರದಲ್ಲೆ ಹುಟ್ಟಿ, ಬೆಳದು, ಈಗಲೂ ಇಲ್ಲಿಯೇ ಜೀವನ ನಡೆಸುತ್ತಿರುವವರು ಈ ನಗರದ ದೊಡ್ಡ ಮಟ್ಟದ ಬದಲಾವಣೆ, ಬೆಳವಣಿಗೆ ಎರಡಕ್ಕೂ ಸಾಕ್ಷಿಯಾಗಿದ್ದಾರೆ. ಗಾರ್ಡನ್‌ನಿಂದ ಸಿಲಿಕಾನ್ ಎಂಬ ಹಣೆಪಟ್ಟಿಯನ್ನು ಹೊತ್ತು ನಿಂತಿರುವ ಈ ನಗರ, ಬದಲಾವಣೆಯ ಎಲ್ಲಾ ಮಜಲುಗಳನ್ನು ಕಂಡಿದೆ. ಎಲ್ಲರನ್ನು ತನ್ನೆಡೆಗೆ ಸೆಳೆಯುವ ಅಯಸ್ಕಾಂತ ಶಕ್ತಿಯಿರುವುದೇ ಇಲ್ಲಿನ ಹವಾಗುಣದಲ್ಲಿ. ಆದರೆ ಈಗಿನ ಅತಿಯಾದ ವಾಯು ಮಾಲಿನ್ಯದಿಂದಾಗಿ ಹವಾಮಾನ ಹದಗೆಟ್ಟಿರುವುದಂತೂ ನಿಜ.

ಮನುಷ್ಯನಿಗೆ ದೈಹಿಕ ಬೆಳವಣಿಗೆಯೊಂದಿಗೆ ಅವನ ಮಾನಸಿಕ ಬೆಳವಣಿಗೆಯು ಹೇಗೆ ಮುಖ್ಯವಾಗುವುದೊ, ಅದೇ ರೀತಿ ಒಂದು ಪ್ರದೇಶವು ಸಹ ಸರ್ವತೋಮುಖ ಅಭಿವೃದ್ಧಿಯೊಂದಿಗಿನ ಬೆಳವಣಿಗೆ ಕಾಣಬೇಕು. ಐಟಿ ಕ್ಷೇತ್ರ ಈ ನಗರವನ್ನು ಇಷ್ಟರ ಮಟ್ಟಿಗೆ ವ್ಯಾಪಿಸುತ್ತದೆ ಎಂದು ಯಾರು ಅಂದಾಜಿಸಿರಲಿಲ್ಲ. ನಾಡಪ್ರಭು ಕೆಂಪೇಗೌಡರು ಈ ನಗರದ ಅಂತಿಮ ಗಡಿ ಎಂದು ಗುರುತು ಮಾಡಿ, ಮೇಖ್ರಿ ವೃತ್ತ, ಹಲಸೂರು, ಕೆಂಪಾಂಬುಧಿ ಕೆರೆ ಹಾಗು ಲಾಲ್ ಬಾಗ್ ಪ್ರದೇಶಗಳಲ್ಲಿ ಕಟ್ಟಿದ ವಾಚ್ ಟವರ್‌ಗಳು ಈಗ ಬೆಂಗಳೂರಿನ ಮಧ್ಯ ಭಾಗದಲ್ಲಿ ಸೇರಿ ಹೋಗಿ ಅದರ ಸುತ್ತಗಲವು ಅಳತೆ ಮೀರಿ ಬೆಳೆದು ನಿಂತಿರುವ ಈಗಿನ ಬೆಂಗಳೂರಿಗೆ ಗಡಿ ಹಾಕಲು ಮತ್ತೆ ಕೆಂಪೇಗೌಡರೇ ಹುಟ್ಟಿ ಬರಬೇಕೇನೊ? ಮಿತಿ ಮೀರಿ ಬೆಳೆಯುವುದು ಅಂದರೆ ಇದೆ ಇರಬಹುದಾ? ಈ ಮಹಾನಗರಿಗೆ ಕೆಲಸ ಅರಸಿ ಬರುವವರೇ ಹೆಚ್ಚು. ಪ್ರಸ್ತುತ ಒಂದೂವರೆ ಕೋಟಿ ಜನರಿಗೆ ಆಶ್ರಯ ಕೊಟ್ಟಿರುವ ಈ ನಗರದ ಅಂದಾಜು ನೋಡುವುದಾದರೆ ನಮ್ಮ ರಾಜ್ಯದ ಐದರಲ್ಲಿ ಒಬ್ಬರು ಹಾಗು ದೇಶದ ನೂರರಲ್ಲಿ ಒಬ್ಬರು ಈ ನಗರದಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಜನಸಂಖ್ಯೆ ಹೆಚ್ಚಾದಂತೆ, ವಾಹನ ದಟ್ಟನೆ, ಭೂಮಿಯ ಬೆಲೆ, ಬಾಡಿಗೆ ದರ ಹೀಗೆ ಒಂದಕ್ಕೆ ಒಂದು ಕೊಂಡಿ ಎಂಬಂತ್ತೆ ಎಲ್ಲವು ಹೆಚ್ಚುತ್ತಲೆ ಹೋಗಿದೆ.

ಮುಂಬೈ ನಗರ ಬೆಳೆಯುತ್ತಾ ಹೋದಂತೆ ಮುಂಬೈ ನಗರದ ಪಕ್ಕದ ಎರಡು ಜಿಲ್ಲೆಗಳಾದ ಥಾಣೆ ಹಾಗೂ ರಾಯ್ಗಡ್ ಜಿಲ್ಲೆಗಳು ಕೂಡಿ ನವಿ ಮುಂಬೈ (ನ್ಯೂ ಬಾಂಬೆ) ಎಂಬುದಾಗಿ ರಚಿಸಲ್ಪಟ್ಟಿತು. ಇದೇ ರೀತಿ ಮುಂದಿನ ದಿನಗಳಲ್ಲಿ ಹೊಸ ಬೆಂಗಳೂರು ಪರಿಕಲ್ಪನೆ ಬರಬಹುದೇ? ಕಾದು ನೋಡಬೇಕಿದೆ. ಫ್ಲೈ ಓವರ್‌ಗಳು, ಅಂಡರ್‌ಪಾಸ್‌ಗಳು, ಮೆಟ್ರೋ ಟ್ರೈನ್, ದೊಡ್ಡ ದೊಡ್ಡ ಅಂಬರ ಚುಂಬಿತ ಕಟ್ಟಡಗಳು, ಅಪಾರ್ಟ್ಮೆಂಟ್‌ಗಳು, ಪಂಚತಾರಾ ಹೋಟೆಲ್‌ಗಳು ಬಂದು ನಗರದ ಫೇಸ್ ವ್ಯಾಲ್ಯೂ, ಪ್ಲೇಸ್ ವ್ಯಾಲ್ಯೂ, ಮಾರ್ಕೆಟ್ ವ್ಯಾಲ್ಯೂ ಹೆಚ್ಚಿಸಿತೇ ಹೊರತು ಈ ನಗರದ ಹಳೆಯ ಸೊಗಡನ್ನು ಕಸಿದುಕೊಂಡಿತು. 'ಪ್ರಪಂಚದಲ್ಲೇ ಅತಿ ವೇಗವಾಗಿ ಬೆಳಯುತ್ತಿರುವ ನಗರ 'ಬೆಂಗಳೂರು'', 'ಭಾರತದ ಐದನೇ ದೊಡ್ಡ ಮಹಾನಗರ 'ಬೆಂಗಳೂರು''ಎಂದಾಗ ಖುಷಿಯಾಗಬೇಕೊ ಅಥವ ಹೆದರಬೇಕೋ ಅನ್ನುವ ಪರಿಸ್ಥಿತಿ ಬಂದೊದಗಿದೆ. ವೇಗವಾಗಿ ಬೆಳೆಯುವುದರೊಂದಿಗೆ ಕ್ರೈಂ ರೇಟ್, ಸೈಬರ್ ಕ್ರೈಂ, ಡ್ರಗ್ಸ್ ಮಾಫಿಯಾದಂತಹ ದಾಂದಲೆಗಳು ಹೆಚ್ಚಾಗುತ್ತಿರುವುದು ಭಯದ ಸಂಗತಿ.

ರಾಜ್ಯದ ರಾಜಧಾನಿ ಬೆಂಗಳೂರು ಆಗಿರುವಾಗ, ಕರ್ನಾಟಕ ಮಾತೆಯ ಹೃದಯ ಭಾಗ ಬೆಂಗಳೂರು ಅಲ್ಲವೇ? 'ಕನ್ನಡದವರು ವಿಶಾಲ ಹೃದಯದವರು' ಎಂಬುದಕ್ಕೆ ಸಾಕ್ಷಿಯೇ ಈ ನರಗರದಲ್ಲಿರುವ ಲಕ್ಷಾಂತರ ವಲಸಿಗರ ಜನಸಂಖ್ಯೆ. ನಮ್ಮ ಬಾಷೆಯನ್ನು ಬದಿಗಿಕ್ಕಿ ಬೇರೆಯವರ ಭಾಷೆಯನ್ನು ಕಲಿತು ವ್ಯವಹರಿಸೋ ಹೃದಯವಂತಿಕೆ ನಮ್ಮದಲ್ಲವೇ? ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ಮೂರನೇ ಸ್ಥಾನದಲ್ಲಿರುವ ಈ ನಗರ ಜನಸಂಖ್ಯಾ ಸ್ಫೋಟಕ್ಕೆ ಉದಾಹರಣೆಯಾಗಿದೆ.

ಗತಿಸಿಹೋದ 'ಓಲ್ಡ್ ಬ್ಯಾಂಗ್ಲೂರ್' ಕಂಡವರೇ ಪುಣ್ಯವಂತರು! ಏನಂತೀರ?

ಮೊದಲೇ ಹೇಳಿದ ಒಂದು ಗೆಲುವಿನ ಕತೆ



ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ಸಾಮಾನ್ಯವಾಗಿ ಚುನಾವಣಾ ಪ್ರಚಾರದ ರ‍್ಯಾಲಿಗಳಲ್ಲೇ ಫಲಿತಾಂಶವೂ ಖಚಿತವಾಗುತ್ತದೆ. ಆದರೆ ಅವು ಫಲಿತಾಂಶವನ್ನು ಸೃಷ್ಟಿಸುವುದಿಲ್ಲ ಅಥವಾ ನಿರ್ಧರಿಸುವುದೂ ಇಲ್ಲ. ಫಲಿತಾಂಶ ಏನು ಬರುತ್ತದೆ ಎಂಬುದು ಮಾತ್ರ ಅಲ್ಲಿ ತಿಳಿಯುತ್ತದೆ. ಜನರು ಮುಂದಿನ ಚುನಾವಣೆಯಲ್ಲಿ ಯಾರನ್ನು ಗೆಲ್ಲಿಸಬೇಕೆಂಬುದನ್ನು ಹೆಚ್ಚು ಕಮ್ಮಿ ಆರು ತಿಂಗಳ ಮೊದಲೇ ನಿರ್ಧರಿಸಿರುತ್ತಾರೆ. ಚುನಾವಣೆಯಲ್ಲಿ ಆಗುವ ಬದಲಾವಣೆ ಅಥವಾ ಉಂಟಾಗುವ ಅನಿಶ್ಚಯತೆಯು ಜನರ ಐದು ವರ್ಷಗಳ ಬದುಕಿನ ಅನುಭವದ ಫಲಿತಾಂಶವಾಗಿರುತ್ತದೆ. ಇದು ಕೇವಲ ಸಿದ್ಧಾಂತ ಅಥವಾ ಲೆಕ್ಕಾಚಾರದ ಬದನೇಕಾಯಿ ಅಲ್ಲ. ಚುನಾವಣೆಯಲ್ಲಿ ಜನರ ನಿರ್ಧಾರಕ್ಕೆ ನಾಯಕನ ಚರಿಷ್ಮಾ ಕೂಡ ಸೇರಿದರೆ ಸೀಟುಗಳ ಸಂಖ್ಯೆ ಕೇವಲ ಹೆಚ್ಚುವುದಿಲ್ಲ, ಬದಲಿಗೆ ಏಕಾಏಕಿ ಜಿಗಿಯುತ್ತದೆ. 'ಪ್ರಜಾಪ್ರಭುತ್ವದಲ್ಲಿ ಗೆಲುವು ಎಂಬುದು 99% ಬೆವರು, 1% ಸ್ಫೂರ್ತಿ' ಎಂಬ ಮಾತನ್ನು ನೀವು ಕೇಳಿರುತ್ತೀರಿ. ಪ್ರತಿದಿನ ಪ್ರಧಾನಿ ನರೇಂದ್ರ ಮೋದಿ ದಣಿವರಿಯದೆ ಜನರ ಕಲ್ಯಾಣಕ್ಕಾಗಿ ಮಾಡಿದ ಕೆಲಸದ ಪ್ರತಿಫಲ ಈಗ ಕಾಣಿಸುತ್ತಿದೆ. ಈ ಪ್ರತಿಫಲವನ್ನು ನೀಡಿದವರು 2024ರ ಲೋಕಸಭೆ ಚುನಾವಣೆಯಲ್ಲಿ ಮತ್ತೆ ಮೋದಿಯೇ ಗೆಲ್ಲುತ್ತಾರೆಂದು ಭವಿಷ್ಯ ನುಡಿದಿರುವ ಇಂಗ್ಲಿಷ್ ದಿನಪತ್ರಿಕೆಗಳನ್ನು ಓದುವ ಜನರಲ್ಲ ಎಂಬುದನ್ನು ನೆನಪಿಡಬೇಕು.

ಈ ಚುನಾವಣೆ ಡಬ್ಲ್ಯು ಫ್ಯಾಕ್ಟರ್ ಸುತ್ತ ಗಿರಕಿ ಹೊಡೆಯುತ್ತಿದೆ. ಡಬ್ಲ್ಯು ಅಂದರೆ ವಿಮೆನ್. ಈ ಸಲ ಯಾರನ್ನು ಗೆಲ್ಲಿಸಬೇಕು, ಯಾರನ್ನು ಸೋಲಿಸಬೇಕು ಎಂಬುದರ ಕೀಲಿಕೈ ಮಹಿಳೆಯರ ಬಳಿಯಿದೆ. ಇದನ್ನು ವಾಕ್ಯಗಳಲ್ಲಿ ಹೇಳದೆ ಘೋಷಣೆಯ ರೂಪದಲ್ಲಿ ಹೇಳುವುದಾದರೆ, 'ರೇಶನ್ ಔರ್ ಶಾಸನ್' (ಪಡಿತರ ಮತ್ತು ಆಡಳಿತ) ಈ ಚುನಾವಣೆಯ ಗತಿಯನ್ನು ನಿರ್ಧರಿಸುತ್ತಿವೆ. ಮೂರನೆಯದು ಭಾಷಣ್. ಚುನಾವಣೆಯಲ್ಲಿ ಭಾಷಣ ಕೂಡ ಮುಖ್ಯ, ಆದರೆ ಅದರ ಹಿಂದೆ ಒಳ್ಳೆಯ ಆಡಳಿತದ ಬಲವಿರಬೇಕು. ಕೇವಲ ಭಾಷಣದಿಂದ ಪ್ರಯೋಜನವಿಲ್ಲ. ವಿರೋಧ ಪಕ್ಷಗಳ ವಿಷಯದಲ್ಲಾದರೆ, ಒಳ್ಳೆಯ ಪರ್ಯಾಯ ಆಡಳಿತದ ಕಲ್ಪನೆಯನ್ನು ಅವರು ಜನರ ಮುಂದಿಡಬೇಕು.

ಪ್ರಧಾನಿ ನರೇಂದ್ರ ಮೋದಿಯವರ ಬಡತನ ವಿಮೋಚನೆ ಚಳವಳಿಯ ಮೂಲ ಮಂತ್ರವೇ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣ. ಕೋವಿಡ್ ಸಮಯದಲ್ಲಿ ಆರಂಭವಾದ ಉಚಿತ ಪಡಿತರ ಯೋಜನೆಯ ಫಲ ಪಡೆದ ಮಹಿಳೆಯರು ಈಗ ಮೋದಿಗೆ ಧನ್ಯವಾದ ಹೇಳುತ್ತಿದ್ದಾರೆ. ಮಹಿಳೆಯರಿಗೆ ಅವರ ಬ್ಯಾಂಕ್ ಖಾತೆಗೇ ಎಲ್ಪಿಜಿ ಗ್ಯಾಸ್‌ನ ಸಬ್ಸಿಡಿ ಹಣ ಬರುತ್ತಿದೆ. ಸರಕಾರ ಬಡವರಿಗೆ ನೀಡುವ ಮನೆಯ 50% ಮಾಲಿಕತ್ವ ಮಹಿಳೆಯರ ಹೆಸರಿನಲ್ಲಿರುತ್ತದೆ. ಮಹಿಳೆಯರ ಬ್ಯಾಂಕ್ ಖಾತೆಗೇ ಬ್ಯಾಂಕ್‌ನಿಂದ ಸಾಲದ ಹಣ ಪಾವತಿಯಾಗುತ್ತದೆ. ಇವೆಲ್ಲವೂ ಮಹಿಳಾ ಸಬಲೀಕರಣದ ನಿದರ್ಶನಗಳು. ಹೀಗಾಗಿ ಈ ಚುನಾವಣೆಯಲ್ಲಿ ಯಾವುದೇ ತಜ್ಞನಿಗಿಂತ ಹೆಚ್ಚಾಗಿ ಮಹಿಳೆಯರ ಮತದಾನದ ಪ್ರಮಾಣವೇ ಗೆಲುವಿನ ಸುಳಿವನ್ನು ನೀಡುತ್ತಿದೆ. ಮೊದಲ ಎರಡು ಹಂತದಲ್ಲಿ ಮಹಿಳೆಯರು ಪುರುಷರಷ್ಟೇ ಸಂಖ್ಯೆಯಲ್ಲಿ ಮತದಾನ ಮಾಡಿದ್ದಾರೆ. ಆದರೆ ಎರಡು ರಾಜ್ಯಗಳಲ್ಲಿ ಮಾತ್ರ ವ್ಯತ್ಯಾಸವಾಗಿದೆ. ಪಶ್ಚಿಮ ಬಂಗಾಳದಲ್ಲಿ ಮಹಿಳೆಯರು ಪುರುಷರಿಗಿಂತ ಶೇ.2ರಿಂದ ಶೇ.3ರಷ್ಟು ಹೆಚ್ಚು ಮತದಾನ ಮಾಡಿದ್ದರೆ, ಮಹಾರಾಷ್ಟ್ರದಲ್ಲಿ ಮಹಿಳೆಯರ ಮತದಾನದ ಪ್ರಮಾಣ ಶೇ.2ರಷ್ಟು ಕಡಿಮೆಯಿದೆ. ಇನ್ನುಳಿದ ಎಲ್ಲಾ ರಾಜ್ಯಗಳಲ್ಲಿ ಗ್ರಾಫ್ ಒಂದೇ ತೆರನಾಗಿದೆ.

ಸರಕಾರದ ಪರೀಕ್ಷೆ ನಡೆಯುವುದು ಅದರ ಆಡಳಿತದ ನೀತಿಗಳಲ್ಲೇ ಹೊರತು ವಕ್ತಾರರ ಬಾಯಿಯಲ್ಲಿ ಅಲ್ಲ. ಎಲ್ಲಾ ಮತದಾರರೂ ನರೇಂದ್ರ ಮೋದಿಗೇ ಮತ ಹಾಕುವುದಿಲ್ಲ. ಆದರೆ, ಈ ದೇಶದಲ್ಲಿ ಒಂದೇ ಒಂದು ಕುಟುಂಬ ತನಗೆ ಮೋದಿ ಸರಕಾರದ ಕೊಡುಗೆಗಳಾದ ರೇಶನ್, ಆರೋಗ್ಯ ವಿಮೆ, ಗ್ಯಾಸ್ ಸಬ್ಸಿಡಿ ಅಥವಾ ಮನೆ ಸಿಕ್ಕಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅದು ಮೋದಿ ವಿರೋಧಿ ರಾಜಕೀಯ ನಿಲುವು ಹೊಂದಿರುವ ಕುಟುಂಬವೇ ಇರಲಿ ಅಥವಾ ಅಲ್ಪಸಂಖ್ಯಾತರ ಕುಟುಂಬವೇ ಇರಲಿ, ಎಲ್ಲಾ ಕುಟುಂಬಗಳಿಗೂ ಮೋದಿ ಸರಕಾರದ ಯೋಜನೆಗಳ ಲಾಭ ದೊರೆತಿದೆ. ಪ್ರತಿಯೊಬ್ಬ ಭಾರತೀಯನನ್ನೂ ಸರಕಾರ ಸಮಾನವಾಗಿ ಕಂಡಿದೆ ಎಂಬುದಕ್ಕೆ ಇದೇ ನಿಜವಾದ ಉದಾಹರಣೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ, ಸ್ಥೂಲವಾಗಿ ಹೇಳುವುದಾದರೆ, ಗಂಡಸು ದುಡಿಯುತ್ತಾನೆ, ಹೆಂಡತಿ ಅಥವಾ ತಾಯಿ ಇಡೀ ಮನೆಗೆ ಊಟ ಹಾಕುತ್ತಾಳೆ. ನನಗೆ ತಿಳಿದಿರುವಂತೆ ಈ ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಎಲ್ಲಾ ಮಹಿಳೆಯರಿಗೆ ಯಾವುದೇ ಚಿಂತೆಯಿಲ್ಲದೆ ತಮ್ಮ ಮನೆಯ ಸದಸ್ಯರಿಗೆ ಹೊಟ್ಟೆ ತುಂಬಾ ಊಟ ಹಾಕಲು ಸಾಧ್ಯವಾಗಿದೆ. ಇಂತಹದ್ದೊಂದು ಸೌಕರ್ಯ ಒದಗಿಸಿದ ನಾಯಕನಿಗೆ ಬಡ ಮಹಿಳೆಯರು ಮತ ಹಾಕುವುದು ಕೃತಜ್ಞತೆ ಸಲ್ಲಿಸುವ ಮಾನವೀಯ ವಿಧಾನವಷ್ಟೆ. ಪ್ರಧಾನಿಗೆ ಮತ ಹಾಕುವುದಕ್ಕೆ ಹೆಚ್ಚಿನ ಮಹಿಳೆಯರು ನೀಡುವ ಪ್ರಮುಖ ಕಾರಣವೆಂದರೆ 'ಭದ್ರತೆ. ತಮಗೆ ಲಭಿಸಿರುವ ಭೌತಿಕ ಭದ್ರತೆಗಿಂತ ಹೆಚ್ಚಾಗಿ ತಮ್ಮ ಕುಟುಂಬಕ್ಕೆ ಲಭಿಸಿರುವ ಆಹಾರದ ಭದ್ರತೆ ಅವರಿಗೆ ದೊಡ್ಡದಾಗಿ ಕಾಣಿಸುತ್ತಿದೆ. ರೇಶನ್, ಶಾಸನ್ ಹಾಗೂ ಭವಿಷ್ಯ ಈ ಮೂರು ಸಂಗತಿಗಳು ಮಹಿಳೆಯರಿಗೆ ನೆಮ್ಮದಿಯನ್ನು ನೀಡಿವೆ.

ಈ ಸಲ ಚುನಾವಣೆ ಪ್ರಾರಂಭವಾದಾಗ ದೇಶದಲ್ಲಿ ಅತಿಹೆಚ್ಚು ಜನರು ಓದುವ ಇಂಗ್ಲಿಷ್ ದಿನಪತ್ರಿಕೆ 10 ಸಂಗತಿಗಳನ್ನು ಪಟ್ಟಿ ಮಾಡಿ ಈ ಸಂಗತಿಗಳೇ ಈ ಬಾರಿಯ ಫಲಿತಾಂಶವನ್ನು ನಿರ್ಧರಿಸುತ್ತವೆ ಎಂದು ಹೇಳಿತ್ತು. ಅದರಲ್ಲಿ ಮೊದಲ ಸಂಗತಿ ರಾಮ ಮಂದಿರವಾಗಿತ್ತು. ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರವನ್ನು ನಿರ್ಮಿಸಿರುವುದು ಬಹುಸಂಖ್ಯಾತರಿಗೆ ತೃಪ್ತಿ ನೀಡಿರುವ ಹಾಗೂ ಈ ಚುನಾವಣೆಯ ಫಲಿತಾಂಶದ ಮೇಲೆ ಪ್ರಭಾವ ಬೀರುವ ಪ್ರಮುಖ ಸಂಗತಿಗಳಲ್ಲಿ ಒಂದು ಎಂಬುದರಲ್ಲಿ ಸಂಶಯವಿಲ್ಲ. ಆದರೆ, ಇದು ಮೂರು ದಶಕದ ಹಿಂದೆ ನೀಡಿದ್ದ ಭರವಸೆಯ ಈಡೇರಿಕೆಯಷ್ಟೆ. ಈ ಚುನಾವಣೆಯ ಫಲಿತಾಂಶ ನಿಜವಾಗಿಯೂ ನಿರ್ಧಾರವಾಗುವುದು ಕಳೆದ ಐದು ವರ್ಷದಲ್ಲಿ ಮೋದಿ ಈ ದೇಶದ ಬಡವರಿಗಾಗಿ ಏನು ಮಾಡಿದ್ದಾರೆ ಎಂಬುದರ ಮೇಲೆ ಹಾಗೂ ಭಾರತೀಯರ ಮನದಲ್ಲಿ ಭವಿಷ್ಯದ ಬಗ್ಗೆ ಅವರು ಮೂಡಿಸುವ ಭರವಸೆಯ ಮೇಲೆ. ಮೊದಲ ಅವಧಿಯ ಪರಿಶ್ರಮದ ಫಸಲು 2019ರಲ್ಲೇ ದೊರೆತಿದೆ.

ಪ್ರಜಾಪ್ರಭುತ್ವದಲ್ಲಿ ಮೂರನೇ ಅವಧಿಗೆ ಆಯ್ಕೆಯಾಗುವುದು ಬಹಳ ಕಷ್ಟ. ಅಮೆರಿಕ, ಫ್ರಾನ್ಸ್‌ನಂತಹ ದೇಶಗಳಲ್ಲಿ ಅದಕ್ಕೆ ಸಂವಿಧಾನದಲ್ಲೇ ಅವಕಾಶವಿಲ್ಲ. ಅಲ್ಲಿ ಮೂರನೇ ಅವಧಿಗೆ ಯಾರೂ ಅಧ್ಯಕ್ಷರಾಗುವಂತಿಲ್ಲ. ಭಾರತದಲ್ಲೂ ನರೇಂದ್ರ ಮೋದಿಗೆ ಸವಾಲುಗಳಿವೆ, ಆದರೆ ಗಂಭೀರವಾಗಿ ಸವಾಲೊಡ್ಡುವ ಸವಾಲುಗಾರನೇ ಇಲ್ಲ. ಮೋದಿಗೆ ಪರ್ಯಾಯವಾಗಬಲ್ಲ ಸಾಧ್ಯತೆಗೆ ರಾಹುಲ್ ಗಾಂಧಿ ಹತ್ತಿರ ಕೂಡ ಇಲ್ಲ. 2020ರ ದಶಕದ ಸಮಸ್ಯೆಗಳಿಗೆ ಅವರು 1950ರ ದಶಕದ ಪರಿಹಾರಗಳನ್ನು ಹೇಳುತ್ತಿದ್ದಾರೆ. ಹೀಗಾಗಿ ಅವರು ಅರ್ಧ ಶತಮಾನದಷ್ಟು ಹಿಂದಿದ್ದಾರೆ. ಇನ್ನು, ಶರದ್ ಪವಾರ್‌ರಂತಹ ಹಿರಿಯ ನಾಯಕರು ಅನಾರೋಗ್ಯದಿಂದಾಗಿ ದೂರವುಳಿದಿದ್ದಾರೆ.

ಮೊದಲ ಹಂತದ ಮತದಾನ ನಡೆದಾಗ ಸರಕಾರದ ಟೀಕಾಕಾರರು ಮತದಾನದ ಪ್ರಮಾಣ ಇಳಿಕೆಯಾಗಿರುವುದನ್ನು ನೋಡಿ ಮೋದಿ ಮತ್ತೊಮ್ಮೆ ಆಯ್ಕೆಯಾಗುವುದು ಕಷ್ಟ ಎಂದು ಹೇಳತೊಡಗಿದ್ದರು. ಆದರೆ ಅವರ ಲೆಕ್ಕಾಚಾರಕ್ಕೆ ಯಾವ ಆಧಾರವೂ ಇಲ್ಲ. ಹಿಂದಿನ ಚುನಾವಣೆಗಳನ್ನೇ ನೋಡಿ. ಕಾಂಗ್ರೆಸ್‌ಗೆ ಪ್ರಬಲ ವಿರೋಧ ಪಕ್ಷಗಳೇ ಇಲ್ಲದಿದ್ದಾಗ 1962ರಲ್ಲಿ ಮತದಾನದ ಪ್ರಮಾಣ ಹೆಚ್ಚಾಗಿತ್ತು. ಕಾಂಗ್ರೆಸ್‌ಗೆ ತುಂಬಾ ವಿರೋಧಿಗಳಿದ್ದಾಗಲೂ ಮತದಾನದ ಪ್ರಮಾಣ ಏರಿಕೆಯಾಗಿತ್ತು. 1971ರಲ್ಲಿ ಮತದಾನದ ಪ್ರಮಾಣ ಶೇ.5.8ರಷ್ಟು ಭಾರೀ ಪ್ರಮಾಣದಲ್ಲಿ ಕುಸಿದು ಶೇ.55.27ರಷ್ಟು ಮಾತ್ರ ಆಗಿತ್ತು. ಆದರೂ ಇಂದಿರಾ ಗಾಂಧಿ 352 ಸೀಟುಗಳ ಸರಳ ಬಹುಮತ ಪಡೆದು ಭರ್ಜರಿ ಗೆಲುವು ಸಾಧಿಸಿದ್ದರು. 1977ರಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚಿದ ಚುನಾವಣೆಯಲ್ಲಿ ಮತದಾನದ ಪ್ರಮಾಣ ಶೇ.5.2ರಷ್ಟು ಏರಿಕೆಯಾಗಿತ್ತು. 1980ರಲ್ಲಿ ಜನತಾ ಪಕ್ಷದ ಸರಕಾರ ನಿರ್ನಾಮವಾದ ಚುನಾವಣೆಯಲ್ಲಿ ಮತದಾನದ ಪ್ರಮಾಣ ಶೇ.3.6ರಷ್ಟು ಇಳಿಕೆಯಾಗಿತ್ತು. ಹೀಗಾಗಿ ಚುನಾವಣೆಯ ಫಲಿತಾಂಶಕ್ಕೂ ಮತದಾನದ ಪ್ರಮಾಣಕ್ಕೂ ನೇರವಾದ ಅಥವಾ ಊಹೆ ಮಾಡಬಹುದಾದ ರೀತಿಯ ತಾರ್ಕಿಕ ಸಂಬಂಧ ಇಲ್ಲ. 1999, 2004 ಮತ್ತು 2009ರಲ್ಲಿ ಮತದಾನದ ಪ್ರಮಾಣ ಹೆಚ್ಚುಕಮ್ಮಿ ಒಂದೇ ಆಗಿತ್ತು. 2014ರಲ್ಲಿ ನರೇಂದ್ರ ಮೋದಿ ಅದ್ಭುತವಾಗಿ ಪ್ರಚಾರ ಮಾಡಿದ್ದರಿಂದ ಅದು ಶೇ.66.44ಕ್ಕೆ ಏರಿಕೆಯಾಗಿತ್ತು. ನಂತರ 2019ರಲ್ಲೂ ಅದು ಏರಿತು. 2024ರಲ್ಲಿ ಮತದಾನದ ಪ್ರಮಾಣ ಬಹುತೇಕ ಶೇ.65ರ ಆಸುಪಾಸಿನಲ್ಲಿ ಇರಲಿದೆ.

ಹಾಗಿದ್ದರೆ ಪ್ರಶ್ನೆ ಏನೆಂದರೆ, ಈ ಚುನಾವಣೆಯಲ್ಲಿ ಯಾರ ಮತಗಳು ಮನೆಯಲ್ಲಿ ಕುಳಿತಿವೆ ಮತ್ತು ಯಾರ ಮತಗಳು ಬೂತ್‌ಗೆ ಬಂದಿವೆ? ಇದಕ್ಕೆ ಉತ್ತರ ಕಂಡು ಹಿಡಿಯಲು ನನ್ನ ಸ್ನೇಹಿತ ಜಾವಿದ್ ಲೇಕ್ ಬಳಿ ಹೋಗೋಣ.

ಜಾವಿದ್ ಲೇಕ್ ಮತ್ತು ಅವರ ಪತ್ನಿ ಭಾರತಿ ಭಾರ್ಗವ ಅವರು ಎಡಪಂಥೀಯ ಪತ್ರಿಕೆಯಾದ 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯ ಮಾಜಿ ಸಹಾಯಕ ಸಂಪಾದಕರು. ಬಹುಶಃ ಅವರು ಯಾವತ್ತೂ ಬಿಜೆಪಿಗೆ ಮತ ಹಾಕಿದವರಲ್ಲ. ಜಾವಿದ್ ಲೇಕ್ 1977ರ ಚುನಾವಣೆಯಿಂದಲೂ ಒಂಥರಾ ವಿಚಿತ್ರವಾದ, ಆದರೆ ತುಂಬಾ ಆಸಕ್ತಿದಾಯಕವಾದ 'ಏಕವ್ಯಕ್ತಿ ಚುನಾವಣಾ ಸಮೀಕ್ಷೆ' ನಡೆಸುತ್ತಾ ಬಂದಿದ್ದಾರೆ. ಅದು ಮತದಾರರ ಮನಸ್ಥಿತಿಯ ಸಮೀಕ್ಷೆ. ಪ್ರತಿ ಚುನಾವಣೆಯಲ್ಲೂ ಅವರು ಉತ್ತರ ಪ್ರದೇಶದ ಪ್ರಯಾಗರಾಜ್‌ಗೆ ಹೋಗುತ್ತಾರೆ. ಅಲ್ಲೊಂದು ದೋಣಿಯನ್ನು ಬಾಡಿಗೆಗೆ ಪಡೆದು ಗಂಗಾನದಿಯಲ್ಲಿ ಹೋಗುತ್ತಾರೆ. ಅಲ್ಲಿ ಅಂಬಿಗರು ಹಾಗೂ ಯಾತ್ರಾರ್ಥಿಗಳನ್ನು ಮಾತನಾಡಿಸುತ್ತಾರೆ. 1977ರಲ್ಲಿ ಅಂಬಿಗರು ಹಾಗೂ ಯಾತ್ರಾರ್ಥಿಗಳು ಯಾವುದೇ ಮುಲಾಜಿಲ್ಲದೆ ಇಂದಿರಾ ಗಾಂಧಿ ಸೋಲುತ್ತಾರೆ ಎಂದಿದ್ದರು. ಅದನ್ನು ಜಾವಿದ್ ನಂಬಿರಲಿಲ್ಲ. ಆದರೆ ಫಲಿತಾಂಶ ಬಂದಾಗ ನಂಬಲೇಬೇಕಾಯಿತು. ಆನಂತರದ ಪ್ರತಿ ಲೋಕಸಭೆ ಚುನಾವಣೆಯಲ್ಲೂ ಅವರು ಇದೇ ರೀತಿಯ ಸಮೀಕ್ಷೆ ನಡೆಸುತ್ತಾ ಬಂದಿದ್ದಾರೆ. 2004ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಸೋಲುತ್ತಾರೆ ಎಂದು ಅವರ ಸಮೀಕ್ಷೆ ಹೇಳಿತ್ತು. 2009ರಲ್ಲಿ ಮನಮೋಹನ ಸಿಂಗ್ ಪುನರಾಯ್ಕೆ ಆಗುತ್ತಾರೆಂದು ಅವರ ಸಮೀಕ್ಷೆ ಹೇಳಿತ್ತು. 2014ರಲ್ಲಿ ನರೇಂದ್ರ ಮೋದಿ ಗೆಲ್ಲುತ್ತಾರೆಂದೂ, 2019ರಲ್ಲಿ ಅವರು ಇನ್ನೂ ಹೆಚ್ಚು ಸೀಟುಗಳಿಂದ ಪುನರಾಯ್ಕೆ ಆಗುತ್ತಾರೆಂದೂ ಅವರ ಸಮೀಕ್ಷೆ ಹೇಳಿತ್ತು. ಈ ಬಾರಿ ಜಾವಿದ್ ತಮ್ಮ ಪತ್ನಿಯನ್ನೂ ಕರೆದುಕೊಂಡು ಅಂಬಿಗರು ಹಾಗೂ ಯಾತ್ರಾರ್ಥಿಗಳ ಸಮೀಕ್ಷೆ ನಡೆಸಲು ಪ್ರಯಾಗರಾಜ್‌ಗೆ ಹೋಗಿದ್ದರು. ಅಲ್ಲಿ ತಾವು ಯಾರ‍್ಯಾರನ್ನು ಮಾತನಾಡಿಸಿದ್ದೇವೆ, ಅವರೇನು ಹೇಳಿದ್ದಾರೆ ಎಂಬುದನ್ನು ಸರಳವಾದ ಲೇಖನವೊಂದರಲ್ಲಿ ಬರೆದಿದ್ದಾರೆ. ಅಗರ್ತಲಾದ ಜೀಬನ್ ದಾಸ್, 35; ಗುಜರಾತ್‌ನ ಭುಜ್‌ನಿಂದ ಬಂದ ಪರೀಕ್ಷಿತ್, 42; ಮಹಾರಾಷ್ಟ್ರದ ಭದ್ರಾವತಿಯಿಂದ ಬಂದ ಗೃಹಿಣಿ ಮೀರಾಭಾಯಿ ಖಾಂಡೇಕರ್, 65; ಉದಯ್‌ಪುರದ ರೈತ ಕಾಲುರಾಮ್, 60; ರಾಜಸ್ಥಾನದ ಚುರುವಿನಿಂದ ಬಂದ ಚಾಲಕ ರಾಜೇಶ್, 28; ಗುಜರಾತ್‌ನ ಬಹರುಚ್‌ನಿಂದ ಬಂದ ಪ್ರೀತಿ ಪ್ರಜಾಪತಿ, 34; ಭಿಲಾಯಿಯಿಂದ ಬಂದ ಶಾಲಾ ಶಿಕ್ಷಕಿ ವಂದನಾ ಮುಕ್ತೇಕರ್, 52; ಬುಂದೇಲ್‌ಖಂಡದ ರೈಲ್ವೆ ಸೂಪರ್‌ವೈಸರ್ ಕಮಲಾಪತಿ ಅಗ್ನಿಹೋತ್ರಿ, 57; ಜಾರ್ಖಂಡದ ಡುಮ್ಕಾದಿಂದ ಬಂದ ಸರಕು ಸಾಗಣೆ ರೈಲ್ವೆ ನೌಕರ ಉತ್ತಮ್ ಸಿನ್ಹಾ, 35; ಜೋಧಪುರದ ಡ್ರೈವರ್ ಮುನ್ನಾ ರಾಮ್, 45; ರಾಜಸ್ಥಾನದ ದೌಸಾದಿಂದ ಬಂದ ಟ್ರಾವೆಲ್ ಏಜೆಂಟ್ ಹುಕುಮ್ ಚಂದ್ ಶರ್ಮಾ, 56; ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಸಣ್ಣ ಕೃಷಿಕ ಹೀರಾ ರಾಮನಾಥ್, 63; ಮಧ್ಯಪ್ರದೇಶದ ರತ್ಲಾಮ್‌ನಲ್ಲಿ ಮೆಡಿಕಲ್ ಶಾಪ್ ಹೊಂದಿರುವ ಅಂಕಿತಾ ತಿವಾರಿ, 36; ರಾಜಸ್ಥಾನದ ಕೋಟಾದಲ್ಲಿ ಆನ್‌ಲೈನ್ ಬಿಸಿನೆಸ್ ನಡೆಸುವ ಮಂಜು ತಿವಾರಿ, 50; ಆಂಧ್ರಪ್ರದೇಶದ ಪಶ್ಚಿಮ ಗೋದಾವರಿಯಲ್ಲಿ ಬಿಸಿನೆಸ್ ಹೊಂದಿರುವ ರಂಗ ರಾವ್, 43; ಕರ್ನಾಟಕದ ಹಾವೇರಿಯಿಂದ ಬಂದ ಗೃಹಿಣಿ ಕಲ್ಪನಾ, 45; ಹೈದರಾಬಾದ್‌ನ ನಿರಂಜನ್, 40; ನಲ್ಗೊಂಡಾದ ವಿನತಾ, 51; ನಿಜಾಮಾಬಾದ್‌ನ ವಸಂತ, 60; ಉತ್ತರ ಪ್ರದೇಶದಲ್ಲಿರುವ ಬ್ರಾಹ್ಮಣರು ಮಾತ್ರ ವಾಸಿಸುವ ವಿಶಿಷ್ಟವಾದ ಹಳ್ಳಿಯಿಂದ ಬಂದ ಪ್ರೇಮ್ ನಾರಾಯಣ ತಿವಾರಿ; ಇಷ್ಟು ಜನರನ್ನು ಜಾವಿದ್ ದಂಪತಿ ಮಾತನಾಡಿಸಿದ್ದಾಗಿ ಬರೆದುಕೊಂಡಿದ್ದಾರೆ.

ಇವರ ಪೈಕಿ ರಂಗ ರಾವ್ ಅವರನ್ನು ಬಿಟ್ಟು ಇನ್ನೆಲ್ಲರೂ ನರೇಂದ್ರ ಮೋದಿಗೆ ಮತ ಹಾಕಿದ್ದಾರೆ. ರಂಗ ರಾವ್ ಮಾತ್ರ ಎನ್‌ಡಿಎ ಮೈತ್ರಿಕೂಟದಲ್ಲಿರುವ ಚಂದ್ರಬಾಬು ನಾಯ್ಡುಗೆ ಮತ ಹಾಕಿದ್ದಾರೆ. ಆಂಧ್ರ ಪ್ರದೇಶದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಶೇ.80ರಷ್ಟು ಸೀಟು ಬರುತ್ತದೆ ಎಂಬುದು ಅವರ ಅಂದಾಜು. ಈ ಸಮೀಕ್ಷೆಯಲ್ಲಿ ಪಾಲ್ಗೊಂಡ ಇನ್ನೂ ಇಬ್ಬರು ಬೇರೆ ಪಕ್ಷಕ್ಕೆ ಮತದಾನ ಮಾಡಿದ್ದಾರೆ. ಬಿಕಾನೇರ್‌ನ ಗೋಪಾಲ್ ವಿಷ್ಣೋಯ್, 50, ಇವರು ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಉತ್ತರ ಪ್ರದೇಶದ ದೋಭಿಯೊಬ್ಬರ ಸೊಸೆ ಮಂಜು ದೇವಿ, 30, ಇವರು ಎಲ್ಲಾ ಪಕ್ಷಗಳ ನಡವಳಿಕೆಯಿಂದ ಬೇಸತ್ತು ಬಿಎಸ್‌ಪಿಯ ಮಾಯಾವತಿಗೆ ಮತ ಹಾಕಿದ್ದಾರೆ. ನನಗೆ ಗೊತ್ತು, ಇದು ವೈಜ್ಞಾನಿಕ ರೀತಿಯಲ್ಲಿ ನಡೆದ ಸಮೀಕ್ಷೆ ಅಲ್ಲ. ಇದರಲ್ಲಿ ಅಲ್ಪಸಂಖ್ಯಾತರು ಯಾರೂ ಪಾಲ್ಗೊಂಡಿಲ್ಲ. ಕೇರಳ, ತಮಿಳುನಾಡು ಅಥವಾ ಬಂಗಾಳದ ಮತದಾರರು ಯಾರೂ ಇಲ್ಲ. ಆದರೆ ಹಿಂದಿನ ಲೋಕಸಭೆ ಚುನಾವಣೆಗಳಲ್ಲೂ ಈ ಸಮೀಕ್ಷೆ ಹೀಗೇ ನಡೆದಿತ್ತು.

★★★

ಭಾರತದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಪವಾಡಸದೃಶವಾದ ಒಂದು ಸಂಗತಿಯೆಂದರೆ ಇಲ್ಲಿನ ಚುನಾವಣೆಯಲ್ಲಿ ಜನರು 'ಚೆಕ್ಸ್ ಮತ್ತು ಬ್ಯಾಲೆನ್ಸ್' ಚೆನ್ನಾಗಿ ನಿಭಾಯಿಸುತ್ತಾರೆ. 1950ರ ದಶಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪ್ರಬಲ ವಿರೋಧ ಪಕ್ಷಗಳೇ ಇಲ್ಲದಿದ್ದ ಕಾಲದಲ್ಲೂ ಅವರು ಕಾಂಗ್ರೆಸ್‌ಗೆ ಅದ್ಭುತವಾದ ಬಹುಮತ ನೀಡಲಿಲ್ಲ. 1952ರ ಚುನಾವಣೆಯಲ್ಲಿ 489 ಸದಸ್ಯ ಬಲದ ಶಾಸನಸಭೆಗೆ ಕಾಂಗ್ರೆಸ್ ಪಕ್ಷ ಶೇ.44.99ರಷ್ಟು ಮತ ಮಾತ್ರ ಪಡೆದು 364 ಸೀಟುಗಳನ್ನು ಗೆದ್ದಿತ್ತು. ಅಂದರೆ ಶೇ.55ರಷ್ಟು ಭಾರತೀಯರು ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ್ದರು. ಬ್ರಿಟಿಷರಿಂದ ಭಾರತೀಯರಿಗೆ ಕೇವಲ ಐದು ವರ್ಷದ ಹಿಂದಷ್ಟೇ ಸ್ವಾತಂತ್ರ್ಯ ಕೊಡಿಸಿದ್ದ ರಾಜಕೀಯ ಪಕ್ಷವದು. ಆದರೂ ಅರ್ಧಕ್ಕಿಂತ ಹೆಚ್ಚು ಭಾರತೀಯರು ಆ ಪಕ್ಷವನ್ನು ಚುನಾವಣೆಯಲ್ಲಿ ವಿರೋಧಿಸಿದ್ದರು. ಆದರೆ ಈ ದೇಶದ ಮತದಾರ ತೋರುವ ಜಾಣ್ಮೆ ಮತ್ತು ಸಮತೋಲನವನ್ನು ಯಾರು ತಾನೆ ಪ್ರಶ್ನಿಸಲು ಸಾಧ್ಯ? ದೇಶದಲ್ಲಿ ನಡೆದ ಮೊದಲ ಲೋಕಸಭಾ ಚುನಾವಣೆಯಲ್ಲಿ ಕಮ್ಯುನಿಸ್ಟರು 16 ಸೀಟುಗಳನ್ನೂ, ತಮಿಳುನಾಡು ಟಾಯ್ಲರ್ಸ್ ಪಾರ್ಟಿ ನಾಲ್ಕು ಸೀಟುಗಳನ್ನೂ ಗೆದ್ದಿತ್ತು.

1957ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮತ ಗಳಿಕೆ ಶೇ.47.78ಕ್ಕೆ ಏರಿಕೆಯಾಗಿತ್ತು. ಆದರೆ ಸೀಟುಗಳ ಸಂಖ್ಯೆ ಮೂರು ಕಡಿಮೆಯಾಗಿತ್ತು. 1962ರಲ್ಲಿ ಆಡಳಿತಾರೂಢ ಪಕ್ಷ 10 ಸ್ಥಾನಗಳನ್ನು ಕಳೆದುಕೊಂಡಿತ್ತು. 1967ರಲ್ಲಿ ಕಾಂಗ್ರೆಸ್ ಪಕ್ಷ 523 ಸದಸ್ಯ ಬಲದ ಲೋಕಸಭೆಯಲ್ಲಿ 283ಕ್ಕೆ ಕುಸಿದು ಬದಲಾವಣೆಯ ಸಾಧ್ಯತೆಗಳು ಗೋಚರಿಸಿದ್ದವು. ಕಾಂಗ್ರೆಸ್ ಪಕ್ಷದ ಉಚ್ಛ್ರಾಯದ ಕಾಲದಲ್ಲೂ ಇನ್ನಿತರ ರಾಜಕೀಯ ಪಕ್ಷಗಳು 125ರಿಂದ 250ರಷ್ಟು ಸೀಟುಗಳನ್ನು ಗೆಲ್ಲುತ್ತಿದ್ದವು.

ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಎಲ್ಲಾ ರೀತಿಯ ಗಂಭೀರ ಅಭಿಪ್ರಾಯಗಳಿಗೂ ಬೆಲೆ ನೀಡುವ ವಿಶಿಷ್ಟವಾದ ಹಾಗೂ ವಿಭಿನ್ನವಾದ ಮಾರ್ಗಗಳಿವೆ. ಸಂಖ್ಯೆಯ ಆಟದಲ್ಲಿ ಕೊನೆಯ ಸಂಖ್ಯೆ ಏನೆಂಬುದು ಫಲಿತಾಂಶ ಬಂದಾಗಲಷ್ಟೇ ತಿಳಿಯುತ್ತದೆ. 1947ರ ನವೆಂಬರ್ 11ರಂದು ವಿನ್‌ಸ್ಟನ್ ಚರ್ಚಿಲ್ 'ನಾನಾ ರೀತಿಯ ಪಾಪಗಳು ಹಾಗೂ ಸಂಕಷ್ಟಗಳಿಂದ ಕೂಡಿದ ಈ ಜಗತ್ತಿನಲ್ಲಿ ಬೇರೆ ಬೇರೆ ರೀತಿಯ ಸರಕಾರಗಳನ್ನು ಈಗಾಗಲೇ ಪ್ರಯತ್ನಿಸಲಾಗಿದೆ ಮತ್ತು ಮುಂದೆಯೂ ಪ್ರಯತ್ನಿಸಲಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಾಪನೆಯಾಗುವ ಸರಕಾರದಲ್ಲಿ ಎಲ್ಲವೂ ಸರಿಯಿದೆ ಎಂದು ಯಾರೂ ಹೇಳುವುದಿಲ್ಲ. ಹಾಗೆ ನೋಡಿದರೆ ಕಾಲಕಾಲಕ್ಕೆ ಪ್ರಯೋಗಿಸಲಾದ ಬೇರೆ ಬೇರೆ ರೀತಿಯ ಸರಕಾರಗಳ ಪೈಕಿ ಪ್ರಜಾಪ್ರಭುತ್ವ ಅತ್ಯಂತ ಕೆಟ್ಟ ವ್ಯವಸ್ಥೆ...' ಎಂದು ಹೇಳಿದ್ದರು. ಅವರು ಈ ಹೇಳಿಕೆ ನೀಡಿದ ದಿನಾಂಕಕ್ಕೆ ಮಹತ್ವವಿದೆ. ಕೇವಲ ಎರಡು ವರ್ಷಗಳ ಹಿಂದೆ 1945ರಲ್ಲಿ ಚರ್ಚಿಲ್ ಬ್ರಿಟನ್ನಿನ ಸಂಸತ್ ಚುನಾವಣೆಯಲ್ಲಿ ಸೋತಿದ್ದರು. ಎರಡನೇ ವಿಶ್ವ ಮಹಾಯುದ್ಧದಲ್ಲಿ ಬ್ರಿಟನ್ ದೇಶ ಚರ್ಚಿಲ್ ನೇತೃತ್ವದಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಬಳಿಕ ಕೆಲವೇ ವಾರಗಳಲ್ಲಿ ಆ ಚುನಾವಣೆ ನಡೆದಿತ್ತು.

2004ರಲ್ಲಿ ಫಲಿತಾಂಶ ಬದಲಾಗುತ್ತದೆ ಎಂಬುದರ ಮೊದಲ ಸುಳಿವು ಮುಂಬೈ ಭಯೋತ್ಪಾದಕ ದಾಳಿಯ ಬಳಿಕ ದೇಶದಲ್ಲಿ ಬದಲಾದ ವಾತಾವರಣದಿಂದಾಗಿ ರಾಜಕೀಯ ಪಂಡಿತರಿಗೆ ಲಭಿಸಿತ್ತು. ನಂತರ ಫಲಿತಾಂಶಕ್ಕೆ ಮೂರು ವಾರಗಳಿರುವಾಗ ಷೇರು ಮಾರುಕಟ್ಟೆ ಕುಸಿಯತೊಡಗಿತ್ತು. ಎನ್‌ಡಿಎ ಸರಕಾರ ಸಂಕಷ್ಟದಲ್ಲಿದೆ ಎಂಬುದರ ಮೊದಲ ಸುಳಿವು ಅದಾಗಿತ್ತು. ಮನಮೋಹನ ಸಿಂಗ್ ಸರಕಾರ ರಚಿಸುವವರೆಗೂ ಷೇರು ಮಾರುಕಟ್ಟೆ ಉದ್ವಿಗ್ನ ಸ್ಥಿತಿಯಲ್ಲೇ ಇತ್ತು. ಮುಂಬೈನ ದುಡ್ಡಿನ ಕುಳಗಳು ಅವರ ಬಾಯಿ ಎಲ್ಲಿದೆಯೋ ಅಲ್ಲೇ ಹಣವನ್ನೂ ಹೂಡಿಕೆ ಮಾಡುತ್ತಾರೆ. ಅವರನ್ನು ನೀವು ನಂಬದಿದ್ದರೂ ಸರಿ, ಆದರೆ ಅವರೇನು ಹೇಳುತ್ತಿದ್ದಾರೆ ಎಂಬುದನ್ನು ಕೇಳಿಸಿಕೊಳ್ಳುವುದರಲ್ಲಿ ಲಾಭವಿದೆ. ಅವರ ಕೈಯಲ್ಲಿ ಸಾವಿರಾರು ಕೋಟಿ ರುಪಾಯಿ ಓಡಾಡುತ್ತದೆ. ಅವರು ಲಾಟರಿಯಲ್ಲಿ ಹಣ ಹೂಡುವುದಿಲ್ಲ. ಈ ಸಲದ ಚುನಾವಣೆಯಲ್ಲಿ ಮೇ 25ರಂದು ಆರನೇ ಹಂತದ ಮತದಾನ ಮುಗಿದ ಮೇಲೆ ಷೇರು ಮಾರುಕಟ್ಟೆ ಏಕ್‌ದಂ ಜಿಗಿದೆದ್ದು 76000 ಅಂಕಗಳನ್ನು ದಾಟಿತ್ತು. ಇದು ಭಾರತೀಯ ಷೇರು ಮಾರುಕಟ್ಟೆಯ ಐತಿಹಾಸಿಕ ಗರಿಷ್ಠ. ಅದೇ ದಿನ ಸಂಜೆಯ ಹೊತ್ತಿಗೆ ಹೂಡಿಕೆದಾರರು ಷೇರು ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದರು. ಏಕೆಂದರೆ ಹಣಕ್ಕೆ ಅಪಾಯ ಕಡಿಮೆಯಾದಾಗಲೇ ಅದು ಉಳಿಯುತ್ತದೆ. ಇದು ವ್ಯಾಪಾರಿಗಳ ಸಿದ್ಧಾಂತ. ಷೇರು ಮಾರುಕಟ್ಟೆ ಯಾವಾಗಲೂ ಬಹಳ ಎಚ್ಚರಿಕೆಯ ಸಂದೇಶ ನೀಡುತ್ತದೆ. ಈ ಬಾರಿ ಅದರ ಸಂದೇಶ: 'ಸರಕಾರ ಮರಳಿ ಬರುತ್ತದೆ, ಆದರೆ ಬಹುಮತ ಹೇಗಿರುತ್ತದೆ ಎಂಬುದು ಗೊತ್ತಿಲ್ಲ'. ಐಟಿಐ ಮ್ಯೂಚುವಲ್ ಫಂಡ್‌ನ ಸಿಐಒ ರಾಜೇಶ್ ಭಾಟಿಯಾ ಮೇ 28ರಂದು 'ಮನಿಕಂಟ್ರೋಲ್' ಜೊತೆ ಮಾತನಾಡುತ್ತಾ, 'ಇದೇ ಸರಕಾರ ಮತ್ತೆ ಬರುತ್ತದೆ, ಹಾಗಾಗಿ ಇವೇ ಆರ್ಥಿಕ ನೀತಿಗಳು ಮುಂದುವರೆಯುತ್ತವೆ ಎಂಬ ನಿರೀಕ್ಷೆಯಲ್ಲಿ ಸದ್ಯಕ್ಕಂತೂ ಮಾರುಕಟ್ಟೆಯಲ್ಲಿ ತುಂಬಾ ಲವಲವಿಕೆಯಿದೆ' ಎಂದು ಹೇಳಿದ್ದಾರೆ.

ಇವೆಲ್ಲ ಒಂದೊಂದು ರೀತಿಯ ಅಭಿಪ್ರಾಯಗಳಷ್ಟೆ. ಜೂನ್ 4ರಂದು ಮತಯಂತ್ರದಿಂದ ಯಾವ 'ಜಿನಿ' ಹೊರಗೆ ಬರುತ್ತದೆ ಎಂಬುದರ ಸುಳಿವನ್ನು ಇವು ನೀಡುತ್ತಿವೆ. ಇನ್ನಷ್ಟು ವಿಶ್ಲೇಷಣೆ ಹಾಗೂ ವಿವರಗಳಿಗಾಗಿ ಮುಂದಿನ ಅಂಕಣವನ್ನು ಎದುರುನೋಡಿ.

ಅದೇನೇ ಇದ್ದರೂ ದೇಶದಲ್ಲಿ ಒಂದು ಚುನಾವಣೆಯ ಫಲಿತಾಂಶವಂತೂ ಈಗಾಗಲೇ ಪ್ರಕಟವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತ ಈಗಾಗಲೇ ಗೆದ್ದಿದೆ. ಅಲ್ಲಿ ಮತದಾನದ ಪ್ರಮಾಣ ಈ ಸಲ ಶೇ.58.5ಕ್ಕೆ ಏರಿಕೆಯಾಗಿದೆ. ಇದು ಕಳೆದ 35 ವರ್ಷಗಳಲ್ಲೇ ಗರಿಷ್ಠ.

(ಲೇಖಕರು: ಹಿರಿಯ ಪತ್ರಕರ್ತ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 158

ಭಾರತ ಮತ ಮಹಾ ಸಮರ

ಸಮಾಚಾರ ಸಣ್ಣದಲ್ಲ

ತಿರುಪತಿ ತಿಮ್ಮಪ್ಪನಿಗೆ ಪೂಜೆ ಸಲ್ಲಿಸಿದ ಶಾ



ತಿರುಪತಿ: ಆರು ಹಂತಗಳ ಬಳಿಕ ಏಳನೇ ಹಾಗೂ ಕೊನೆಯ ಹಂತದ ಲೋಕಸಭೆಯ ಚುನಾವಣೆಗೂ ಮುನ್ನ ಕೇಂದ್ರ ಗೃಹ ಸಚಿವ ಅಮಿತ್ ಶಾ, ತಿರುಮಲ ತಿರುಪತಿ ದೇವಸ್ಥಾನಕ್ಕೆ ತೆರಳಿ ವೆಂಕಟೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಲ್ಲಿನ ವೆಂಕಟೇಶ್ವರ ದೇವಸ್ಥಾನಕ್ಕೆ ಬೆಳಗ್ಗೆ 8 ಗಂಟೆ ಸುಮಾರಿಗೆ ಬಂದಿಳಿದ ಅಮಿತ್ ಶಾ ದಂಪತಿ ಅರ್ಧ ಗಂಟೆ ಕಾಲ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ್ದಾರೆ. ದೇಗುಲದ ಅರ್ಚಕರು ಅಮಿತ್ ಶಾ ದಂಪತಿಯನ್ನು ಆಶೀರ್ವದಿಸಿ, ಡೈರಿ, ಆಯುರ್ವೇದ ಉತ್ಪನ್ನಗಳು, ಲಡ್ಡು ಮತ್ತು ಇತರೆ ವಸ್ತುಗಳನ್ನು ಉಡುಗೊರೆಯಾಗಿ ನೀಡಿದ್ದಾರೆ' ಎಂದು ವರದಿ ತಿಳಿಸಿದೆ. ಈ ಹಿಂದೆ ಅವರು ಗುರುವಾರ ತಮಿಳುನಾಡಿನ ಪುದುಕೊಟ್ಟಾಯಿಯ ಕೊಟ್ಟಾಯಿ ಭೈರಾರ್ವ ದೇಗುಲದಲ್ಲೂ ಪೂಜೆ ನೆರವೇರಿಸಿದ್ದರು.

ಇಂಡಿಯ ಸೇರಲು ಸಾಲಿನಲ್ಲಿ ನಿಲ್ಲುತ್ತಾರೆ

ದೆಹಲಿ: ಬಹು ನಿರೀಕ್ಷಿತ ಲೋಕಸಭಾ ಚುನಾವಣೆಯ ಫಲಿತಾಂಶ ಜೂನ್ 4ರಂದು ಪ್ರಕಟವಾಗಲಿದ್ದು, ಇಂಡಿಯಾ' ಬಣವು ಸ್ಪಷ್ಟ ಬಹುಮತ ಪಡೆಯುವ ವಿಶ್ವಾಸವನ್ನು ಕಾಂಗ್ರೆಸ್ ವ್ಯಕ್ತಪಡಿಸಿದೆ. ಭಾರತದಲ್ಲಿ ಇಮಡಿಯ ಬಣವು



ಅಧಿಕಾರಕ್ಕೆ ಬಂದಮೇಲೆ ಎನ್‌ಡಿಎ ಮೈತ್ರಿಕೂಟದಲ್ಲಿರುವ ಹಲವು ಪಕ್ಷಗಳು ಇಂಡಿಯಾ ಬಣ ಸೇರಲು ಸರತಿ ಸಾಲಿನಲ್ಲಿ ನಿಲ್ಲಲಿವೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈಶ್ರೀರಾಮ್ ರಮೇಶ್ ಹೇಳಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತೊಮ್ಮೆ ಬಣ ಬದಲಿಸಲಿದ್ದಾರೆ ಎಂಬ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ ಮಾತನಾಡಿದರು. ಜೂನ್ 4ರಂದು ನಿತೀಶ್ ಕುಮಾರ್ ಏನು ಮಾಡುತ್ತಾರೆ ಎಂಬ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪದೇ ಪದೇ ನಿಷ್ಠೆ ಬದಲಿಸುವ ಹಳೆ ಚಾಳಿ ಅವರಿಗಿದೆ. ಅವರಿಲ್ಲದೆಯೇ ಇಂಡಿಯಾ' ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ. ಆಗ ಜೆಡಿಯು ಅಗತ್ಯವೇ ಇರುವುದಿಲ್ಲ ಎಂದು ಕುಟುಕಿದ್ದಾರೆ.

ಸಮೀಕ್ಷೆ ಚರ್ಚೆಯಲ್ಲಿ ಕಾಂಗ್ರೆಸ್ ಭಾಗಿ ಇಲ್ಲ

ದೆಹಲಿ: ಲೋಕಸಭೆ ಚುನಾವಣೆಯ ಕಡೇ ಹಂತದ ಚುನಾವಣೆ ಮುಗಿದು ಶನಿವಾರ ಸಂಜೆಯೇ ಮತಗಟ್ಟೆ ಸಮೀಕ್ಷೆ ಹೊರಬೀಳಲಿದ್ದು, ಈ ಕುರಿತ ಮಾಧ್ಯಮಗಳಲ್ಲಿನ ಚರ್ಚೆಗಳಲ್ಲಿ ಭಾಗಿಯಾಗುವುದಿಲ್ಲ ಎಂದು ಕಾಂಗ್ರೆಸ್ ಹೇಳಿದೆ. ಈ ಮೂಲಕ

ಮತಗಟ್ಟೆ ಸಮೀಕ್ಷೆಗಳನ್ನು ಅದು ಬ್ಯಾನ್ ಮಾಡಿದೆ.

ಈ ಸಂಬಂಧ ಮಾತನಾಡಿದ ಕಾಂಗ್ರೆಸ್‌ನ ವಕ್ತಾರ ಮತ್ತು ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ, ಈಗಾಗಲೇ ಜನ ತಮ್ಮ ಹಕ್ಕು ಚಲಾವಣೆ ಮಾಡಿದ್ದು, ಭವಿಷ್ಯ ಮತಪೆಟ್ಟಿಗೆಯಲ್ಲಿ ಭದ್ರವಾಗಿದೆ. ಇಂಥ ಹೊತ್ತಿನಲ್ಲಿ ನಾವು ಸಮೀಕ್ಷೆಗಳಲ್ಲಿ ಭಾಗಿಯಾಗುವುದಿಲ್ಲ ಎಂದಿದ್ದಾರೆ. ಈ ಸಮೀಕ್ಷೆಗಳಲ್ಲಿ ನಮಗೆ ನಂಬಿಕೆ ಇಲ್ಲ. ಜೂ.4ರಂದು ಹೊರಬೀಳುವ ಫಲಿತಾಂಶವೇ ಅಂತಿಮ. ಟೀವಿಗಳು ತಮ್ಮ ಟಿಆರ್‌ಪಿಗಾಗಿ ಇಂಥ ಕಾರ್ಯಕ್ರಮ ಮಾಡುತ್ತವೆ ಎಂದಿದ್ದಾರೆ. ಅಲ್ಲದೆ ಜೂ.4ರ ಬಳಿಕ ಖುಷಿಯಾಗಿಯೇ ನಾವು ಮಾಧ್ಯಮ ಸಂವಾದಗಳಲ್ಲಿ ಭಾಗಿಯಾಗುತ್ತೇವೆ ಎಂದು ಅವರು ಹೇಳಿದ್ದಾರೆ. ಈಗಾಗಲೇ ಚುನಾವಣಾ ಪೂರ್ವ ಸಮೀಕ್ಷೆಗಳಲ್ಲಿ ಬಿಜೆಪಿಯೇ ಗೆದ್ದು ಅಧಿಕಾರಕ್ಕೇರಲಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಚುನಾವಣೆ: 1,100 ಕೋಟಿ ರು. ಜಪ್ತಿ

ದೆಹಲಿ: ಲೋಕಸಭಾ ಚುನಾವಣೆ ವೇಳೆ ಆದಾಯ ತೆರಿಗೆ ಇಲಾಖೆಯು ಮೇ30 ರವರೆಗೆ 1,100 ರು. ಕೋಟಿ ನಗದು ಮತ್ತು ಚಿನ್ನಾಭರಣವನ್ನು ವಶಪಡಿಸಿಕೊಂಡಿದೆ ಎಂದು ಮೂಲಗಳು ತಿಳಿಸಿರುವುದಾಗಿ ಎಎನ್‌ಐ ವರದಿ ಮಾಡಿದೆ. ಮೂಲಗಳ ಪ್ರಕಾರ, 2019ರ ಚುನಾವಣೆಯಲ್ಲಿ 390 ಕೋಟಿ ರು. ಹಣ ಜಪ್ತಿ ಮಾಡಲಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಶೇ 182ರಷ್ಟು ಹೆಚ್ಚಾಗಿದೆ. ವಶಪಡಿಸಿಕೊಂಡ ವಸ್ತುಗಳ ಪ್ರಮಾಣದಲ್ಲಿ ದೆಹಲಿ ಮತ್ತು ಕರ್ನಾಟಕ ಅಗ್ರಸ್ಥಾನದಲ್ಲಿದೆ.

ಎರಡೂ ಕಡೆ 200 ಕೋಟಿ ರು.ಗೂ ಹೆಚ್ಚು ಮೌಲ್ಯದ ನಗದು ಮತ್ತು ಆಭರಣಗಳನ್ನು ದೊರೆತಿವೆ. ತಮಿಳುನಾಡಿನಲ್ಲಿ 150 ಕೋಟಿ ರು. ಮೌಲ್ಯದ ವಸ್ತು ವಶಪಡಿಸಿಕೊಳ್ಳಲಾಗಿದ್ದು ಎರಡನೇ ಸ್ಥಾನದಲ್ಲಿದೆ. ಉಳಿದಂತೆ ಆಂಧ್ರಪ್ರದೇಶ, ತೆಲಂಗಾಣ ಮತ್ತು ಒಡಿಶಾದಲ್ಲಿ 100 ಕೋಟಿ ರು. ಗೂ ಹೆಚ್ಚು ಮೌಲ್ಯದ ನಗದು ಮತ್ತು ಆಭರಣಗಳು ದೊರೆತಿವೆ. ಮಾರ್ಚ್ 16 ರಂದು ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಅಂದಿನಿಂದ, ಆದಾಯ ತೆರಿಗೆ ಇಲಾಖೆಯು ಮತದಾರರ ಮೇಲೆ ಪ್ರಭಾವ ಬೀರಬಹುದಾದ ಲೆಕ್ಕಕ್ಕೆ ಸಿಗದ ನಗದು ಮತ್ತು ವಸ್ತುಗಳನ್ನು ಪತ್ತೆಹಚ್ಚಿ ಜಪ್ತಿ ಮಾಡುತ್ತಿದೆ.

8 ರಾಜ್ಯಗಳ 57 ಕ್ಷೇತ್ರಗಳಿಗೆ ಮತದಾನ | ಒಡಿಶಾದ ಕಡೇ 42 ವಿಧಾನಸಭಾ ಕ್ಷೇತ್ರಗಳಿಗೆ ಮತ

ಇಂದು ಅಂತಿಮ ಹಂತ: ಕಣದಲ್ಲಿ ಪ್ರಧಾನಿ ಮೋದಿ

ದೆಹಲಿ: ಲೋಕಸಭೆ ಚುನಾವಣೆಯ ಕಡೇ ಮತ್ತು 7ನೇ ಹಂತಕ್ಕೆ ಮತದಾನ ಶನಿವಾರ ಬೆಳಗ್ಗೆ ಆರಂಭವಾಗಲಿದೆ. ಒಟ್ಟು ಎಂಟು ರಾಜ್ಯಗಳ 57 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಘಟಾನುಘಟಿಗಳ ಭವಿಷ್ಯ ನಿರ್ಧಾರವಾಗಲಿದೆ. ಅಲ್ಲದೇ, ಒಡಿಶಾದ 42 ವಿಧಾನ ಸಭಾ ಕ್ಷೇತ್ರಗಳಿಗೂ ಈ ಹಂತದಲ್ಲೇ ಚುನಾವಣೆ ನಡೆಯಲಿದೆ. ಜೂ.4ಕ್ಕೆ ಫಲಿತಾಂಶ ಪ್ರಕಟವಾಗಲಿದೆ.

ವಾರಣಾಸಿ ಸೇರಿದಂತೆ 57 ಸ್ಥಾನಗಳಲ್ಲಿ 10.06 ಕೋಟಿ ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅರ್ಹರಾಗಿದ್ದಾರೆ. ಇಲ್ಲಿಯವರೆಗೆ, 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮತ್ತು 486 ಸ್ಥಾನಗಳಿಗೆ ಮತದಾನ ಪೂರ್ಣಗೊಂಡಿದೆ. ಪಂಜಾಬ್‌ನ ಎಲ್ಲಾ 13, ಹಿಮಾಚಲ ಪ್ರದೇಶದ 4, ಉತ್ತರ ಪ್ರದೇಶದ 13, ಪಶ್ಚಿಮ ಬಂಗಾಳದ 9, ಬಿಹಾರದ 8, ಒಡಿಶಾದ 6, ಜಾರ್ಖಂಡ್‌ನ 3 ಮತ್ತು ಚಂಡೀಗಢದ 1 ಲೋಕಸಭಾ ಕ್ಷೇತ್ರಗಳಿಗೆ ಏಳನೇ ಮತ್ತು ಕೊನೆಯ ಹಂತದಲ್ಲಿ ಮತದಾನ ನಡೆಯಲಿದೆ. ಕೊನೆಯ ಹಂತದಲ್ಲಿ 904 ಅಭ್ಯರ್ಥಿಗಳು ತಮ್ಮ ಅದೃಷ್ಟವನ್ನು ಪರೀಕ್ಷಿಸಲಿದ್ದಾರೆ.

ಬಿಸಿ ವಾತಾವರಣದ ಹೊರತಾಗಿಯೂ, ಕಳೆದ ಕೆಲವು ಹಂತಗಳಲ್ಲಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಬಂದಿದ್ದಾರೆ. ಕಳೆದ ಎರಡು ಹಂತಗಳಲ್ಲಿ, ಮಹಿಳಾ ಮತದಾನದ ಶೇಕಡಾವಾರು ಪುರುಷ ಮತದಾನವನ್ನು ಮೀರಿಸಿದೆ ಎಂದು ಚುನಾವಣಾ ಆಯೋಗ ಹೇಳಿಕೆಯಲ್ಲಿ ತಿಳಿಸಿದೆ. ಈ ಕ್ಷೇತ್ರಗಳಲ್ಲಿ 1.09 ಲಕ್ಷ ಮತಗಟ್ಟೆಗಳಲ್ಲಿ ಸುಮಾರು 10.9 ಲಕ್ಷ ಮತಗಟ್ಟೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.



2019 ರಲ್ಲಿ ಚುನಾವಣೆ ನಡೆದ 57 ಸ್ಥಾನಗಳಲ್ಲಿ ಬಿಜೆಪಿ 25 ಸ್ಥಾನಗಳನ್ನು ಗೆದ್ದಿದ್ದರೆ, ಕಾಂಗ್ರೆಸ್ 8 ಮತ್ತು ತೃಣಮೂಲ ಕಾಂಗ್ರೆಸ್ 9 ಸ್ಥಾನಗಳನ್ನು ಗೆದ್ದಿತ್ತು. ಬಿಜೆಡಿ 4, ಜೆಡಿಯು 3, ಬಿಎಸ್‌ಪಿ, ಅಪ್ನಾ ದಳ ಮತ್ತು ಅಕಾಲಿ ದಳ ತಲಾ 2, ಜೆಎಂಎಂ ಮತ್ತು ಎಎಪಿ ತಲಾ 1 ಸ್ಥಾನಗಳನ್ನು ಹೊಂದಿವೆ.

ಆದಾಗ್ಯೂ, ಉಪಚುನಾವಣೆಯಲ್ಲಿ, ಕಾಂಗ್ರೆಸ್ ಜಲಂಧರ್ ಅನ್ನು ಎಎಪಿಗೆ ಕಳೆದುಕೊಂಡಿತು ಮತ್ತು ಮಂಡಿಯನ್ನು ಬಿಜೆಪಿಯಿಂದ ಕಸಿದುಕೊಂಡಿತು. ಎಎಪಿ ಸಂಗ್ರೂರ್ ಅನ್ನು ಅಕಾಲಿ ದಳ (ಅಮೃತಸರ) ವಿರುದ್ಧ ಕಳೆದುಕೊಂಡಿತು. ಈ ಚುನಾವಣೆಯಲ್ಲಿ ಇಬ್ಬರು ಕಾಂಗ್ರೆಸ್ ಹಾಲಿ ಸಂಸದರಾದ ರವ್ನೀತ್ ಬಿಟ್ಟು ಮತ್ತು ಪ್ರಣೀತ್ ಕೌರ್ ಮತ್ತು ಎಎಪಿ ಸಂಸದ ಸುಶೀಲ್ ರಿಂಕು ಅವರು ಪಂಜಾಬ್‌ನಲ್ಲಿ ತಮ್ಮ ಸ್ಥಾನಗಳಿಂದ ಬಿಜೆಪಿ ಟಿಕೆಟ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ.

ಹಿರಿಯ ಕಾಂಗ್ರೆಸ್ ನಾಯಕ ಮನೀಶ್ ತಿವಾರಿ ಅವರನ್ನು ಆನಂದ್ಪುರ್ ಸಾಹಿಬ್‌ನಿಂದ ಚಂಡೀಗಢಕ್ಕೆ ಸ್ಥಳಾಂತರಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮತ್ತೊಮ್ಮೆ ಡೈಮಂಡ್ ಹಾರ್ಬರ್‌ನಿಂದ ಸ್ಪರ್ಧಿಸಿದ್ದಾರೆ.

7 ನೇ ಹಂತ	57 ಸ್ಥಾನಗಳು	41 ಸಾಮಾನ್ಯ	8 ರಾಜ್ಯಗಳು / ಕೇಂದ್ರಾಡಳಿತ
904 ಅಭ್ಯರ್ಥಿಗಳು	95 ಮಹಿಳಾ ಅಭ್ಯರ್ಥಿಗಳು	10.06 ಕೋಟಿ ಮತದಾರರು	5.24 ಕೋಟಿ ಪುರುಷರು
4.82 ಕೋಟಿ ಮಹಿಳೆಯರು	3574 ತೃತೀಯ ಲಿಂಗಿ	1.09 ಲಕ್ಷ ಮತಗಟ್ಟೆಗಳು	10.9 ಲಕ್ಷ ಮತಗಟ್ಟೆ ಅಧಿಕಾರಿಗಳು

ವಿಐಪಿ ಕ್ಷೇತ್ರಗಳು

ವಾರಣಾಸಿ
ನರೇಂದ್ರ ಮೋದಿ (ಬಿಜೆಪಿ) ವಿರುದ್ಧ ಅಜಯ್ ರಾಯ್ (ಕಾಂಗ್ರೆಸ್)

ಮಂಡಿ
ಕಂಗನಾ ರಣಾವತ್ (ಬಿಜೆಪಿ), ವಿಎಸ್ ವಿಕ್ರಮಾದಿತ್ಯ ಸಿಂಗ್ (ಕಾಂಗ್ರೆಸ್)

ಚಂಡೀಗಢ
ಮನೀಶ್ ತಿವಾರಿ (ಕಾಂಗ್ರೆಸ್) ವಿರುದ್ಧ ಸಂಜಯ್ ಟಂಡನ್ (ಬಿಜೆಪಿ)

ಡೈಮಂಡ್ ಹಾರ್ಬರ್
ಅಭಿಷೇಕ್ ಬ್ಯಾನರ್ಜಿ (ಟಿಎಂಸಿ) ವಿರುದ್ಧ ಪ್ರತೀಕ್ ಉರ್ ರೆಹಮಾನ್ (ಸಿಪಿಐ-ಎಂ)

ಬಹು ನಿರೀಕ್ಷಿತ ಲೋಕಸಭೆಯ ಎಕ್ಸಿಟ್ ಪೋಲ್‌ಗೆ ಸಿದ್ಧತೆ | ಕೊನೆಯ ಹಂತದ ಚುನಾವಣೆ ದಿನವೇ ಬಿಡುಗಡೆ

ಏಳೂ ಹಂತಗಳ ಎಕ್ಸಿಟ್ ಪೋಲ್ ಫಲಿತಾಂಶ ಇಂದು

ದೆಹಲಿ: ದೇಶದ ಲೋಕಸಭಾ ಚುನಾವಣೆಯ ಈಗಾಗಲೇ ಆರು ಹಂತದ ಮತದಾನ ಮುಗಿದಿದ್ದು, ಅಂತಿಮ ಹಂತದ ಮತದಾನ ಜೂನ್ 1ರಂದು ನಡೆಯಲಿದೆ. ಅದರಂತೆ ಜೂನ್ 4ರಂದು ಏಳು ಹಂತದ ಮತದಾನದ ಫಲಿತಾಂಶ ಹೊರಬೀಳಲಿದ್ದು, ದೇಶದ ತಜ್ಞರು, ನಾಗರಿಕರು ಸೇರಿದಂತೆ ಎಲ್ಲರ ಗಮನ ಈಗ ಎಕ್ಸಿಟ್ ಪೋಲ್‌ಗಳತ್ತ ಇದೆ. ಕಳೆದ ಆರು ಹಂತದ ಚುನಾವಣೆಯಲ್ಲಿ ಯಾವುದೇ ಎಕ್ಸಿಟ್ ಪೋಲ್ ಬಂದಿಲ್ಲ ಹೀಗಾಗಿ ಚುನಾವಣೆಯ ಫಲಿತಾಂಶಕ್ಕೆ ಇಡೀ ದೇಶವೇ ಕಾಯುತ್ತದೆ. ಈ ಹಿನ್ನಲೆಯಲ್ಲಿ ಜೂನ್ 1ರಂದು ಸಂಜೆ 6.30ರ ಹೊತ್ತಿಗೆ ವಿವಿಧ ಮಾಧ್ಯಮಗಳ ಎಕ್ಸಿಟ್ ಪೋಲ್ ಪ್ರಕಟವಾಗಲಿದೆ. ಕಳೆದ ಅನೇಕ ವರ್ಷಗಳಲ್ಲಿ ಎಕ್ಸಿಟ್ ಪೋಲ್ಗಳು ಮತದಾರರ ಚಿತ್ತವನ್ನು ಅಳೆಯುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ ಚುನಾವಣಾ ಆಯೋಗದ ಅಧಿಕೃತ ಘೋಷಣೆಯ ಮೊದಲೇ ಚುನಾವಣಾ ಫಲಿತಾಂಶದ ಅಂದಾಜು ಲಭ್ಯವಾಗಲಿದೆ. ಸಮೀಕ್ಷೆಗಳು ನಿಖರ ಫಲಿತಾಂಶ ತೋರಿಸುವ ಯತ್ನ ಮಾಡಿದರೂ ಅದೊಂದು ಅಂದಾಜು ಅಷ್ಟೆ. ಹೀಗಾಗಿ ಎಲ್ಲವೂ ಸತ್ಯ ಹೇಳಲ್ಲ. ಆದರೂ ಸಹ ಕೆಲುವೊಮ್ಮೆ ಸಂಪೂರ್ಣ ಸತ್ಯವಾಗದಿದ್ದರೂ ಅರ್ಧದಷ್ಟು ನಿಖರ ಸಮೀಕ್ಷೆ ನೀಡಿದೆ.

20214ರ ಅರ್ಧ ನೀಖರ ಫಲಿತಾಂಶ : 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಕ್ಸಿಟ್ ಪೋಲ್‌ನ ಹೆಚ್ಚಿನ ಸಮೀಕ್ಷೆಗಳು ಬಿಜೆಪಿ ನೇತೃತ್ವದ ಎನ್‌ಡಿಎ ಗೆಲುವು ಸಾಧಿಸಲಿದೆ ಎಂದು ಹೇಳಿತ್ತು. ಆದರೆ ಬಿಜೆಪಿಯೊಂದೇ ಸರಳ ಬಹುಮತಕ್ಕೆ ಅಗತ್ಯವಾದ ಸಂಖ್ಯೆ ಪಡೆಯಲ್ಲ ಎಂದು ಸಮೀಕ್ಷೆಗಳು ಹೇಳಿದ್ದವು. ಆದರೆ ಅಂತಿಮ ಫಲಿತಾಂಶದಲ್ಲಿ ಬಿಜೆಪಿಗೆ ಭರ್ಜರಿ ಗೆಲುವು ಸಾಧಿಸಿತ್ತು.

2004ರ ಎಕ್ಸಿಟ್ ಪೋಲ್: 2004ರಲ್ಲಿ ಎಕ್ಸಿಟ್ ಪೋಲ್‌ಗಳು ಬಿಜೆಪಿ ನೇತೃತ್ವದ ಎನ್‌ಡಿಎಗೆ 240ರಿಂದ 250 ಸ್ಥಾನಗಳು ಬರಲಿವೆ ಎಂದು ಭವಿಷ್ಯ ನುಡಿದಿದ್ದವು. ಆದರೆ ನಿಜವಾದ ಫಲಿತಾಂಶಗಳು ಬಂದಾಗ ಸಂಖ್ಯೆಗಳು ಸಂಪೂರ್ಣವಾಗಿ ವಿರುದ್ಧವಾಗಿದ್ದವು. ಎನ್‌ಡಿಎ ಕೇವಲ 181 ಸೀಟುಗಳನ್ನು ಗೆದ್ದಿತ್ತು.

ದೆಹಲಿ ಅಸೆಂಬ್ಲಿ ಚುನಾವಣೆ: 2015ರಲ್ಲಿ ದೆಹಲಿಯಲ್ಲಿ ನಡೆದಿದ್ದ ಅಸೆಂಬ್ಲಿ ಚುನಾವಣೆಯಲ್ಲಿ ಮತದಾನದ ದಿನದಂದು ನಡೆಸಿದ ಎಕ್ಸಿಟ್ ಪೋಲ್‌ಗಳು ಆಪ್‌ಗೆ ಸ್ಪಷ್ಟ ಬಹುಮತ ಎಂದು ಹೇಳಿತ್ತಾದರೂ, 50ರಷ್ಟು ಸೀಟು ಬರಬಹುದು ಎಂದಿತ್ತು. ಆದರೆ ಆಪ್ ಎಲ್ಲರ ನಿರೀಕ್ಷೆಗೂ ಮೀರಿದಷ್ಟು ಸ್ಥಾನಗಳನ್ನು ಗೆದ್ದುಕೊಂಡಿತ್ತು.

ಬಿಹಾರ ವಿಧಾನಸಭಾ ಚುನಾವಣೆ: 2015ರ ಬಿಹಾರ ವಿಧಾನಸಭಾ ಚುನಾವಣೆ ಫಲಿತಾಂಶ ಜಿದ್ದಾಜಿದ್ದಿಯಿಂದ ಕೂತುಹಲಕಾರಿಯಾಗಿತ್ತು. ಈ ಹಿನ್ನಲೆಯಲ್ಲಿ ಯಾವುದೇ ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತ ದೊರೆಯುವುದಿಲ್ಲ ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿದ್ದವು. ಆದರೆ ಈ ಮುನ್ಸೂಚನೆಯ ಹೊರತಾಗಿಯೂ ಆರ್‌ಜೆಡಿ-ಜೆಡಿಯು-ಕಾಂಗ್ರೆಸ್ ಒಕ್ಕೂಟವು ಭರ್ಜರಿ ಜಯ ಸಾಧಿಸಿತು.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ: ನೋಟು ಅಮಾನ್ಯೀಕರಣದ ಅನಂತರ ನಡೆದ 2017ರ ಉತ್ತರ ಪ್ರದೇಶ ಅಸೆಂಬ್ಲಿ ಚುನಾವಣೆಯ ಸಮೀಕ್ಷೆಗಳು ಭಾರಿ ಕುತೂಹಲ ಮೂಡಿಸಿದ್ದವು. ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಆದರೆ ಸರಳ ಬಹುಮತಕ್ಕೂ ಕೆಲವು ಸ್ಥಾನಗಳು ಕೊರತೆ ಆಗಲಿವೆ. ಬಿಜೆಪಿಗೆ ಹೆಚ್ಚೆಂದರೆ 185ರಿಂದ 200 ಸ್ಥಾನಗಳು ಬರಬಹುದು ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿದ್ದವು. ಆದರೆ ಎಲ್ಲ ಮತಗಟ್ಟೆ ಸಮೀಕ್ಷೆಗಳಿಗೆ ವ್ಯತಿರಿಕ್ತವಾಗಿ ಉತ್ತರ ಪ್ರದೇಶದಲ್ಲಿ ಬಿಜೆಪಿ ಒಟ್ಟು 403 ಸೀಟುಗಳಲ್ಲಿ 312 ಸೀಟುಗಳನ್ನು ಗೆದ್ದುಕೊಂಡಿತು. 2012ರ ಚುನಾವಣೆಯಲ್ಲಿ ಕೇವಲ 47 ಸ್ಥಾನ ಗಳಿಸಿದ್ದ ಬಿಜೆಪಿಗೆ 2017ರಲ್ಲಿ ಭರ್ಜರಿ ಜಯ ಸಾಧಿಸಿ ಯೋಗಿ ಆದಿತ್ಯನಾಥ್ ನೇತೃತ್ವದಲ್ಲಿ ಸರ್ಕಾರ ರಚಿಸಿತು.

ಇದು ನನ್ನ ಆಯ್ಕೆ ಎಂದ ಎಐಸಿಸಿ ಅಧ್ಯಕ್ಷ ಖರ್ಗೆ

ರಾಹುಲ್ ಪ್ರಧಾನಿಯಾಗಲಿ

ದೆಹಲಿ: ಪ್ರಸಕ್ತ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ಅಧಿಕಾರಕ್ಕೇರಲಿದೆ ಎಂದು ಭವಿಷ್ಯ ನುಡಿದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಹಾಲಿ ಸರಕಾರವನ್ನು ನಾವು ತಡೆಯಲಿದ್ದೇವೆ ಎಂದಿದ್ದಾರೆ.

ಎನ್‌ಡಿಟಿವಿ ಜತೆಗೆ ಸಂದರ್ಶನದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಇತರರೊಂದಿಗೆ ಸೇರಿ ಸರಕಾರ ರಚಿಸಲಿದೆ. ನಾವು 128 ಸ್ಥಾನಗಳಲ್ಲಿ ಗೆಲ್ಲಲಿದ್ದೇವೆ. ಪ್ರಧಾನಿ ಹುದ್ದೆಗೆ ನನ್ನ ಆಯ್ಕೆ ರಾಹುಲ್ ಗಾಂಧಿ ಎಂದು ಖರ್ಗೆ ಅವರು ಹೇಳಿದ್ದಾರೆ.

ನಮಗೆ ಬಂದಿರುವ ವರದಿಗಳ ಪ್ರಕಾರ, ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ. 6 ಹಂತಗಳಿಂದ ನಾವು 100 ಕ್ಷೇತ್ರಗಳಲ್ಲಿ ಗೆದ್ದಿದ್ದೇವೆ. ಉಳಿದ ಒಂದು ಹಂತದಲ್ಲಿ 28 ಸ್ಥಾನ ಗೆದ್ದು ಒಟ್ಟಾಗಿ 128 ಸ್ಥಾನಗಳಲ್ಲಿ ಗೆಲ್ಲುವ ವಿಶ್ವಾಸವಿದೆ ಎಂದಿದ್ದಾರೆ.

ಇಂಡಿಯ ಮೈತ್ರಿಕೂಟದ ಕಾರ್ಯಕ್ಷಮತೆಯ ಬಗ್ಗೆ ಮಾತನಾಡಿದ ಖರ್ಗೆ, ನಾವು ಒಟ್ಟಾಗಿ ಉತ್ತಮ ಪ್ರದರ್ಶನ ನೀಡಿದ್ದೇವೆ. ಚುನಾವಣೆಯ ಸಮಯದಲ್ಲಿ ನಾವು ಪರಸ್ಪರ ಸಹಾಯ ಮಾಡಲು ಪ್ರಯತ್ನಿಸಿದ್ದೇವೆ, ಇದರ ಪರಿಣಾಮವಾಗಿ ನಮ್ಮ ಮತಗಳು ಪರಸ್ಪರ ವರ್ಗಾವಣೆಯಾಗುತ್ತವೆ ಎಂದು ಅವರು ಹೇಳಿದರು. ಖರ್ಗೆ ಅವರು ಶನಿವಾರ ಇಂಡಿಯ ಸದಸ್ಯರ ಸಭೆ ಕರೆದಿದ್ದು, ಇದರಲ್ಲಿ ಮತ ಎಣಿಕೆಯ ಸಮಯದಲ್ಲಿ ವಿದ್ಯುನ್ಮಾನ ಮತದಾನ ಯಂತ್ರಗಳನ್ನು ತಿರುಚಲಾಗುತ್ತಿದೆಯೇ ಎಂದು ಹೇಗೆ ಗುರುತಿಸುವುದು ಎಂಬುದರ ಕುರಿತು ಚರ್ಚಿಸುತ್ತೇವೆ ಎಂದಿದ್ದಾರೆ. ರಾಹುಲ್ ಗಾಂಧಿ ಪ್ರಧಾನಿಯಾಗಲು ನನ್ನ ಆಯ್ಕೆ. ಅಷ್ಟೇ ಅಲ್ಲ, ಅವರು ದೇಶದ ಉದ್ದಗಲಕ್ಕೂ ಯುವಕರನ್ನು ಪ್ರತಿನಿಧಿಸುತ್ತಾರೆ ಎಂದು ಖರ್ಗೆ ತಿಳಿಸಿದ್ದಾರೆ.

- ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 128 ಸ್ಥಾನ ಪಕ್ಕಾ
- 6 ಹಂತಗಳಿಂದ ನಾವು 100 ಕ್ಷೇತ್ರಗಳಲ್ಲಿ ಆಗಲೇ ಗೆಲುವು

ಬಿಜೆಪಿಯಿಂದ ಹಾದಿ ತಪ್ಪದಿರಿ: ಅಖಿಲೇಶ್ ಯಾದವ್

ಬಿಜೆಪಿಯ ಸಮೀಕ್ಷೆಗಳಿಂದ ಎಚ್ಚರವಿರಿ

- ಬಿಜೆಪಿಗೆ 300 ಸ್ಥಾನ ಸಂಪೂರ್ಣ ಸುಳ್ಳು
- ಚುನಾವಣೆಯಲ್ಲಿ ಗೆಲ್ಲುವುದು ಇಂಡಿಯಾ

ದೆಹಲಿ: ಚುನಾವಣೆಯ ಫಲಿತಾಂಶಕ್ಕೆ ಇನ್ನೇನು ಕೆಲವೇ ದಿನ ಉಳಿದಿದ್ದು, ಬಿಜೆಪಿಯ ಸುಳ್ಳುಗಳ ಬಗ್ಗೆ ಮತ್ತು ಅದರ ಚುನಾವಣೋತ್ತರ ಸಮೀಕ್ಷೆಗಳ ಬಗ್ಗೆ ಎಚ್ಚರದಿಂದ ಇರುವಂತೆ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿ ದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ನೀವೆಲ್ಲ ಶನಿವಾರದ ಮತದಾನದ ಬಗ್ಗೆ, ಮತದಾನದ ನಂತರದ ದಿನಗಳ ಬಗ್ಗೆ, ಮತಎಣಿಕೆ ಮುಗಿಯುವವರೆಗೆ ಮತ್ತು ಗೆಲುವಿನ ಪತ್ರ ಸಿಗುವವರೆಗೆ ಸಂಪೂರ್ಣವಾಗಿ ಎಚ್ಚರಿಕೆಯಿಂದ, ಜಾಗ್ರತೆಯಿಂದ ಇರಬೇಕು. ಬಿಜೆಪಿಯಿಂದ ಹಾದಿ ತಪ್ಪದಿರಿ ಎಂದು ಉಲ್ಲೇಖಿಸಿದ್ದಾರೆ. ಬಿಜೆಪಿಯು ತನ್ನ ಮಾಧ್ಯಮ ಗುಂಪಿನ ಮೂಲಕ ಬೇರೆ ಬೇರೆ ಸುದ್ದಿ ವಾಹಿನಿಗಳಲ್ಲಿ ಪಕ್ಷ 300 ಸ್ಥಾನ ಗಳಿಸಿದೆ ಎಂದು ಸಂಪೂರ್ಣ ಸುಳ್ಳು ಸುದ್ದಿಯನ್ನು ಹರಡಲು ಆರಂಭಿಸುತ್ತದೆ. ಚುನಾವಣೆಯಲ್ಲಿ ಹೇಗೂ ಇಂಡಿಯ ಒಕ್ಕೂಟ ಗೆದ್ದು ಸರಕಾರ ರಚನೆ ಮಾಡಲಿದ್ದು, ಎರಡು ಮೂರು ದಿನಗಳ ಮಟ್ಟಿಗೆ ಈ ರೀತಿ ಸುಳ್ಳು ಹಬ್ಬಿಸಿ ಬಿಜೆಪಿ ಏನು ತಾನೇ ಸಾಧಿಸುತ್ತದೆ ಎಂದು ನಿಮಗೆ ಅನಿಸ ಬಹುದು. ನಿಮ್ಮ ಎದೆಗುಂದಿಸುವುದು ಅವರ ತಂತ್ರವಾಗಿದೆ. ಹಾಗೆ ಮಾಡಿದಾಗ ನಿಮ್ಮ ಕುತೂಹಲ ಕಡಿಮೆ ಆಗಿ, ಮತಎಣಿಕೆಯ ದಿನ ನೀವು ಎಚ್ಚರಿಕೆಯಿಂದ ಇರಲ್ಲ' ಎಂದು ಹೇಳಿದ್ದಾರೆ.

ಬಿಸಿಲಿಗೆ 10 ಮತಗಟ್ಟೆ ಸಿಬ್ಬಂದಿ ಸೇರಿ 14 ಸಾವು

ದೆಹಲಿ: ಬಿಹಾರದಲ್ಲಿ ದಿನ ದಿನಕ್ಕೂ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ 10 ಮತಗಟ್ಟೆ ಸಿಬ್ಬಂದಿ ಸೇರಿದಂತೆ 14 ಜನ ಬಿಸಿಲಿನ ಶಾಖದಿಂದ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಪತ್ತು ನಿರ್ವಹಣಾ ಇಲಾಖೆ ಹೊರಡಿಸಿದ ಪ್ರಕಟಣೆಯಲ್ಲಿ, ಭೋಜ್‌ಪುರದಲ್ಲಿ ಹೆಚ್ಚಿನ ಸಾವು ನೋವುಗಳು ವರದಿಯಾಗಿವೆ. ಅಲ್ಲಿ ಚುನಾವಣಾ ಕರ್ತವ್ಯದಲ್ಲಿದ್ದ ಐವರು ಅಧಿಕಾರಿಗಳು ಶಾಖದಿಂದ ಸಾವನ್ನಪ್ಪಿದ್ದಾರೆ. ರೋಹ್ತಾಸ್‌ನಲ್ಲಿ ಮೂವರು ಚುನಾವಣಾ ಅಧಿಕಾರಿಗಳು ಮತ್ತು ಕೈಮೂರ್ ಹಾಗೂ ಔರಂಗಾಬಾದ್ ಜಿಲ್ಲೆಗಳಲ್ಲಿ ತಲಾ ಒಬ್ಬರು ಚುನಾವಣಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಇನ್ನೂ ನಾಲ್ವರು ಸಾವನ್ನಪ್ಪಿದ್ದಾರೆ. ಮೃತರ ಕುಟುಂಬಗಳಿಗೆ ಪರಿಹಾರ ನೀಡುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಹಲವೆಡೆ ತಾಪಮಾನ 44 ಡಿಗ್ರಿ ಸೆಲ್ಸಿಯಸ್ ದಾಟಿದ್ದರಿಂದ ಜನ ಬಿಸಿಲಿನ ಬೇಗೆಯಿಂದ ತತ್ತರಿಸಿದ್ದಾರೆ. ಗುರುವಾರ, ಬಕ್ಸರ್‌ನಲ್ಲಿ 47.1 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಬಿಸಿಲಿನ ತಾಪ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಶಾಲೆಗಳು, ಕೋಚಿಂಗ್ ಸಂಸ್ಥೆಗಳು ಮತ್ತು ಅಂಗನವಾಡಿ ಕೇಂದ್ರಗಳಿಗೆ ಜೂನ್ 8 ರವರೆಗೆ ರಜೆ ಘೋಷಿಸಲಾಗಿದೆ.

ಇಂದು ಲೋಕಸಭೆ ಚುನಾವಣೆಯ ಕಡೇ ಹಂತದ ಮತದಾನ | ಫಲಿತಾಂಶ ಏನಿರಬಹುದು ಎಂಬುದೇ ಈಗಿನ ದೊಡ್ಡ ಚರ್ಚೆ

ಒಂದು ಫಲಿತಾಂಶ, ಮೂರು ಲೆಕ್ಕಾಚಾರ

ಇಂದು ದೇಶದ 8 ರಾಜ್ಯಗಳ 57 ಕ್ಷೇತ್ರಗಳಲ್ಲಿ ಏಳನೇ ಹಂತದ ಮತದಾನ ನಡೆಯಲಿದೆ. ಪ್ರಧಾನಿ ಮೋದಿ ಸೇರಿದಂತೆ ಪ್ರಮುಖರು ಈ ಹಂತದಲ್ಲಿ ಅದೃಷ್ಟ ಪರೀಕ್ಷೆ ನಡೆಸುತ್ತಿದ್ದಾರೆ. ಈ ಹಂತದ ಚುನಾವಣೆ ನಂತರ ಎಲ್ಲರ ಕಣ್ಣು ಜೂ.4ರ ಫಲಿತಾಂಶದತ್ತ ಹೊರಳಲಿದೆ. ಯಾರು ಗೆಲ್ಲಬಹುದು? ಮತದಾರರ ಲೆಕ್ಕಾಚಾರಗಳು ಹೇಗಿರಬಹುದು ಎಂಬ ಚರ್ಚೆಗಳು ನಡೆಯುತ್ತಿವೆ. ಪ್ರಮುಖವಾಗಿ ಷೇರುಮಾರುಕಟ್ಟೆ ಹಾಗೂ ರಾಜಕೀಯ ವಿಶ್ಲೇಷಕರು ಫಲಿತಾಂಶದ ಮೇಲೆ ಕಣ್ಣಿಟ್ಟು ನೋಡುತ್ತಿದ್ದಾರೆ.

2019ರ ಫಲಿತಾಂಶ

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಲೋಕಸಭೆಯ 543 ಸ್ಥಾನಗಳಲ್ಲಿ 352 ಸ್ಥಾನಗಳಲ್ಲಿ ಗೆದ್ದಿದ್ದರು. ಬಿಜೆಪಿಯೇ 303 ಸ್ಥಾನದಲ್ಲಿ ಗೆದ್ದಿತ್ತು. ಸದ್ಯ ಮತದಾನ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಯಾವುದೇ ಸಮೀಕ್ಷೆಗಳ ವಿವರ ಬಹಿರಂಗವಾಗುವುದಿಲ್ಲ. ಆದರೆ ಚುನಾವಣೆಗೂ ಮುನ್ನ ಎಲ್ಲ ಸಮೀಕ್ಷೆಗಳೂ ಬಿಜೆಪಿಯೇ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ಭವಿಷ್ಯ ನುಡಿದಿವೆ. ಇನ್ನು ಸಟ್ಟಾ ಮಾರುಕಟ್ಟೆ ಅಥವಾ ಜೂಜು ಮಾರುಕಟ್ಟೆ ಕೂಡ ಬಿಜೆಪಿಯೇ ಗೆಲ್ಲಲಿದೆ ಎಂಬ ಲೆಕ್ಕಾಚಾರದಲ್ಲಿದೆ. ಒಂದು ವೇಳೆ ಬಿಜೆಪಿ ಗೆದ್ದರೆ ಮಾರುಕಟ್ಟೆಗಳು ಹೇಗೆ ಸ್ಪಂದಿಸಲಿವೆ? ಸೋತರೆ ಹೇಗೆ ಸ್ಪಂದಿಸಬಹುದು ಎಂದು ಮಾರುಕಟ್ಟೆ ವಿಶ್ಲೇಷಕರು ನೋಡುತ್ತಿದ್ದಾರೆ.

ಲೆಕ್ಕಾಚಾರ 1

ಬಿಜೆಪಿಗೆ ಕಳೆದ ಬಾರಿಗಿಂತ ಹೆಚ್ಚು ಸ್ಥಾನ

2019ಕ್ಕಿಂತ ಬಿಜೆಪಿ ಬಲವಾದ ಬಹುಮತವನ್ನು ಗೆದ್ದರೆ, ಮೂಲಸೌಕರ್ಯಗಳ ಮೇಲಿನ ವೆಚ್ಚ ಮತ್ತು ಉತ್ಪಾದನಾ ವಲಯಕ್ಕೆ ಉತ್ತೇಜನದಂತಹ ಬೆಳವಣಿಗೆ-ಆರ್ಥಿಕ ಬೆಂಬಲಿತ ನೀತಿಗಳ ನಿರೀಕ್ಷೆಯಲ್ಲಿ ಈಕ್ವಿಟಿ ಮಾರುಕಟ್ಟೆಗಳು ಏರಿಕೆಯಾಗುತ್ತವೆ ಎಂದು ಐಟಿಐ ಮ್ಯೂಚುವಲ್ ಫಂಡ್‌ನ ಮುಖ್ಯ ಹೂಡಿಕೆ ಅಧಿಕಾರಿ ರಾಜೇಶ್ ಭಾಟಿಯಾ ಹೇಳಿದ್ದಾರೆ.

ಈ ಸನ್ನಿವೇಶದಲ್ಲಿ ಬೆಂಚ್ ಮಾರ್ಕ್ ಸೂಚ್ಯಂಕಗಳಾದ ಎಸ್‌ಪಿ ಸೆನ್ಸೆಕ್ಸ್ ಮತ್ತು ಎನ್‌ಎಸ್‌ಇ ನಿಫ್ಟಿ 50 ಶೇ.4-5 ರಷ್ಟು ಏರಿಕೆಯಾಗಬಹುದು ಎಂದು ವಿದೇಶಿ ವಿನಿಮಯ ಸಲಹಾ ಮತ್ತು ಆಸ್ತಿ ನಿರ್ವಹಣಾ ಸಂಸ್ಥೆ ಐಎಫ್‌ಎ ಗ್ಲೋಬಲ್ ಸಂಸ್ಥಾಪಕ ಅಭಿಷೇಕ್ ಗೋಯೆಂಕಾ ಹೇಳಿದ್ದಾರೆ.

ಗುರುವಾರ ಡಾಲರ್ ಎದುರು ರೂಪಾಯಿ ಮೌಲ್ಯ 83.32 ರಿಂದ ಸುಮಾರು 82.80 ಮಟ್ಟಕ್ಕೆ ಏರಬಹುದು. ಆದರೆ ಬೆಂಚ್ ಮಾರ್ಕ್ ಬಾಂಡ್‌ನ ಆದಾಯ ಪ್ರಸ್ತುತ ಶೇ.7ರಿಂದ ಶೇ.6.90 -6.92ಕ್ಕೆ ಇಳಿಯಬಹುದು ಎಂದು ಕರೂರ್ ವೈಶ್ಯ ಬ್ಯಾಂಕಿನ ಖಜಾನೆ ಮುಖ್ಯಸ್ಥ ವಿಆರ್ ಸಿ ರೆಡ್ಡಿ ಹೇಳಿದ್ದಾರೆ.

ಪ್ರಧಾನಿ ಮೋದಿಯವರ ಮರಳುವಿಕೆಯನ್ನು ಮಾರುಕಟ್ಟೆಯು ಸಕಾರಾತ್ಮಕವಾಗಿ ನೋಡುತ್ತದೆ. ಏಕೆಂದರೆ ಇದು ರಾಜಕೀಯ ಸ್ಥಿರತೆಯನ್ನು ಪ್ರದರ್ಶಿಸುತ್ತದೆ ಎಂದು ಸಿಂಗಾಪುರ ಮೂಲದ ಎಬಿಆರ್ ಡಿಎನ್‌ನ ಏಷ್ಯನ್ ಈಕ್ವಿಟಿಗಳ ಹಿರಿಯ ಹೂಡಿಕೆ ನಿರ್ದೇಶಕ ಜೇಮ್ಸ್ ಥೋಮ್ ಹೇಳಿದ್ದಾರೆ.

ಲೆಕ್ಕಾಚಾರ 2

ಬಿಜೆಪಿಗೆ ಕಡಿಮೆ ಸ್ಥಾನ ಬಂದರೆ

ಬಿಜೆಪಿ ಸರಕಾರ ರಚಿಸುವಷ್ಟು ಸ್ಥಾನಗಳಲ್ಲಿ ಮಾತ್ರ ಗೆದ್ದರೆ ಮಾರುಕಟ್ಟೆ ಅಲ್ಪಾವಧಿಯಲ್ಲಿ ಸ್ವಲ್ಪ ಚಂಚಲತೆ ಕಾಣಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಕಡಿಮೆ ಅವಧಿಗೆ ಮಾತ್ರ ಇರಲಿದೆ. ನಂತರ ಬದಲಾಗಲಿದೆ ಎಂದಿದ್ದಾರೆ.

ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಗೆಲುವಿನ ಅಂತರವು ಈ ಹಿಂದೆ ಅಂದಾಜಿಸಿದ್ದಕ್ಕಿಂತ ಕಡಿಮೆ ಇರುವ ಸಾಧ್ಯತೆಗೆ ಮಾರುಕಟ್ಟೆ ಈಗಾಗಲೇ ಹೊಂದಿಕೊಳ್ಳುತ್ತಿದೆ ಎಂದು ಬ್ರೋಕರೇಜ್ ಶೇರ್‌ಖಾನ್‌ನ ಬಂಡವಾಳ ಮಾರುಕಟ್ಟೆ ಕಾರ್ಯತಂತ್ರದ ಮುಖ್ಯಸ್ಥ ಗೌರವ್ ದುವಾ ಹೇಳಿದ್ದಾರೆ.

ಪ್ರಸ್ತುತ ಸರ್ಕಾರಕ್ಕೆ 300ಕ್ಕಿಂತ ಕಡಿಮೆ ಸೀಟುಗಳ ಎಣಿಕೆಯು ಮಾರುಕಟ್ಟೆಯ ಪಥವನ್ನು ಬದಲಾಯಿಸುವುದಿಲ್ಲ ಎಂದು ಸ್ಯಾಮ್ಕೊ ಅಸೆಟ್ ಮ್ಯಾನೇಜ್ಮೆಂಟ್‌ನ ಮುಖ್ಯ ಹೂಡಿಕೆ ಅಧಿಕಾರಿ ಉಮೇಶ್ ಕುಮಾರ್ ಮೆಹ್ತಾ ಹೇಳಿದ್ದಾರೆ.

ಈ ಸಂದರ್ಭದಲ್ಲಿ ರುಪಾಯಿ ಮತ್ತು ಬಾಂಡ್ ಇಳುವರಿ ಗಮನಾರ್ಹ ಪ್ರತಿಕ್ರಿಯೆ ಯನ್ನು ಕಾಣುವುದಿಲ್ಲ ಎಂದು ಪಿಎನ್‌ಬಿ ಗಿಲ್ಟ್ಸ್‌ನ ಹಿರಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ವಿಜಯ್ ಶರ್ಮಾ ಹೇಳಿದ್ದಾರೆ.

ಲೆಕ್ಕಾಚಾರ 3

ಪ್ರತಿಪಕ್ಷಗಳ ಸರಕಾರ

ಬಿಜೆಪಿಯ ಅಚ್ಚರಿಯ ಸೋಲು ಮತ್ತು ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರಕಾರದ ಸಾಧ್ಯತೆ, ಹೊಸ ಸರ್ಕಾರದ ನೀತಿಗಳು ಸ್ಪಷ್ಟವಾಗುವವರೆಗೆ ಮಾರುಕಟ್ಟೆಗಳಲ್ಲಿ ಕೊಂಚ ಏರಿಳಿತಗಳು ಆಗಬಹುದು.

ಮಾರುಕಟ್ಟೆಯು ನಿರಂತರತೆಯನ್ನು ನಿರೀಕ್ಷಿಸುತ್ತಿದೆ. ಆದ್ದರಿಂದ ಮತ್ತೊಂದು ಪಕ್ಷವು ಗೆಲ್ಲುವುದು ಸ್ವಲ್ಪ ಪ್ರತಿಕ್ರಿಯೆಗೆ ಕಾರಣವಾಗಬಹುದು ಎಂದು ಐಸಿಐಸಿಐ ಪ್ರುಡೆನ್ಷಿಯಲ್ ಮ್ಯೂಚುವಲ್ ಫಂಡ್‌ನ ಈಕ್ವಿಟಿಯ ಹಿರಿಯ ಫಂಡ್ ಮ್ಯಾನೇಜರ್ ಮಿತ್ತಲ್ ಕಲವಾಡಿಯಾ ಹೇಳಿದ್ದಾರೆ.

ದೀರ್ಘಾವಧಿಯಲ್ಲಿ ವಿಷಯಗಳು ಸಕಾರಾತ್ಮಕವಾಗಿವೆಯೇ ಅಥವಾ ನಕಾರಾತ್ಮಕವಾಗಿವೆಯೇ ಎಂಬುದು ನಮಗೆ ನಂತರ ತಿಳಿಯುತ್ತದೆ. ಆದರೆ ಅಲ್ಪಾವಧಿಯಲ್ಲಿ ನೀತಿ ಮಟ್ಟದ ನಿರಂತರತೆಯ ಮೇಲೆ ಪರಿಣಾಮ ಬೀರುವ ಯಾವುದೇ ಬದಲಾವಣೆಯು ದೊಡ್ಡ ಮಟ್ಟದಲ್ಲೇ ನಕಾರಾತ್ಮಕವಾಗಿರುತ್ತದೆ ಎಂದು ಕಲವಾಡಿಯಾ ಹೇಳಿದರು.

ತೀರ್ಪಿನ ನಂತರ ಅಂತಹ ಸನ್ನಿವೇಶದಲ್ಲಿ ಬೆಂಚ್ ಮಾರ್ಕ್ ಷೇರು ಮಾರುಕಟ್ಟೆ ಸೂಚ್ಯಂಕಗಳಲ್ಲಿ ಶೇ.10ವರೆಗೆ ಕುಸಿತವಾಗಬಹುದು ಎಂದು ಐಎಫ್‌ಎ ಗ್ಲೋಬಲ್‌ನ ಗೋಯೆಂಕಾ ಹೇಳಿದರು, ಆದರೆ ಶೇರ್‌ಖಾನ್‌ನ ದುವಾ ಕುಸಿತವು ಶೇ.15-20ನಷ್ಟು ದೊಡ್ಡದಾಗಿರಬಹುದು ಎಂದು ಹೇಳಿದರು.

ಈ ಸನ್ನಿವೇಶದಲ್ಲಿ, ರುಪಾಯಿ ಕುಸಿತವನ್ನು ತಡೆಯಲು ಕೇಂದ್ರ ಬ್ಯಾಂಕ್ ಮಧ್ಯಪ್ರವೇಶಿಸಬಹುದು ಎಂದು ಕೋಟಕ್ ಸೆಕ್ಯುರಿಟೀಸ್‌ನ ವಿದೇಶಿ ವಿನಿಮಯ ಸಂಶೋಧನಾ ಮುಖ್ಯಸ್ಥ ಅನಿಂದ್ಯಾ ಬ್ಯಾನರ್ಜಿ ಹೇಳಿದ್ದಾರೆ. ಬಾಂಡ್‌ಗಳಲ್ಲಿ ವಿದೇಶಿ ಹೊರಹರಿವು ಹಿಂತೆಗೆತದಲ್ಲಿ 10-15 ಬೇಸಿಸ್ ಪಾಯಿಂಟ್‌ಗಳ ತಕ್ಷಣದ ಏರಿಕೆಗೆ ಕಾರಣವಾಗಬಹುದು ಎಂದು ಅವರು ಹೇಳಿದರು.

ಸಮಾಚಾರ ಸಣ್ಣದಲ್ಲ

ಪುರಿ: ಪಟಾಕಿ ಸ್ಫೋಟ ಸಾವಿನ ಸಂಖ್ಯೆ 4ಕ್ಕೆ

ದೆಹಲಿ: ಸುಪ್ರಸಿದ್ಧ ಒಡಿಶಾದ ಪುರಿ ಜಗನ್ನಾಥ ದೇಗುಲದ ಚಂದನ ಜಾತ್ರಾ ಮಹೋತ್ಸವ ವೇಳೆ ಸಂಭವಿಸಿದ್ದ ಪಟಾಕಿ ಸ್ಫೋಟದಲ್ಲಿ ಮೃತರ ಸಂಖ್ಯೆ 4ಕ್ಕೆ ಏರಿಕೆಯಾಗಿದ್ದು, ಘಟನೆಯಲ್ಲಿ ಗಾಯಗೊಂಡಿದ್ದ ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬುಧವಾರ ಸಂಜೆ ಜಗನ್ನಾಥ ಪುರಿ ದೇಗುಲದಲ್ಲಿ ಚಂದನ ಜಾತ್ರಾ ಮಹೋತ್ಸವ ನಡೆದಿದ್ದು, ಭಕ್ತರ ಗುಂಪೊಂದು ಪಟಾಕಿ ಸಿಡಿಸಿ ಸಂಭ್ರಮಿಸುತ್ತಿತ್ತು. ಈ ವೇಳೆ ಮರದ ತುಂಡೊಂದು ಪಟಾಕಿ ರಾಶಿಗೆ ಬಿದ್ದು ಸ್ಫೋಟ ಸಂಭವಿಸಿತ್ತು. ಅವಘಡದಲ್ಲಿ ಅಪ್ರಾಪ್ತ ಬಾಲಕ ಸೇರಿದಂತೆ ಮೂರು ಮಂದಿ ಮೃತಪಟ್ಟಿದ್ದರು. ಸುಮಾರು 33 ಮಂದಿ ಗಾಯಗೊಂಡಿದ್ದರು. ಶುಕ್ರವಾರ ಮತ್ತೊಬ್ಬ ಗಾಯಾಳು ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ. ಉಳಿದ 26 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವಿಶೇಷ ಪರಿಹಾರ ಆಯುಕ್ತರ ಕಚೇರಿಯ ಹೇಳಿಕೆ ತಿಳಿಸಿದೆ. ಘಟನೆ ಸಂಬಂಧ ತನಿಖೆ ನಡೆಸುವಂತೆ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಆದೇಶಿಸಿದ್ದಾರೆ. ಮೃತ ಕುಟುಂಬಗಳಿಗೆ ತಲಾ ₹4 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದ್ದಾರೆ. ಏತನ್ಮಧ್ಯೆ, ಪುರಿ ಪೊಲೀಸರು ಸ್ವಯಂ ಪ್ರೇರಿತ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ.

ವಿಮಾನ ನಿಲ್ದಾಣಕ್ಕೆ ಬೆದರಿಕೆ: ಕಾರ್ಯ ಸ್ಥಗಿತ

ಶ್ರೀನಗರ: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಬಂದಿದ್ದು, ವಿಮಾನ ನಿಲ್ದಾಣದ ಕಾರ್ಯಾಚರಣೆ ಒಂದು ಗಂಟೆ ಕಾಲ ಸ್ಥಗಿತಗೊಂಡಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೆಹಲಿಯಿಂದ ವಿಮಾನದಲ್ಲಿ 178 ಪ್ರಯಾಣಿಕರನ್ನು ಹೊತ್ತು ಬಂದ ಏರ್ ವಿಸ್ತಾರಾ ವಿಮಾನದಲ್ಲಿ ಬಾಂಬ್ ಇರಿಸಿರುವುದಾಗಿ ಶ್ರೀನಗರ ವಿಮಾನ ನಿಲ್ದಾಣದ ಏರ್ ಟ್ರಾಫಿಕ್ ಕಂಟ್ರೋಲ್‌ಗೆ ಬೆದರಿಕೆ ಕರೆ ಬಂದಿದ್ದು, ತಕ್ಷಣವೇ ಅಧಿಕಾರಿಗಳು ಮುಂಜಾಗ್ರತಾ ಕ್ರಮವನ್ನು ಕೈಗೊಂಡರು. ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಭದ್ರತೆಯನ್ನು ಬಿಗಿಗೊಳಿಸಿತು. ವಿಮಾನ ಲ್ಯಾಂಡ್ ಆದ ತಕ್ಷಣ ಪ್ರಯಾಣಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದ್ದು, ಬಳಿಕ ವಿಮಾನವನ್ನು ತಪಾಸಣೆ ನಡೆಸಲಾಯಿತು. ಬಾಂಬ್ ನಿಷ್ಕ್ರಿಯ ದಳ, ಶ್ವಾನದಳದಿಂದ ಸಂಪೂರ್ಣ ಶೋಧ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡುಬಂದಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬೆದರಿಕೆ ಬಂದ ಹಿನ್ನಲೆಯಲ್ಲಿ ವಿಮಾನ ನಿಲ್ದಾಣದಲ್ಲಿ ಒಂದು ತಾಸು ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ಬಳಿಕ ವಿಮಾನಗಳ ಹಾರಾಟ ಯಥಾಸ್ಥಿತಿಗೆ ಮರಳಿತು ಎಂದು ಅವರು ತಿಳಿಸಿದ್ದಾರೆ.

ಮೂರನೇ ಬಾರಿಗೆ ಮೋದಿ ಸರಕಾರ

ಜೈಪುರ: ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಸತತ ಮೂರನೇ ಬಾರಿಗೆ ಕೇಂದ್ರದಲ್ಲಿ ಸರಕಾರ ರಚಿಸಲಿದೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಭಜನ್ಲಾಲ್ ಶರ್ಮಾ ಹೇಳಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಮೂರನೇ ಬಾರಿಗೆ ಬಿಜೆಪಿ ಸರ್ಕಾರ ರಚನೆಯಾಗಲಿದೆ' ಎಂದು ಹೇಳಿದ್ದಾರೆ. ದೌಸಾ ಜಿಲ್ಲೆಯ ಮೆಹಂದಿಪುರದಲ್ಲಿರುವ ಬಾಲಾಜಿ ದೇವಸ್ಥಾನಕ್ಕೆ ಸಿಎಂ ಶರ್ಮಾ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಇದೆ ವೇಳೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಮತ್ತು ಕೇಂದ್ರ ಸಚಿವ ಪಿಯೂಷ್ ಗೋಯಲ್ ಸಹ ಇದ್ದರು. ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಲಿ. ರಾಜ್ಯ ಮತ್ತು ದೇಶದಲ್ಲಿ ಶಾಂತಿ ಮತ್ತು ಸಮೃದ್ಧಿ ನೆಲೆಸಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮುಖ್ಯಮಂತ್ರಿ ಸುದ್ದಿಗಾರರಿಗೆ ತಿಳಿಸಿದರು. ಸಿಎಂ ಶರ್ಮಾ ಮತ್ತು ನಾಯಕರ ಭೇಟಿ ಹಿನ್ನೆಲೆ ದೇವಸ್ಥಾನದಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು.

ಶಸ್ತ್ರಾಸ್ತ್ರದ ಮೇಲಿನ ನಿರ್ಬಂಧ ತೆರವು

ವಾಷಿಂಗ್ಟನ್: ಅಮೆರಿಕದ ಶಸ್ತ್ರಾಸ್ತ್ರಗಳನ್ನು ರಷ್ಯಾದ ಭೌಗೋಳಿಕ ಪ್ರದೇಶವನ್ನು ಗುರಿಯಾಗಿಸಿ ಬಳಸುವುದಕ್ಕೆ ಸಂಬಂಧಿಸಿದಂತೆ ಉಕ್ರೇನ್‌ನ ಮೇಲೆ ವಿಧಿಸಲಾಗಿದ್ದ ನಿರ್ಬಂಧವನ್ನು ಜೋ ಬೈಡನ್ ಆಡಳಿತವು ಶುಕ್ರವಾರ ಭಾಗಶಃ ತೆರವುಗೊಳಿಸಿದೆ. ಉಕ್ರೇನ್ ತನ್ನ ಹಾರ್ಕಿವ್ ನಗರವನ್ನು ರಕ್ಷಿಸಿಕೊಳ್ಳುವುದಕ್ಕೆ ಪೂರಕವಾಗಿ ಮಾತ್ರ ಈ ನಿರ್ಬಂಧವನ್ನು ಸಡಿಲಿಸಲಾಗಿದೆ ಎಂದು ಈ ಬೆಳವಣಿಗೆಗಳನ್ನು ಹತ್ತಿರದಿಂದ ಬಲ್ಲ ಅಧಿಕಾರಿಗಳು ದೃಢಪಡಿಸಿದ್ದಾರೆ. ದೂರಗಾಮಿ ಕ್ಷಿಪಣಿಗಳು ಹಾಗೂ ಇತರೆ ಪ್ರಮುಖ ಶಸ್ತ್ರಾಸ್ತ್ರಗಳನ್ನು ರಷ್ಯಾದ ಒಳಭಾಗವನ್ನು ಗುರಿಯಾಗಿ ಬಳಸುವುದಕ್ಕೆ ವಿಧಿಸಲಾಗಿದ್ದ ನಿರ್ಬಂಧದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಉಕ್ರೇನ್ ಅಧಿಕಾರಿಗಳು ಅಮೆರಿಕದ ಆಡಳಿತದ ಜೊತೆಗೆ ನಡೆಸಿದ ಮಾತುಕತೆ ಹಿಂದೆಯೇ ಈ ತೀರ್ಮಾನ ಹೊರಬಿದ್ದಿದೆ. ಉಕ್ರೇನ್ನ ಎರಡನೇ ಅತಿ ದೊಡ್ಡ ನಗರವಾಗಿರುವ ಹಾರ್ಕಿವ್, ರಷ್ಯಾದ ಗಡಿ ಭಾಗದಿಂದ ಕೇವಲ 20 ಕಿ.ಮೀ. ದೂರದಲ್ಲಿದೆ. ರಷ್ಯಾ ಈ ನಗರವನ್ನು ಗುರಿಯಾಗಿಸಿ ಹೆಚ್ಚು ದಾಳಿ ನಡೆಸುತ್ತಿದ್ದು, ಅತಿಕ್ರಮಣ ತೀವ್ರಗೊಳಿಸುತ್ತಿದೆ.

ರೋಹಿತ್ ಜತೆ ಆರಂಭಿಕರಾಗಿ ಜೈಸ್ವಾಲ್ ಬಹುತೇಕ ಫಿಕ್ಸ್ | 3ನೇ ಕ್ರಮಾಂಕದಲ್ಲಿ ಕೊಹ್ಲಿ

ಟೀಂ ಇಂಡಿಯಾಕ್ಕೆ ಆರಂಭಿಕರು ಯಾರು?

ದೆಹಲಿ: ವಿಶ್ವಕಪ್‌ಗೆ ಒಂದೇ ದಿನ ಬಾಕಿಯಿದ್ದು, ಭಾರತ ತಂಡವು ವಿಶ್ವಕಪ್‌ಗೆ ಸಜ್ಜಾಗಿದೆ. ಈ ನಿಟ್ಟಿನಲ್ಲಿ ಭಾರತ ತಂಡವು ನೆಟ್‌ನಲ್ಲಿ ಪ್ರಾಕ್ಟಿಸ್ ಮಾಡುತ್ತಿದೆ. ಟಿ20 ವಿಶ್ವಕಪ್‌ನ ಮೊದಲ ಜೂನ್ 2ರಂದೇ ಪ್ರಾರಂಭವಾಗಲಿದ್ದು, ಭಾರತ ತಂಡ ಜೂನ್ 5ರಂದು ನ್ಯೂಯಾರ್ಕ್‌ನ ನಸ್ಸೌ ಕೌಂಟಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಐರ್ಲೆಂಡ್ ವಿರುದ್ಧದ ಪಂದ್ಯದೊಂದಿಗೆ ಅಭಿಯಾನ ಆರಂಭಿಸಲಿದೆ. ಅದಕ್ಕೂ ಮುನ್ನ ಇಂದು ಬಾಂಗ್ಲಾದೇಶ ವಿರುದ್ಧ ಏಕೈಕ ಅಭ್ಯಾಸ ಪಂದ್ಯವಾಡಲಿದೆ.

ವಿಶ್ವಕಪ್‌ಗೆ ಭಾರತವು ಭಾರೀ ತಯಾರಿ ನಡೆಸಿದ್ದು, ಆದರೆ ಭಾರತದ ಆರಂಭ ಯಾರು ಮಾಡಲಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಸಿಗದಂತಾಗಿದೆ. ಭಾರತದಲ್ಲಿ ಇತ್ತೀಚೆಗೆ ಓಪ್ನಿಂಗ್ ಪಾರ್ಟ್‌ನರ್‌ಶಿಪ್ ಬಗ್ಗೆ ಚರ್ಚೆ ನಡೆಯುತ್ತಿದೆ. ಪ್ರಮುಖವಾಗಿ ಕೊಹ್ಲಿ ಆರಂಭಿಕರಾಗಲಿದ್ದಾರೆ ಎಂಬ ವಿಷಯ ಹರಿದಾಡುತ್ತಿದೆ. ಐಪಿಎಲ್ 2024ರ ಋತುವಿನಲ್ಲಿ ವಿರಾಟ್ ಕೊಹ್ಲಿ ಆರಂಭಿಕನಾಗಿ ಬ್ಯಾಟ್‌ನೊಂದಿಗೆ ಅದ್ಭುತವಾಗಿದ್ದರು. ಅವರು ಅಗ್ರ ಕ್ರಮಾಂಕದಲ್ಲಿ 741 ರನ್ ಗಳಿಸಿದರು ಮತ್ತು ಆರೆಂಜ್ ಕ್ಯಾಪ್ ವಿಜೇತರಾದರು. ಆದಾಗ್ಯೂ, ಯಶಸ್ವಿ ಜೈಸ್ವಾಲ್ ಯಾವಾಗಲೂ ಟಿ20 ಪಂದ್ಯಗಳಲ್ಲಿ ಭಾರತ ತಂಡದ ಬ್ಯಾಟಿಂಗ್ ಇನ್ನಿಂಗ್ಸ್ ತೆರೆಯುತ್ತಾರೆ ಮತ್ತು ಅಗ್ರ ಕ್ರಮಾಂಕದಲ್ಲಿ ಆಕ್ರಮಣಕಾರಿ ಆರಂಭ ನೀಡಿದ್ದಾರೆ. ಹೀಗಾಗಿ ಯಾರು ಆರಂಭಿಕರು ಎಂಬ ಪ್ರಶ್ನೆ ಕಾಡುತ್ತಿದೆ.

ಎಡ-ಬಲ ಕಾಂಬಿನೇಶನ್: ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಭಾರತ ತಂಡದ ಆಡುವ 11ರ ಭಾಗವಾದರೆ, 3ನೇ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಬ್ಯಾಟಿಂಗ್ ಮಾಡಬಹುದು ಏಕೆಂದರೆ ರೋಹಿತ್ ಹಾಗೂ ಜೈಸ್ವಾಲ್ ಎಡ ಮತ್ತು ಬಲ ಕಾಂಬಿನೇಶನ್‌ನಲ್ಲಿ ಉತ್ತಮ ಆಟವನ್ನು ನಿಡುವ ನಿರೀಕ್ಷೆ ಇದೆ. ಹೀಗಾಗಿ ಜೈಸ್ವಾಲ್ ರಂಭ ನಿಡಿದರೇ ಉತ್ತಮ ಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಬಲ-ಎಡ ಸಂಯೋಜನೆಯು ನಿರ್ಣಾಯಕ, ವಿಶೇಷವಾಗಿ ಚೆಂಡು ಚಲಿಸುವಾಗ ಅಥವಾ ಟರ್ನಿಂಗ್ ಆಗುವಾಗ ಉತ್ತಮವಾಗಿದೆ. ಎದುರಾಳಿ ತಂಡಗಳು ಎಡಗೈ ಸ್ಪಿನ್ನರ್‌ಗಳನ್ನು ಹೊಂದಿದ್ದು, ಇದಕ್ಕಾಗಿಯೇ ಭಾರತದ ಅಗ್ರ ಕ್ರಮಾಂಕದಲ್ಲಿ ಎಡಗೈ ಆಟಗಾರನ ಅಗತ್ಯ ಎಂದು ಇರ್ಫಾನ್ ಪಠಾಣ್ ತಿಳಿಸಿದ್ದಾರೆ.

ಮಧ್ಯಮ ಕ್ರಮಾಂಕಕ್ಕೂ ಬೇಕಿದೆ ಕೊಹ್ಲಿ ಬ್ಯಾಟಿಂಗ್

ಭಾರತ ತಂಡದಲ್ಲಿ ಅಷ್ಟೊಂದು ಅನುಭವ ಆಟಗಾರರಿಲ್ಲದ ಕಾರಣದಿಂದಾಗಿ ಕೊಹ್ಲಿ ಮೂರನೇ ಕ್ರಮಾಂಕದಲ್ಲಿ ಆಡಿ ಮಧ್ಯ ಕ್ರಮಾಂಕವನ್ನೂ ನೋಡಿಕೊಳ್ಳಬೇಕಿದೆ. ಪ್ರಮುಖವಾಗಿ ರೋಹಿತ್ ಜೈಸ್ವಾಲ್ ಉತ್ತಮ ಆರಂಭ ನೀಡಿದರೆ, ಕೊಹ್ಲಿ ಅದನ್ನು ಮುಂದುವರೆಸಿ ತ್ತಮ ಸ್ಕೋರ್ ಮಾಡಲು ಪ್ರಯತ್ನಿಸಬೇಕಾಗಿದೆ. ಒಂದು ವೇಳೆ ಕುಸಿತ ಕಂಡರೂ ಕೊಹ್ಲಿ ನಿಂತು ಆಡುವ ಜವಾಬ್ದರಿ ಹೊಂದಬೇಕಿದೆ. ಹೀಗಾಗಿ ಜೈಸ್ವಾಲ್ ಓಪನ್ ಮಾಡುವುದು ಖಚಿತ ಎನ್ನಬಹುದು.

ಐಪಿಎಲ್‌ನಲ್ಲಿ ಓಪನ್ ಮಾಡುವ ಕೊಹ್ಲಿ: ಇಷ್ಟಾದರೂ ಕೊಹ್ಲಿ ಅವರು ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಆರಂಭಿಕರಾಗಿ ಆಡುತ್ತಾರೆ.ಹೀಗಾಗಿಯೇ ಓಪ್ನರ್ ಆಗಿ ಇಳಿಯಬಹುದು ಎನ್ನಲಾಗಿತ್ತು. ಅದರಲ್ಲೂ ಕೊಹ್ಲಿ ಈ ಬಾರಿ ತಮ್ಮ ಸ್ಟ್ರೈಕ್‌ರೇಟ್‌ನಲ್ಲೂ ವೃದ್ಧಿ ಮಾಡಿಕೊಂಡಿದ್ದು, ಅವರು ಪವರ್‌ಪ್ಲೇನಲ್ಲಿ ರನ್ ಪೇರಿಸಬಹುದು ಎನ್ನಲಾಗಿದೆ. ಹೀಗಾಗಿ ಅವರು ಓಪನ್ ಮಾಡಿದರೆ ಉತ್ತಮ ಎಂದು ಕೆಲವು ಎಕ್ಸ್‌ಪರ್ಟ್‌ಗಳು ಹೇಳಿದ್ದಾರೆ.

ಕಳಪೆ ಗುಣಮಟ್ಟದ ಆಹಾರ: ಬಿಸಿಸಿಐಗೆ ದ್ರಾವಿಡ್ ದೂರು

ನ್ಯೂಯಾರ್ಕ್: ಟಿ20 ವಿಶ್ವಕಪ್ ಆಡಲು ನ್ಯೂಯಾರ್ಕ್‌ನಲ್ಲಿ ಬೀಡು ಬಿಟ್ಟಿರುವ ಟೀಮ್ ಇಂಡಿಯಾ ಆಟಗಾರರಿಗೆ ಸರಿಯಾದ ಗುಣಮಟ್ಟದ ಆಹಾರ ಸಿಗುತ್ತಿಲ್ಲ ಎಂದು ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಕೋಚ್ ರಾಹುಲ್ ದ್ರಾವಿಡ್ ಬಿಸಿಸಿಐಗೆ ದೂರು ಸಲ್ಲಿಸಿದ್ದಾರೆ ಎನ್ನಲಾಗಿದೆ. ಜತೆಗೆ ಅಭ್ಯಾಸ ನಡೆಸಲು ಸರಿಯಾದ ಸೌಲಭ್ಯವಿಲ್ಲ ಎಂದು ತಗಾದೆ ಎತ್ತಿದೆ.

ಕಳೆದ ಮೂರು ದಿನಗಳಿಂದ ಟೀಮ್ ಇಂಡಿಯಾದ ಆಟಗಾರರು ನ್ಯೂಯಾರ್ಕ್‌ನಲ್ಲಿ ಅಭ್ಯಾಸ ನಡೆಸುತ್ತಿದೆ. ಆಟಗಾರರು ಇಂದು ಬ್ಯಾಟಿಂಗ್ ಮತ್ತು ಬೌಲಿಂಗ್ ಅಭ್ಯಾಸ ಕೂಡ ಆರಂಭಿಸಿದ್ದಾರೆ. ಆದರೆ ಇಲ್ಲಿ ಅಭ್ಯಾಸ ನಡೆಸಲು ಉನ್ನತ ಸೌಲಭ್ಯಗಳಿಲ್ಲ ಎಂದು ನಾಯಕ ರೋಹಿತ್ ಮತ್ತು ಕೋಚ್ ರಾಹುಲ್ ದ್ರಾವಿಡ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ. ನ್ಯೂಸ್ 18 ವರದಿಯ ಪ್ರಕಾರ ಭಾರತ ತಂಡದ ಆಟಗಾರಿಗೆ ಗುಣಮಟ್ಟದ ಆಹಾರ ಸಿಗುತ್ತಿಲ್ಲ. ಈ ವಿಚಾರಗಳನ್ನು ಬಿಸಿಸಿಐ ಆಯೋಜಕ ಐಸಿಸಿ ಗಮನಕ್ಕೆ ತಂದಿದೆ ಎಂದು ವರದಿಯಾಗಿದೆ.

ನಾಯಕ ರೋಹಿತ್ ಶರ್ಮಾ, ಶುಭಮನ್ ಗಿಲ್, ಉಪನಾಯಕ ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜಾ, ಜಸ್ಪ್ರೀತ್ ಬುಮ್ರಾ, ರಿಷಭ್ ಪಂತ್, ಮೊಹಮದ್ ಸಿರಾಜ್, ಸೂರ್ಯಕುಮಾರ್ ಯಾದವ್, ಕುಲ್ದೀಪ್ ಯಾದವ್, ಸಂಜು ಸ್ಯಾಮ್ಸನ್, ಅರ್ಶ್ದೀಪ್ ಸಿಂಗ್, ಶಿವಂ ದುಬೆ ಸೇರಿದಂತೆ ಬಹುತೇಕ ಆಟಗಾರರು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಅಮೆರಿಕದ ವಾತಾವರಣಕ್ಕೆ ಹೊಂದಿಕೊಳ್ಳುವ ಸಲುವಾಗಿ ಬುಧವಾರ ಮತ್ತು ಗುರುವಾರ ಆಟಗಾರರು ಕೇವಲ ಜಾಗಿಂಗ್ ನಡೆಸಿ, ಫುಟ್ಬಾಲ್ ಆಡಿದ್ದರು.

ಭಾರತ ಶನಿವಾರ ಬಾಂಗ್ಲಾದೇಶ ವಿರುದ್ಧ ಏಕೈಕ ಅಭ್ಯಾಸ ಪಂದ್ಯವನ್ನಾಡಲಿದೆ. ವ್ಯಾಪಕ ಪ್ರಯಾಣ ಮತ್ತು ಐಪಿಎಲ್‌ನಿಂದ ದಣಿದಿರುವ ಕಾರಣ ಕೇವಲ ಒಂದು ಅಭ್ಯಾಸ ಪಂದ್ಯಕ್ಕೆ ಮೊರೆ ಹೋಗಿದೆ. ಭಾರತವು ತನ್ನ ಗುಂಪು ಹಂತದ ಎಲ್ಲಾ ಪಂದ್ಯಗಳನ್ನು ಅಮೆರಿಕದಲ್ಲೇ ಆಡಲಿದೆ. ಲೀಗ್ ಮುಕ್ತಾಯದ ಬಳಿಕ ಮುಂದಿನ ಹಂತಕ್ಕೆ ಅರ್ಹತೆ ಪಡೆದರೆ, ಸೂಪರ್ 8 ಪಂದ್ಯಗಳನ್ನು ಸಹ ಇಲ್ಲೇ ಆಡಲಿದೆ. ಸಾಂಪ್ರದಾಯಿಕ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಜೂನ್ 9 ರಂದು ನ್ಯೂಯಾರ್ಕ್‌ನಲ್ಲಿ ನಡೆಯಲ್ಲಿದೆ.

ಜಾಮೀನು ಅವಧಿ ಮುಗಿಸಿ ಜೈಲಿಗೆ ಮರಳುವುದಾಗಿ ಕೇಜ್ರಿ ಹೇಳಿಕೆ

ಸರ್ವಾಧಿಕಾರದಿಂದ ದೇಶ ರಕ್ಷಿಸಲು ಜೈಲಿಗೆ

ದೆಹಲಿ: ದೇಶವನ್ನು ಸರ್ವಾಧಿಕಾರದಿಂದ ರಕ್ಷಣೆ ಮಾಡುವ ನಿಟ್ಟಿನಲ್ಲಿ ಮತ್ತೆ ಜೈಲಿಗೆ ಮರಳುತ್ತಿದ್ದೇನೆ ಎಂದು ದೆಹಲಿ ಮುಖ್ಯ ಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ. ಸುಪ್ರಿಂನಿಂದ ಮಧ್ಯಂತರ ಜಾಮೀನು ಪಡೆದು ಹೊರಬಂದಿರುವ ನಾನು ಸುಪ್ರೀಂ ನಿರ್ದೇಶನದಂತೆ ಜೂನ್ 2ರಂದು ಮತ್ತೆ ಶರಣಾಗಬೇಕಿದೆ. ಜೈಲಿನಲ್ಲಿ ಮತ್ತೆ ಕಿರುಕುಳ ನೀಡಿದರೂ ತಲೆಬಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧಿತರಾಗಿದ್ದ ಕೇಜ್ರಿವಾಲ್ ಅವರಿಗೆ ಪ್ರಜಾತಂತ್ರದ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಜೂನ್ 1ರವರೆಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿತ್ತು. ಈ ಹಿನ್ನಲೆಯಲ್ಲಿ ಕೇಜ್ರಿವಾಲ್, ದೆಹಲಿ, ಪಂಜಾಬ್, ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ ಪ್ರಚಾರ ನಡೆಸಿದ್ದರು.

ಭಾನುವಾರ ಸಂಜೆ ತಿಹಾರ್ ಜೈಲ್‌ಗೆ: ನಾನು ಜೂನ್ 2ರಂದು ಶರಣಾಗಬೇಕಿದ್ದು, ಇನ್ನೆಷ್ಟು ದಿನ ಜೈಲಿನಲ್ಲಿ ಇರಬೇಕೋ ಎಂಬುದು ತಿಳಿದಿಲ್ಲ. ಈ ದೇಶವನ್ನು ಸರ್ವಾಧಿಕಾರದಿಂದ ರಕ್ಷಿಸಲು ನಾನು ಜೈಲಿಗೆ ಹೋಗುತ್ತಿದ್ದೇನೆ. ಈ ಬಗ್ಗೆ ನನಗೆ ಹೆಮ್ಮೆಯಿದೆ' ಜೈಲಿ ನಲ್ಲಿ ನನಗೆ ಕಿರುಕುಳ ನೀಡಲಾಯಿತು. ಔಷಧಿಯನ್ನು ನೀಡಲಿಲ್ಲ. ನನ್ನನ್ನು ಬಂಧಿಸಿ ದಾಗ 70 ಕೆ.ಜಿ ತೂಕ ಇದ್ದೆ. ಬಂಧನದ ಬಳಿಕ ನನ್ನ ತೂಕ 6 ಕೆ.ಜಿಯಷ್ಟು ಕಡಿಮೆಯಾ ಯಿತು' ಎಂದು ಅವರು ವಿವರಿಸಿದರು. ಭಾನುವಾರ ಸಂಜೆ 3ಗಂಟೆ ಹೊತ್ತಿಗೆ ತಿಹಾರ್ ಜೈಲಿಗೆ ಹೋಗಿ ಶರಣಾಗುವುದಾಗಿ ಕೇಜ್ರಿ ವಾಲ್ ತಿಳಿಸಿದ್ದಾರೆ.

ಸ್ಯಾನ್ ಫ್ರಾನ್ಸಿಸ್ಕೋಗೆ ತೆರಳಬೇಕಿದ್ದ ವಿಮಾನ

ವಿಮಾನ 20 ಗಂಟೆ ವಿಳಂಬ

ದೆಹಲಿ: ದೆಹಲಿಯಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ಗುರುವಾರ ಮಧ್ಯಾಹ್ನ ತೆರಳಬೇಕಿದ್ದ ಏರ್ ಇಂಡಿಯಾ ವಿಮಾನ 20 ಗಂಟೆಗಳ ಕಾಲ ವಿಳಂಬವಾಗಿದ್ದು, ಪ್ರಯಾಣಿಕರು ಪರದಾಡುತ್ತಿದ್ದಾರೆ. ಹವಾ ನಿಯಂತ್ರಣ ವ್ಯವಸ್ಥೆ ಇಲ್ಲದೆ ವಿಮಾನದೊಳಗೆ ಕೆಲವರು ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ ಎಂದು ಮೂಲಗಳು ತಿಳಿಸಿವೆ. ವಿಮಾನ ಇಂದು ಬೆಳಿಗ್ಗೆ 11 ಗಂಟೆಗೆ ಹೊರಡಲಿದೆ. ಪತ್ರಕರ್ತೆ ಶ್ವೇತಾ ಪುಂಜ್ ಸಾಮಾಜಿಕ ಜಾಲ ತಾಣ ಎಕ್ಸ್‌ನಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಎಸಿ ಇಲ್ಲದೆ ಪ್ರಯಾ ಣಿಕರು ಪರದಾಡು ತ್ತಿರುವ ಫೋಟೊವನ್ನು ಪೋಸ್ಟ್ ಮಾಡಿದ್ದಾರೆ. ಫ್ಲೈಟ್ ನಂ. ಎಐ 183 ವಿಮಾನಕ್ಕೆ ಪ್ರಯಾಣಿ ಕರನ್ನು ಹತ್ತಿಸಲಾ ಯಿತು. ಹವಾ ನಿಯಂತ್ರಣವಿಲ್ಲದೆ ಹಲವರು ಪರದಾಡಿದರು. ಈ ವೇಳೆ ಕೆಲವರು ಪ್ರಜ್ಞೆ ತಪ್ಪಿ ಬಿದ್ದಿದ್ದರು. ನಂತರ ಪ್ರಯಾಣಿಕರಿಗೆ ವಿಮಾನ ದಿಂದ ನಿರ್ಗಮಿಸಲು ತಿಳಿಸಲಾಯಿತು ಎಂದು ಅವರು ಬರೆದು ಕೊಂಡಿದ್ದಾರೆ. ದೆಹಲಿಯಲ್ಲಿ ಉಷ್ಣಾಂಶ ದಾಖಲೆಯ ಮಟ್ಟಕ್ಕೆ ಏರಿದೆ. ಬುಧವಾರ ರಾಷ್ಟ್ರ ರಾಜಧಾನಿ ಯಲ್ಲಿ 52.9 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡುಬಂದಿತ್ತು. ಇದು ಖಾಸಗೀಕರಣ ವಿಫಲವಾಗಿದೆ ಎನ್ನುವುದಕ್ಕೆ ಸ್ಪಷ್ಟ ಉದಾ ಹರಣೆ. ಎಐ 183 ವಿಮಾನವು ಎಂಟು ಗಂಟೆ ಗಳಿಗಿಂತ ಹೆಚ್ಚು ವಿಳಂಬವಾಗಿದೆ. ಪ್ರಯಾಣಿ ಕರನ್ನು ಹವಾನಿಯಂತ್ರಣ ವ್ಯವಸ್ಥೆ ಇಲ್ಲದ ವಿಮಾನವನ್ನು ಹತ್ತಿಸಿದ್ದು ಅಮಾನವೀಯ ಎಂದು ಹೇಳಿದ್ದರೆ.

ಸಂಸದೆ ಸ್ವಾತಿ ಮಾಲಿವಾಲ್ ಪ್ರಕರಣ | ತೀರ್ಪು ಕಾಯ್ದಿರಿಸಿದ ಕೋರ್ಟ್

ಬಿಭವ್‌ಗೆ 14 ದಿನ ನ್ಯಾಯಾಂಗ ಬಂಧನ

ದೆಹಲಿ: ರಾಜ್ಯಸಭೆ ಸಂಸದೆ ಸ್ವಾತಿ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿಯವರ ಆಪ್ತ ಸಹಾಯಕ ಬಿಭವ್ ಕುಮಾರ್ ಸಲ್ಲಿಸಿರುವ ಅರ್ಜಿ ಕುರಿತ ಆದೇಶವನ್ನು ದೆಹಲಿ ಹೈಕೋರ್ಟ್ ಕಾಯ್ದಿರಿಸಿದೆ. ಈ ಹಿಂದೆ ಸ್ವಾತಿ ಮಾಲಿವಾಲ್ ಕಳೆದ ತಿಂಗಳು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ದೂರು ನೀಡಿದ್ದರು. ಅದರಂತೆ ಬಿಭವ್ ಅವರನ್ನು ಬಂಧಿಸಲಾಗಿತ್ತು. ಈ ಬೆನ್ನಲೇ ಅವರ ಬಂಧನವನ್ನು ಪ್ರಶ್ನಿಸಿ ಬಿಭವ್ ಬುಧವಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಬಂಧನ ಪ್ರಕ್ರಿಯೆಯು ಕಾನೂನು ಬಾಹಿರವಾಗಿದೆ ಮತ್ತು ಬಂಧಿಸುವುದಕ್ಕೂ ಮುನ್ನ ಅಪರಾಧ ಪ್ರಕ್ರಿಯಾ ಸಂಹಿತೆ 'ಸೆಕ್ಷನ್ 41ಎ' ಅನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ ಎಂದು ಘೋಷಿಸಬೇಕು ಎಂದು ಬಿಭವ್ ಪತ್ರದಲ್ಲಿ ಕೋರಿದ್ದರು.

14 ದಿನಗಳ ನ್ಯಾಯಾಂಗ ಬಂಧನ: ದೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಿಭವ್ ಕುಮಾರ್‌ಗೆ ದೆಹಲಿ ಕೋರ್ಟ್ 14 ದಿನ ನ್ಯಾಯಾಂಗ ಬಂಧನ ವಿಧಿಸಿದೆ. ಈ ತಿಂಗಳ ಆರಂಭದಲ್ಲಿ ಸಿಎಂ ನಿವಾಸದಲ್ಲಿ ಆಪ್ ಸಂಸದೆ ಸ್ವಾತಿ ಮಲಿವಾಲ್ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ಬಂಧನವನ್ನು ಪ್ರಶ್ನಿಸಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಪ್ತ ಬಿಭವ್ ಕುರ್ಮಾ ಸಲ್ಲಿಸಿದ್ದ ಮನವಿಯ ನಿರ್ವಹಣೆಯ ವಿಷಯದ ಕುರಿತು ದೆಹಲಿ ಹೈಕೋರ್ಟ್ ಶುಕ್ರವಾರ ತನ್ನ ಆದೇಶವನ್ನು ಕಾಯ್ದಿರಿಸಿತ್ತು. ಪ್ರಕರಣದ ಆದೇಶ ನೀಡಿದ್ದು, ಭಿಭವ್ ಕುಮಾರ್‌ಗೆ ಮತ್ತೆ 14 ದಿನ ನ್ಯಾಯಾಂಗ ಬಂಧನ ವಿಧಿಸಿದೆ. ಪೋಲೀಸರ ಪರ ವಾದ ಮಂಡಿಸಿದ ಹಿರಿಯ ವಕೀಲರು, ಅರ್ಜಿಯನ್ನು ನಿರ್ವಹಿಸುವಂತಿಲ್ಲ ಎಂಬ ಕಾರಣಕ್ಕೆ ನೋಟಿಸ್ ಜಾರಿ ಮಾಡುವುದನ್ನು ವಿರೋಧಿಸಿದ್ದರು.

ಒಡಿಶಾ: ಮೂವರಲ್ಲಿ ಆಂಥ್ರಾಕ್ಸ್ ಸೋಂಕು ಪತ್ತೆ

ಒಡಿಶಾ: ಇಲ್ಲಿನ ಕೊರಾಪುಟ್ ಜಿಲ್ಲೆಯಲ್ಲಿ ಮೂರು ವ್ಯಕ್ತಿಗಳಿಗೆ ಆಂಥ್ರಾಕ್ಸ್ ಸೋಂಕು ತಗುಲಿರುವುದು ಪತ್ತೆಯಾಗಿದ್ದು, ಮಂಗಳವಾರ ಮತ್ತು ಗುರುವಾರದ ನಡುವೆ ಲಕ್ಷ್ಮೀಪುರ ಬ್ಲಾಕ್‌ನಲ್ಲಿ ಈ ಮೂರು ಪ್ರಕರಣಗಳು ದೃಢಪಟ್ಟಿವೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾಸಿಲಸ್ ಆಂಥ್ರಾಸಿಸ್ ಎಂಬ ಬ್ಯಾಕ್ಟೀರಿಯಾದಿಂದ ಆಂಥ್ರಾಕ್ಸ್ ಬರುತ್ತದೆ. ಮೂವರಲ್ಲಿ ಆಂಥ್ರಾಕ್ಸ್ ಪಾಸಿಟಿವ್ ಬಂದಿದ್ದು, ಅವರನ್ನು ಲಕ್ಷ್ಮೀಪುರ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಆಂಥ್ರಾಕ್ಸ್ ಸೋಂಕಿತ ಜಾನುವಾರು ಕಳೇಬರದಿಂದ ಸೋಂಕು ಹರಡಿಬಹುದುಎಂದು ಕೊರಾಪುಟ್‌ನ ಹೆಚ್ಚುವರಿ ಜಿಲ್ಲಾ ಆರೋಗ್ಯ ಅಧಿಕಾರಿ ಸತ್ಯಸಾಯಿ ಸ್ವರೂಪ್ ಹೇಳಿದ್ದಾರೆ. ಈ ಸಂಬಂಧ ಆಂಥ್ರಾಕ್ಸ್ ಪ್ರಕರಣಗಳು ಕಂಡುಬಂದಿರುವ ಕುತಿಂಗ ಹಳ್ಳಿಗೆ ಆರೋಗ್ಯ ತಜ್ಞರ ತಂಡವನ್ನು ಕಳುಹಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಸದ್ಯ, ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಹೊಸ ಪ್ರಕರಣಗಳು ಪತ್ತೆಯಾಗಿಲ್ಲ. ಈ ಸಂಬಂಧ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ. ಸೋಂಕು ಕಂಡುಬಂದಿ ರುವ ಪ್ರದೇಶಗಳಲ್ಲಿ ಮಾಹಿತಿ, ತಿಳುವಳಿಕೆ ಮತ್ತು ಸಂವಹನ(ಐಇಸಿ) ಕೇಂದ್ರಗಳನ್ನು ತೆರೆಯಲಾಗಿದೆ. ಪರಿಸ್ಥಿತಿ ಮೇಲೆ ನಿಕಟ ನಿಗಾ ಇಡಲಾಗಿದ್ದು, ಗ್ರಾಮ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪರಿಸ್ಥಿತಿ ಅವಲೋಕನಕ್ಕೆ ಸೂಕ್ತ ಪ್ರಮಾಣದ ಆರೋಗ್ಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಡಾ.ಪ್ರಶಾಂತ್ ರೆಡ್ಡಿ ಅಮೆರಿಕ ಸಂಸತ್ ಪ್ರವೇಶಿಸಲು ಸಿದ್ಧ

ವಾಷಿಂಗ್ಟನ್: ಭಾರತ ಮೂಲದ ವೈದ್ಯ ಡಾ.ಪ್ರಶಾಂತ್ ರೆಡ್ಡಿ ಕೆನ್ಸಸ್‌ನಿಂದ ರಿಪಬ್ಲಿಕನ್ ಪಾರ್ಟಿಯ ಅಭ್ಯರ್ಥಿಯಾಗಿ ಅಮೆರಿಕದ ಸಂಸತ್ತಿಗೆ ಸ್ಪರ್ಧಿಸುತ್ತಿದ್ದಾರೆ. ಪ್ರಸ್ತುತ ಈ ಕ್ಷೇತ್ರವನ್ನು ಡೆಮಾಕ್ರಾಟ್ ಪಕ್ಷದ ಶರೈಸ್ ಡೇವಿಡ್ಸ್ ಪ್ರತಿನಿಧಿಸುತ್ತಿದ್ದು, 2018ರಿಂದ ಸತತ ಮೂರು ಬಾರಿ ಆಯ್ಕೆಯಾಗಿದ್ದಾರೆ. ಚೆನ್ನೈ ಮೂಲದ ವೈದ್ಯ ಪ್ರಶಾಂತ್ ರೆಡ್ಡಿ ಅವರಿಗೆ ಸ್ಪೀಕರ್ ಮೈಕ್ ಜಾನ್ಸನ್ ಸೇರಿದಂತೆ ರಿಪಬ್ಲಿಕನ್ ಪಾರ್ಟಿಯ ಹಲವು ಹಿರಿಯ ನೇತಾರರು ಬೆಂಬಲ ವ್ಯಕ್ತಪಡಿಸಿದ್ದಾರೆ. ಡಾ. ರೆಡ್ಡಿ ಅವರು ಸ್ಪರ್ಧೆ ಸಂಬಂಧ ಅಗತ್ಯ ಕಾಗದಪತ್ರ ಸಲ್ಲಿಸುವ ಪ್ರಕ್ರಿಯೆಯನ್ನು ಮೇ 22ರಂದು ಪೂರ್ಣಗೊಳಿಸಿದ್ದಾರೆ. ಇವರು ಹಾರ್ವರ್ಡ್ ಬ್ಯುಸಿನೆಸ್ ಸ್ಕೂಲ್‌ನಲ್ಲಿ ಪ್ರೋಗ್ರಾಮ್ ಫಾರ್ ಲೀಡರ್ಶಿಪ್ ಡೆವಲಪ್ಮೆಂಟ್ (ಪಿಎಲ್ಡಿ) ಕೋರ್ಸ್ ಪೂರೈಸಿದ್ದಾರೆ.

ಇಸ್ರೇಲ್ ದಾಳಿ: 12 ಮಂದಿ ಮೃತ

ಜೆರುಸಲೇಂ: ಗಾಜಾದ ಕೇಂದ್ರದಲ್ಲಿ ಇಸ್ರೇಲ್ ನಡೆಸಿದ ಎರಡು ವಾಯುದಾಳಿಯಲ್ಲಿ ಶುಕ್ರವಾರ ಇಬ್ಬರು ಮಕ್ಕಳು, ನಾಲ್ವರು ಮಹಿಳೆಯರು ಸೇರಿ 12 ಮಂದಿ ಮೃತಪಟ್ಟಿದ್ದಾರೆ. ರಫಾ ನಗರಕ್ಕೆ ಗಡಿಯಾದ ಇಲ್ಲಿ ಬಹುತೇಕ ಪ್ಯಾಲೆಸ್ಟೀನಿಯರು ನೆಲೆಸಿದ್ದಾರೆ. ಈಜಿಪ್‌ಲಗೆ ಹೊಂದಿಕೊಂಡಂತೆ ಈ ಗಡಿಯುದ್ದಕ್ಕೂ ಇಸ್ರೇಲ್ ಸೇನೆಯು ಸುತ್ತುವರಿದಿದೆ. ಇಸ್ರೇಲ್‌ನ ಸೇನೆ ತನ್ನ ದಾಳಿಯನ್ನು ತೀವ್ರಗೊಳಿಸುತ್ತಿದ್ದಂತೆ ಇಲ್ಲಿ ಆಶ್ರಯ ಪಡೆದಿದ್ದ 10 ಲಕ್ಷಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರು ಸುರಕ್ಷತೆ ಅರಸಿ ಗುಳೆಹೋಗುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಈ ಹಿಂದೆ ಬೇರೆಡೆಯಿಂದ ಇಲ್ಲಿಗೆ ವಲಸೆ ಬಂದಿದ್ದವರೇ ಆಗಿದ್ದಾರೆ. ಯುದ್ಧಪೀಡಿತ ಪ್ರದೇಶದಲ್ಲಿ ಹೆಚ್ಚಿನವರು ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಪರಿಹಾರ ಕಾರ್ಯಗಳಲ್ಲಿ ನಿರತರಾಗಿರುವ ವಿಶ್ವಸಂಸ್ಥೆಯ ಪ್ರಕಾರ, ಈ ಪ್ರದೇಶದಲ್ಲಿ ಅಗತ್ಯ ವಸ್ತುಗಳಾದ ಆಹಾರ, ನೀರು, ಇತರೆ ಮೂಲಸೌಲಭ್ಯಗಳ ಕೊರತೆಯಾಗಿದೆ. ಯಮೆನ್ನಲ್ಲಿ ಹೂಥಿ ಬಂಡುಕೋರರನ್ನು ಗುರಿಯಾಗಿಸಿ ಬ್ರಿಟನ್, ಅಮೆರಿಕ ನಡೆಸಿದ ವಾಯುದಾಳಿಯಲ್ಲಿ 16 ಮಂದಿ ಸತ್ತಿದ್ದು, 35 ಮಂದಿ ಗಾಯಗೊಂಡರು ಎಂದು ವರದಿಯು ತಿಳಿಸಿದೆ.

ಅಯೋಧ್ಯೆ: ಬಿಸಿಗಾಳಿ ರಕ್ಷಣೆಗೆ ಹಲವು ವ್ಯವಸ್ಥೆ

ಅಯೋಧ್ಯೆ: ದೇಶದ್ಯಂತ ಭಾರೀ ಬಿಸಿಗಾಳಿಗೆ ಜನರು ತತ್ತರಿಸಿ ಹೋಗಿದ್ದು, ಅಯೋಧ್ಯೆ ರಾಮ ಮಂದಿರಕ್ಕೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಬಿಸಿಗಾಳಿಯಿಂದ ರಕ್ಷಣೆ ನೀಡಲು ಸಹಾಯ ಕೇಂದ್ರ, ವಾಟರ್ ಕೂಲರ್‌ಗಳು ಮತ್ತು ಒಆರ್‌ಎಸ್ ಸೇರಿದಂತೆ ಹಲವು ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜನವರಿಯಲ್ಲಿ ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ನೆರವೇರಿದ ಬಳಿಕ ದೇಶದಾದ್ಯಂತ ಲಕ್ಷಾಂತರ ಭಕ್ತರು ಭಗವಾನ್ ರಾಮನ ದರ್ಶನ ಪಡೆಯಲು ರಾಮ ಮಂದಿರಕ್ಕೆ ಭೇಟಿ ನೀಡುತ್ತಿದ್ದಾರೆ. ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಬೇಸಿಗೆಯ ಬಿಸಿ ಹೆಚ್ಚಾಗಿದ್ದು, ತಾಪಮಾನ 50 ಡಿಗ್ರಿ ಸೆಲ್ಸಿಯಸ್ ಗಡಿ ದಾಟಿದ್ದು, ದೇವರ ದರ್ಶನಕ್ಕಾಗಿ ಬರುವ ಭಕ್ತರು ಹೆಚ್ಚಿನ ಸಮಯ ಸರತಿ ಸಾಲಿನಲ್ಲಿ ನಿಲ್ಲುವುದರಿಂದ ಶಾಖದ ಅಲೆಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ, ಭಕ್ತರಿಗೆ 500ಕ್ಕೂ ಹೆಚ್ಚು ಕುರ್ಚಿಗಳನ್ನು ಒಳಗೊಂಡ ಸಹಾಯ ಕೇಂದ್ರವನ್ನು ಸ್ಥಾಪಿಸಲಾಗಿದೆ. ವಾಟರ್ ಕೂಲರ್‌ಗಳು ಮತ್ತು ಇತರ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ರಾಮ ಮಂದಿರ ಟ್ರಸ್ಟ್‌ನ ಉಸ್ತುವಾರಿ ಪ್ರಕಾಶ್ ಗುಪ್ತಾ ತಿಳಿಸಿದ್ದಾರೆ. ದೇವಸ್ಥಾನ ಟ್ರಸ್ಟ್ ಹೊರತಾಗಿ ಸ್ಥಳೀಯ ಆಡಳಿತವೂ ಭಕ್ತರಿಗೆ ಹಲವು ವ್ಯವಸ್ಥೆಗಳನ್ನು ಏರ್ಪಡಿಸಿದೆ. ಶಾಖಾಘಾತದಿಂದ ಬಳಲುತ್ತಿರುವ ಭಕ್ತರಿಗೆ ನೆರವು ನೀಡಲು ಜಿಲ್ಲಾ ಆಸ್ಪತ್ರೆಯ ವೈದ್ಯರಿಗೆ ಸೂಚಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಕೃಷ್ಣ ಜನ್ಮಭೂಮಿ: ತೀರ್ಪು ಕಾಯ್ದಿರಿಸಿದ ಕೋರ್ಟ್

ಲಖನೌ: ರಾಮಮಂದಿರ ನಿರ್ಮಾಣವಾದ ಹಿನ್ನಲೇ ಎಲ್ಲರ ಚಿತ್ತ ಈಗ ಮಥುರಾದಲ್ಲಿರುವ ಕೃಷ್ಣ ಜನ್ಮಭೂಮಿ ಮೇಲೆ ಬಿದ್ದಿದ್ದು, ಕೃಷ್ಣಜನ್ಮಭೂಮಿ ಹಾಗೂ ಶಾಹಿ ಈದ್ಗಾ ಸ್ಥಳ ನಿರ್ವಹಣಾ ವಿವಾದ ಕುರಿತ ಪ್ರಕರಣದ ವಿಚಾರಣೆ ನಡೆಸುತ್ತಿರುವ ಅಲಹಾಬಾದ್ ಹೈಕೋರ್ಟ್, ತನ್ನ ತೀರ್ಪನ್ನು ಕಾಯ್ದಿರಿಸಿತು.

ಕೃಷ್ಣ ಮಂದಿರಕ್ಕೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿ ತೆರವು ಕೋರಿ ಹಲವು ಅರ್ಜಿಗಳನ್ನು ಸಲ್ಲಿಕೆಯಾಗಿದ್ದವು. ಮೊಘಲ್ ದೊರೆ ಔರಂಗಜೇಬ್‌ನ ಅವಧಿಯಲ್ಲಿ ದೇವಾಲಯ ನೆಲಸಮಗೊಳಿಸಿ, ಅದೇ ಜಾಗದಲ್ಲಿ ಮಸೀದಿ ನಿರ್ಮಿಸಲಾಗಿದೆ ಎಂದು ಹಿಂದೂ ಪರ ಅರ್ಜಿಯಲ್ಲಿ ಆರೋಪಿಸಲಾಗಿತ್ತು. ಪೂಜಾ ಸ್ಥಳ ಕುರಿತು 1991ರ ವಿಶೇಷ ಅವಕಾಶ ಕಾಯ್ದೆ ಅಡಿಯಲ್ಲಿ ಸಲ್ಲಿಕೆಯಾದ ಅರ್ಜಿಗಳು ಅನರ್ಹ. ಈ ಕಾಯ್ದೆಯಡಿ ಯಾವುದೇ ಪೂಜಾ ಸ್ಥಳದ ಪರಿವರ್ತನೆಯನ್ನು ನಿಷೇಧಿಸಿದೆ.



ಜತೆಗೆ 1947ರ ಆ. 15ಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಅಂಥ ಧಾರ್ಮಿಕ ಸ್ಥಳಗಳ ಸ್ವರೂಪವನ್ನು ಕಾಪಾಡಬೇಕು' ಎಂದು ಮುಸ್ಲಿಂ ಪರ ವಕೀಲರು ಪೀಠದ ಮುಂದೆ ವಾದ ಮಂಡಿಸಿದರು. ಪ್ರಕರಣದ ವಾದ ಮತ್ತು ಪ್ರತಿವಾದವನ್ನು ಆಲಿಸಿದ ನ್ಯಾ. ಮಯಾಂಕ್ ಕುರ್ಮಾ ಜೈನ್ ಅವರು, ತೀರ್ಪನ್ನು ಕಾಯ್ದರಿಸಿದರು.

ಕನ್ಯಾಕುಮಾರಿಯಲ್ಲಿ ಆರಂಭಗೊಂಡ ಧ್ಯಾನ | ಇಂದೇ ಮುಕ್ತಾಯ

ಭಾವ, ಭಕ್ತಿಯೊಂದಿಗೆ ಧ್ಯಾನದಲ್ಲಿ ಮೋದಿ ಮಗ್ನ

ಕನ್ಯಾಕುಮಾರಿ: ಚುನಾವಣೆಯ ಫಲಿತಾಂಶ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಧ್ಯಾನದ ಅಂಗವಾಗಿ ಕನ್ಯಾಕುಮಾರಿಯಲ್ಲಿರುವ ವಿವೇಕಾನಂದ ಕಲ್ಲಿನ ಸ್ಮಾರಕದಲ್ಲಿ ಧ್ಯಾನ ಆರಂಭಿಸಿದ್ದು, ಖಾವಿ ಬಟ್ಟೆ ತೊಟ್ಟು, ಹಣೆಗೆ ವಿಭೂತಿ ಹಚ್ಚಿ, ಕೈಯಲ್ಲಿ ಜಪಮಣಿ ಹಿಡಿದುಕೊಂಡು ಸ್ವಾಮಿ ವಿವೇಕಾನಂದರ ಪ್ರತಿಮೆ ಮುಂದೆ ಪ್ರಧಾನಿ ಧ್ಯಾನ ಮಗ್ನರಾಗಿದ್ದಾರೆ. ಗುರುವಾರ ರಾತ್ರಿಯೇ ಸ್ಥಳಕ್ಕೆ ತಲುಪಿರುವ ಅವರು, ಶುಕ್ರವಾರ ಸೂರ್ಯೋದಯದ ಸಮಯದಲ್ಲಿ 'ಸೂರ್ಯ ಅರ್ಘ್ಯ' ನೀಡಿದರು. 'ಸೂರ್ಯ ಅರ್ಘ್ಯ' ಎಂಬ ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಸರ್ವಶಕ್ತನಿಗೆ ನಮಸ್ಕಾರಗಳನ್ನು ಒಳಗೊಂಡಿರುವ ಒಂದು ಆಚರಣೆ ಯನ್ನು ನಡೆಸಿದರು. ನಂತರ ಕೈ ಜೋಡಿಸಿ ಪ್ರಾರ್ಥನೆ ಗಳನ್ನು ಸಲ್ಲಿಸಿದರು. 'ಸೂರ್ಯೋದಯ, ಸೂರ್ಯ ಅರ್ಘ್ಯ, ಆಧ್ಯಾತ್ಮಿಕತೆ' ಎಂಬ ಕಿರು ವೀಡಿಯೊ ಕ್ಲಿಪ್‌ನ್ನು ಬಿಜೆಪಿ ತನ್ನ 'ಎಕ್ಸ್' ಹ್ಯಾಂಡಲ್ನಲ್ಲಿ ಪೋಸ್ಟ್ ಮಾಡಿದ್ದು, ಪ್ರಧಾನ ಮಂತ್ರಿಯವರು ಸಾಂಪ್ರದಾಯಿಕವಾಗಿ ಚೆಂಬಿ ನಲ್ಲಿ ಸಣ್ಣ ಪಾತ್ರೆಯಿಂದ ಸ್ವಲ್ಪ ನೀರನ್ನು ಸಮುದ್ರಕ್ಕೆ ನೈವೇದ್ಯವಾಗಿ (ಅರ್ಘ್ಯ) ನೀಡಿ ಪ್ರಾರ್ಥಿಸುತ್ತಾರೆ. ಪ್ರಾರ್ಥನಾ ಮಣಿಗಳನ್ನು (ಜಪ ಮಾಲಾ) ಬಳಸಿ ಜಪ ಮಾಡುತ್ತಾರೆ.

ಧ್ಯಾನದಲ್ಲಿ ಮಗ್ನರಾಗಿರುವ ಮೋದಿ: ಕೇಸರಿ ಅಂಗಿ, ಶಾಲು ಮತ್ತು ಧೋತಿ ಧರಿಸಿ ಧ್ಯಾನ ಮಂಟಪದಲ್ಲಿ ಧ್ಯಾನದಲ್ಲಿ ಮಗ್ನರಾಗಿರುವ ಪ್ರಧಾನಿಯವರ ಮುಂದೆ ಧೂಪದ್ರವ್ಯದ ತುಂಡುಗಳು ನಿಧಾನವಾಗಿ ಉರಿಯುತ್ತಿರುವುದನ್ನು ಕಾಣಬಹುದು. ಮೋದಿ ಕೂಡ ಜಪ ಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡು ಮಂಟಪವನ್ನು ಸುತ್ತಿದರು. ಧ್ಯಾನ ಭಂಗಿಯಲ್ಲಿರುವ ಮೋದಿಯವರ ಫೋಟೋ-ವಿಡಿಯೊಗಳು ಸಾಕಷ್ಟು ಹರಿದಾಡುತ್ತಿವೆ. ವಿವೇಕಾನಂದ ಸ್ಮಾರಕವು ತೀರದ ಸಮೀಪವಿರುವ ಒಂದು ಸಣ್ಣ ದ್ವೀಪದಲ್ಲಿದೆ. ವಿವೇಕಾನಂದ ಸ್ಮಾರಕದಲ್ಲಿ ನಿನ್ನೆ ಸಂಜೆ ಪ್ರಧಾನಮಂತ್ರಿಯವರು ಧ್ಯಾನ ಪ್ರಾರಂಭಿಸಿದ್ದು, ತಮಿಳುನಾಡಿನಲ್ಲಿ ಪ್ರಧಾನಿ ಮೋದಿ ಹಮ್ಮಿಕೊಂಡಿರುವ 45 ಗಂಟೆಗಳ ಧ್ಯಾನವು ಇಂದು ಮುಕ್ತಾಯಗೊಳಲಿದೆ.

ಖರ್ಗೆ ಆಕ್ಷೇಪ

ಪ್ರಧಾನಿ ಮೋದಿ ಅವರು ಧ್ಯಾನ ಮಾಡುತ್ತಿರುವುದಕ್ಕೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ರಾಜಕೀಯ ಮತ್ತು ಧರ್ಮವನ್ನು ಎಂದಿಗೂ ಒಟ್ಟಿಗೆ ಸೇರಿಸಬಾರದು ಮತ್ತು ನಿಮಗೆ ದೇವರಲ್ಲಿ ನಂಬಿಕೆ ಇದ್ದರೆ ಅದನ್ನು ನಿಮ್ಮ ಮನೆಯಲ್ಲಿ ಮಾಡಿ ಎಂದು ಹೇಳಿದ್ದಾರೆ. ರಾಜಕೀಯ ಮತ್ತು ಧರ್ಮವನ್ನು ಎಂದಿಗೂ ಒಟ್ಟಿಗೆ ಸೇರಿಸಬಾರದು. ಇವೆರಡನ್ನೂ ಪ್ರತ್ಯೇಕವಾಗಿ ಇಡಬೇಕು. ಒಂದು ಧರ್ಮದ ವ್ಯಕ್ತಿ ನಿಮ್ಮೊಂದಿಗೆ ಇರಬಹುದು ಮತ್ತು ಇನ್ನೊಂದು ಧರ್ಮದ ವ್ಯಕ್ತಿ ನಿಮ್ಮ ವಿರುದ್ಧ ಇರಬಹುದು. ಚುನಾವಣೆಯೊಂದಿಗೆ ಧಾರ್ಮಿಕ ಭಾವನೆಗಳನ್ನು ಲಿಂಕ್ ಮಾಡುವುದು ತಪ್ಪು. ಕನ್ಯಾಕುಮಾರಿಗೆ ಹೋಗಿ ನಾಟಕ ಪ್ರದರ್ಶಿಸಿ ಅದೆಷ್ಟು ಪೊಲೀಸ್ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಳ್ಳುತ್ತೀರಿ? ಎಂದು ಪ್ರಶ್ನಿಸಿದ್ದಾರೆ.



ಮೋಹಕ ಪ್ರಕೃತಿ

ರೋಡಿನ ಬದಿಯಲಿ ವನದೊಳು ಹಸಿರಿನ
ಹುಲ್ಲಿದು ಕರೆದಿಹುದು
ಕಾಡಿನ ರೂಪವೆ ಕಣ್ಮನ ಸೆಳೆಯಲು
ಮನವದು ಕುಣಿದಿಹುದು

ಎತ್ತರ ಮರವಿದು ನೆರಳನು ಹರಿಸುತ
ಖುಷಿಯನು ತರಿಸಿಹುದು
ಹತ್ತಿರ ಹೋಗಲು ತಂಪನು ಕೊಡುತಿರೆ
ನೆಮ್ಮದಿ ಇರಿಸಿಹುದು

ನೋಡಲು ಬಳ್ಳಿಯ ಹೂಗಳ ಗಡಣವು
ಹೃದಯವ ಸೆಳೆದಿಹುದು
ಕಾಡುತ ಹೆಣ್ಣಿನ ಮನವನು ಮುಡಿಯನು
ಏರುತ ನಲಿದಿಹುದು

ಆಟವ ಆಡುವ ಹಗ್ಗದ ಬಾಲೆಯು
ಹೃನ್ಮನ ತಣಿಸಿಹುದು
ಕೂಟದಿ ಹರ್ಷದ ಹೊನಲಿದು ಹರಿಯಲು
ಇಹವನೆ ಮರೆಸಿಹುದು

ಇಂತಹ ಸುಂದರ ಪ್ರಕೃತಿಯಲ್ಲಿಯೆ
ಕಾರದು ನಿಂತಿಹುದು
ಸಂತಸ ತರುತಿರೆ ಮೋದವ ನೀಡುತ
ಹೃದಯವ ಗೆಲುತಿಹುದು

● **ಶಂಕರಾನಂದ ಹೆಬ್ಬಾಳ**

ಬಂದನಿಂದು

ಬಾನೆದೆಯ ಬಗೆದು
ಭಾವವನೇ ಬಸಿದು
ಭುವಿಯೊಲುಮೆ ಸೇರಲು
ಬಂದನವನು ನೋಡು
ಬಾಂದಳದ ಭಾಗ್ಯ
ಅಂಬರದ ಚಂದಿರನಿಂದು

ಮುಗಿಲ ಮನೆ ತೊರೆದು
ನೆಲದ ಪ್ರೀತಿಗೆ ಮಣಿದು
ಸ್ನೇಹ ರಸಗಂಗೆಯಲಿ ತಣಿದು
ಪ್ರೀತಿಯಲಿ ಮೀಯಲೆಂದು
ಕೆಳಗಿಳಿದು ನಿಂದನವನು..
ಮುಗಿಲೂರ ಸುಂದರನಿಂದು

ಬೆಳದಿಂಗಳ ರಾತ್ರಿಯಲಿ
ಎದೆಗಿಳಿದು ಕಂಗಳಲಿ
ಚೆಂಬೆಳಕ ತಂಪಿನಲಿ
ಪ್ರೀತಿ ಬೆಳಕ ಹಳಕೊಂದು
ತಾರೆ ತೋಟದ ಮುತ್ತೊಂದು
ಶಶಿಯಿಂದು ಬಂದನಿಂದು

ಮೋಡದ ಮರೆಯಲಿ
ಕಣ್ಣ ಮುಚ್ಚಾಲೆಯಾಟ
ತೊರೆದು ಬಾನ ತಾರೆತೋಟ
ಭುವಿಯ ಅಂದ ಕಾಣಲೆಂದು
ತಪಕೆ ಒಲಿದು ಬಂದನಿಂದು
ಅಂಗಳಕೆ ಚಂದಿರನಿಂದು

ನಭದ ನಕ್ಷತ್ರ ನಗು ತೊಟ್ಟು
ಇಳೆಗೆ ಮುತ್ತಿಟ್ಟ ಮೊದಲ ಮಳೆ
ಮತ್ತಿಗೆ ಮಣ್ಣಿನೊಳಗಣ ಬೀಜ
ಕಣ್ಣು ಪಿಳುಕಿಸಿದಂತೆ
ಬಂದ ನೀಲಿ ಹಂದರದಿಂದ
ಬೇಲಿ ಹೂವ ಮುಡಿಯಲೆಂದು

ಮುರುಟಿ ಮುದುಡಿದ
ಮಲ್ಲಿಗೆ ಅಂಬಿನಲಿ ಹನಿದ
ತುಂತುರು ನೀರ ಹಾಡಿಗೆ
ಬಿರಿದ ಮೊಗ್ಗುಗಳರಳಿ
ಭಾವ ಮೈದುಂಬಿದಂತೆ
ಮಳೆಬಿಲ್ಲನೆಳೆದು ತಂದನಿಂದು

● **ಇಂದಿರಾ ಮೋಟೆಬೆನ್ನೂರ**

ಕಾರ್ಟೂನ್

"ಮಹದಾಯಿ" "ಮೇಕೆದಾಟು" ವಿಷಯ ಏನಾಯ್ತು ಅನ್ನೋದು ಮಾತ್ರ ಈ ಕಾಳಗದಲ್ಲಿ ಬರುತ್ತಿಲ್ಲ ..!!!

● **ಎಚ್.ಎಸ್. ವಿಶ್ವನಾಥ್**

ಹೈಕುಗಳು

ಬೇಕಾಗುತ್ತದೆ
ಕೋಟಿಗಿಂತ ರೋಟಿಯೇ
ಹಸಿವಾದಾಗ

★

ಅಡ್ಡದಾರಿಯ
ಎದುರಿಗಿರುತ್ತದೆ
ದೊಡ್ಡ ಕಮರಿ

★

ಬೇಡಿಕೆಗಳ
ಭಾರ ಹರಿಯುತ್ತದೆ
ಪಟದ ದಾರ

★

ಹಸುರೆಲೆಯೂ
ಒಮ್ಮೆ ಹಣ್ಣಾಗುತ್ತದೆ
ಸೃಷ್ಟಿ ನಿಯಮ

★

ಗಾಯದ ಮೇಲೆ
ಬರೆ ಎಳೆಯಬೇಡ
ಬರೆ ಒಲವ

★

ಕಿರೀಟ ಇಲ್ದೆ
ರಾಜ್ಯಭಾರ ಮಾಡಿದ
ಅಪ್ಪ ಅರಸ

● **ಲಕ್ಷ್ಮಣ್ ಜಮದಾಡೆ, ಅರ್ಜುಣಗಿ**

ಕಾಯುವಿಕೆಯ ತಪ ಎಂದು ಕೊನೆಯಾಗಬಹುದೆಂಬ ನಿರೀಕ್ಷೆಯ ಭಾವದಲಿ..! ಚಿತ್ರದಲ್ಲಿರುವವರು ಅತುಲ್ಯಾ ರವಿ

ಇಡ್ಲಿ-ಚಟ್ನಿಯ ಸುಂದರ ದಾಂಪತ್ಯ

● **ಚೇತನ ಭಾರ್ಗವ, ಬೆಂಗಳೂರು**

ಸುಂದರ ದಾಂಪತ್ಯವನ್ನು ಇಡ್ಲಿ ಹಾಗೂ ಚಟ್ನಿಗೆ ಹೋಲಿಸಬಹುದು. ಯಾಕೆಂದರೆ ಮೆದುವಾದ ಇಡ್ಲಿಗೆ, ರುಚಿಯಾದ ಚಟ್ನಿ ಜತೆಯಾದರೆಷ್ಟು ಹಿತ ಅಲ್ಲವೇ? ಇಡ್ಲಿಯ ಜತೆಗೆ ಚಟ್ನಿಯಷ್ಟು ಕಾಂಬಿನೇಷನ್ ಬೇರಾವುದು ಇಲ್ಲ. ಇದರಲ್ಲೇ ಮದುವೆಯ ನಂತರ ಗಂಡ ಹೆಂಡತಿ ಹೇಗೆ ಅನ್ಯೋನ್ಯತೆಯಿಂದ ಇರಬೇಕು ಎಂದು ತಿಳಿಯಬಹುದು.

ಬರಿಯ ಇಡ್ಲಿ ರುಚಿ ಇರುವುದಿಲ್ಲ, ಹಾಗೆಯೆ ಬರಿಯ ಚಟ್ನಿ ಕೂಡ ತಿನ್ನಲಾಗುವುದಿಲ್ಲ. ಎರಡನ್ನೂ ಸೇರಿಸಿ ತಿಂದರೇನೇ ರುಚಿ. ಹಾಗೆಯೇ ಸಂಸಾರದಲ್ಲಿ ಗಂಡನೊಬ್ಬನೇ ಹೆಚ್ಚಲ್ಲ, ಹೆಂಡತಿ ಕಡಿಮೆಯೂ ಅಲ್ಲ. ಇಬ್ಬರು ಪರಸ್ಪರ ಹೊಂದಾಣಿಕೆಯಿಂದ ಅರಿತು ಬಾಳಿದರೆ ಸಂಸಾರ ಹಸನು, ಬಾಳು ಬಂಗಾರ. ಮೆದುವಾಗಿ ಹಬೆಯಾಡುವ ಇಡ್ಲಿ ರುಚಿಯಾದ ಚಟ್ನಿಯಲ್ಲಿ ಮಿಂದು ಸವಿದಾಗಿನ ರುಚಿ ಸಂಸಾರದಲ್ಲೂ ಸಿದ್ಧಿಸುವುದು ಖಚಿತ. ಆದರೆ ಇಂಥ ಹಿತವಾದ, ರುಚಿಯಾದ ಇಡ್ಲಿ ತಿನ್ನಲು, ಪತಿಗೆ ತಿನ್ನಿಸಲು ಆ ದಿನ ನನ್ನ ಭಾಗ್ಯದಲ್ಲಿ ಮಾತ್ರ ಬರೆದಿರಲಿಲ್ಲ.

ಅಂದು ಒಂದು ದಿನ ಬೆಳಗಿನ ತಿಂಡಿಗೆ ಇಡ್ಲಿ ಚಟ್ನಿ ಮಾಡೋಣ ಎಂದುಕೊಂಡು ಯೂಟ್ಯೂಬ್‌ನಲ್ಲಿ ಇಡ್ಲಿಯನ್ನು ಮಾಡುವ ವಿಧಾನವೆಲ್ಲ ನೋಡಿಕೊಂಡು ಅದರಲ್ಲಿ ಕೊಟ್ಟ ಅಳತೆಯಂತೆಯೇ ಉದ್ದಿನಬೇಳೆಯನ್ನು ನೆನೆ ಹಾಕಿದೆ. ಸುಮಾರು ಮೂರು ಗಂಟೆ ನಂತರ ರುಬ್ಬಿ ಅದಕ್ಕೆ ಅಕ್ಕಿ ತರಿ(ಇಡ್ಲಿ ರವೆ)ಯನ್ನು ಮಿಕ್ಸ್ ಮಾಡಿ ಒಂದು ಪಾತ್ರೆಗೆ ಹಾಕಿ ಇಟ್ಟೆ. ನನ್ನ ಪತಿ ರಾಯರು ಕಚೇರಿಗೆ ಬೆಳಗ್ಗೆ 6:30ಗೆ ಮನೆಯಿಂದ ಹೊರಡಬೇಕಿದ್ದರಿಂದ ಬೇಗ ಎದ್ದು ಇಡ್ಲಿಯನ್ನು ಒಲೆಯ ಮೇಲೆ ಬೇಯಿಸಲು ಇಟ್ಟೆ. ಮುಂಜಾನೆಯ ಸವಿ ನಿದ್ರೆಯು ನನ್ನನ್ನು ಮತ್ತೆ ಮಲಗುವಂತೆ ಮಾಡಿತು. 10 ನಿಮಿಷದ ನಂತರ ಗ್ಯಾಸ್ ಅನ್ನು ಆಫ್ ಮಾಡೋಣ ಎಂದುಕೊಂಡಿದ್ದವಳಿಗೆ ನಿದ್ರಾದೇವಿ ಯಾವಾಗ ಆವರಿಸಿಕೊಂಡಳು ಎಂದು ತಿಳಿಯಲೇ ಇಲ್ಲ. ಮೂಗಿಗೆ ಕರಟಿದ ವಾಸನೆ ಬಡಿದ ಮೇಲೆಯೇ ನನಗೆ ಎಚ್ಚರವಾಗಿದ್ದು. ಆಗ ನನಗೆ ಒಲೆಯ ಮೇಲೆ ಇಡ್ಲಿ ಇಟ್ಟಿದ್ದೇನೆ ಎಂದು ನೆನಪಾಗಿ ಅಡುಗೆ ಮನೆಗೆ ಹೋಗಿ ನೋಡಿದರೆ ಪಾತ್ರೆಯಲ್ಲ ಸುಟ್ಟು ಹೋಗಿ ಪಕ್ಕದ ಮನೆಯವರೆಗೂ ಕರಟಿದ ವಾಸನೆ ಆವರಿಸಿತ್ತು. ಇಂದಿಗೂ ನನ್ನ ಇಡ್ಲಿಯ ಅವಾಂತರ ಕೇಳಿ ಮನೆಯವರೆಲ್ಲರೂ ಬಿದ್ದು ಬಿದ್ದು ನಗುತ್ತಾರೆ.

ಈಗ ಇಡ್ಲಿ- ಚಟ್ನಿ ಎಂದಾಗಲೆಲ್ಲಾ ಆ ಘಟನೆಯೇ ನೆನಪಿಗೆ ಬಂದು, ಮುಖದಲ್ಲಿ ನಗು ಮೂಡುತ್ತದೆ.

ಸುಮಧುರ ಸಂಬಂಧ

● **ಮಂಗಳ ಎಂ ನಾಡಿಗ್**

ಛೇ, ಎಂತಹ ದುಃಸ್ಥಿತಿ ಬಂತು ನನಗೆ. ಬಚ್ಚಲಲ್ಲಿ ಜಾರಿ ಬಿದ್ದದ್ದೇ ಒಂದು ನೆಪ. ಒಂದು ತಿಂಗಳು ಬೆಡ್ ರೆಸ್ಟ್. ಪಾಪ, ಸೊಸೆ ಕೆಲಸಕ್ಕೆ ಹೋಗೋದು ಬಿಟ್ಟು ನನ್ನ ಬಳಿ ಕುಳಿತಿದ್ದಾಳೆ. ಚಿಕ್ಕ ವಯಸ್ಸಿನಲ್ಲೇ ಅಮ್ಮನನ್ನು ಕಳೆದುಕೊಂಡಿದ್ದ ಹುಡುಗಿ ತನ್ನ ಮನದಲ್ಲಿ ನನಗೆ ತಾಯಿಯ ಸ್ಥಾನವನ್ನೇ ನೀಡಿದ್ದಾಳೆ. ಮೂರು ಹೊತ್ತೂ ಅಮ್ಮಾ, ಅಮ್ಮಾ ಎಂದು ಹಿಂದೆ-ಮುಂದೆ ಸುತ್ತುತ್ತಿದ್ದ ಹುಡುಗಿ ಈಗ ನನಗೇ ಅಮ್ಮ ಆಗಿದ್ದಾಳೆ. ಕುಳಿತಲ್ಲಿಗೇ ಎಲ್ಲಾ ಸೇವೆ ಮಾಡುತ್ತಾ ಪ್ರಬುದ್ಧತೆ ತೋರುತ್ತಿದ್ದಾಳೆ. ಎಲ್ಲದಕ್ಕೂ ಉಡಾಫೆ ಮಾಡುತ್ತಾ, ಚಿಕ್ಕ ಹುಡುಗಿಯಂತೆ ಪ್ರತಿಯೊಂದಕ್ಕೂ ನನ್ನನ್ನೇ ಅವಲಂಬಿಸುತ್ತಿದ್ದವಳು ಇವಳೇನಾ ಎಂದು ಆಶ್ಚರ್ಯವಾಗುತ್ತಿದೆ. ಈ ಹುಡುಗಿಗೆ ಏನೂ ಬರಲ್ಲ, ಮಗನ ಸೇವೆ ಜತೆ ಇವಳಿಗೂ ಎಲ್ಲಾ ನಾನೇ ಮಾಡ್ಬೇಕು ಎಂದು ಅಂದುಕೊಂಡದ್ದು ಅದೆಷ್ಟು ಸಲವೋ, ನೆನೆದಂತೆ ಕಣ್ಣೀರು ತಾನಾಗೇ ಕೆನ್ನೆ ತೋಯಿಸಿತ್ತು.

ಮಗನೂ ಅಷ್ಟೇ. ಒಂದು ಕಡ್ಡಿ ಆಚೆ-ಈಚೆ ಇಡದವನು ಇಂದು ಎಲ್ಲವನ್ನೂ ಜವಾಬ್ದಾರಿಯಿಂದ ನಿಭಾಯಿಸುತ್ತಿದ್ದಾನೆ. ಆಗಾಗ ನೋವು ಹೇಗಿದೆ ಎಂದು ಪ್ರೀತಿಯಿಂದ ವಿಚಾರಿಸುತ್ತಾನೆ. ಜತೆಯಲ್ಲಿದ್ದು ನಾನಿದ್ದೇನೆ ಎಂಬ ಧೈರ್ಯವನ್ನು ಕಣ್ಣಲ್ಲೇ ನೀಡುತ್ತಾನೆ. ಆಗೆಲ್ಲಾ ನನ್ನ ಕಂಗಳು ಹನಿಗೂಡುತ್ತವೆ. ಯಾವಾಗಲೂ ತನ್ನ ಕೆಲಸದಲ್ಲೇ ಮುಳುಗಿದ್ದವನಿಗೆ ನನ್ನ ಬಗ್ಗೆ ಒಂಚೂರೂ ಕಾಳಜಿ ಇಲ್ಲ ಎಂದುಕೊಂಡ ಸಂದರ್ಭಗಳೆಷ್ಟೋ. ನಿಜವಾಗಲೂ ನಾನು ಪುಣ್ಯವಂತೆ. ಇವೆಲ್ಲದರ ಅರಿವು ನನಗಾಗಲೆಂದೇ ಇಂಥ ಸಂದರ್ಭ ಬಂದಿರಬೇಕು. ಒಂದು ನೋವಲ್ಲೂ ಅದನ್ನು ಮರೆಸಿ, ನಗು ನೀಡುವ ನನ್ನವರೆನಿಸಿಕೊಂಡವರ ಸಂಬಂಧ ಯಾವಾಗಲೂ ಹೀಗೇ ಸುಮಧುರವಾಗಿರಲಿ.

ಸುಮನಾ 29/9/2021

ಸುಮನಾಳ ಡೈರಿ ಬರೆಯುವ ಅಭ್ಯಾಸಕ್ಕೆ ಇಂದು ಜತೆಯಾದ ಸುಂದರ ಕ್ಷಣಗಳಿವು. ಇದೊಂದು ಉದಾಹರಣೆಯಷ್ಟೇ. ಈಗಂತೂ ಎಲ್ಲರ ಬಾಯಲ್ಲೂ ಒಂದೇ ಮಾತು. ಮನೆಯಲ್ಲಿ ಮಕ್ಕಳು, ಸೊಸೆ, ಮೊಮ್ಮಕ್ಕಳು ಅವರವರ ಕೆಲಸದಲ್ಲಿ ಮುಳುಗಿರುತ್ತಾರೆ. ರಜೆ ಇದ್ದರೂ ಹೊರಗಡೆ ಹೊರಟು ಬಿಡುತ್ತಾರೆ. ವಯಸ್ಸಾದ ನಮ್ಮ ಕಡೆ ಗಮನ ಕೊಡುವುದೇ ಇಲ್ಲ. ಅದರಲ್ಲೂ ಕೊನೆಗಾಲದಲ್ಲಿ ಗಂಡ/ ಹೆಂಡತಿ ಇಬ್ಬರಲ್ಲಿ ಒಬ್ಬರು ಮೃತಪಟ್ಟಿದ್ದರಂತೂ ಇನ್ನೊಬ್ಬರದು ಅಕ್ಷರಶಃ ಏಕಾಂಗಿ ಬದುಕು. ಇದು ಹಲವೆಡೆ ಸತ್ಯವೂ ಹೌದು. ಮನೆಯಲ್ಲಿರುವ ಸದಸ್ಯರಲ್ಲಿ ಹೊಂದಾಣಿಕೆಯ ಕೊರತೆ, ನಾನು/ ನನ್ನದೆಂಬ ಅಹಂ, ಯೋಚಿಸದೇ, ಅವಸರದಲ್ಲಿ ಆಡುವ ಮಾತುಗಳು, ನೀಡುವ ಪ್ರತಿಕ್ರಿಯೆಗಳು, ದುಡ್ಡಿನ ಅಹಂಕಾರ ಇನ್ನೂ ಅನೇಕ ಕಾರಣಗಳಿಂದ ಮನದಲ್ಲಿ ಕಂದಕ ಮೂಡಿ ದಿನದಿನಕ್ಕೂ ದೊಡ್ಡದಾಗುತ್ತಾ ಹೋಗುತ್ತಿದೆ.

ಆದರೆ, ಇನ್ನೂ ಮೇಲಿನ ಉದಾಹರಣೆಯಂತೆ ಅನೇಕ ಮನೆಗಳಲ್ಲಿ ಪ್ರೀತಿ, ವಿಶ್ವಾಸ, ಕಾಳಜಿ ಹೊಂದಿರುವ ಸುಂದರ ಮನಗಳೂ ಇವೆ. ಪ್ರತಿನಿತ್ಯದ ಆಗುಹೋಗುಗಳಲ್ಲಿ, ಧಾವಂತದ ಬದುಕಲ್ಲಿ ದಿನವೂ ಅದನ್ನು ತೋರ್ಪಡಿಸಲು ಸಾಧ್ಯವಾಗದಿರಬಹುದು. ಆಗ, ಎಲ್ಲೋ ನನ್ನನ್ನು ಕಡೆಗಣಿಸುತ್ತಿದ್ದಾರೆ ಎಂದು ಅನ್ನಿಸಬಹುದು.

ಮನೆಯಲ್ಲಿ ಯಾರಿಗಾದರೂ ಇಂತಹ ಸಂದರ್ಭಗಳು ಎದುರಾದಾಗ, ಉಳಿದವರು ತಮ್ಮದೆಲ್ಲವನ್ನೂ ಬಿಟ್ಟು ಅವರ ಜತೆಗಿದ್ದು ವಹಿಸುವ ಕಾಳಜಿ ಇದೆಯಲ್ಲ, ಅದು ಕೊಡುವ ಸುರಕ್ಷಿತ ಭಾವ ಬೇರೆ ಯಾವುದರಲ್ಲೂ ಕಂಡುಕೊಳ್ಳಲು ಸಾಧ್ಯವಿಲ್ಲ.

ಸಂಬಂಧಕ್ಕೊಂದು ಅರ್ಥ, ಕುಟುಂಬಕ್ಕೊಂದು ಪರಿಕಲ್ಪನೆ ಖಂಡಿತಾ ಇದೆ. ಆಧುನಿಕತೆಯ ಜತೆ ಜತೆಗೆ ಹಿರಿಯರು ತೋರಿದ ದಾರಿಯೂ ನಮ್ಮ ಮುಂದಿದೆ. ಎಲ್ಲೋ ನಮ್ಮ ಕಡೆಯಿಂದಲೂ ಕೆಲವೊಮ್ಮೆ ಅರಿತೋ/ ಅರಿಯದೆಯೋ ತಪ್ಪುಗಳಾಗಬಹುದು. ನಮ್ಮ ಒಳ್ಳೆಯ ನಡತೆಗೆ ಅರಿಯದಂತೆಯೇ ಬೇರೆಯವರು ಸ್ಪಂದಿಸಲು ಶುರು ಮಾಡಬಹುದು. ಹಾಗಾಗಿ ಈ ನಿಟ್ಟಿನಲ್ಲಿ ಸಾಗುವ ಪ್ರಯತ್ನ ನಮ್ಮ ಕಡೆಯಿಂದ ಮಾಡೋಣ ಎಂಬ ಸದಾಶಯದೊಂದಿಗೆ.

ವಿಟಾಕೀಸ್

ಸತ್ಯವತಿ ಶಿಲ್ಪಾಶೆಟ್ಟಿ

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ, ಬಿ ಟೌನ್‌ನಲ್ಲಿ ಇಂದಿಗೂ ಬೇಡಿಕೆಯ ನಟಿಯಾಗಿದ್ದಾರೆ. ಹಿಂದಿ ಸಿನಿಮಾಗಳ ಜತೆಗೆ ಕನ್ನಡ ಸಿನಿಮಾಗಳಲ್ಲಿಯೂ ನಟಿಸುತ್ತಿದ್ದಾರೆ. ಸದ್ಯ ಜೋಗಿ ಪ್ರೇಮ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಕೆಡಿ ಚಿತ್ರದಲ್ಲಿ ಶಿಲ್ಪಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ರೆಟ್ರೋ ಪಾತ್ರವಾಗಿದ್ದು, ಸತ್ಯವತಿ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಕೆಡಿ ಚಿತ್ರೀಕರಣ ಮುಗಿಸಿರುವ ಶಿಲ್ಪಾ, ಸತ್ಯವತಿ ತುಂಬಾ ಒಳ್ಳೆಯ ಪಾತ್ರವಾಗಿದೆ. ಇಂತಹ ಪಾತ್ರ ನನಗೆ ಸಿಕ್ಕಿದ್ದು ನಿಜಕ್ಕೂ ನಾನು ಲಕ್ಕಿ. ಪ್ರೇಮ್ ಅವರಂತಹ ನಿರ್ದೇಶಕರ ಜತೆಗೆ ಕೆಲಸ ಮಾಡಿದ್ದು ಖುಷಿ ಕೊಟ್ಟಿದೆ ಎಂದು ಸಂತಸದಿಂದ ನುಡಿದಿದ್ದಾರೆ. ಕನ್ನಡ ಚಿತ್ರರಂಗ ನನ್ನ ತವರು ಮನೆಯಿದ್ದಂತೆ ಮತ್ತೊಂದಷ್ಟು ಕನ್ನಡ ಸಿನಿಮಾಗಳಲ್ಲಿ ನಟಿಸಲು ಇಚ್ಛಿಸಿದ್ದೇನೆ. ಅದಕ್ಕಾಗಿ ಹಲವು ಕಥೆಗಳನ್ನು ಕೇಳಿದ್ದೇನೆ ಎಂದು ಶಿಲ್ಪಾ ಹೇಳಿದ್ದಾರೆ. ತಮ್ಮ ಪಾತ್ರದ ಫಸ್ಟ್ ಲುಕ್ ಅನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಕೆಡಿ ನೈಜ ಘಟನೆಯಾಧಾರಿತ ಚಿತ್ರವಾಗಿದ್ದು, ಎಂಬತ್ತು ತೊಂಬತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ನಡೆದ ಘಟನೆಯ ಸುತ್ತ ಚಿತ್ರದ ಕಥೆ ಸಾಗಲಿದೆ. ಧ್ರುವ ಸರ್ಜಾ ನಾಯಕನಾಗಿ ನಟಿಸಿದ್ದು, ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಅಣ್ಣಪ್ಪ ಎಂಬ ಪಾತ್ರದಲ್ಲಿ ವಿಭಿನ್ನ ಗೆಟಪ್ ತಾಳಿದ್ದಾರೆ. ಕೆವಿಎನ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗಿರುವ ಕೆಡಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡ, ತೆಲುಗು, ಹಿಂದಿ ಸೇರಿದಂತೆ ಪಂಚ ಭಾಷೆಗಳಲ್ಲಿ ತೆರೆಗೆ ಬರಲಿದೆ. ಇನ್ನು ಮೂರು ಹಾಡುಗಳ ಶೂಟಿಂಗ್ ಬಾಕಿ ಯಿದ್ದು, ಡಿಸೆಂಬರ್‌ನಲ್ಲಿ ವಿಶ್ವಾದ್ಯಂತ ಅದ್ದೂರಿಯಾಗಿ ರಿಲೀಸ್ ಆಗಲಿದೆ.

ಶೋಭಿತಾ ಬಾಳಲ್ಲಿ ಚೈತನ್ಯ

ಬಾಲಿವುಡ್ ಮತ್ತು ಟಾಲಿವುಡ್‌ನಲ್ಲಿ ಪ್ರಸಿದ್ಧಿ ಪಡೆದಿರುವ ಶೋಭಿತಾ ದುಲಿಪಾಲ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆ ಶೋಭಿತಾ ನಟ ನಾಗ ಚೈತನ್ಯ ಪ್ರೀತಿಯಲ್ಲಿ ಬಿದ್ದಿದ್ದಾರೆ ಎಂಬ ಗುಸುಗುಸು ಹಬ್ಬಿದೆ. ಶೋಭಿತಾ ಈ ಬಾರಿಯ ಹುಟ್ಟಹಬ್ಬವನ್ನು ನಾಗ ಚೈತನ್ಯ ಅವರೊಂದಿಗೆ ಆಚರಿಸಿಕೊಂಡಿದ್ದಾರೆ. ಅಲ್ಲದೆ ಇಬ್ಬರೂ ಗುಟ್ಟಾಗಿ ಡೇಟಿಂಗ್ ಮಾಡುತ್ತಿದ್ದು, ವಿದೇಶಕ್ಕೂ ತೆರಳಿದ್ದಾರೆ ಎನ್ನಲಾಗಿದೆ. ಹೀಗಾಗಿ ಶೋಭಿ ಹಾಗೂ ನಾಗ ಚೈತನ್ಯ ಇಬ್ಬರು ಮದುವೆಯಾಗಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಸಮಂತಾ ಅವರನ್ನು ವರಿಸಿದ್ದ ನಾಗ ಚೈತನ್ಯ, ಮೂರು ವರ್ಷಗಳ ಹಿಂದೆ ವಿಚ್ಛೇದನ ಪಡೆದಿದ್ದರು. ಆ ಬಳಿಕ ಶೋಭಿತಾ-ನಾಗ ಚೈತನ್ಯ ನಡುವೆ ಸ್ನೇಹ ಬೆಳೆದಿತ್ತು. ಈಗ ಅದು ಪ್ರೀತಿಗೆ ತಿರುಗಿದೆ. ಹಾಗಾಗಿ ಮುಂದೆ ಈ ಇಬ್ಬರು ವಿವಾಹವಾಗಲಿದ್ದಾರೆ ಎಂದು ಹೇಳಲಾಗುತ್ತಿದೆ. ಪೊನ್ನಿಯಿನ್ ಸೆಲ್ವನ್ ಚಿತ್ರದಲ್ಲಿ ನಟಿಸಿ ಮನಗೆದ್ದಿದ್ದ ಶೋಭಿತಾ, ನೈಟ್ ಮ್ಯಾನೇಜರ್ ವೆಬ್ ಸೀರಿಸ್‌ನಲ್ಲಿಯೂ ಅಭಿನಯಿಸಿದ್ದರು, ಈ ಸೀರಿಸ್‌ನಲ್ಲಿನ ಅದ್ಭುತ ಅಭಿನಯಕ್ಕಾಗಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಹಾಡಿನಲ್ಲೆ ಮನಗೆದ್ದ ಬ್ಯಾಕ್ ಬೆಂಚರ್ಸ್

ಬ್ಯಾಕ್ ಬೆಂಚರ್ಸ್ ಎಂದರೆ ಒಂಚೂರು ಅಸಡ್ಡೆ, ಈಗ ಅದೇ ಬ್ಯಾಕ್ ಬೆಂಚರ್ಸ್ ಸದ್ದು ಮಾಡಲು ಸಿದ್ಧವಾಗಿದ್ದಾರೆ. ಮನರಂಜನೆ ತುಂಬಿರುವ ಕಾಲೇಜು ದಿನಗಳ ಕಥೆ ಚಿತ್ರದಲ್ಲಿದೆ. ಟೀಸರ್‌ನಲ್ಲಿ ಮನಗೆದ್ದಿದ್ದ ಬ್ಯಾಕ್ ಬೆಂಚರ್ಸ್ ಹಾಡಿನ ಮೂಲಕವೂ ಗಮನಸೆಳೆಯುತ್ತಿದೆ. ಯೆಲ್ಲೋ ಯೆಲ್ಲೋ... ಎಂಬ ಹಾಡು ಇದಾಗಿದ್ದು, ನಕುಲ್ ಅಭಯಂಕರ್ ಸಂಗೀತ ಸಂಯೋಜಿಸುವ ಜತೆಗೆ ಹಾಡಿಗೂ ದನಿಯಾಗಿದ್ದಾರೆ. ರಂಜನ್, ಜತಿನ್ ಆರ್ಯನ್, ಆಕಾಶ್ ಎಂ.ಪಿ, ಶಶಾಂಕ್ ಸಿಂಹ, ಸುಚೇಂದ್ರ ಪ್ರಸಾದ್, ಅರವಿಂದ್ ಕುಪ್ಳೀಕರ್, ಮಾನ್ಯ ಗೌಡ, ಕುಂಕುಮ್ ಹೆಚ್, ಅನುಷಾ ಸುರೇಶ್, ವಿಯೋಮಿ ವನಿತಾ, ಮನೋಜ್ ಶೆಟ್ಟಿ, ನಮಿತಾ ಗೌಡ, ವಿಕಾಸ್, ರನ್ನ, ವಿಜಯ್ ಪ್ರಸಾದ್, ಚತುರ್ಥಿ ರಾಜ್, ಗೌರವ್ ತಾರಾಬಳಗದಲ್ಲಿದ್ದಾರೆ. ಮನೋಹರ್ ಜೋಶಿ ಛಾಯಾಗ್ರಹಣ, ರಂಜನ್ ಮತ್ತು ಅಮರ್ ಗೌಡ ಸಂಕಲನ ಈ ಚಿತ್ರಕ್ಕಿದೆ. ಈ ತಿಂಗಳ ಅಂತ್ಯದಲ್ಲಿ ಚಿತ್ರ ತೆರೆಗೆ ಬರಲಿದೆ. ಪಿಪಿ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ರಮ್ಯಾ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

> ಚಿತ್ರದಲ್ಲಿ ಮನರಂಜನೆಯೇ ಪ್ರಮುಖವಾಗಿದ್ದು, ಕಾಲೇಜು ಹುಡುಗರ ತರ್ಲೆ, ತುಂಟಾಟಗಳು ಚಿತ್ರದಲ್ಲಿವೆ. ಸಿನಿಮಾ ನೋಡುತ್ತಿದ್ದರೆ ನಮ್ಮ ಕಾಲೇಜು ದಿನಗಳು ಕಣ್ಣಮುಂದೆ ಹಾದು ಹೋಗುತ್ತವೆ. ಬಹುತೇಕ ಹೊಸಬರ ತಂಡವೇ ಚಿತ್ರದಲ್ಲಿದೆ. ಈ ತಿಂಗಳಲ್ಲಿ ಬ್ಯಾಕ್ ಬೆಂಚರ್ಸ್ ತೆರೆಯಲ್ಲಿ ಸದ್ದು ಮಾಡಲಿದ್ದಾರೆ.
>
> -ಬಿ.ಆರ್.ರಾಜಶೇಖರ್ ನಿರ್ದೇಶಕ

ಕಾಗದದೊಳಗೊಂದು ಪ್ರೇಮಕಥೆ

ಸ್ಯಾಂಡಲ್‌ವುಡ್‌ನಲ್ಲಿ ವಿಭಿನ್ನ ಪ್ರೇಮಕಥೆಯ ಚಿತ್ರವೊಂದು ತೆರೆಗೆ ಬರಲು ಸಿದ್ಧವಾಗಿದೆ. ಕಾಗದ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು ಸದ್ಯ ಟೀಸರ್ ರಿಲೀಸ್ ಆಗಿದೆ. ಕಾಗದ ಮೊಬೈಲ್ ಪೂರ್ವದ ಕಥೆಯನ್ನು ಒಳಗೊಂಡಿದ್ದು, ಪ್ರೇಕ್ಷಕರನ್ನು ತೊಂಬತ್ತರ ದಶಕಕ್ಕೆ ಕರೆದೊಯ್ಯಲಿದೆ. ಶಾಲಾ ಕಾಲೇಜು ದಿನಗಳಲ್ಲಿ ಅರಿಯದೇ ಮೂಡುವ ಪ್ರೀತಿ, ಹಳ್ಳಿಹಳ್ಳಿಗಳ ನಡುವಿನ ವೈಷಮ್ಯದ ನಡುವೆಯೂ ಅರಳಿದ ಪ್ರೇಮ, ಅದನ್ನು ಉಳಿಸಿಕೊಳ್ಳಲು ಪರದಾಡುವ ಪರಿ ಇದೆಲ್ಲವೂ ಚಿತ್ರದಲ್ಲಿವೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಕಥೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ. ರಂಜಿತ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದು, ಅರುಣ್ ಕುಮಾರ್ ಆಂಜನೇಯ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಆದಿತ್ಯ ನಾಯಕನಾಗಿ ನಟಿಸಿದ್ದು, ಈ ಚಿತ್ರದ ಮೂಲಕ ಚಿತ್ರರಂಗಕ್ಕೆ ಪರಿಚಿತರಾಗುತ್ತಿದ್ದಾರೆ. ಅಂಕಿತಾ ಜಯರಾಮ್ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ನೇಹಾ ಪಾಟೀಲ್ ವಿಶೇಷಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಬಲರಾಜವಾಡಿ, ನೀನಾಸಂ ಅಶ್ವಥ್, ಮಠ ಕೊಪ್ಪಳ, ಶಿವಮಂಜು ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಪ್ರದೀಪ್ ವರ್ಮ ಸಂಗೀತ ಸಂಯೋಜಿಸಿದ್ದಾರೆ. ವೀನಸ್ ನಾಗರಾಜ್ ಮೂರ್ತಿ ಛಾಯಾಗ್ರಹಣ ಹಾಗೂ ಪವನ್ ಗೌಡ ಸಂಕಲನ ಕಾಗದ ಚಿತ್ರಕ್ಕಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿರುವ ಚಿತ್ರತಂಡ ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರಲು ಪ್ಲಾನ್ ಹಾಕಿಕೊಂಡಿದೆ.

ಮೈದಾನಕ್ಕಿಳಿಯಲು ಸಿದ್ಧವಾದ ಅಜಯ್

ಬಾಲಿವುಡ್ ನಟ ಅಜಯ್ ದೇವಗನ್ ಕಥೆಯ ಆಯ್ಕೆಯತ್ತ ಹೆಚ್ಚು ಗಮನಹರಿಸುತ್ತಿದ್ದಾರೆ. ಒಳ್ಳೆಯ ಸ್ಟೋರಿ ಕೇಳಿ ಮನಸಿಗೆ ಒಪ್ಪಿಗೆಯಾದರೆ ನಟಿಸಲು ಸಮ್ಮತಿಸುತ್ತಾರೆ. ಅದಕ್ಕಾಗಿಯೇ ಅಜಯ್ ನಟಿಸಿದ ಬಹುತೇಕ ಸಿನಿಮಾಗಳು ಯಶಸ್ಸು ಕಂಡಿದ್ದು, ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಂಡಿವೆ. ಕೆಲವು ದಿನಗಳ ಹಿಂದೆ ತೆರೆಗೆ ಬಂದ ಮೈದಾನ್ ಭರ್ಜರಿ ಯಶಸ್ಸು ಕಂಡಿತು. ಈ ಖುಷಿಯಲ್ಲಿರುವ ಅಜಯ್ ಈಗ ಮತ್ತೆ ಕ್ರೀಡಾ ಸ್ಫೂರ್ತಿ ಸಾರುವ ಬಯೋಪಿಕ್‌ನಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ಹೌದು, ಕ್ರಿಕೆಟರ್ ಪಾಲ್ವಂಕರ್ ಬಾಲೂ ಅವರ ಬಯೋಪಿಕ್ ಆಧರಿಸಿ ಚಿತ್ರ ಸಿದ್ಧವಾಗುತ್ತಿದೆ. ದಲಿತ ಸಮುದಾಯಕ್ಕೆ ಸೇರಿದ್ದ ಪಾಲ್ವಂಕರ್ ಬಾಲೂ ಆ ಸಮುದಾಯದಲ್ಲಿಯೇ ಕ್ರಿಕೆಟರ್ ಆಗಿ ಗುರುತಿಸಿಕೊಂಡ ಮೊದಲಿಗರು. ಹಾಗಂತ ಅವರು ಕ್ರಿಕೆಟ್ ಮೈದಾನಕ್ಕೆ



ಇಳಿಯುವುದು ಅಷ್ಟು ಸುಲಭದ್ದಾಗಿರಲಿಲ್ಲ. ಮೊದಲು ಪುಣೆ ಕ್ರಿಕೆಟ್ ಮೈದಾನದಲ್ಲಿ ಗ್ರೌಂಡ್ ಕೀಪರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಬಾಲೂ, ಕ್ರಿಕೆಟ್ ಬಗ್ಗೆ ಆಸಕ್ತಿ ತಳೆದು, ಕ್ರಿಕೆಟ್ ಕಲಿತರು. ಈ ನಡುವೆ ಎದುರಾದ ಸಮಸ್ಯೆಗಳನ್ನು ಮೆಟ್ಟಿ ನಿಂತು ಕ್ರಿಕೆಟ್ ಆಟಗಾರರಾದರು, ಇವರ ಯಶೋಗಾಥೆಯನ್ನು ಆಧರಿಸಿ ರಾಮಚಂದ್ರ ಗುಹಾ ಎ ಕಾರ್ನರ್ ಆಫ್ ಎ ಫಾರೆನ್ ಫೀಲ್ಡ್ ಪುಸ್ತಕ ಬರೆದಿದ್ದರು. ಇದೇ ಪುಸ್ತಕ ಆಧರಿಸಿ ಚಿತ್ರ ಸೆಟ್ಟೇರಲಿದೆ. ತಿಗ್ಮಂಶು ದುಲಿಯಾ ನಿರ್ದೇಶನ ಮಾಡುತ್ತಿರುವ ಈ ಚಿತ್ರವನ್ನು ಪ್ರೀತಿ ಸಿನ್ಹಾ ನಿರ್ಮಾಣ ಮಾಡುತ್ತಿದ್ದಾರೆ. ಈ ವರ್ಷಾಂತ್ಯಕ್ಕೆ ಚಿತ್ರದ ಮುಹೂರ್ತ ನೆರವೇರಲಿದ್ದು, ಮುಂದಿನ ವರ್ಷ ತೆರೆಗೆ ಬರಲಿದೆ.

ದಿನ ದರ್ಶಿಕೆ

ವೈಶಾಖ ಮಾಸ, ನಕ್ಷತ್ರ ಉ.ಭಾದ್ರ, ಕೃಷ್ಣಪಕ್ಷ, ನವಮಿ, ಯೋಗ ಪ್ರೀತಿ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ವಸಂತ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಆಹಾರ ಸೇವಿಸಿದ ನಂತರ ಉಗುರು ಬೆಚ್ಚನೆಯ ನೀರಿನಲ್ಲಿ ಅರ್ಧ ಚಮಚ ಅಜ್ವೈನ್ ತೆಗೆದುಕೊಂಡು ಅದಕ್ಕೆ ಚಿಟಿಕೆ ಸೈಂಧವ ಲವಣ ಹಾಗೂ ಚಿಟಿಕೆ ಇಂಗನ್ನು ಬೆರೆಸಿ ಸೇವಿಸಿದರೆ ಹೊಟ್ಟೆನೋವು, ಹೊಟ್ಟೆ ಉಬ್ಬರ, ಗ್ಯಾಸ್, ಅಧಿಕ ಬಿಪಿ ಸಮಸ್ಯೆ ನಿವಾರಣೆಯಾಗುವುದಲ್ಲದೆ, ಹೊಟ್ಟೆನೋವು ಶಮನವಾಗುತ್ತದೆ.

ಸೌಂದರ್ಯ ಸೂತ್ರ

ಕೂದಲಿಗೆ ಮಜ್ಜಿಗೆಯನ್ನು ಹಚ್ಚಿ, ಬೆರಳುಗಳಿಂದ ನಿಧಾನವಾಗಿ ಮಸಾಜ್ ಮಾಡಿ. ನಂತರ 10 ರಿಂದ 15 ನಿಮಿಷಗಳ ಕಾಲ ಹಾಗೆ ಬಿಟ್ಟು, ಉಗುರು ಬೆಚ್ಚಗಿನ ನೀರಿನಿಂದ ಕೂದಲನ್ನು ಚೆನ್ನಾಗಿ ತೊಳೆಯಿರಿ. ಹೀಗೆ ಮಾಡುವುದರಿಂದ ಕೂದಲು ಸದೃಢವಾಗಿ, ನೀಳವಾಗಿ ಬೆಳೆಯುವುದು. ತಲೆಹೊಟ್ಟು ಕಡಿಮೆಯಾಗುವುದು.

ದಿನ ಭವಿಷ್ಯ

ಮೇಷ ವ್ಯಾಪಾರದ ಪಾಲುದಾರರು ನಿಮ್ಮ ಹೊಸ ಯೋಜನೆ ಬಗ್ಗೆ ಉತ್ಸಾಹ ತೋರಿಸುತ್ತಾರೆ. ಪ್ರೇಮಿಯ ಜತೆ ಕಾಲ ಕಳೆಯುತ್ತೀರಿ.

ವೃಷಭ ವಿವಾಹಿತರಾಗಿದ್ದರೆ ಮಕ್ಕಳ ಆರೋಗ್ಯದಲ್ಲಿ ಏರುಪೇರು ಆಗಲಿದೆ. ಕೆಲಸದ ಮೇಲೆ ಗಮನ ಹರಿಸಿ, ವ್ಯಾಜ್ಯಗಳಿಂದ ದೂರವಿರಿ.

ಮಿಥುನ ಆರೋಗ್ಯ ದೃಷ್ಟಿಯಿಂದ ಉತ್ತಮ ದಿನವ್ಯಾಜ್ಯಗಳನ್ನು ಸೌಹಾರ್ದತೆಯಿಂದ ಪರಿಹರಿಸಲು ಪ್ರಯತ್ನಿಸಿ. ಮಕ್ಕಳಿಂದ ಸಂತೋಷದ ಸುದ್ದಿ.

ಕಟಕ ವೈಯಕ್ತಿಕ ಜೀವನದ ಜತೆಗೆ ಧರ್ಮಾರ್ಥ ಕಾರ್ಯಗಳಲ್ಲೂ ತೊಡಗಿಸಿಕೊಳ್ಳಿ. ಹೆಚ್ಚಿನ ಸಾಧನೆ ಮತ್ತು ಉನ್ನತ ಅಧಿಕಾರ ಪಡೆಯುತ್ತೀರಿ.

ಸಿಂಹ ಐಟಿ ವೃತ್ತಿಪರರಿಗೆ ತಮ್ಮ ಯೋಗ್ಯತೆ ಸಾಬೀತುಪಡಿಸಲು ಅವಕಾಶ ಇದೆ. ಈಶ್ವರನ ಪೂಜೆಯಿಂದ ಕುಟುಂಬ ಜೀವನ ಸಂತೋಷವಾಗಿರುತ್ತದೆ.

ಕನ್ಯಾ ಹಳೆಯ ಸ್ನೇಹಿತ ಹಣವನ್ನು ಕೇಳಬಹು ದು. ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ತೊಂದರೆಗೊಳಗಾಗಬಹುದು

ತುಲಾ ಒತ್ತಡ ಅನಾರೋಗ್ಯಕ್ಕೆ ಕಾರಣವಾಗಬಹುದು. ಹೊಸ ಕುಟುಂಬದ ಸದಸ್ಯರ ಆಗಮನದ ಸುದ್ದಿ ಕೇಳಲಿದ್ದೀರಿ. ಪತಿಪತ್ನಿಯರ ಕಲಹ.

ವೃಶ್ಚಿಕ ಕ್ರೀಡೆ-ಹೊರಾಂಗಣ ಚಟುವಟಿಕೆ ನಿಮ್ಮ ಚೈತನ್ಯ ಹೆಚ್ಚಿಸುತ್ತದೆ. ಸ್ನೇಹಿತರ ಸಹಾಯ. ಪ್ರೇಮಿಯ ಭೇಟಿ.

ಧನು ಅನುಮಾನದ ಸ್ವಭಾವ, ಸೋಲಿಗೆ ಕಾರಣವಾಗಬಹುದು. ಹಣದ ಗಳಿಕೆ ಚೆನ್ನಾಗಿದೆ. ಕುಟುಂಬದ ಸದಸ್ಯರೊಂದಿಗೆ ಕಾಲ ಕಳೆಯುತ್ತೀರಿ.

ಮಕರ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡುವರಿಗೆ ಇಂದು ನಷ್ಟದ ಸಾಧ್ಯತೆ. ವೈಯಕ್ತಿಕ ಮತ್ತು ಗೌಪ್ಯ ವಿಚಾರವನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.

ಕುಂಭ ಸಂತನಿಂದ ಅಧ್ಯಾತ್ಮಿಕ ಜ್ಞಾನ ಮತ್ತು ಸಾಂತ್ವನ ಸಿಗುವ ಸಾಧ್ಯತೆ. ಹಣದ ಪರಿಸ್ಥಿತಿಯಲ್ಲಿ ಸುಧಾರಣೆ.

ಮೀನ ನೀವು ಉಳಿಸಿರುವ ಹಣ, ದೊಡ್ಡ ಸಮಸ್ಯೆಯಿಂದ ಪಾರು ಮಾಡುತ್ತದೆ. ಪತ್ನಿಯ ಸಾಧನೆಯ ಶ್ಲಾಘನೆ ಉಪನ್ಯಾಸ-ವಿಚಾರಗೋಷ್ಠಿ ಹೆಚ್ಚಿಸಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1970 – ನಟ, ಬರಹಗಾರ, ಚಲನಚಿತ್ರ ನಿರ್ಮಾಪಕ ಆರ್. ಮಾಧವನ್ ಜನನ
- 1929 – ಬಾಲಿವುಡ್‌ನ ಖ್ಯಾತ ನಟಿ ನರ್ಗೀಸ್ ದತ್ ಜನನ
- 2008 – ಅಂತಾರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ಸಮಾವೇಶವನ್ನು ನವದೆಹಲಿಯಲ್ಲಿ ನಡೆಸಲಾಯಿತು.
- ವಿಶ್ವ ಹಾಲು ದಿನ

ಚಿತ್ರಸ್ಫೂರ್ತಿ

ಎತ್ತರದ ಹಾದಿಗಳ ಭೂಮಿ ಎಂದು ಕರೆಯಲ್ಪಡುವ ಲಡಾಕ್, ಶ್ರೀಮಂತ ಸಮೃದ್ಧ ಸೌಂದರ್ಯ, ಐತಿಹಾಸಿಕ ಗಾಂಭೀರ್ಯ, ಹಳ್ಳಿಗಾಡಿನ ಸಂಸ್ಕೃತಿ ಮತ್ತು ಆಳವಾದ ಅಧ್ಯಾತ್ಮಿಕ ಸಾರದ ಪ್ರತೀಕ. ವಿಶ್ವದಲ್ಲೇ ಅತಿ ಎತ್ತರದ ಮೋಟಾರು ರೋಡ್‌ಗಳನ್ನು ಹೊಂದಿರುವ ಹೆಗ್ಗಳಿಕೆ ಇದರದ್ದು. ಲಡಾಕ್‌ನ್ನು ಜೋಡಿಸುವ ಎತ್ತರದ ಪ್ರದೇಶಗಳಿಗೆ ಹಾದು ಹೋಗುವ ರಸ್ತೆಗಳು ಸಾಮಾನ್ಯವಾಗಿ ನವೆಂಬರ್‌ನಿಂದ ಮಾರ್ಚ್‌ವರೆಗೆ ಮುಚ್ಚಿರುತ್ತದೆ. ಹಾಗಿದ್ದರೂ ಉಳಿದ ಸಮಯದಲ್ಲಿ ತನ್ನ ಬೆರಗುಗೊಳಿಸುವ ಕಣಿವೆಗಳು, ಅದ್ಭುತವಾದ ಬೆಟ್ಟಗಳು ಹಾಗೂ ತನ್ನ ನೈಸರ್ಗಿಕ ಸೌಂದರ್ಯದಿಂದ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಪಕ್ಷಿಯನ್ನು ಮುಗಿಲಿಗೆ ಹಾರಿಸಿದ ರೈತನ ಜಾಣ್ಮೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಬ್ಬ ರಾಜನಿಗೆ ಪರದೇಶದಲ್ಲಿದ್ದ ಅವನ ಸ್ನೇಹಿತನೊಬ್ಬ ಅತ್ಯಂತ ಸುಂದರವಾದ ಎರಡು ಗರುಡ ಪಕ್ಷಿಗಳನ್ನು ಕಾಣಿಕೆಯಾಗಿ ಕಳುಹಿಸಿದ. ಅವುಗಳಷ್ಟು ಸುಂದರವಾದ ಪಕ್ಷಿಗಳನ್ನು ರಾಜ ನೋಡಿರಲೇ ಇಲ್ಲ. ಅವುಗಳಿಗೆ ಚೆನ್ನಾಗಿ ತರಬೇತಿ ದೊರಕಲೆಂದು ತಮ್ಮ ರಾಜ್ಯದಲ್ಲಿದ್ದ ಶ್ರೇಷ್ಠ ಪಕ್ಷಿ ತರಬೇತಿದಾರನಿಗೆ ಅವನ್ನು ಒಪ್ಪಿಸಿದ. ಪ್ರತಿದಿನ ಅವುಗಳ ವಿವರ ತನಗೆ ದೊರಕುವಂತೆ ಆಜ್ಞೆ ನೀಡಿದ.

ತರಬೇತಿದಾರ ತನ್ನ ತರಬೇತಿಯನ್ನು ಪ್ರಾರಂಭಿಸಿದ. ವಾರ ಕಳೆಯಿತು, ತಿಂಗಳು ಕಳೆಯಿತು, ತರಬೇತಿದಾರ ದಿನವೂ ವರದಿ ಒಪ್ಪಿಸುತ್ತಿದ್ದ. ಒಂದು ಗರುಡಪಕ್ಷಿ ಗಂಭೀರವಾಗಿ, ರಾಜಯೋಗ್ಯವಾದ ಶೈಲಿಯಿಂದ ಹಾರುತ್ತ ಇಡೀ ಆಕಾಶವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ಅದು ರೆಕ್ಕೆಯನ್ನು ಬಿಚ್ಚಿ ಆಕಾಶದಲ್ಲಿ ಹಾರಾಡಿದ್ದನ್ನು ನೋಡಿದ ಯಾರಿಗಾದರೂ ಪ್ರೀತಿ, ಅಭಿಮಾನ ಉಕ್ಕಿ ಬರುತ್ತಿತ್ತು. ಆದರೆ ಎರಡನೆಯ ಪಕ್ಷಿಯ ಬಗ್ಗೆ ವರದಿ ನಿರಾಶಾದಾಯಕವಾಗಿತ್ತು.

ಅದು ಹಾರಲು ಪ್ರಯತ್ನಿಸಲೇ ಇಲ್ಲ. ಏನೆಷ್ಟು ಪುಸಲಾಯಿಸಿದರೂ, ಆಸೆ ತೋರಿದರೂ, ಹೆದರಿಸಿದರೂ, ಅದು ತಾನು ಕುಳಿತ ಮರದ ಕೊಂಬೆಯನ್ನು ಬಿಟ್ಟು ಸರಿಯುತ್ತಲೇ ಇಲ್ಲ. ರಾಜ ತನ್ನ ಅರಮನೆಯ ಕಿಟಕಿಯಿಂದ ಅದನ್ನು ಗಮನಿಸುತ್ತಲೇ ಇದ್ದ. ಅವನಿಗೆ ಈ ಗರುಡ ಪಕ್ಷಿಯ ಬಗ್ಗೆ ಚಿಂತೆಯಾಗಿ ಮತ್ತೊಬ್ಬ ತರಬೇತಿದಾರನನ್ನು ನಿಯಮಿಸಿದ. ಆದರೆ ಪರಿಣಾಮ ಒಂದೇ - ಗರುಡ ಪಕ್ಷಿ ಕೊಂಬೆಯನ್ನು ಬಿಟ್ಟು ಹಾರಲೇ ಇಲ್ಲ. ಚಿಂತಿಸಿದ ರಾಜ ತನಗೆ ಇದನ್ನು ಕಾಣಿಕೆಯಾಗಿ ಕೊಟ್ಟ ಸ್ನೇಹಿತನನ್ನು ಸಂಪರ್ಕಿಸಿ ಆ ದೇಶದ ವಿಶೇಷ ತರಬೇತಿದಾರನನ್ನು ಕರೆಸಿದ. ಅವನು ಏನೇನೋ ಪ್ರಯೋಗಗಳನ್ನು ಮಾಡಿದರು ಪಕ್ಷಿ ಹಾರಲು ಮನಸ್ಸು ಮಾಡಲಿಲ್ಲ. ಆಗ ರಾಜ ಮತ್ತೊಂದು ವಿಚಾರ ಮಾಡಿದ. ತನ್ನ ದೇಶದ ಹಳ್ಳಿಗಳಲ್ಲಿ ಕೆಲವು ರೈತರು ಗರುಡ ಪಕ್ಷಿಗಳನ್ನು ಸಾಕುವುದು ತಿಳಿದಿತ್ತು. ಮಂತ್ರಿಗಳಿಗೆ ಆದೇಶ ನೀಡಿದ, ಅಂಥ ಒಬ್ಬ ಹಿರಿಯ ರೈತನನ್ನು ಕರೆತನ್ನಿ.

ಮರುದಿನವೇ ರೈತನೊಬ್ಬ ಹಾಜರಾದ. ಅವನಿಗೆ ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ತಿಳಿಸಿದ ರಾಜ, ಹೇಗಾದರೂ ಮಾಡಿ ಈ ಸುಂದರವಾದ ಗರುಡಪಕ್ಷಿ ಹಾರಲು ಅನುವು ಮಾಡುವಂತೆ ಕೋರಿದ. ಈಗಾಗಲೇ ಪ್ರಯತ್ನಿಸಿ ಸೋತ ದೇಶ-ವಿದೇಶಗಳ ತರಬೇತಿದಾರರು ಮುಸಿಮುಸಿ ನಕ್ಕರು. ತಮ್ಮಂತಹ ಪರಿಣಿತರಿಗೇ ಸಾಧ್ಯವಾಗದ್ದು ಈ ರೈತನಿಂದ ಹೇಗಾದೀತು ಎಂದು ಕೈ ತಟ್ಟಿ ನಕ್ಕರು. ಅದನ್ನು ನೋಡಿದ ರೈತ ತಲೆ ಕೆಡಿಸಿಕೊಳ್ಳಲಿಲ್ಲ.

ಮರುದಿನ ಕಿಟಕಿಯ ಹತ್ತಿರ ನಿಂತ ರಾಜನಿಗೆ ಆಶ್ಚರ್ಯ ಕಾದಿತ್ತು. ಮೊದಲನೆಯ ಗರುಡ ಆಕಾಶಕ್ಕೆ ಹಾರಿದ ಎರಡು ಕ್ಷಣಗಳಲ್ಲಿ ಎರಡನೆಯ ಹಾರಲೊಲ್ಲದ ಗರುಡ ಕೂಡ ಆಕಾಶಕ್ಕೆ ನೆಗೆದಿತ್ತು. ತನ್ನ ವಿಶಾಲವಾದ ರೆಕ್ಕೆಗಳನ್ನು ಹರಡಿಕೊಂಡು ನಿಜವಾದ ಬಾನಿನ ರಾಜನಂತೆ ಮೈದುಂಬಿ ಹಾರುತಿತ್ತು. ರಾಜ ಸಂತೋಷದಿಂದ ಕೂಗಿದ. ಈ ಪವಾಡ ಮಾಡಿದ ರೈತನನ್ನು ತಕ್ಷಣ ಕರೆತನ್ನಿ ರೈತ ಬಂದು ಕೈಜೋಡಿಸಿ ನಿಂತುಕೊಂಡ. ರಾಜ, 'ಈ ಅಸಾಧ್ಯವಾದ ಪವಾಡವನ್ನು ನೀನು ಹೇಗೆ ಮಾಡಿದೆ, ಅದು ಒಂದೇ ಕ್ಷಣದಲ್ಲಿ?' ಎಂದು ಕೇಳಿದ. ರೈತ ನಿಧಾನವಾಗಿ ಹೇಳಿದ, 'ನಾನು ಏನೂ ಮಾಡಲಿಲ್ಲ ಪ್ರಭೂ, ಗರುಡ ಕುಳಿತಿದ್ದ ಮರದ ಕೊಂಬೆಯನ್ನು ಕತ್ತರಿಸಿ ಬಿಟ್ಟೆ' ಎಂದ.

ನಾವು ಕೂಡ ನಮ್ಮ ಮಕ್ಕಳು ಆಕಾಶದೆತ್ತರಕ್ಕೆ ಹಾರಬೇಕು ಬಂದ ಅವಕಾಶಗಳನ್ನೆಲ್ಲ ತಮ್ಮದಾಗಿಸಿಕೊಂಡು ಬದುಕಿನಲ್ಲಿ ಯಶಸ್ಸು ಗಳಿಸಬೇಕು ಎಂದು ಹಾರೈಸುತ್ತೇವೆ. ಆದರೆ ಆಲದ ಮರದ ನೆರಳಿನಲ್ಲಿ ಏನೂ ಬೆಳೆಯುವುದಿಲ್ಲ ಎನ್ನುವ ಹಾಗೆ, ನಮ್ಮ ಅತಿಯಾದ ಕಾಳಜಿಗೆ ಅವರಿಗೆ ಅವರ ಸಾಮರ್ಥ್ಯಕ್ಕೆ ಮುಳುವಾಗುತ್ತದೆ. ಅವರನ್ನು ಸ್ವತಂತ್ರವಾಗಿ ನಿರ್ಧಾರ ಮಾಡಲು ತಪ್ಪುಗಳನ್ನು ಮಾಡಿ ತಿದ್ದಿಕೊಳ್ಳಲು ಅವಕಾಶ ಕೊಟ್ಟಾಗ ಖಂಡಿತ ಸ್ವಸಾಮರ್ಥ್ಯದ ಮೇಲೆ ಎತ್ತರಕ್ಕೆ ಹಾರಲು ಅವರು ಕಲಿಯುತ್ತಾರೆ. ಅತಿಯಾದ ಅನುಕೂಲಗಳು ಎಂದಿಗೂ ಹೋರಾಟದ ಮನಸ್ಥಿತಿಯನ್ನು ಜಾಗೃತಗೊಳಿಸುವುದಿಲ್ಲ. ಏನನ್ನಾದರೂ ಮಾಡುವ ಸಾಧಿಸುವ ಹಸಿವು ಮಕ್ಕಳಿಗಿರಬೇಕು.

ಪದಬಂಧ

1	■	2	■	■	■	3	■	4
5				■	6			
	■		■	■	■		■	
■	7		8	■	9		10	■
11		■	12			■	13	
■	14	15		■	16	17		■
18	■		■	■	■		■	19
20				■	21			
	■		■	■	■		■	

ಎಡದಿಂದ ಬಲಕ್ಕೆ:
5. ಕೆಲಸದಲ್ಲಿ ನೆರವು ನೀಡುವಾತ (4)
6. ಅವನು ವ್ಯಕ್ತಪಡಿಸಿದ ಸಂಶಯ (4)
7. ಆಗಮವಲ್ಲ, ಹುಟ್ಟು (3)
9. ಪ್ರತಿ ಹಂತದ ಏಳಿಗೆ (3)
11. ಮತ್ತೊಬ್ಬ ಸೇವಕಿ (2)
12. ವೇಳೆಯನ್ನು ಉತ್ತಮವಾಗಿ ಕಳೆಯಲು ನೆರವಾಗುವ ಚಟ (3)
13. ನಾಲಗೆ ತಿಳಿಸುವ ಸ್ವಾದ (2)
14. ಮಾಲು ಸಮೇತ ಬಂದಿರುವ ಮುಂಡಾಸು (3)
16. ವ್ಯಾಪಾರಿಗೆ ಇನ್ನೊಂದು ಹೆಸರು (3)
20. ಬೇರೆಡೆ ಗುಳೆ ಹೋದವನು (4)
21. ತಾವರೆಯ ಮತ್ತೊಂದು ಹೆಸರು (4)

ಮೇಲಿನಿಂದ ಕೆಳಕ್ಕೆ:
1. ವಾಸ ಮಾಡುವನೇ ಇಂದ್ರ (3)
2. ಪ್ರಯಾಣಿಕನಿಗೆ ಮತ್ತೊಂದು ಹೆಸರು (4)
3. ಅವನು ತೋರಿದ ಪ್ರೀತಿ (4)
4. ವನದ ಬಳಿಯೇ ಕಾಣಿಸಿದೆ ಸಮುದ್ರ (3)
7. ಉರುಳಾಗದಿರಲಿ ಶ್ವಾಸ (3)
8. ದೊಡ್ಡದಾದ ಕಟ್ಟಡ (3)
9. ಪ್ರಯಾಸದಿಂದ ಆಯಿತೇ ಹೆರಿಗೆ (3)
10. ತಿರುಗುತ್ತಿರುವ ಭಿಕ್ಷುಕ (3)
15. ಇದು ಚಿತ್ತಕ್ಕೆ ಸಂಬಂಧಿಸಿದ್ದು (4)
17. ತಲೆಕೆಳಗಾಗಿ ಬಂದಿದೆ ಶ್ರೇಷ್ಠವಾದ ಗಿಳಿ (4)
18. ನೀರಿನ ಸುಳಿ (3)
19. ಸರದ ಮಧ್ಯೆ ಸಿಲುಕಿದೆ ಸಲುಗೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಅಧಮ 6. ಮತಂಗ 7. ನವೀನ 9. ಮಸಣ 11. ಪಾಕಡ 14. ಸಾರ್ಥಕ 16. ಮನೋಜ 17. ರಜನಿ

ಮೇಲಿನಿಂದ ಕೆಳಕ್ಕೆ: 1. ವಿದ್ಯಮಾನ 2. ಅನುಮಾನ 3. ಮರಿಮಗ 4. ವಿಹಂಗಮ 5. ಕಡಿವಾಣ 8. ವೀಕ್ಷಕ 10. ಸಮರ್ಥ 11. ಪಾದರಸ 12. ಡಮರುಗ 13. ಅಜಗರ 14. ಸಾಗವಾನಿ 15. ಕಮಂಡಲ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಕೊಲೊರಾಡೋ ನದಿ

ನೈಋತ್ಯ ಯುನೈಟೆಡ್ ಸ್ಟೇಟ್ಸ್ ಮತ್ತು ಉತ್ತರ ಮೆಕ್ಸಿಕೋದಲ್ಲಿ ಹರಿಯುವ ಪ್ರಮುಖ ನದಿಗಳಲ್ಲಿ ಕೊಲೊರಾಡೋ ಕೂಡ ಒಂದಾಗಿದೆ. ರಾಕಿ ಮೌಂಟೇನ್ ನಲ್ಲಿ ಉದ್ಭವಿಸುವ 1,450-ಮೈಲಿ-ಉದ್ದವಾಗಿ ಹರಿಯುವ ಈ ನದಿಯು, 4.4 ಮಿಲಿಯನ್ ಎಕರೆ ವಿಸ್ತಾರವಾದ ಪ್ರದೇಶಕ್ಕೆ ನೀರುಣಿಸುತ್ತಿದೆ. ಇದು ಯುಎಸ್‌ನ 7 ರಾಜ್ಯಗಳು ಮತ್ತು ಎರಡು ಮೆಕ್ಸಿಕನ್ ರಾಜ್ಯಗಳ ಭಾಗಗಳಲ್ಲಿ ಹರಿಯುತ್ತದೆ. ಪ್ರಸ್ತುತ, ಯು ಎಸ್ ನ 7 ರಾಜ್ಯಗಳು ಕೊಲೊರಾಡೋ ನದಿಯನ್ನು ಸಂರಕ್ಷಿಸುವ ಕುರಿತು ಒಮ್ಮತಕ್ಕೆ ಬಂದಿವೆ. ನಿರಂತರವಾಗಿ ಬರಗಾಲವನ್ನು ಅನುಭವಿಸುವ ಪ್ರದೇಶದಲ್ಲಿ ಇದು ಪ್ರಮುಖ ಪ್ರಗತಿಯಾಗಿದೆ. ಅಮೆರಿಕೆಯ ಅಧ್ಯಕ್ಷ ಜೋ ಬೈಡನ್‌ರ 'ಇನ್ವೆಸ್ಟಿಂಗ್ ಇನ್ ಅಮೇರಿಕಾ ಅಜೆಂಡಾ'ದಿಂದ ಧನಸಹಾಯವು ಸ್ವಯಂಪ್ರೇರಿತ ಬದ್ಧತೆಗಳೊಂದಿಗೆ ಸೇರಿ 2026 ರ ವೇಳೆಗೆ 3 ಮಿಲಿಯನ್ ಎಕರೆ ಅಡಿಗಳಷ್ಟು ನೀರನ್ನು ಸಂರಕ್ಷಿಸುತ್ತದೆ.

ಪುಸ್ತಕ ಲೋಕ

ಪ್ರಾಚೀನ ಭಾರತ

ಪ್ರಾಚೀನ ಭಾರತ ಆರ್ ಎಸ್ ಶರ್ಮ ಅವರು ಬರೆದ ಪುಸ್ತಕ. ಇದನ್ನು ಕನ್ನಡಕ್ಕೆ ಅನುವಾದಿಸಿದವರು, ಎನ್ ಪಿ ಶಂಕರನಾರಾಯಣ ರಾವ್. ಇತಿಹಾಸವೆಂದರೆ ರಾಜರ ಆಳ್ವಿಕೆಯಲ್ಲ. ಯುದ್ಧವಲ್ಲ. ಇತಿಹಾಸವೆಂದರೆ ಆ ಕಾಲದ ಜನಜೀವನ. ಅವರ ಆರ್ಥಿಕ ಸ್ಥಿತಿಗತಿಗಳು. ವಿದೇಶಗಳೊಂದಿಗಿನ ಸಂಬಂಧ, ಬಂದು-ಹೋದ ಅತಿಥಿ ಗಣ್ಯರು, ಸಮಾಜ ಸುಧಾರಣೆಗೆ ನಡೆದ ಚಳವಳಿಗಳು. ಇವೆಲ್ಲವುಗಳ ಬೆಸುಗೆ ಇತಿಹಾಸ ಎನ್ನುವುದನ್ನು ಈ ಕೃತಿ ತಿಳಿಸುತ್ತದೆ. ಉತ್ತಮ ಅನುವಾದಕ್ಕಾಗಿ ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1998) ಹಾಗೂ ಭಾರತೀಯ ಪ್ರಕಾಶಕರ ಒಕ್ಕೂಟದ ಅತ್ಯುತ್ತಮ ಮುದ್ರಣ ವಿನ್ಯಾಸ ಪ್ರಶಸ್ತಿ' (1998) ಲಭಿಸಿದೆ.

ಟ್ವೀಟ್‌ಮೆಂಟ್

ಎಲನ್ ಮಸ್ಕ್: ಯಾರು ಬ್ಲಾಕ್ ಮಾಡುವ ಆಪ್ಷನ್ ಸಿಗುತ್ತಿಲ್ಲ ಎಂದು ಗೋಳಾಡುತ್ತಾ ದೂರು ಕೊಡುತ್ತಿದ್ದರೋ. ಅಂಥವರನ್ನು ಬ್ಲಾಕ್ ಮಾಡುವಲ್ಲಿ ಸಿಕ್ಕಾಪಟ್ಟೆ ಮಜಾ ಇದೆ ! ಔಷಧಿಯ ರುಚಿ ಹೇಗಿತ್ತು?!

ಬರ್ಕೆಸೆನ್ಸಾರ್: ನಿನ್ನ ಹತ್ರ ಎಷ್ಟು ದುಡ್ಡು ಇದ್ರೂ, ನೀನು ಮೋಜಿನ ವ್ಯಕ್ತಿ ಏನಲ್ಲ

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಯಾವ ದೇಶವು ಮಿಲಿಟರಿ ಮೈತ್ರಿಕೂಟದ NATO ನ ಹೊಸ ಸದಸ್ಯತ್ವವನ್ನು ಪಡೆದುಕೊಂಡಿದೆ?

- ಎ. ಸಿರಿಯಾ
- ಬಿ. ಸ್ವೀಡನ್
- ಸಿ. ಉತ್ತರ ಕೊರಿಯಾ
- ಡಿ. ದಕ್ಷಿಣ ಕೊರಿಯಾ

ಉತ್ತರ: ಬಿ. ಸ್ವೀಡನ್

ಮಾಹಿತಿ

ಯುರೋಪಿಯನ್ ದೇಶ ಸ್ವೀಡನ್ ಔಪಚಾರಿಕವಾಗಿ ಟ್ರಾನ್ಸ್ ಅಟ್ಲಾಂಟಿಕ್ ಮಿಲಿಟರಿ ಮೈತ್ರಿ 'NATO'ನ ಹೊಸ ಸದಸ್ಯತ್ವವನ್ನು ಪಡೆದುಕೊಂಡಿದೆ. 2022ರ ಉಕ್ರೇನ್ ಮೇಲೆ ರಶಿಯಾದ ಆಕ್ರಮಣದ ನಂತರ ಯುರೋಪ್‌ನಲ್ಲಿ ರಷ್ಯಾದ ಆಕ್ರಮಣಶೀಲತೆಯ ಬಗ್ಗೆ ಕಾಳಜಿ ಹೆಚ್ಚಿದೆ. ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಈ ವಿಷಯವನ್ನು ಪ್ರಕಟಿಸಿದ್ದಾರೆ. ಉತ್ತರ ಅಟ್ಲಾಂಟಿಕ್ ಒಕ್ಕೂಟವು 32 ಸದಸ್ಯ ರಾಷ್ಟ್ರಗಳ ಅಂತರ್ ಸರ್ಕಾರಿ ಮಿಲಿಟರಿ ಮೈತ್ರಿಯಾಗಿದೆ. ಇದನ್ನು 1949ರಲ್ಲಿ ಸ್ಥಾಪಿಸಲಾಯಿತು.

ವಿಸ್ಮಯ ಲೋಹ; ಬಂಗಾರದ ಕತೆ

ವಿಜ್ಞಾನ ವಿಸ್ಮಯ
ಕೆ. ನಟರಾಜ್

ಬಂಗಾರ ಯಾರಿಗೆ ಗೊತ್ತಿಲ್ಲ; ಇದು ಬಂಗಾರದಂತಹ ಲೋಹ. ಇದು ನೇರವಾಗಿ ಪ್ರಕೃತಿಯಲ್ಲಿ ದೊರೆಯುವ, ಗಾಳಿಗೆ ತುಕ್ಕು ಹಿಡಿಯದ, ನೀರಿಗೆ ಹಾಳಾಗದ ಲೋಹ. ಆದುದರಿಂದಲೇ ಪುರಾತನ ಕಾಲದಿಂದಲೂ ಈ ಲೋಹವನ್ನು ಆಭರಣಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಈ ಬಂಗಾರ ದೇಹಕ್ಕೂ ಯಾವುದೇ ಅಲರ್ಜಿಯನ್ನೂ ಉಂಟು ಮಾಡುವುದಿಲ್ಲ. ಆದುದರಿಂದಲೆ ಬಂಗಾರವನ್ನು ನೋಬಲ್ ಲೋಹ ಎಂದೇ ಕರೆಯುತ್ತಾರೆ. ಇದು ಗಣಿಗಳಲ್ಲಿ ಬೆಣಚು ಕಲ್ಲಿನ ಜೊತೆಯಲ್ಲಿ ದೊರೆಯುವ ಲೋಹ. ಇದರ ಅದಿರನ್ನು ಗಣಿಗಳಿಂದ ತೆಗೆದು ಪುಡಿ ಮಾಡಿ ಬೆಣಚು ಕಲ್ಲಿನಿಂದ ಬೇರ್ಪಡಿಸಿ ಸಂಸ್ಕರಿಸುತ್ತಾರೆ.

ಸಾವಿರಾರು ವರ್ಷಗಳ ಇತಿಹಾಸ

ಈ ಬಂಗಾರದ ಗಣಿಗಾರಿಕೆಗೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ. ಹಾಗೆಂದ ಮಾತ್ರಕ್ಕೆ ಇದು ಮಾನವ ಕಂಡು ಹಿಡಿದ ಪ್ರಥಮ ಲೋಹವೇನಲ್ಲ. ಮಾನವ ಕಂಡು ಹಿಡಿದ ಪ್ರಥಮ ಲೋಹ ತಾಮ್ರ; ಬಂಗಾರ ಮಾನವ ಕಂಡು ಹಿಡಿದ ಎರಡನೆಯ ಲೋಹ. ಮಾನವ ಈ ಲೋಹವನ್ನು ಕಂಡುಹಿಡಿದದ್ದು ಸುಮಾರು ಕ್ರಿಸ್ತ ಪೂರ್ವ 4,500 ವರ್ಷಗಳಿಗೂ ಹಿಂದೆ; ಅಂದರೆ ಸುಮಾರು 6,500 ವರ್ಷಗಳ ಹಿಂದೆ ಈ ಲೋಹ ಮಾನವನಿಗೆ ದಕ್ಕಿದ್ದು. ಆಗ ಪುರಾತನ ಮೆಸಪೊಟೋಮಿಯನ್ನರು ಈ ಲೋಹದ ಬಳಕೆಗೆ ತಂದರು. ಆನಂತರ ಕ್ರಿ ಪೂ 2,500ರಲ್ಲಿ ಬಂಗಾರದ ಬಳಕೆಯನ್ನು ತಿಳಿದಿದ್ದರು.

ಭಾರತದಲ್ಲಿ ಬಂಗಾರದ ಗಣಿಗಾರಿಕೆ

ಇಡೀ ಏಷ್ಯಾದಲ್ಲಿಯೇ ಬಂಗಾರದ ಗಣಿಗಾರಿಕೆ ಆರಂಭವಾದದ್ದು ನಮ್ಮ ಕರ್ನಾಟಕದ ಕೋಲಾರ ಜಿಲ್ಲೆಯ ಬಂಗಾರು ಪೇಟೆಯಲ್ಲಿ. ಈ ಕೋಲಾರದ ಬಂಗಾರದ ಗಣಿ ಹರಪ್ಪಾ ಮೊಹೆಂಜದಾರೋ ಕಾಲದಲ್ಲೇ ನಮ್ಮ ಬಂಗಾರದ ಗಣಿಗಾರಿಕೆಗೆ ಪ್ರಸಿದ್ಧಿಯಾಗಿತ್ತು. ಈ ಕೋಲಾರದ ಗಣಿ ಸುಮಾರು 160 ಅಡಿ ಆಳದವರೆಗೆ ಕೊರೆಯಲ್ಪಟ್ಟಿತ್ತು. ಕ್ರಿ ಪೂ 5 ನೇ ಶತಮಾನದಲ್ಲಿ ಈ ಗಣಿ ಗುಪ್ತರ ಕಾಲದಲ್ಲೇ ಬಹಳ ಪ್ರಸಿದ್ಧಿ ಪಡೆದಿತ್ತು. ನಂತರದಲ್ಲಿ ಇದು 9 ಮತ್ತು 10 ನೇ ಶತಮಾನದಲ್ಲಿ ಚೋಳ ರಾಜರ ಕೈಗೆ ಹಸ್ತಾಂತರಗೊಂಡಿತ್ತು. ವಿಜಯನಗರ ಅರಸರ ಕಾಲಕ್ಕೆ ಈ ಗಣಿ ತುಂಬಾ ಪ್ರವರ್ಧಮಾನಕ್ಕೆ ಬಂತು. ಹೀಗೆ ಕೊನೆಗೆ ಟಿಪ್ಪು ಸುಲ್ತಾನ್ ಹಾಗೂ ಬ್ರಿಟೀಷರ ಕೈಗೆ ತಲುಪಿ 1947ರಲ್ಲಿ ಭಾರತ ಸರ್ಕಾರದ ಅಧೀನಕ್ಕೆ ತಲುಪಿತು. ನಿಮಗೆ ಗೊತ್ತಿರಲಿ ಇದುವರೆಗೂ ಕೋಲಾರ ಚಿನ್ನದ ಗಣಿ ಉತ್ಪಾದಿಸಿದ ಚಿನ್ನ 1,000 ಟನ್ ಗಳು!

ವಿವಿಧ ದೇಶಗಳ ಚಿನ್ನದ ಉತ್ಪಾದನೆ

ಒಟ್ಟು ಜಗತ್ತಿನ ಚಿನ್ನದ ಉತ್ಪಾದನೆ 2022ರಲ್ಲಿ 3,612 ಟನ್‌ಗಳು. ಈಗ ಜಗತ್ತಿನಲ್ಲಿ ಅತೀ ಹೆಚ್ಚು ಚಿನ್ನ ಉತ್ಪಾದಿಸುವ ರಾಷ್ಟ್ರ ಚೀನಾ. ಇದು 368.3 ಟನ್ ಚಿನ್ನವನ್ನು ಉತ್ಪಾದಿಸಿದೆ. ಎರಡನೆಯ ರಾಷ್ಟ್ರ ರಷ್ಯಾ; ಇದು 2022 ರಲ್ಲಿ 331.1 ಟನ್ ಚಿನ್ನವನ್ನು ಉತ್ಪಾದಿಸಿದೆ. ಮೂರನೆಯ ರಾಷ್ಟ್ರ ಆಸ್ಟ್ರೇಲಿಯಾ ಇದು ಇದೇ ವರ್ಷದಲ್ಲಿ ಉತ್ಪಾದಿಸಿದ ಚಿನ್ನ 327.8 ಟನ್ ಗಳು. ವಿಶ್ವದಲ್ಲಿ ಅತೀ ಹೆಚ್ಚು ಬಂಗಾರದ ಸಂಗ್ರಹವನ್ನು ಹೊಂದಿರುವ ರಾಷ್ಟ್ರ ಅಮೇರಿಕಾ. ಇದು ಒಟ್ಟು 8,133.46 ಮೆಟ್ರಿಕ್ ಟನ್ ಗಳಷ್ಟು ಚಿನ್ನದ ಸಂಗ್ರಹವನ್ನು ಹೊಂದಿದೆ!

ಬಾಲದಂಡೆ ಹಕ್ಕಿ

ಪಕ್ಷಿಲೋಕ
ಡಾ.ಎಸ್.ವಿ. ನರಸಿಂಹನ್

ಬಣ್ಣದ ಬಾನಾಡಿಗಳು ಸರಣಿ ಕಾರ್ಯಕ್ರಮದಲ್ಲಿ ಇಂದಿನ ಪಕ್ಷಿ, ಬಾಲದಂಡೆ ಹಕ್ಕಿ. ಇದು ಮೊನಾರ್ಕಿಡೆ ಕುಟುಂಬಕ್ಕೆ ಸೇರಿದೆ. ಇದನ್ನು ಇಂಗ್ಲೀಷ್ ನಲ್ಲಿ ಇಂಡಿಯನ್ ಪ್ಯಾರಾಡೈಸ್ ಫ್ಲೈಕ್ಯಾಚರ್, ಎಂದೂ ವೈಜ್ಞಾನಿಕ ಪರಿಭಾಷೆಯಲ್ಲಿ ಟರ್ಪ್‌ಸಿ ಫೋನ್ ಪ್ಯಾರಾಡಿಸಿ ಎಂದೂ ಕರೆಯುತ್ತಾರೆ. ಇದರ ವಾಸಸ್ಥಾನ, ದಕ್ಷಿಣ ಭಾರತ, ಮ್ಯಾನ್ಮಾರ್, ಬಾಂಗ್ಲಾದೇಶ ಮತ್ತು ಶ್ರೀಲಂಕಾ ದೇಶಗಳಲ್ಲಿ ಹರಡಿದೆ. ದಕ್ಷಿಣ ಭಾರತದಿಂದ ಬಾಲದಂಡೆ ಹಕ್ಕಿಯು ಏಷ್ಯಾದ ಅನೇಕ ಉಷ್ಣವಲಯದ ದೇಶಗಳಿಗೆ ವಲಸೆ ಹೋಗುತ್ತದೆ. ಅಲ್ಲದೆ, ಬಾಲದಂಡೆ ಹಕ್ಕಿಯಲ್ಲಿ ಸ್ಥಳೀಯ ವಲಸೆಯನ್ನೂ ಕಾಣುತ್ತೇವೆ.

ಬಾಲದಂಡೆ ಹಕ್ಕಿ, ಭಾರತದ ಅತ್ಯಂತ ಸುಂದರವಾದ ಹಕ್ಕಿಗಳಲ್ಲಿ ಒಂದು. ಇದು 20 ಸೆಂಮೀ ದೇಹದ ಪುಟ್ಟ, ಚಿತ್ತಾಕರ್ಷಕ, ಕೀಟಭಕ್ಷಕ ಹಕ್ಕಿ. ಗಂಡು-ಹೆಣ್ಣು ನೋಡಲು ಭಿನ್ನವಾಗಿರುತ್ತವೆ. ಗಂಡಿಗೆ, ಕಡು ನೀಲಿಗಪ್ಪು ತಲೆ, ಜುಟ್ಟು, ಗಲ್ಲ; ಉಳಿದಂತೆ ಇಡೀ ದೇಹ ಹೊಳೆಯುವ ಅಚ್ಚ ಬಿಳಿ! ರೆಕ್ಕೆಯಲ್ಲಿ, ಕಪ್ಪು; ಎಲ್ಲಕ್ಕಿಂತ ಮಿಗಿಲಾಗಿ, ಪ್ರಜನನ ಋತುವಿನಲ್ಲಿ, ಗಂಡುಹಕ್ಕಿಗೆ 50 ಸೆಂಮೀ. ಉದ್ದನಾದ ಬಾಲದ ಎರಡು ಬಿಳಿ ಗರಿಗಳು. ಹೆಣ್ಣಿಗೆ ಮತ್ತು ಎಳೆವಯಸ್ಸಿನ ಗಂಡು ಹಕ್ಕಿಗಳಿಗೆ, ಕೆಂಗಂದು ಮೇಲ್ಮೈ; ಕಪ್ಪುತಲೆ; ಬಿಳಿ ಕೆಳಮೈ. ಎಳೆ ವಯಸ್ಸಿನ ಗಂಡು ಹಕ್ಕಿಗೆ ಕೆಂಗಂದು ಬಾಲವಿದ್ದರೆ, ಹೆಣ್ಣಿಗೆ ಬಾಲದ ಗರಿಗಳಿಲ್ಲ. ಒಂದು ಒಳಜಾತಿಯ ಬಾಲದಂಡೆ ಹಕ್ಕಿ, ಬಿಳಿ ದೇಹವನ್ನು ಹೊಂದುವುದೇ ಇಲ್ಲ.

ಪುಟ್ಟ ಜೀವಿಗಳೇ ಆಹಾರ

ಹೆಚ್ಚು ಗದ್ದಲವಿಲ್ಲದ ಚ್.ಚ್ಯು..ಕೂಗು. ಆದರೆ ಸಂತಾನೋತ್ಪತ್ತಿಯ ಋತುವಿನಲ್ಲಿ ಗಂಡು ಹಕ್ಕಿಯು ಸಂಗಾತಿಯನ್ನು ಆಕರ್ಷಿಸಲು ಇಂಪಾದ ಸಿಳ್ಳೆಯ ಧ್ವನಿಯಿಂದ ಕೂಗುತ್ತದೆ. ಕೀಟ ನಿಯಂತ್ರಣದಲ್ಲಿ ಬಾಲದಂಡೆ ಹಕ್ಕಿಗಳು ಸಮರ್ಥವಾಗಿ ಕಾರ್ಯ ವಹಿಸುತ್ತವೆ. ನೊಣ, ದ್ವಿಪತ್ರಕ ಕೀಟಗಳು, ಜೀರುಂಡೆ ಮುಂತಾದ ಚಿಕ್ಕ-ಪುಟ್ಟ ಜೀವಿಗಳೇ ಆಹಾರ. ಇಡೀ ಹಗಲು ಮರಗಳಲ್ಲಿರುವ ಹಾಗೂ ಹಾರುತ್ತಿರುವ ಕೀಟಗಳನ್ನೂ ಹಿಡಿದು ತಿನ್ನುತ್ತವೆ.

ನಿಮಗೆ ಆಶ್ಚರ್ಯವಾಗಬಹುದು, ಗಂಡು-ಹೆಣ್ಣು ಬಾಲದಂಡೆ ಹಕ್ಕಿಗಳು ಜೀವನಪರ್ಯಂತ ಏಕಪತ್ನಿತ್ವವನ್ನು ಅನುಸರಿಸುತ್ತವೆ. ಬಾಳ ಸಂಗಾತಿಯೊಂದಿಗೆ ಗೂಡುಕಟ್ಟುವ, ಮೊಟ್ಟೆಗಳಿಗೆ ಕಾವು ಹಾಗೂ ಗುಟುಕು ಕೊಡುವ ಎಲ್ಲಾ ಕಾರ್ಯಗಳಲ್ಲಿಯೂ ಸೇರಿ ಒಟ್ಟಿಗೆ ಭಾಗವಹಿಸುತ್ತವೆ. ಇವುಗಳ ಪ್ರಜನನ ಸಮಯ, ಮೇ-ಜುಲೈ ತಿಂಗಳು. ಕಾಜಾಣ ಪಕ್ಷಿಯ ಗೂಡಿನ ಆಸುಪಾಸಿನಲ್ಲಿ, ಮರದ ಕೆಳಕೊಂಬೆಯ ತುದಿಯಲ್ಲಿ, ರೆಂಬೆಗಳ ಕವಲುಗಳಲ್ಲಿ, ಹುಲ್ಲು-ನಾರುಗಳನ್ನು ಜೇಡರ ಬಲೆಯಲ್ಲಿ ಅಂಟಿಸಿ ತಯಾರಾದ ಅಚ್ಚುಕಟ್ಟಾದ ಪುಟ್ಟಗೂಡು. ಇದರಲ್ಲಿ ಹೆಣ್ಣು ಹಕ್ಕಿ ನಾಲ್ಕು ಮೊಟ್ಟೆಗಳನ್ನಿಡುತ್ತದೆ. ಮೂರು ವಾರಗಳ ಕಾಲ ಕಾವು ನೀಡಿದ ನಂತರ ಮರಿಗಳು ಮೊಟ್ಟೆಯಿಂದ ಹೊರ ಬರುತ್ತವೆ.

ರಿಬ್ಬನ್‌ನಂತಹ ಮನಮೋಹಕ ಬಾಲಗಳು

ಜೋಡಿಯಾಗಿ, ಉದುರೆಲೆ, ಬಿದಿರುಕಾಡುಗಳಲ್ಲಿ, ತೋಟ, ಹಣ್ಣಿನ ತೋಪುಗಳು, ಜನವಸತಿ ಪ್ರದೇಶಗಳಲ್ಲಿ, ಮರ, ಪೊದೆ ಹಾಗೂ ಬಿದಿರು ಮೆಳೆಗಳ ನಡುವೆ ಕಾಣಬಹುದು. ಚಾಕಚಕ್ಯತೆಯಿಂದ ಅತ್ತಿಂದಿತ್ತ ನಲಿಯುತ್ತ ಹಾರಾಡುವಾಗ, ಗಂಡುಹಕ್ಕಿಯ ರಿಬ್ಬನಿನಂತಹ ಬಾಲಗಳು ಮನಮೋಹಕ! ಗಂಡು ಬಾಲದಂಡೆ ಹಕ್ಕಿಯು ಕೇವಲ ಕಪ್ಪು-ಬಿಳಿ ಬಣ್ಣದ ಹಕ್ಕಿಯಾದರೂ, ಬಿಸಿಲಿನ ಬೆಳಕು ಅದರ ಮೈಮೇಲೆ ಬಿದ್ದಾಗ, ಅದರ ಅಚ್ಚ ಕಪ್ಪುತಲೆ ಮತ್ತು ಶುಭ್ರ, ಬಿಳಿ ದೇಹ ಮತ್ತು ಬಾಲಗಳು ಪ್ರತಿಫಲಿಸುವ ಕಿರಣಗಳು, ಬಣ್ಣಬಣ್ಣದ ಛಾಯೆಗಳನ್ನು ಮೂಡಿಸುತ್ತವೆ. ಅದರಲ್ಲೂ ಈ ಹಕ್ಕಿ ಗಿಡ-ಮರಗಳ ಎಲೆಗಳ ನಡುವೆ, ಚಾಕಚಕ್ಯತೆಯಿಂದ ಅತ್ತಿಂದಿತ್ತ ಹಾರಾಡುವಾಗ, ಅದರ ಹಿಂದೆಯೇ ಓಡಾಡುವ, ಒಂದು ಅಡಿಗೂ ಉದ್ದನಾದ ಬಾಲಗಳು ಅತ್ಯಂತ ಆಕರ್ಷಕವಾಗಿ ಬಣ್ಣಬಣ್ಣದ ರಂಗೋಲಿ ಚಿತ್ರಗಳನ್ನು ಮೂಡಿಸುತ್ತವೆ! ಈ ದೃಶ್ಯ ಅವರ್ಣನೀಯ!

> ನಿಮ್ಮ ಕನಸುಗಳನ್ನು ನಿಜವಾಗಿಸಲು ಖಚಿತವಾದ ಮಾರ್ಗವೆಂದರೆ ಅವುಗಳನ್ನು ಬದುಕಿಸುವುದು.
> -ರಾಯ್ ಟಿ. ಬೆನೆಟ್

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಶನಿವಾರ
01 | 06 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

> ಜ್ಞಾನವು ನಮ್ಮನ್ನು ಹೇಳುವಂತೆ ಮಾಡಿದರೆ, ತಿಳುವಳಿಕೆ ನಮ್ಮನ್ನು ಕೇಳುವಂತೆ ಮಾಡುತ್ತದೆ.
> -ಜಿಮಿ ಹೆಂಡ್ರಿಕ್

ಬಿ ಪಾಸಿಟಿವ್

ಪ್ರಯತ್ನವಿದ್ದಲ್ಲಿ ಫಲ

ನಾಳೆ ಮಾಡಬೇಕಾದ ಕಾರ್ಯವನ್ನು ಇವತ್ತೆ ಮಾಡುತ್ತೇನೆ, ಇವತ್ತು ಮಾಡಬೇಕಾದ ಕೆಲಸವನ್ನು ಈಗಲೇ ಪ್ರಾರಂಭಿಸುತ್ತೇನೆ ಎಂಬ ಅನನ್ಯವಾದ ಆತ್ಮವಿಶ್ವಾಸ ದೃಢಸಂಕಲ್ಪವಿದ್ದರೆ, ಯಾವ ಕೆಲಸವೂ ಅಸಾಧ್ಯವಲ್ಲ. ಅದಕ್ಕೆ ಬಲ್ಲವರು ಹೇಳಿದ್ದು. ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಮನಸ್ಸು ನಮ್ಮಿಚ್ಛೆಯಲ್ಲಿ, ನಮ್ಮ ಹಿಡಿತದಲ್ಲಿ ಇದ್ದರೆ ಯಾವುದೂ ಅಸಾಧ್ಯವಲ್ಲ. ಒಬ್ಬ ರೈತನಾದವನು ಬಂಡಿ ಓಡಿಸಲು ಎತ್ತುಗಳನ್ನು ಕಟ್ಟಿ ಎಳೆಯುತ್ತಾನೆ. ಬಂಡಿ ಎಳೆಯಲು ಎತ್ತಿಗೆ ಹೊಡೆಯುತ್ತಾನೆ ವಿನಃ ಬಂಡಿಗಲ್ಲ ಹಾಗೆಯೇ ನಾವು ಕೂಡ ಏನನ್ನಾದರೂ ಮಾಡಬೇಕಾಗಿತ್ತು ಅಂತಂದ್ರೆ ಮೊದಲು ಮನಸ್ಸು ಮಾಡಬೇಕು. ಮನಸ್ಸಿನಲ್ಲಿ ವಿಚಾರ ಬರಬೇಕು ಅಂದಾಗ ದೇಹವೆಂಬ ಬಂಡಿ ಕೆಲಸ ಮಾಡಲು ಮುಂದಾಗುತ್ತದೆ. ನಾವು ಯಾವುದೇ ಕೆಲಸ ಕಾರ್ಯಕ್ಕೆ ಕೈ ಹಾಕಿದಾಗ ಬೆಕ್ಕು ನಾಯಿಗಳಿಗಿಂತ ಮನುಷ್ಯರೇ ಹೆಚ್ಚು ವಿಘ್ನಗಳಂತೆ ಅಡ್ಡ ಬರುತ್ತಾರೆ, ಅಡ್ಡಿಯುಂಟು ಮಾಡುತ್ತಾರೆ. ನಿಂದನೆಯ ಮಾತುಗಳನ್ನಾಡಿ, ಚುಚ್ಚು ನುಡಿಗಳಿಂದ ಮನಸ್ಸು ಘಾಸಿಗೊಳಿಸುತ್ತಾರೆ, ಅವಮಾನಿಸಿ ಸಂತೋಷಪಡುತ್ತಾರೆ.



ನಮ್ಮನ್ನು ಜರಿದು ಜೋರಾಗಿ ಮೆರೆಯುತ್ತಾರೆ. ಅವರ ಮಾತುಗಳಿಗೆ ಕಿವಿಗೊಟ್ಟು ಮಾಡುವ ಕಾರ್ಯ ಗಳಿಂದ ಹಿಂದೆ ಸರಿಯಬಾರದು. ಅವಮಾನಗಳಿಂದಲೇ ಮುಂದೆ ಸನ್ಮಾನಗಳು ಎಂಬ ವಿಚಾರವನ್ನು ಮನದಟ್ಟು ಮಾಡಿಕೊಂಡು, ಬಂದ ನಿಂದನೆಯ ಮಾತುಗಳನ್ನು ಸಹನೆಯಿಂದಲೇ ಸಹಿಸಿಕೊಂಡು, ಸಕಲವನ್ನು ಪಡೆಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಅನೇಕ ಸಾಧಕರ ಜೀವನದ ಯಶೋಗಾಥೆ ಗಳನ್ನು ಓದಿ, ಕೇಳಿ ತಿಳಿದುಕೊಂಡು ಅವರ ಹಾದಿಯಲ್ಲಿ ಸಾಗಿದರೆ ಗೆಲುವು ನಮ್ಮದೇ. ಒಬ್ಬರಿಗೆ ಏನನ್ನು ಮಾಡಲು ಸಾಧ್ಯವೋ ಅದು ಪ್ರತಿಯೊಬ್ಬರಿಗೂ ಸಾಧ್ಯ ಎಂಬ ಮಹಾತ್ಮ ಗಾಂಧೀಜಿಯವರ ಮಾತು ಎಷ್ಟು ಸತ್ಯವಲ್ಲವೇ. ಸಾಧಕರ ಸಾಧನೆಯ ಹಿಂದಿರುವ ಅವಿರತ ಪ್ರಯತ್ನ ಅವರ ಶ್ರಮ, ಶ್ರದ್ಧೆ, ಕರ್ತವ್ಯ ನಿಷ್ಠೆ, ಸಮಯ ಪಾಲನೆ, ಸೃಜನಶೀಲತೆಯಗಳನ್ನು ಮೈಗೂಡಿಸಿಕೊಳ್ಳಬೇಕು. ಉತ್ತಮ ಪ್ರಯತ್ನ ನಮ್ಮದಾಗಿದ್ದರೆ ಅದರ ಫಲವು ಅತ್ಯುತ್ತಮವಾಗಿರುತ್ತದೆ.

● ಈಶ್ವರ ಕುರಿ

ಲವ್ ಎವೆರಿ ಬಾಡಿ

ಚರ್ಮದ ಮೇಲ್ಪದರದಲ್ಲಿ ಮೃತ ಕೋಶಗಳ ಸಂಖ್ಯೆ ಹೆಚ್ಚಾದಂತೆ ಚರ್ಮವು ಕಾಂತಿಹೀನವೆನಿಸ ತೊಡಗುತ್ತದೆ. ಚರ್ಮದ ಈ ಮೇಲ್ಪದರವನ್ನು ಸ್ವಚ್ಛಗೊಳಿಸಿ, ಹೊಸ ಜೀವಕೋಶಗಳನ್ನು ಹೊಳೆಯುವಂತೆ ಮಾಡುವ ಪ್ರಕ್ರಿಯೆಗೆ ಸೌಂದರ್ಯ ಶಾಸ್ತ್ರದಲ್ಲಿ ಎಕ್ಸ್ಫೋಲಿಯೇಷನ್ ಎಂದು ಕರೆಯಲಾಗುತ್ತದೆ. ಈ ಪ್ರಕ್ರಿಯೆಗೆ ಬಳಸಲಾಗುವ ಉತ್ಪನ್ನಗಳನ್ನು ಎಕ್ಸ್ಫೋಲಿಯೆಂಟ್ ಎಂದು ಕರೆಯಲಾಗುತ್ತದೆ. ಸ್ಕ್ರಬ್‌ನಂತೆಯೇ ಕೆಲಸ ಮಾಡುವ ಎಕ್ಸ್ಫೋಲಿಯಂಟ್‌ಗಳು ಚರ್ಮದ ಮೃತಕೋಶಗಳನ್ನು ಮೃದುವಾಗಿ ಬೇರ್ಪಡಿಸುತ್ತವೆ. ಫೇಷಿಯಲ್‌ನಲ್ಲಿ ಈ ಕ್ರಿಯೆ ಸಹಜವಾಗಿಯೇ ಮಾಡುತ್ತಾರೆ. ಆದರೆ ಮನೆಯಲ್ಲಿಯೂ ವಾರಕ್ಕೆ ಒಮ್ಮೆಯಾದರೂ ಒಂದು ಹತ್ತು ನಿಮಿಷಗಳನ್ನು ಮೀಸಲಾಗಿಟ್ಟರೆ ಮುಖದ ಕಾಂತಿ ಕುಂದುವುದೇ ಇಲ್ಲ. ಇದಕ್ಕಾಗಿ ವಿಶೇಷ ಎಕ್ಸ್ಫೋಲಿಯೆಂಟ್‌ಗಳನ್ನು ಕೊಳ್ಳುವ ಅಗತ್ಯವೂ ಇಲ್ಲ. ಆದರೆ ನಿಮ್ಮ ಚರ್ಮದ ಪ್ರಕಾರಕ್ಕೆ ಅನುಗುಣವಾದ ಆರೈಕೆ ಮಾಡಿಕೊಳ್ಳುವುದು ಅತಿಮುಖ್ಯ.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೂರನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಅನಂತಂ ವೈಮನ ಅರ್ಥಾತ್, ಈ ಮನಸ್ಸು ಅನಂತ ಪ್ರಕಾರದ್ದು, ಅದರ ಸ್ವರೂಪವನ್ನು ಅರಿಯಲು ಸಾಧ್ಯವಿಲ್ಲವಂತೆ. ಇಷ್ಟೊಂದು ಆಳ, ವಿಸ್ತಾರದ ಅವಯುವದ ಶಕ್ತಿ ಮತ್ತು ಕಾರ್ಯವ್ಯಾಪ್ತಿ ಅನೂಹ್ಯವಾದುದು. ಅದಕ್ಕಾಗಿಯೇ ನಮ್ಮ ಹಿರಿಯರು, 'ಮನಸ್ಸೇ ಮಹಾದೇವ' ಎಂದು ಹೇಳಿರುವುದು.

ಮುರಿಯಲಾಗದ ಮಾನಸಿಕ ನಿಯಮಗಳು

ಮನಸ್ಸೇ ರಿಲ್ಯಾಕ್ಸ್
● ಡಾ. ಎನ್ ಜಯರಾಮಶೆಟ್ಟಿ

ಮನಸ್ಸು, ಮನಸ್ಸಿಗೆ ಬಂದ ಹಾಗೆ, ವಿಹರಿಸದು, ವ್ಯವಹರಿಸದು. ಪ್ರಕೃತಿಯ ಬೇರಾವುದೇ ಶಕ್ತಿಯಂತೆ, ನಮ್ಮ ಮನಸ್ಸು ತನ್ನದೇ ನಿಯಮಗಳಿಂದ ಬಂಧಿತವಾಗಿದ್ದು ಅವುಗಳ ಪರಿಧಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಮನಸ್ಸಿನ ನಿಯಮಗಳನ್ನು ನಾವು ಅರ್ಥೈಸಿಕೊಂಡಾಗ, ಅದನ್ನು ಬಳಸಿಕೊಳ್ಳುವುದು, ಕ್ರಿಯಾಶೀಲರಾಗಿರುವುದು ಸುಲಭ ಸಾಧ್ಯ. 'ಮನ: ಸುಖ, ದು:ಖ ಹೇತು:' ಅಂದರೆ ನಾವು ಅನುಭವಿಸುವ ಸುಖ ದು:ಖದ ಅನುಭವ, ನಮ್ಮ ಮನಸ್ಸಿನದ್ದೆ ಆಗಿರುತ್ತದೆ. ಮನಸ್ಸಿನ ಆಚೆಗೆ ಯಾವುದೂ ಇಲ್ಲ. ಎಲ್ಲವೂ ಮನಸ್ಸಿನ ಮೂಲಕವೆ ಎಂದು ತಿಳಿಯುವುದು ಅಗತ್ಯ ಮತ್ತು ಅನಿವಾರ್ಯ. ಮನಸ್ಸಿನ ಅನೇಕ ನಿಯಮಗಳಲ್ಲಿ ಮುಖ್ಯವಾದುದು ಐದು.

1 ಆಕರ್ಷಣಾ ಶಕ್ತಿ: ವ್ಯಕ್ತಿ-ವ್ಯಕ್ತಿಗಳ ನಡುವೆ ಏರ್ಪಡುವ ಸೆಳೆತ, ಪರಸ್ಪರ ಪ್ರೀತಿ ಮತ್ತು ಬಾಂಧವ್ಯದ ಮೂಲ ಸೂತ್ರವೇ ಮನಸ್ಸು. ಮನಸ್ಸು ಬೆಸೆಯುವ ಕೊಂಡಿ ಮತ್ತು ಕಟ್ಟಿಹಾಕುವ ವಸ್ತು. ಪ್ರತಿಯೊಬ್ಬ ವ್ಯಕ್ತಿ ಆಕರ್ಷಿಸಬಲ್ಲನು, ಆಕರ್ಷಣೆಗೆ ಒಳಗಾಗಬಲ್ಲನು. ಎಲ್ಲಿ, ನಮ್ಮ ಸಕಾರಾತ್ಮಕ ಯೋಚನೆ, ಮಾತುಗಳು ಮತ್ತು ಕೃತಿಗಳು ಅಂತಹುದೆ ಗುಣ, ವೈಶಿಷ್ಟ್ಯಗಳಿಗೆ ಕ್ಷಣಗಳಲ್ಲೆ ಹೊಂದಿಕೊಳ್ಳಬಲ್ಲುವು. ಅಪರಿಚಿತರು ವಿಚಾರಗೋಷ್ಠಿಯಲ್ಲಿ ಇದ್ದಾರೆನ್ನಿ. ವಿಚಾರ ವಿನಿಮಯವಾಗುತ್ತಲೆ, ಅವರಲ್ಲೆ ಕೆಲವರು ತೀರಾ ಆತ್ಮೀಯರಾಗುವುದನ್ನೊ, ಕಟ್ಟಾ ವಿರೋಧಿಗಳಾಗುವುದನ್ನೊ ನೀವು ಗಮನಿಸಿದ್ದರಬಹುದು. ಇನ್ನೇನು ಸಭೆ ಮುಗಿಯುವ ವೇಳೆಗೆ ಆ ಬಂಧ, ಹಿಡಿತ ಇನ್ನಷ್ಟು ತೀವ್ರವಾಗುವುದಿಲ್ಲವೆ? ವಿರೋಧ ಭಾವ ಹೊಂದಿದವರು ಮುಖ ನೋಡದೆ ಸಿಂಡರಿಸಿಕೊಂಡು ಆಚೆಗೆ ಸರಿಯುತ್ತಾರೆ, ಅನ್ಯೋನ್ಯತೆ ಕಂಡುಕೊಂಡವರು ಒಟ್ಟಾಗಿ ಸೇರಿ ಸಂಭ್ರಮಿಸುತ್ತಾರೆ. ಈ ಎರಡು ವೈಪರೀತ್ಯಗಳು ಹೇಗೆ ಉಂಟಾದವು? ಇದರ ಹಿಂದಿನ ಆಕರ್ಷಣೆ ಅಥವಾ ಘರ್ಷಣೆ ಯಾವುದು? ಹೌದು, ಮನಸ್ಸು ಹಾಗೆಯೆ. ಪ್ರಥಮ ನೋಟದಲ್ಲೆ ನಾವು ಕೆಲ ಮಂದಿಯನ್ನು ಇಷ್ಟಪಡುವುದಿಲ್ಲ, ಹಾಗೆಯೆ ಕೆಲವರು ನಮ್ಮನ್ನು ಎಷ್ಟರ ಮಟ್ಟಿಗೆ ಸೆಳೆದುಕೊಳ್ಳುತ್ತಾರೆಂದರೆ ನಮಗೆ ಅವರಿಂದ ಆಚೆಗೆ ಬರಲಾರದಷ್ಟು.

2 ನಾವು ನಿರೀಕ್ಷಿಸುವುದೆಲ್ಲವು ನಮ್ಮದೇ: ಪ್ರಬಲ ಮತ್ತು ಸಕಾರಾತ್ಮಕ ನಿರೀಕ್ಷೆ ಹುಸಿಯಾದದ್ದೆ ಇಲ್ಲವೆನ್ನಬಹುದು. ಯಾಮತಿ: ಸಾಗತಿ: ಎನ್ನುವಂತೆ ನಮ್ಮ ಮನಸ್ಸು ನಮ್ಮನ್ನು ದಡ ಮುಟ್ಟಿಸದೆ ಬಿಡದು. ಇದನ್ನು ನೀವು ನಂಬಿ ನಡೆದು ನೋಡಿ, ನಿಮ್ಮ ಮನಸ್ಸು ನಿಮ್ಮನ್ನು ಹಿಂಬಾಲಿಸುವ ಮೋಡಿ. ನಾವೆಲ್ಲ ಮಾಡುತ್ತೇವೆ, ಜಯಿಸಬಲ್ಲೆವು ಎನ್ನುವ ಮನಸ್ಸು ಮತ್ತು ಮಾತೊಂದನ್ನು ಬಿಟ್ಟು! ಮಹಾತ್ಮ ಗಾಂಧೀಜಿಯ ಈ ಮಾತನ್ನು ನಂಬಿ, ವಿಶ್ವಾಸವಿಲ್ಲದಿರುವ ವ್ಯಕ್ತಿ ಸಿಂಧುವಿನ ಒಂದು ಬಿಂದು ಇದ್ದಂತೆ, ಕ್ಷಣದಲ್ಲಿ ಆವಿಯಾಗಿ ಮಾಯವಾಗುತ್ತಾನೆ. ಮಂದಿ ನಿಮ್ಮ ಮಾತಿನ ವಾಕ್ಯಗಳನ್ನೊ, ವ್ಯಾಕರಣ ಶುದ್ಧಿಯನ್ನೊ ಗಮನಿಸುವುದಿಲ್ಲ. ಅವರು ಇಷ್ಟಪಡುವುದು, ನಿಮ್ಮ ಮಾತಿನ ಸಕಾರಾತ್ಮಕ ಶಕ್ತಿ ಮತ್ತು ಸೆಳೆತವನ್ನು. ರಾಮಾಯಣ, ಮಹಾಭಾರತ, ಭಗವದ್ ಗೀತೆಯನ್ನು ಜೀವನಪರ್ಯಂತ ಪುನ: ಪುನ: ಕೇಳುತ್ತೇವಲ್ಲ ಸಾಕೆನಿಸಿದ್ದು ಇದೆಯೆ? ವಿಷ್ಣು ಸಹಸ್ರನಾಮ ದಿನಾಲು ಓದುವವರನ್ನು ಪ್ರಶ್ನಿಸಿ. ಅವರಿಗೆ ಏಕತಾನತೆ ಒಮ್ಮೆಯಾದರೂ ಕಾಡಿದ್ದಿದೆಯೆ? ಕಾರಣವೇನು ಗೊತ್ತೆ? ಓದುವವರ, ಕೇಳುವವರ ಮನಸ್ಸು. ನಮ್ಮ ಮನಸ್ಸಿನ ಸ್ವೀಕರಣ ಶಕ್ತಿ ಮತ್ತು ವೈವಿಧ್ಯ ಅಂತಹುದು.

3 ನಮ್ಮ ನಿಯಂತ್ರಣ, ನಮ್ಮ ತ್ರಾಣ: ನಮ್ಮೆಲ್ಲ ಶಕ್ತಿ ಮತ್ತು ಸಾಧ್ಯತೆಯಿರುವುದು ನಮ್ಮ ನಿಯಂತ್ರಣ ಸಾಮರ್ಥ್ಯದಲ್ಲೆ. ತನ್ನ ವಾಹನದ ಬ್ರೇಕ್‌ನ ಕ್ಷಮತೆ ತಿಳಿದವ, ವೇಗಕ್ಕೆ ಹೊರಳುವನಲ್ಲವೆ? ಮನಸ್ಸಿನ ಶಕ್ತಿಯನ್ನು, ಮಾತಿನ ಯುಕ್ತಿಯನ್ನು, ಮತ್ತು ಕೆಲಸದ ಸಾಮರ್ಥ್ಯವನ್ನು ಅರಿತವನ ನಡೆ, ನುಡಿ, ವೈಖರಿ ನೋಡಿ, ಅದು ವಿಭಿನ್ನ ಹಾಗೂ ವಿಶೇಷವಾಗಿಯೆ ಇರುತ್ತದೆ. ಇಂತಹ ಶಕ್ತಿ ಪ್ರಕಟದಲ್ಲಿ, ಸಾಧನಾಕ್ರಮದಲ್ಲಿ ನಮ್ಮ ಮನಸ್ಸು ನಮ್ಮಮಿತ್ರ. ನಿಮ್ಮ ನಿಯಂತ್ರಣ ಶಕ್ತಿಯ ಗಮನಿಸಿ. ಅದೇ ನಿಯಂತ್ರಣ, ಅದೇ ನಿಮ್ಮ ತ್ರಾಣ.

4 ನಮ್ಮ ಈಗಿನ ಸ್ಥಿತಿ ಹಿಂದಿನ ಗತಿ: ಇದು ಕಾರಣ ಪ್ರಪಂಚ. ನಾವು ಏನಾಗಿದ್ದೇವೆ, ಏನನ್ನು ಪಡೆದಿದ್ದೇವೆ ಅದಕ್ಕೆ ಮೂಲ ಕಾರಣವೊಂದು ಇದ್ದೇ ಇರಬೇಕಲ್ಲ? ಕಾರಣವನ್ನು ಇಲ್ಲವಾಗಿಸಿದಾಗ, ಸಮಸ್ಯೆಯು ಮಾಯವಾಗುವುದಿಲ್ಲವೆ? ಕುಡಿದು ಬಂದು ಮಲಗಿದವನಿಗೆ ಸುಖನಿದ್ರೆ ಮತ್ತು ಬೆಳಗ್ಗೆ ಎದ್ದಾಗ ನೆಮ್ಮದಿ ಸಿಗಲು ಸಾಧ್ಯವೆ? ಪ್ರತಿ ದಿನದ ಗೋಳು ಇದೇ ಆಗಿದ್ದರೆ ಅದರ ಪರಿಹಾರ ಇರುವುದು ನಮ್ಮ ಕೈಲೇ ಅಲ್ಲವೆ? ನಾವು ನಮ್ಮ ಮನಸ್ಸಿನ ಜೊತೆ ಆಡುವ ಕಳ್ಳಾಟಗಳು ಹಲವು. ಪರಿಹಾರ ನಮ್ಮಲ್ಲೇ ಇದ್ದರೂ, ನಮ್ಮಿಂದ ಆಚೆಗೆ ಅದನ್ನು ಹುಡುಕುತ್ತಿರುತ್ತೇವೆ? ನಮ್ಮ ಕಪಟತನ ಮನಸ್ಸಿಗೆ ತಿಳಿದಿದೆ. ಮನಸ್ಸೆ ನಮ್ಮ ಚಿತ್ರಗುಪ್ತ. ಅವನ ಲೆಕ್ಕ ಸರಿಯಾಗಿಯೆ ಇರುತ್ತದೆ.

5 ನಂಬು ಅದೇ ಎಲ್ಲದರ ಇಂಬು: ಪ್ರಪಂಚದ ನೂರಾರು ಪುಸ್ತಕಗಳು ಸಾವಿರಾರು ಸಲ ಹೇಳಿಯಾಗಿದೆ. ನಾವು ಓದಿದ್ದೂ ಹೌದು ಆದರೆ ನಾವು ನಂಬಿ ಮನ್ನಡೆಯುತ್ತಿಲ್ಲ! ನಂಬಿ ಕೆಟ್ಟವರಿಲ್ಲವೊ ಎನ್ನುವುದನ್ನು ಪ್ರತಿದಿನ, ಪ್ರತಿ ವಿಧದಲ್ಲಿ ತಿಳಿದು ಆಚರಣೆಗೆ ತರಬೇಕು. ಊರಿಗೆ

ಪರೀಕ್ಷೆ ಆಗಾಗ ನಡೆಯುತ್ತಿರಲಿ. ಒಂದೇ ಕಡೆ ಕುಳಿತು ಎರಡು ಗಂಟೆ ಓದುವ ಸಣ್ಣಹಠಕ್ಕೆ ಈಗಲೆ ಬೀಳಿ, ಈ ಒಂದು ದಿನದ ಮಟ್ಟಿಗೆ ಬೆಳಗ್ಗೆ ನಾಲ್ಕುಗಂಟೆಗೆದ್ದು, ಈ ಹಿಂದೆ ನಡೆಯದಿದ್ದ ದಾರಿಯಲ್ಲಿ ನಡೆದು ನೋಡಿ, ತಿಂಗಳುಗಳಿಂದ ಬಾಕಿಯಿಟ್ಟ ಕೆಲಸವನ್ನು ನಾಳೆ ದಿನ ಮಾಡಿ ಮುಗಿಸಿ. ನಮ್ಮ ಮನಸ್ಸು ಮೌನದಲ್ಲಿ ನಮ್ಮ ನಿಷ್ಕ್ರಿಯತೆ, ಜಾಡ್ಯತೆ ಮತ್ತು ಏಕತಾನತೆಯನ್ನು ಅಸಹಾಯಕತೆಯಿಂದ ಗಮನಿಸುತ್ತದೆ. ತನ್ನನ್ನು ನಿಯಂತ್ರಿಸೆಂದು ಬೇಡುತ್ತದೆಯಂತೆ! ಮನಸ್ಸಿನ ಇಂತಹ ಅನೇಕ ಬೇಡಿಕೆಗಳನ್ನು ನೀವು ಉಪೇಕ್ಷಿಸಿದ್ದೀರಾ? ಈಗಿಂದೀಗಲೆ ಅದನ್ನು ಮಳೆ ಬಾರದೆ ಮಂದಿ ಹೈರಾಣಾಗಿದ್ದರು. ಸಂತರೊಬ್ಬರು ಬಂದು ಮಳೆಗಾಗಿ ಸಾಮೂಹಿಕ ಪ್ರಾರ್ಥನೆಗೆ ಮಂದಿಯನ್ನು ಕರೆಯುವುತ್ತಾರೆ. ಆ ಸಂಜೆ ಊರಿನವರು ಪ್ರಾರ್ಥನಾ ಪ್ರದೇಶಕ್ಕೆ ಬರುತ್ತಾರೆ. ಚಿಕ್ಕ ಹುಡುಗನೊಬ್ಬ ಕೊಡೆ ಹಿಡಿದು ಬಂದಿದ್ದನ್ನು ನೋಡಿ ಜನ ಗೇಲಿ ಮಾಡುತ್ತಾರೆ, 'ಏನಪ್ಪ, ನೀನು ಸರಿ. ಎಲ್ಲಿಯ ಮಳೆ, ಯಾವುದಕ್ಕೆ ಕೊಡೆ, ನಿನ್ನದೊಂದು ರಗಳೆ'. ಆ ಹುಡುಗ, 'ಹೇಳಿದ ಮಾತನ್ನು ಮರೆಯಬಾರದು, ಗುರುಗಳು ಹೇಳಲಿಲ್ಲವೆ, ಪ್ರಾರ್ಥನೆ ಮುಗಿದಾಗ ಮಳೆ ಬರುವುದೆಂದು. ನೀವೆಲ್ಲ ಕೊಡೆ ತರಬೇಕಿತ್ತು!' ಎಂದ.

ದೈತ್ಯ ಶಿಲ್ಪಿಯೊಬ್ಬರ ಸಾಹಸ ಕತೆ

● ವಿಶ್ವನಾಥ್ ಬಳುವನೇರಲು

ಯಾವುದೇ ರೀತಿಯ ತರಬೇತಿ ಪಡೆಯದ ಒಬ್ಬ ಆಸಕ್ತ ಕನಸುಗಾರ ಕಟ್ಟಿದ ಶಿಲ್ಪಸಾಮ್ರಾಜ್ಯದ ರೋಚಕ ಕತೆಯಿದು. ವಸ್ತು ಸಂಗ್ರಹಾಲಯದಲ್ಲಿ ಕಾಣಲಾಗದ ಮತ್ತು ಹಣವುಳ್ಳವರ ಮನೆಯಲ್ಲಿ ಪ್ರದರ್ಶನ ವಸ್ತುವಾಗಿ ಇಡಲು ಇಚ್ಛಿಸದ ಕಲಾವಿದ - ಸೆವಾರ್ಡ್ ಜಾನ್ಸನ್ ಅವರು ತಾವು ರಚಿಸಿದ ಪ್ರತಿಮೆಗಳನ್ನು ಸಾರ್ವಜನಿಕರ ಸಂತೋಷಕ್ಕಾಗಿ ಅಮೇರಿಕಾ ನಗರಗಳ ಬೀದಿಗಳಲ್ಲಿ ಪ್ರಸ್ತುತಪಡಿಸಿ ಹೆಸರಾದ ವಾಸ್ತವ ಘಟನೆಯಿದು. ಔಷಧ ಉತ್ಪಾದನಾ ಸಾಮ್ರಾಜ್ಯದ ಕ್ಯಾಪಿಟಾ ಉತ್ತರಾಧಿಕಾರಿಯಾಗಿದ್ದ ಜಾನ್ಸನ್ ಕೆಲವು ಅರ್ಥಪೂರ್ಣ ಕಲಿಕೆಗಳಿಗಾಗಿ ಹುಡುಕುತ್ತಿದ್ದರು. ಹವ್ಯಾಸವಾಗಿ ಚಿತ್ರಕಲೆಯ ವ್ಯವಹಾರವನ್ನು ಪ್ರಾರಂಭಿಸಿದರು. ಆದರೆ ಅದು ಯಾರ ಮೇಲೂ ಅಷ್ಟೇಕೆ ಅವರ ಹೆಂಡತಿಯ ಮೇಲೂ ಯಾವುದೇ ಪ್ರಭಾವ ಬೀರಲು ಸಾಧ್ಯವಾಗಲಿಲ್ಲ. ಇದರಿಂದ ಅವರು ಚಿತ್ರಕಲೆಯಿಂದ ದೂರ ಸರಿದು ಶಿಲ್ಪಕಲೆಯನ್ನು ಕಲಿಯಲು ಆರಂಭಿಸಿದರು. ಈ ನಿರ್ಧಾರ ಅವರ ಜೀವನಕ್ಕೆ ಹೊಸ ತಿರುವನ್ನು ನೀಡಿತೆಂದರೆ ತಪ್ಪಲ್ಲಾ.

ಯಾವುದೇ ಔಪಚಾರಿಕ ತರಬೇತಿಯಿಲ್ಲದೆ, ಕೆಲವು ಸಣ್ಣ ಅಧ್ಯಯನಗಳಿಂದ ಹಾಗೂ ಕಲಿಕೆಯಿಂದ ಆರಂಭಿಸಿದ ಜಾನ್ಸನ್ 1968 ರಲ್ಲಿ ಅಂತರರಾಷ್ಟ್ರೀಯ ಶಿಲ್ಪಕಲೆ ಸ್ಪರ್ಧೆಯಲ್ಲಿ ಭಾಗವಹಿಸಿ 7,000 ಅರ್ಜಿದಾರರಲ್ಲಿ ಮೊದಲ ಸ್ಥಾನವನ್ನು ಪಡೆದರು. ಇಲ್ಲಿಂದ ಅವರ ಶಿಲ್ಪಕಲಾ ವೃತ್ತಿಯು ಪ್ರಾರಂಭವಾಯಿತು, ಇದು ಸುಮಾರು ಐದು ದಶಕಗಳ ಕಾಲ ಅವಿರತವಾಗಿ ನೆಡೆಯಿತು. ಅವರ ಶಿಲ್ಪಗಳು ಕಂಚಿನಿಂದ ರಚಿಸಲ್ಪಟ್ಟಿದ್ದು ಬಣ್ಣ ಮತ್ತು ಕಿಲುಬಿನಿಂದ ಮಾಡಲ್ಪಟ್ಟಿವೆ.ಅವುಗಳಲ್ಲಿ ಕೆಲವು ಶಿಲ್ಪಗಳು ನಗರಗಳ ಹೊರವಲಯದಲ್ಲಿ ದೈತ್ಯಾಕಾರದ ರೂಪದಲ್ಲಿ ರಾರಾಜಿಸುತ್ತಿವೆ.

ಜಾನ್ಸನ್ ಅವರು ರಚಿಸಿದ ಹಲವಾರು ಶಿಲ್ಪಗಳನ್ನು ಅಮೆರಿಕದ ವಿವಿಧ ನಗರಗಳ ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಆಸಕ್ತರ ತರಬೇತಿಗೆ ಯಾವುದೇ ಶುಲ್ಕ ವಿಧಿಸದೆ, ಕಂಚಿನಲ್ಲಿ ಶಿಲ್ಪ ತಯಾರಿಸುವ ಕೆಲಸಕ್ಕೆ ತರಬೇತಿ ನೀಡುವ ಫೌಂಡ್ರಿಯನ್ನು ಸಹ ಸ್ಥಾಪಿಸಿದ್ದಾರೆ. ಸುಮಾರು ಎರಡು ವರ್ಷಗಳ ಹಿಂದೆ ಅವರು ಫ್ಲೋರಿಡಾದ ಕೀ ವೆಸ್ಟ್‌ನಲ್ಲಿರುವ ತಮ್ಮ ಮನೆಯಲ್ಲಿ ಕ್ಯಾನ್ಸರ್‌ನಿಂದ ನಿಧನರಾದಾಗ ಅವರಿಗೆ 89 ವರ್ಷ ವಯಸ್ಸಾಗಿತ್ತು.



ಮನರಂಜನೆಗಾಗಿ ರೂಪಿಸಿರುವ ಉದ್ಯಾನವನ

ಸಾಮಾನ್ಯವಾಗಿ ಕಲಾವಿದರು ತಮ್ಮ ಕಲಾಕೃತಿ ಕೋಟ್ಯಾಧೀಶರ ಭದ್ರಪಡಿಸಿದ ಕೋಟೆಯಲ್ಲಿ ಅಥವಾ ಭವ್ಯವಾಗಿ ವಾಸಿಸುವ ಗೋಪುರದಲ್ಲಿ ಸ್ಥಾಪನೆಯಾದರೆ ಕೈತುಂಬಾ ಹಣ ಸೇರುತ್ತದೆಂದು ಕನಸು ಕಾಣುತ್ತಾರೆ. ಆದರೆ ಜಾನ್ಸನ್ ಅವರು ತಮ್ಮ ಕಲೆಯನ್ನು ಸಾರ್ವಜನಿಕರು ಮತ್ತು ಮಕ್ಕಳು ಆನಂದಿಸಲು ಅವಕಾಶವಾಗುವಂತೆ 42 ಎಕರೆ ವಿಸ್ತೀರ್ಣದ ಶಿಲ್ಪ ಉದ್ಯಾನವನವನ್ನು ಸ್ಥಾಪಿಸಿದರು. ಅಲ್ಲಿ ಅವರು ರಚಿಸಿದ ನೂರಾರು ಜೀವನ-ಗಾತ್ರದ ಶಿಲ್ಪಗಳ ವರ್ಚುವಲ್ ರಿಯಾಲಿಟಿ- ಫ್ಯಾಂಟಸಿ ಪ್ರದರ್ಶನವನ್ನು ರೂಪಿಸಿದ್ದಾರೆ. ಜನ ಜೀವನದ ವಿವಿಧ ಚಟುವಟಿಕೆಗಳನ್ನು ಬಿಂಬಿಸುವ ಶಿಲ್ಪವನ್ನು ಉದ್ಯಾನವನದ ವಿವಿಧ ಭಾಗದಲ್ಲಿ ವ್ಯವಸ್ಥಿತವಾಗಿ ರೂಪಿಸಲಾಗಿದೆ. ಕೇವಲ ಮನರಂಜನೆಗಾಗಿ ರೂಪಿಸಲಾಗಿರುವ ಈ ಉದ್ಯಾನವನಕ್ಕೆ ಪ್ರವೇಶ ಉಚಿತವಾಗಿದೆ.

ಅಂಚೆಯ ಮೂಲಕ ಪ್ರಶಸ್ತಿ ಕಳುಹಿಸಿ!

ಜ್ಞಾನಗಾಥೆ
● ಸುರೇಂದ್ರ ಪೈ, ಭಟ್ಕಳ

ಜೀವನದನಲ್ಲಿ ಯಾರಿಗೆ ತಾನೇ ಗುರುತಿಸಿಕೊಳ್ಳುವ ಆಸೆ ಇರುವುದಿಲ್ಲ ಹೇಳಿ, ಅದರಲ್ಲೂ ಪ್ರಶಸ್ತಿ ನೀಡುತ್ತಾರೆಂದರೆ ಯಾರಾದರೂ ಬಿಟ್ಯಾರೆ, ಎಲ್ಲಿದ್ದರೂ ಓಡಿ ಹೋಗಿ ಪ್ರಶಸ್ತಿಯನ್ನು ಬಾಚಿಕೊಳ್ಳುತ್ತೇವೆ. ಆದರೆ ಹಲ್ಧರ್ ನಾಗ್ ನಮಗೆಲ್ಲರಿಗಿಂತಲೂ ಭಿನ್ನ. 1950 ರಲ್ಲಿ ಒಡಿಶಾದ ಬರ್ಗಢ್ ಜಿಲ್ಲೆಯ ಬಡ ಕುಟುಂಬದಲ್ಲಿ ಜನಿಸಿದ ಹಲ್ಧರ್ ನಾಗ್ ಅವರು ಒಡಿಯಾದ ಪ್ರಸಿದ್ಧ ಜಾನಪದ ಕವಿಯಾಗಿದ್ದಾರೆ. ಚಿಕ್ಕಂದಿನಲ್ಲೇ ತಂದೆ- ತಾಯಿಯನ್ನು ಕಳೆದುಕೊಂಡು, ಜೀವನೋಪಾಯಕ್ಕಾಗಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿದರು.ಗ್ರಾಮದ ಮುಖಂಡರೊಬ್ಬರ ನೆರವಿನಿಂದ ಮುಂದಿನ 16 ವರ್ಷಗಳ ಕಾಲ ಸ್ಥಳೀಯ ಶಾಲೆ ಯೊಂದರಲ್ಲಿ ಅಡುಗೆ ಕೆಲಸ ಮಾಡಿದರು. ಕೆಲವು ವರ್ಷಗಳ ನಂತರ, ಅವರು ಶಾಲೆಯ ಬಳಿ ಸಣ್ಣ ಪ್ರಮಾಣದ ಸ್ಟೇಷನರಿ ಅಂಗಡಿಯನ್ನು ಸ್ಥಾಪಿಸಲು ರೂ 1000 ಬ್ಯಾಂಕ್ ಸಾಲವನ್ನು ಪಡೆದರು.

ಕೋಸ್ಲಿ ಭಾಷೆಯ ಜಾನಪದ ಕವಿ

ಮೂರನೇಯ ತರಗತಿ ಕಲಿತ ಇವರು ಬರವಣಿಗೆಯ ಉತ್ಸಾಹ ಸಾಯಲು ಬಿಡದೆ ಸಣ್ಣ ಪುಟ್ಟ ಬರಹಗಳನ್ನು ಬರೆಯುತ್ತಲೇ ಇದ್ದರು. 1990 ರಲ್ಲಿ, ನಾಗ್ ತಮ್ಮ ಮೊದಲ ಕವನ 'ಧೋಡೋ ಬರ್ಗಚ್' (ಹಳೆಯ ಆಲದ ಮರ) ಬರೆದರು. ಅದೃಷ್ಟವಶಾತ್, ಅವರ ಕವಿತೆಗಳು ಮತ್ತು ರಚನೆಗಳು ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾದವು ಮತ್ತು ಕಾಲಾನಂತರದಲ್ಲಿ, ಅವರು 'ಕೋಸ್ಲಿ' ಭಾಷೆಯ ಜಾನಪದ ಕವಿಯಾಗಿ ಪ್ರಸಿದ್ಧರಾದರು. ಒಡಿಯಾದಲ್ಲಿ 'ಲೋಕ ಕವಿ ರತ್ನ' ಎಂದು ಜನಪ್ರಿಯವಾಗಿರುವ ಇವರು ಐದು ಪಿಎಚ್‌ಡಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅವರ ಕವಿತೆಗಳು ಪ್ರಕೃತಿ, ಸಮಾಜ, ಪುರಾಣ ಮತ್ತು ಧರ್ಮದ ಸುತ್ತ ಸುತ್ತುತ್ತವೆ. ಇವರ ಆಯ್ದ ಕವನಗಳ ಇಂಗ್ಲಿಷ್ ಅನುವಾದಗಳ 'ಕಾವ್ಯಾಂಜಲಿ' ಸಂಕಲನ ಹೆಸರುವಾಸಿಯಾಗಿದ್ದಾರೆ.ಕೋಸ್ಲಿ ಭಾಷೆಯಲ್ಲಿ ಬರೆಯುವ ನಾಗ್ ಅವರು 20 ಮಹಾಕಾವ್ಯಗಳು ಮತ್ತು ಹಲವಾರು ಕವಿತೆಗಳನ್ನು ಬರೆದಿದ್ದಾರೆ. ಅವರ ಸಾಧನೆಗಳನ್ನು ಗುರುತಿಸಿ, ಅವರ ಬರಹಗಳ ಸಂಕಲನ 'ಹಲ್ಧರ್ ಗ್ರಂಥಾವಳಿ-2' ಅನ್ನು ಒಡಿಶಾದ 'ಸಂಬಲ್ಪುರ ವಿಶ್ವವಿದ್ಯಾಲಯ'ದಲ್ಲಿ ಪಠ್ಯಕ್ರಮದ ಭಾಗವಾಗಿ ಮಾಡಲಾಗಿದೆ.

ತನ್ನ ಬದುಕಿಗೆ ನೆರವಾದ ರಾಗಾ ಚಾಣ(ಮಸಾಲೆ ಕಡಲೆ) ಮಾರಾಟ ಮಾಡಿ ಬದುಕು ಕಟ್ಟಿಕೊಂಡ ಇವರು ಪ್ರತಿವರ್ಷ ಬಾರ್ಗಡ್‌ನಲ್ಲಿರುವ ತನ್ನ ಹಳ್ಳಿಯಲ್ಲಿ ರಥ ಯಾತ್ರೆ ಸಮಯದಲ್ಲಿ 'ರಾಗ ಚಾಣ' ಮಾರಾಟ ಮಾಡುವುದನ್ನು ಗಮನಿಸಬಹುದು.

ಸರಳತೆ ಮತ್ತು ಶ್ರೇಷ್ಠತೆಗೆ ಪುರಾವೆ



ಮೂರು ಜೋಡಿ ಬಟ್ಟೆಗಳು, ಒಂದು ಒಡೆದ ರಬ್ಬರ್ ಚಪ್ಪಲಿ, ಒಂದು ರಿಮ್ಲೆಸ್ ಕನ್ನಡಕ ಮತ್ತು 732 ರೂಪಾಯಿ ಠೇವಣಿ ಹೊಂದಿರುವ ಇವರು ಒಡಿಯಾ ಸಾಹಿತ್ಯ ಲೋಕಕ್ಕೆ ನೀಡಿದ ಸಾಧನೆಗಾಗಿ 2016 ರಲ್ಲಿ, ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲು ನಿರ್ಧರಿಸಿತು. ಆ ಸಂದರ್ಭದಲ್ಲಿ 'ನಾಗ್ ಸಾಹಿಬ್! ದೆಹಲಿಗೆ ಬರಲು ನನ್ನ ಬಳಿ ಹಣವಿಲ್ಲ, ದಯವಿಟ್ಟು ಪ್ರಶಸ್ತಿಯನ್ನು (ಪದ್ಮಶ್ರೀ) ಅಂಚೆ ಮೂಲಕ ಕಳುಹಿಸಿ' ಎಂದು ವಿನಂತಿಸಿಕೊಂಡಿದ್ದು ಅವರ ಮುಗ್ಧತೆಯ ಬಗ್ಗೆ ಬೆಳಕು ಚೆಲ್ಲುತ್ತದೆ. ನಾಗ್ ಪದ್ಮಶ್ರೀ ಭತ್ಯೆ 10,000 ರೂ. ಅನಾಥಾಶ್ರಕ್ಕೆ ದೇಣಿಗೆಯಾಗಿ ನೀಡಿದ್ದು ಈ ವ್ಯಕ್ತಿಯ ಸರಳತೆ ಮತ್ತು ಶ್ರೇಷ್ಠತೆಗೆ ಮತ್ತೊಂದು ಪುರಾವೆಯಾಗಿದೆ. ನಾಗ್ ಅವರ ಸಂಕಲ್ಪ, ಕಠಿಣ ಪರಿಶ್ರಮ ಮತ್ತು ಸಮಾಜಕ್ಕೆ ನೀಡಿದ ಕೊಡುಗೆ ನಮ್ಮೆಲ್ಲರ ಮನಸ್ಸಿನಲ್ಲಿ ಅಳಿಸಲಾಗದ ಛಾಪು ಮೂಡಿಸಿದೆ.